ವಿಜ್ಞಾನ ಕನ್ನಡ –13

ನಡಾವಳಿ

13ನೇ ಕನ್ನಡ ವಿಜ್ಞಾನ ಸಮ್ಮೇಳನ

15–16ನೇ ಸೆಪ್ಟೆಂಬರ್. 2017, ಬೆಂಗಳೂರು

ಆಯೋಜಕರು

ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ

(ವಿಜ್ಞಾನ ಭಾರತಿಯ ಕರ್ನಾಟಕ ರಾಜ್ಯ ಘಟಕ)

"ಸ್ವದೇಶಿ ಸದನ", ಗುರುನಾರಾಯಣ ವಿದ್ಯಾ ವಿಹಾರ, ಹೆಬ್ಬಾಳ, ಬೆಂಗಳೂರು–560 024;
ದೂರವಾಣಿ:– 080 23258777; ಟೆಲಿಫ್ಯಾಕ್ಸ್:– 080 23258719
E-mail: svak@svakarnataka.com; vasu@svakarnataka.com; ramesh@svakarnataka.com

ಸಹಯೋಗ

ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

RAMAIAH UNIVERSITY OF APPLIED SCIENCES

ಪರಿವಿಡಿ

ಕ್ರ. ಸಂ	ವಿಷಯ	ಪುಟಸಂಖ್ಯೆ
1.	ಸಮ್ಮೇಳನದ ಉದ್ಘಾಟನೆಯ ಭಾಷಣ : ಶ್ರೀ ಉದಯ ಶಂಕರ ಪುರಾಣಿಕ	3 – 7
2.	ಪೂರ್ಣ ಪ್ರಬಂಧಗಳು ವಿಭಾಗವಾರು	
	* **ಪಾಣೀನೀಯಮ್**: ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು	8 – 27
	* **ಪತಂಜಲೀಯಮ್**: ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು	28 – 60
	* **ಭಾರತೀಯಮ್**: ಸಾಮಾಜಿಕ ಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ನಾಟ್ಯಶಾಸ್ತ್ರ ವಿಜ್ಞಾನಗಳು	61 – 68
	* **ಕೌಟಿಲ್ಯೀಯಮ್**: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ	69 – 82
	* **ಧನ್ವಂತರೀಯಮ್**: ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು	83 – 103
	* **ಪರಾಶರೀಯಮ್**: (ಅ) ಕೃಷಿ, (ಆ)ತೋಟಗಾರಿಕೆ. ಅರಣ್ಯ, (ಕ)ಪಶುಸಂಗೋಪನೆ ಮತ್ತು ಮೀನುಗಾರಿಕೆ	104 – 115
	* **ವಸುಂಧರೀಯಮ್** : ಭೂಶಾಸ್ತ್ರ, ಪರಿಸರಶಾಸ್ತ್ರ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ	116 – 119
	* **ನಾಗಾರ್ಜುನಿಯಮ್**: ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪಧಾರ್ಥವಿಜ್ಞಾನಗಳು	120 – 124
3.	ಲೇಖಕರ ಪಟ್ಟಿ	125 – 126
4.	2017ನೇ ಸಾಲಿನ ವಿಶ್ವೇಶ್ವರಯ್ಯ ವಿಜ್ಞಾನಪುರಸ್ಕೃತರ ಭಾವಚಿತ್ರ ಮತ್ತು ಪೂರ್ಣ ವಿವರ 2017ನೇ ಸಾಲಿನ ಸಿ. ಎನ್. ಆರ್. ರಾವ್ ವಿಜ್ಞಾನ ಪುರಸ್ಕೃತರ ಭಾವಚಿತ್ರ ಮತ್ತು ಪೂರ್ಣ ವಿವರ 2017ನೇ ಸಾಲಿನ ಭೀಮ್‌ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕೃತರ ಭಾವಚಿತ್ರ ಮತ್ತು ಪೂರ್ಣ ವಿವರ	

ಓದುಗರ ಗಮನಕ್ಕೆ ,
ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಆಯಾ ಲೇಖಕರುಗಳಿಂದ ಬಂದಂತಹದು. ಈ ಲೇಖನಗಳನ್ನು ಸಂಸ್ಥೆಯು ಯಾವುದೇ ಸಂಕಲಗಳನ್ನು ಮಾಡದೇ ಮುದ್ರಿಸಲಾಗಿದೆ. ಈ ಲೇಖನಗಳಲ್ಲಿ ಯಾವುದೇ ತಪ್ಪು ಕಂಡುಬಂದಲ್ಲಿ ಇದರ ಜವಾಬ್ದಾರಿಯು ಆಯಾ ಲೇಖಕರುಗಳಿಗೆ ಮಾತ್ರ ಸಂಬಂಧಿಸಿದ್ದು, ಇದರಲ್ಲಿ ಸಂಸ್ಥೆಯ ಪಾತ್ರ ಯಾವುದೇ ಇರುವುದಿಲ್ಲ ಮತ್ತು ಜವಾಬ್ದಾರಿಯು ಇರುವುದಿಲ್ಲ. ಪ್ರಬಂಧಗಳ ಬಗ್ಗೆ ಹೆಚ್ಚಿನ ಚರ್ಚೆ, ಮಾಹಿತಿ ಬೇಕಾದಲ್ಲಿ ಲೇಖಕರನ್ನು ನೇರವಾಗಿ ಸಂಪರ್ಕಿಸಬಹುದು. ಈ ನಡಾವಳಿಯಲ್ಲಿ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡನೆ ಮಾಡಿದಂತಹ ಹಾಗೂ ನಿಗದಿತ ಸಮಯಕ್ಕೆ ಕಳುಹಿಸಿಕೊಟ್ಟಂತಹ ಲೇಖನಗಳನ್ನು ಮಾತ್ರ ಮುದ್ರಿಸಲಾಗಿದೆ. ಯಾವುದೇ ಲೇಖಕರು ಪ್ರಬಂಧ ಮಂಡನೆ ಮಾಡಿ ಅವರ ಲೇಖನಗಳು ನಡಾವಳಿಯಲ್ಲಿ ಮುದ್ರಣವಾಗದಿದ್ದಲ್ಲಿ ಇದಕ್ಕೆ ಲೇಖಕರು ತಮ್ಮ ಪ್ರಬಂದಗಳನ್ನು ನಿಗದಿತ ಸಮಯಕ್ಕೆ ಹಾಗೂ ಆಯೋಜಕರು ಕೇಳಿರುವ ಆಪಿಗಳಲ್ಲಿ ಕಳುಹಿಸದ ಕಾರಣ ಅಂತವರ ಲೇಖನಗಳನ್ನು ನಡಾವಳಿಯಲ್ಲಿ ಮುದ್ರಿಸಲಾಗಿಲ್ಲ.

ಸಮ್ಮೇಳನದ ಉದ್ಘಾಟನೆಯ ಭಾಷಣ

ಉದಯ ಶಂಕರ ಪುರಾಣಿಕ
ಮಾಹಿತಿ ತಂತ್ರಜ್ಞಾನ ಪರಿಣಿತರು ಮತ್ತು ಅಂತರಾಷ್ಟ್ರೀಯ ತಂತ್ರಜ್ಞಾನ ಸಲಹೆಗಾರರು, ಬೆಂಗಳೂರು
upuranik@gmail.com

ಈ ಸಮ್ಮೇಳನದ ಅಧ್ಯಕ್ಷರಾದ ಹಿರಿಯ ವಿಜ್ಞಾನಿಗಳು ಮತ್ತು ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕದ ಸ್ಥಾಪಕರಾದ ಪ್ರೊ.ಕೆ.ಐ.ವಾಸುರವರು, ಸಮ್ಮೇಳನದ ಉಪಾಧ್ಯಕ್ಷರು, ಗುಲ್ಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳು ಮತ್ತು ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕದ ಅಧ್ಯಕ್ಷರಾದ ಈ.ಟಿ.ಪುಟ್ಟಯ್ಯನವರು, ಸಮಾರಾಂಭದ ಅಧ್ಯಕ್ಷತೆಯನ್ನು ವಹಿಸಿರುವ ಗೋಕುಲ ಶಿಕ್ಷಣ ಪ್ರತಿಷ್ಠಾನದ ಚೇರ್‌ಮೆನ್‌ರಾದ ಡಾ.ಎಂ.ಆರ್.ಜಯರಾಮ್‌ರವರು, ಸಮ್ಮೇಳನದ ಸಂಯೋಜಕರಾದ ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದ ಮುಖ್ಯ ಸಚೇತಕರಾದ ಕ್ಯಾಪ್ಟನ್ ಗಣೇಶ ಕಾರ್ಣಿಕ್‌ರವರು, ಮುಖ್ಯ ಅತಿಥಿಗಳಾದ ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಎಸ್. ಆರ್.ಶಂಕಪಾಳ್ ಮತ್ತು ಉಪಕುಲಪತಿಗಳಾದ ಪ್ರೊ.ಗೋವಿಂದ್ ಆರ್.ಕಡಂಬಿಯವರಿಗೆ ಮತ್ತು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಪತ್ರಿನಿಧಿಗಳಿಗೆ ಮತ್ತು ಮಾಧ್ಯಮ ಮಿತ್ರರಿಗೆ ಶುಭಕೋರುತ್ತೇನೆ.

ವಿಶ್ವದ ಅತ್ಯಂತ ಪ್ರತಿಭಾವಂತ ತಂತ್ರಜ್ಞರಲ್ಲಿ ಒಬ್ಬರಾದ, ಶ್ರೇಷ್ಠ ಆಡಳಿತಗಾರರು ಮತ್ತು ಕರ್ನಾಟಕದ ಹೆಮ್ಮೆಯ ಪುತ್ರರಾದ ಭಾರತ ರತ್ನ ಡಾ. ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಕನ್ನಡ ವಿಜ್ಞಾನ ಸಮ್ಮೇಳನವನ್ನಾಗಿ ಪ್ರತಿವರ್ಷ ಆಚರಿಸುತ್ತಿದೆ ಸ್ವದೇಶಿ ವಿಜ್ಞಾನ ಆಂದೋಳನ – ಕರ್ನಾಟಕ ಸಂಸ್ಥೆ. ಈ ಸಮ್ಮೇಳನದಲ್ಲಿ ನೀಡುವ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರವನ್ನು ಮಣಿಪಾಲ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳು ಮತ್ತು ಸುಪ್ರಸಿದ್ಧ ವೈದ್ಯರಾದ ಡಾ.ಬಿ.ಎಮ್.ಹೆಗಡೆಯವರು, ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ರಾಮಚಂದ್ರ ಭಟ್ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾದ ಪ್ರೊ.ಸಂಧ್ಯಾ ವಿಶ್ವೇಶ್ವರಯ್ಯ ಅವರಿಗೆ ನೀಡಿ ಗೌರವಿಸಲಾಗುತ್ತಿದೆ. ಸಿ.ಎನ್.ಆರ್.ರಾವ್ ವಿಜ್ಞಾನ ಪುರಸ್ಕಾರವನ್ನು ನ್ಯಾನೋ ಮತ್ತು ಮೃದು ಪದಾರ್ಥಗಳ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಪ್ರೊ.ಜಿ.ಯು.ಕುಲಕರ್ಣಿರವರಿಗೆ ಮತ್ತು ಪಂಡಿತ್ ಭೀಮ್‌ಸೇನ್ ಜೋಷಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರವನ್ನು ಖ್ಯಾತ ಸಂಗೀತ ವಿಧ್ವಾನರಾದ ಡಾ.ಕೆ.ವರದರಂಗನ್‌ರವರಿಗೆ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಪುರಸ್ಕೃತ ಸಾಧಕರೆಲ್ಲರಿಗೂ ನನ್ನ ಅಭಿನಂದನೆಗಳು.

ಸಾವಿರಾರು ವರ್ಷಗಳ ಇತಿಹಾಸ, ಸಂಸ್ಕೃತಿ ಇರುವ ಭಾರತ, ವಿಜ್ಞಾನ ಕ್ಷೇತ್ರದಲ್ಲಿ ಹಲವಾರು ವಿಶ್ವಶ್ರೇಷ್ಠ ವಿಜ್ಞಾನಿಗಳು, ವೈದ್ಯರು, ಸಂಶೋಧಕರು, ಗಣಿತಜ್ಞರನ್ನು ವಿಶ್ವಕ್ಕೆ ನೀಡುತ್ತಿದೆ. ನಮ್ಮ ನೆಲ, ಜಲ, ವಾತಾವರಣ ಮತ್ತು ಪ್ರಕೃತಿಯ ಮಹತ್ವ, ಸದ್ಬಳಕೆ ಮತ್ತು ಸಂರಕ್ಷಣೆ ಕುರಿತು ವೇದಗಳ ಕಾಲದಿಂದಲೂ ಜನಜಾಗೃತಿ ಮೂಡಿಸುವ ಕೆಲಸ ನೆಡೆದಿದೆ. ಈ ಹಿನ್ನಲೆಯಲ್ಲಿ ವಿಶ್ವದ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೆ ಭಾರತೀಯರು ನೀಡುತ್ತಿರುವ ಕೊಡುಗೆ ಮತ್ತು ಮಾಡುತ್ತಿರುವ ಸಾಧನೆಯನ್ನು ವಿವಿಧ ಗೋಷ್ಠಿಗಳು ಮತ್ತು ಆಹ್ವಾನಿತ ಹಿರಿಯ ವಿಜ್ಞಾನಿಗಳ ಮೂಲಕ ತಿಳಿಸುವ ಕೆಲಸವನ್ನು ಈ ಕನ್ನಡ ವಿಜ್ಞಾನ ಸಮ್ಮೇಳನದ ಮೂಲಕ ಮಾಡುತ್ತಿರುವುದು ಸಕಾಲೀಕವಾಗಿದೆ ಮತ್ತು ಮಹತ್ವಪೂರ್ಣವಾಗಿದೆ. ಈ 13ನೇ ಕನ್ನಡ ವಿಜ್ಞಾನ ಸಮ್ಮೇಳನವನ್ನು ಆಯೋಜಿಸಿರುವ ಸ್ವದೇಶಿ ವಿಜ್ಞಾನ ಆಂದೋಳನ- ಕರ್ನಾಟಕ ಸಂಸ್ಥೆ, ರಾಜ್ಯಾದಂತ ಕನ್ನಡದಲ್ಲಿ ವಿಜ್ಞಾನ ಸಂವಹನ ಮತ್ತು ಜಾಗೃತಿ ಮೂಡಿಸಲು ನಿರಂತರವಾಗಿ ಕೆಲಸ ಮಾಡುತ್ತಿದೆ. ಕನ್ನಡದಲ್ಲಿ ಒಂದು ರಾಜ್ಯ ಮಟ್ಟದ ಸಮ್ಮೇಳನವನ್ನು ಸರ್ಕಾರದ ನೆರವಿಲ್ಲದೆ ಆಯೋಗಿಸುವುದು ಸವಾಲಿನ ಕೆಲಸ. ಹೀಗಿರುವಾಗ, ನಿರಂತರವಾಗಿ 13 ಕನ್ನಡ ವಿಜ್ಞಾನ ಸಮ್ಮೇಳನಗಳನ್ನು ಆಯೋಜಿಸುವ ಅತ್ಯಂತ ಮಹತ್ವದ ಕೆಲಸವನ್ನು ಮಾಡುತ್ತಿರುವ ಸ್ವದೇಶಿ ವಿಜ್ಞಾನ ಆಂದೋಳನ – ಕರ್ನಾಟಕ ಸಮಿತಿಯ ಅಧ್ಯಕ್ಷರು ಮತ್ತು ವಿಶೇಷವಾಗಿ ಕಾರ್ಯದರ್ಶಿಗಳಾದ ಶ್ರೀರಮೇಶರವರಿಗೆ ನನ್ನ ಅಭಿನಂದನೆಗಳು.

ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶ-ವಿದೇಶಗಳಲ್ಲಿ ಉತ್ತಮ ಶಿಕ್ಷಣ, ಸಂಶೋಧನೆ ಮತ್ತು ಶಿಕ್ಷಕರಿಂದಾಗಿ ಚಿರಪರಿಚಿತವಾಗಿದೆ. ಈ ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಸಾಹಿತಿಗಳಾದ ಪ್ರೊ.ಎಸ್.ಆರ್.ಶಂಕಪಾಳ್‌ರವರು, ಈ ಸಮ್ಮೇಳನವನ್ನು ತಮ್ಮ ವಿಶ್ವವಿದ್ಯಾಲಯದಲ್ಲಿ ನೆಡೆಸಲು ಅಗತ್ಯ ನೆರವು, ಮಾರ್ಗದರ್ಶನ ನೀಡುತ್ತಿದ್ದಾರೆ. ಅವರಿಗೂ ಮತ್ತು ಡಾ.ನಿರಂಜನ ಪ್ರಭು ಮತ್ತು ಸಹೋದ್ಯೋಗಿಗಳಿಗೂ ನನ್ನ ಅಭಿನಂದನೆಗಳು.

ನಿರಂತರ ಸಂಶೋಧನೆ ಮತ್ತು ಆವಿಷ್ಕಾರಗಳಿಂದಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವಪೂರ್ಣ ಬದಲಾವಣೆಗಳಾಗುತ್ತಿವೆ. ಹೊಸ ಸಂಶೋಧನೆಗಳು, ಆವಿಷ್ಕಾರಗಳು ಮತ್ತು ತಂತ್ರಜ್ಞಾನಾಧಾರಿತ ಸೇವೆಗಳನ್ನು ಕನ್ನಡ ಭಾಷೆಯಲ್ಲಿ ನೀಡುವುದರಿಂದ ಹೇಗೆ

1) ಮಾತೃ ಭಾಷೆ ಕನ್ನಡದಲ್ಲಿ ಗುಣಮಟ್ಟದ ಶಿಕ್ಷಣವನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ನೀಡಬಹುದು

2) ಕರ್ನಾಟಕದ ಅರಣ್ಯ ಸಂರಕ್ಷಣೆ ಮಾಡಬಹುದು

3) ಕರ್ನಾಟಕ ಎದುರಿಸುತ್ತಿರುವ ಧೀರ್ಘ ಕಾಲದ ಅಂತರ ರಾಜ್ಯ ಜಲವಿವಾದಗಳನ್ನು ಪರಿಹರಿಸಿಕೊಳ್ಳಬಹುದು

4) ಮಳೆ, ಬೆಳೆ, ಪಶುರೋಗ ಮುನ್ಸೂಚನೆ ಮೊದಲಾದ ಮಾಹಿತಿಯನ್ನು ನಿಖರವಾಗಿ ಕರ್ನಾಟಕದ ರೈತರಿಗೆ ನೀಡಬಹುದು

5) ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶಗಳು ದೊರೆಯುವಂತೆ ಮಾಡಬಹುದು

ಈ 5 ಪ್ರಮುಖ ವಿಷಯಗಳನ್ನು ಕುರಿತು ಚರ್ಚಿಸುವ ಮೊದಲು, ಇದುವರೆಗೆ ತಂತ್ರಜ್ಞಾನ ಮತ್ತು ಸೇವೆಗಳಲ್ಲಿ ಕನ್ನಡದ ಸೌಲಭ್ಯ ಇರುವುದನ್ನು ಕುರಿತು ತಿಳಿದುಕೊಳ್ಳೋಣ.

1) ಸ್ವದೇಶಿ ವಿಜ್ಞಾನ ಆಂದೋಳನ– ಕರ್ನಾಟಕ ಸಂಸ್ಥೆಯು 13 ವಾರ್ಷಿಕ ಕನ್ನಡ ವಿಜ್ಞಾನ ಸಮ್ಮೇಳನಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಇದಲ್ಲದೆ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಲೇಖನಗಳನ್ನು ಇದು ಪ್ರಕಟಿಸುತ್ತಿದೆ. ನಾಡಿನ ಶ್ರೇಷ್ಠ ವಿಜ್ಞಾನಿಗಳು ಮತ್ತು ಸಾಧಕರನ್ನು ಗುರುತಿಸಿ, ಅವರಿಗೆ ಪ್ರಶಸ್ತಿ ಪರಸ್ಕಾರಗಳನ್ನು ಈ ಸಂಸ್ಥೆ ನೀಡುತ್ತಿದೆ.

2) ರಾಷ್ಟ್ರೀಯ ವೈಮಾಂತ್ಯರಿಕ್ಷ ಸಂಶೋಧನೆ ಪ್ರಯೋಗಾಲಯದ ಕನ್ನಡ ಸಂಘವು ಕಳೆದ 43 ವರ್ಷಗಳಿಂದ **"ಕಣಾದ"** ಹೆಸರಿನ ವಿಜ್ಞಾನ ವಾರ್ಷಿಕ ವಿಶೇಷಾಂಕವನ್ನು ಕನ್ನಡದಲ್ಲಿ ಪ್ರಕಟಿಸುತ್ತಿದೆ. ಈ ವರ್ಷದಿಂದ ಕಣಾದ ಆನ್‌ಲೈನ್ ಅವೃತ್ತಿ ಲಭ್ಯವಾಗಿದೆ.

3) ಕಳೆದ 10 ವರ್ಷಗಳಿಂದ ಇಜ್ಞಾನ ಸಂಸ್ಥೆಯು, ತನ್ನ ಜಾಲತಾಣ ಇಜ್ಞಾನ ಡಾಟ್‌ಕಾಮ್ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತು ಕನ್ನಡದಲ್ಲಿ ಲೇಖನಗಳನ್ನು ಪ್ರಕಟಿಸುತ್ತಿದೆ.

4) ಇದಲ್ಲದೆ, ಅನೇಕ ಕನ್ನಡ ಪತ್ರಿಕೆಗಳು, ಬ್ಲಾಗ್‌ಗಳು ಮತ್ತು ಜಾಲತಾಣಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಕುರಿತು ಅಂಕಣಗಳು, ಪ್ರಕಟವಾಗುತ್ತಿವೆ. ಕೆಲವು ಪ್ರಕಾಶನ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಜ್ಞಾನ ಲೇಖಕರ ಪರಿಶ್ರಮದಿಂದಾಗಿ ಕನ್ನಡದಲ್ಲಿ ವಿಜ್ಞಾನ–ತಂತ್ರಜ್ಞಾನ ಕುರಿತು ಪುಸ್ತಕಗಳು ದೊರೆಯುತ್ತಿವೆ.

5) ಕಳೆದ 25 ವರ್ಷಗಳಿಂದ ನನ್ನ ಶ್ರಮದ ಫಲವಾಗಿ ಕರ್ನಾಟಕದಲ್ಲಿರುವ ದೂರದರ್ಶನ, ಎಟಿಎಂ, ಸಹಕಾರಿ ಕ್ಷೇತ್ರದ ಬ್ಯಾಂಕು, ಖಾಸಗಿ ಉದ್ಯಮ, ಮೊಬೈಲ್ ಫೋನ್ ಸೇವೆ ನೀಡುವ ಸಂಸ್ಥೆಗಳ ಕಾಲ ಸೆಂಟರ್‌ಗಳು, ಅಮೇಜಾನ್ ಸಂಸ್ಥೆಯ ಭಾರತಕ್ಕೆ ಮೀಸಲಾದ ಕಾಲ್ ಸೆಂಟರ್, ಮೊಬೈಲ್ ಫೋನ್ ಬಿಲ್‌ಗಳು, ಹೀಗೆ ವಿವಿಧ ಸೇವೆಗಳು ಮತ್ತು ಜಾಲತಾಣಗಳಲ್ಲಿ ಕನ್ನಡ ಭಾಷೆಯ ಸೌಲಭ್ಯ ಲಭ್ಯವಿದೆ.

6) ಖಾಸಗಿ ಕ್ಷೇತ್ರದ ಬ್ಯಾಂಕು ತನ್ನ ಕನ್ನಡಿಗ ಗ್ರಾಹಕರಿಗೆಂದು ಸಂಪೂರ್ಣವಾಗಿ ಕನ್ನಡದಲ್ಲಿರುವ ಮೊಬೈಲ್ ಬ್ಯಾಂಕಿಂಗ್ ತಂತ್ರಾಂಶ ನೀಡುತ್ತಿದೆ, ಭೀಮ್ ಮೊದಲಾದ ವ್ಯಾಲೆಟ್‌ಗಳಲ್ಲಿ ಕನ್ನಡ ಭಾಷೆಯ ಸೌಲಭ್ಯ ಲಭ್ಯವಿದೆ, ಮೊಬೈಲ್ ಫೋನ್‌ಗಳಲ್ಲಿ ಬಳಸಲು ಹಲವಾರು ಕನ್ನಡ ಆಪ್‌ಗಳು ಲಭ್ಯವಿದೆ.

7) ಕನ್ನಡ ಮತ್ತು ತಂತ್ರಜ್ಞಾನ ಕುರಿತ ಸಂವಾದ ಮತ್ತು ಗೋಷ್ಠಿಗಳು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಹಲವು ವೇದಿಕೆಗಳಲ್ಲಿ ನಡೆಯುತ್ತಿವೆ.

8) ಗೂಗಲ್ ಅನುವಾದ ಸೌಲಭ್ಯ, ಗೂಗಲ್ ಮ್ಯಾಪ್, ಗೂಗಲ್ ಸರ್ಚ ಹೀಗೆ ಅನೇಕ ಸೌಲಭ್ಯಗಳು ಕನ್ನಡ ಭಾಷೆಯಲ್ಲಿ ದೊರೆಯುತ್ತಿವೆ. ನುಡಿ, ಬರಹ, ಕುವೆಂಪು ಕನ್ನಡ ತಂತ್ರಾಂಶಗಳಲ್ಲದೆ, ಹಲವಾರು ಮುಕ್ತ ತಂತ್ರಾಂಶಗಳು ಕನ್ನಡ ಭಾಷೆಯಲ್ಲಿ ದೊರೆಯುತ್ತಿವೆ.

ಹೀಗೆ ಲಭ್ಯವಿರುವ ಸೌಲಭ್ಯಗಳ ಪಟ್ಟಿಯನ್ನು ಮಾಡುತ್ತ ಹೋಗಬಹುದು. ಆದರೆ ಇಷ್ಟೆಲ್ಲಾ ಸೌಲಭ್ಯಗಳು ಕನ್ನಡ ಭಾಷೆಯಲ್ಲಿ ಲಭ್ಯವಿರುವಾಗ, ಅದನ್ನು ಎಷ್ಟು ಜನ ಕನ್ನಡಿಗರು ಬಳಸಿ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವುವ ಪ್ರಶ್ನೆ ಎದುರಾಗುತ್ತದೆ.

ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ಅದ್ಯತೆ ನೀಡಬೇಕು ಎನ್ನುವ ಕನ್ನಡಿಗರಿಗೆ ಹಕ್ಕೋತ್ತಾಯಕ್ಕೆ ತಂತ್ರಜ್ಞಾನ ಹೇಗೆ ಪೂರಕವಾಗಬಹುದು ಎಂದು ಒಂದು ಉದಾಹರಣೆಯೊಂದಿಗೆ ತಿಳಿದುಕೊಳ್ಳೋಣ.

ಖಾಸಗಿ ಶಿಕ್ಷಣ ಸಂಸ್ಥೆಗಳು, ಸರ್ಕಾರ ನೆಡೆಸುವ ಶಿಕ್ಷಣ ಸಂಸ್ಥೆಗಳ ನಡುವೆ ದುಬಾರಿಯಾದರೂ ಹೆಚ್ಚು ಜನ ಖಾಸಗಿ ಶಿಕ್ಷಣ ಸಂಸ್ಥೆಗಳತ್ತ ಒಲವು ತೋರಿಸುತ್ತಿರುವುದು, ಶಿಕ್ಷಣ ಕ್ಷೇತ್ರದ ವ್ಯಾಪಾರೀಕರಣ, ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮತ್ತು ಬಡವ ಮತ್ತು ಬಲ್ಲಿದರ ನಡುವೆ ಹೆಚ್ಚುತ್ತಿರುವ ಅಂತರ, ಹೀಗೆ ಹಲವಾರು ಸಮಸ್ಯೆಗಳನ್ನು ನೋಡುತ್ತೇವೆ.

ಅಕ್ಷರ ಸಮಾನತೆ:

ಖಾಸಗಿ, ಸರ್ಕಾರಿ ಅಥವಾ ಗ್ರಾಮೀಣ–ನಗರ, ಬಡವ–ಬಲ್ಲಿದ ಎನ್ನದೆ ಎಲ್ಲರಿಗೂ ಏಕರೂಪವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕನ್ನಡದಲ್ಲಿ ನೀಡಲು ತಂತ್ರಜ್ಞಾನವನ್ನು ಬಳಸಬಹುದು.

ಹೀಗೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿ ಮಾತೃ ಭಾಷೆಯಾದ ಚೀನಾ ಭಾಷೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಯೋಜನೆಯೊಂದಕ್ಕೆ ನಾನು ತಾಂತ್ರಿಕ ಸಲಹೆಗಾರನಾಗಿದ್ದು, ಅದರ ಕೆಲವು ವಿವರಗಳು ಹೀಗಿವೆ.

1) 18 ಕೋಟಿ 80 ಲಕ್ಷ ಶಾಲಾ ವಿದ್ಯಾರ್ಥಿಗಳು ಮತ್ತು 1 ಕೋಟಿ 40 ಲಕ್ಷ ಶಿಕ್ಷಕರು ತಂತ್ರಜ್ಞಾನ ಬಳಸಿ ಚೀನಾ ಭಾಷೆಯಲ್ಲಿ ನೀಡುವ ಶಾಲಾ ಶಿಕ್ಷಣದ ಪ್ರಯೋಜನ ಪಡೆಯುತ್ತಿದ್ದಾರೆ.

2) 7 ಕೋಟಿ 30 ಲಕ್ಷ ಶಾಲೆಗಳಿಗೆ ಅಂತರಜಾಲ ಸಂಪರ್ಕ, ಪಠ್ಯಪುಸ್ತಕಗಳು ಡಿಜಿಟಲ್ ಆವೃತ್ತಿ ಮತ್ತು ಅಧುನಿತ ಮೌಲ್ಯಪಾಪನ ಮೊದಲಾದ ಸೌಲಭ್ಯಗಳನ್ನು ನೀಡಲಾಗಿದೆ.

3) ಶಾಲೆಗಳಲ್ಲಿ ಕಲಿಸುವ ವಿಜ್ಞಾನ, ಗಣಿತ ಮೊದಲಾದ ಪಠ್ಯಗಳಿಗೆ ಸಂಬಂಧಿಸಿದ 50 ಕೋಟಿ ಪ್ರಶ್ನೆಗಳು, ಉಪ ಪ್ರಶ್ನೆಗಳು ಮತ್ತು ಉತ್ತರಗಳನ್ನು ಡಿಜಿಟಲ್ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಿ, ಇದನ್ನು ದಿನದ 24 ಗಂಟೆಗಳ ಕಾಲ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಉಚಿತವಾಗಿ ನೀಡಲಾಗುತ್ತಿದೆ.

4) ವಿದ್ಯಾರ್ಥಿಗಳ ಮನೆಪಾಠ ಪರಿಶೀಲನೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಮೊದಲಾದ ಕೆಲಸಗಳನ್ನು ಅಧುನಿಕ ತಂತ್ರಜ್ಞಾನ ಬಳಸಿ ಸರಳೀಕೃತಗೊಳಿಸಿರುವುದರಿಂದ ಶಿಕ್ಷಕರ ಮೇಲಿನ ಹೊರೆ ಕಡಿಮೆಯಾಗಿದೆ.

ಪ್ರತಿದಿನ ಸರಾಸರಿ 2 ಗಂಟೆಯಷ್ಟು ಸಮಯ ಶಿಕ್ಷಕರಿಗೆ ಉಳಿತಾಯವಾಗುತ್ತಿದೆ. ಈ ಸಮಯದಲ್ಲಿ ನಗರ ಪ್ರದೇಶದಲ್ಲಿರುವ ಅನುಭವಿ ಶಿಕ್ಷಕರು, ಇ-ಶಿಕ್ಷಣ ಸೌಲಭ್ಯ ಬಳಸಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ.

ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂದು ಕನ್ನಡಿಗರ ಬಹುದಿನ ಬೇಡಿಕೆಯಾಗಿದೆ. ಈ ಹಿನ್ನಲೆಯಲ್ಲಿ ಇಂತಹ ಯೋಜನೆಯನ್ನು ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡಲು ರೂಪಿಸಿ, ಅನುಷ್ಠಾನಗೊಳಸಿದರೆ, ರಾಜ್ಯದಲ್ಲಿರುವ 1 ರಿಂದ 10ನೆ ತರಗತಿಯವರೆಗಿನ ಶಾಲೆಗಳಲ್ಲಿ (ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ) ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಮತ್ತು ಅಕ್ಷರ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

		ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳು
1	ಸರ್ಕಾರಿ ಶಾಲೆಗಳು	49,637	52.83 ಲಕ್ಷ
2	ಸಮಾಜ ಕಲ್ಯಾಣ ಇಲಾಖೆಯ ಶಾಲೆಗಳು	1,218	1.25 ಲಕ್ಷ
3	ಅನುದಾನಿತ ಶಾಲೆಗಳು	6,806	15 ಲಕ್ಷ
4	ಅನುದಾನರಹಿತ ಶಾಲೆಗಳು	16,481	32 ಲಕ್ಷ

ಮೂಢ ನಂಬಿಕೆ ಮೊದಲಾದ ಸಾಮಾಜಿಕ ಅನಿಷ್ಠಗಳ ವಿರುದ್ಧ ಜನಜಾಗೃತಿ ಮೂಡಿಸಲು ಮತ್ತು ವೈಚಾರಿಕ ಚಿಂತನೆಯನ್ನು ಪ್ರೋತ್ಸಾಹಿಸಲು ಇಂತಹ ಯೋಜನೆಯನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಬಳಸಬಹುದಾಗಿದೆ.

ಪರಿಸರ ಸಂರಕ್ಷಣೆ :

ಚಿನ್ನದ ನಾಡು, ಸಿರಿಗಂಧದ ನಾಡು ಕನ್ನಡ ನಾಡಿನ ಅರಣ್ಯ ಸಂರಕ್ಷಣೆಯಲ್ಲೂ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸ ಬಹುದಾಗಿದೆ.

ಡೆಮೋಕ್ರಾಟಿಕ್ ರಿಪ್ಲಬಿಕ್ ಆಫ್ ಕಾಂಗೋದಲ್ಲಿ ಹೀಗೆ ತಂತ್ರಜ್ಞಾನ ಬಳಸಿದ್ದರಿಂದ ಕಾಡ್ಗಿಚ್ಚು, ಮರಗಳ್ಳತನ, ಒತ್ತುವರಿ ಮೊದಲಾದ ಸಮಸ್ಯೆಗಳಿಂದ 8,20,884 ಎಕರೆ ಅರಣ್ಯವನ್ನು ಸಂರಕ್ಷಿಸಲಾಗಿದೆ.

ಅರಣ್ಯದಲ್ಲಿ ಅತ್ಯಾಧುನಿಕ ಸೆನ್ಸರ್‌ಗಳನ್ನು ಬಳಸಿರುವುದರಿಂದ, ಎಲ್ಲಿಯಾದರೂ ಅಗ್ನಿ ಅವಗಢ ಸಂಭವಿಸಿದರೆ, ಮರಗಳ್ಳತನ ನಡೆಯುತ್ತಿದ್ದರೆ, ಅರಣ್ಯ ಪ್ರದೇಶವನ್ನು ಯಾರಾದರೂ ಅನಧಿಕೃತವಾಗಿ ಪ್ರವೇಶಿದರೆ ಅಥವಾ ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಿಸಿದರೆ, ತಕ್ಷಣ ಆ ಕುರಿತ ಮಾಹಿತಿ ಸ್ಥಳೀಯ ಭಾಷೆಯಲ್ಲಿ ಅರಣ್ಯ ಪಾಲಕರು ಮತ್ತು ಹತ್ತಿರದ ಗ್ರಾಮಸ್ಥರಿಗೆ ಮೊಬೈಲ್ ಫೋನ್ ಸಂದೇಶವಾಗಿ ತಲುಪಿಸಲಾಗುತ್ತದೆ.

ನಮ್ಮಲ್ಲಿ ಕೂಡಾ ಅರಣ್ಯಪಾಲಕರು, ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಕನ್ನಡ ಭಾಷೆಯಲ್ಲಿ ಈ ತಂತ್ರಜ್ಞಾನವನ್ನು ನೀಡಲು ಸಾಧ್ಯವಿದೆ.

ಅಂತರ ರಾಜ್ಯ ಜಲವಿವಾದಗಳ ಪರಿಹಾರ:

ಕಾವೇರಿ, ಮಹದಾಯಿ, ಕೃಷ್ಣಾ ಮೊದಲಾದ ಅಂತರ ರಾಜ್ಯ ಜಲವಿವಾದಗಳನ್ನು ಪರಿಹರಿಸಿಕೊಳ್ಳಲು ತಂತ್ರಜ್ಞಾನ ನೆರವಾಗಲಿದೆ.

ಆಫ್ರಿಕಾದ 3 ದೇಶಗಳ ನಡುವೆ ಸುಮಾರು 100 ವರ್ಷಗಳ ಕಾಲದಿಂದ ಇದ್ದ ಕೋಮತಿ ನದಿ ಜಲವಿವಾದವನ್ನು ಯಶಸ್ವಿಯಾಗಿ ಪರಿಹರಿಸಲು ಬಳಸಲಾಗಿರುವ ತಂತ್ರಜ್ಞಾನದಂತಹ ತಂತ್ರಜ್ಞಾನವನ್ನು ನಾವು ಕೂಡಾ ಬಳಸಬಹುದಾಗಿದೆ.

1) ಜಲಾನಯನ ಪ್ರದೇಶದಲ್ಲಿ ಎಷ್ಟು ಮಳೆಯಾಯಿತು, ಮಳೆಯಿಂದಾಗಿ ಎಷ್ಟು ನೀರು ನದಿ ಪಾತ್ರವನ್ನು ಸೇರಿತು, ನದಿ ನೀರನ್ನು ಯಾವ ಪ್ರದೇಶದಲ್ಲಿ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಎಲ್ಲಿ ನೀರು ಪೋಲಾಗುತ್ತಿದೆ, ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ, ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ ಬಿಡುಗಡೆಯಾಗುತ್ತಿರುವ ನೀರಿನ ಪ್ರಮಾಣ ಇಂತಹ ಮಾಹಿತಿಯನ್ನು ಅವರ ಮಾತೃ ಭಾಷೆಯಲ್ಲಿ ರೈತರಿಗೆ ಪ್ರತಿದಿನವೂ ನೀಡಲು ಸಾಧ್ಯವಾಗುತ್ತದೆ.

2) ಅನಾವೃಷ್ಟಿ ಸಮಯದಲ್ಲಿ ನೀರಿನ ಕೊರತೆ ಎಷ್ಟಿದೆ, ಹೇಗೆ ಲಭ್ಯವಿರುವ ನೀರನ್ನು ಬಳಸಿಕೊಳ್ಳಬಹುದು, ಮೊದಲಾದ ವಿಷಯಗಳನ್ನು ಕೂಡಾ ರೈತರಿಗೆ ಅವರ ಮಾತೃ ಭಾಷೆಯಲ್ಲಿ ನೀಡಬಹದು.

3) ಜಲಾನಯನ ಪ್ರದೇಶದಿಂದ ಸಮುದ್ರ ಸೇರುವ ತನಕ ನದಿ, ಜಲಾಶಯಗಳು, ನೀರಿನ ಬಳಕೆ ಮತ್ತು ಪೋಲು ಕುರಿತು ಮಾಹಿತಿ ಸಂಬಂಧಪಟ್ಟ ಎಲ್ಲಾ ರಾಜ್ಯಗಳಿಗೆ, ಕೇಂದ್ರ ಸರ್ಕಾರ ಮತ್ತು ನ್ಯಾಯಾಲಕ್ಕೆ ನೀಡಲು ಸಾಧ್ಯವಾಗುತ್ತದೆ.

ಮಳೆ, ಬೆಳೆ, ಪಶು ರೋಗ ಮುನ್ಸೂಚನೆ ಕುರಿತು ಮಾಹಿತಿಯನ್ನು ರೈತರಿಗೆ ಕನ್ನಡದಲ್ಲಿ ನೀಡಬಹುದು :

ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಮಳೆ, ಬೆಳೆ ಮತ್ತು ಪಶು ರೋಗ ಮುನ್ಸೂಚನೆ ಕುರಿತ ಮಾಹಿತಿಯನ್ನು ಹೆಚ್ಚು ಕರಾರುವಕ್ಕಾಗಿ ನೀಡಲು ಸಾಧ್ಯವಿದೆ.

ನೆರೆಯ ಮಹಾರಾಷ್ಟ್ರದಲ್ಲಿ ಇಂತಹ ಯೋಜನೆಯನ್ನು ಜಾರಿ ಗೊಳಿಸಲಾಗುತ್ತಿದೆ. ಕರ್ನಾಟಕದ ರೈತರಿಗೆ ಅನುಕೂಲವಾಗುವಂತೆ ಇಲ್ಲಿ ಕೂಡಾ ಇಂತಹ ಯೋಜನೆ ರೂಪಿಸಬಹುದಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಪ್ರಾಯೋಗಿಕವಾಗಿ ನೆಡೆದ ಪಶುರೋಗ ಮುನ್ಸೂಚನೆ ಮಾಹಿತಿ ನೀಡುವ ಯೋಜನೆಯಲ್ಲಿ 3 ತಿಂಗಳು ಮುಂಚಿತವಾಗಿ ಹಸುಗಳನ್ನು ಕಾಡುವ ಸಾಂಕ್ರಮಿಕ ರೋಗವೊಂದರ ಮುನ್ಸೂಚನೆ ನೀಡಲು ಸಾಧ್ಯವಾಗಿದೆ.

ಇದನ್ನು ರಾಜ್ಯಾದ್ಯಂತ ವಿಸ್ತರಿಸಿದರೆ, ಪಶು, ಕುಕ್ಕುಟೋದ್ಯಮ ಮತ್ತು ಕುರಿಗಳನ್ನು ಸಾಕುತ್ತಿರುವ ರೈತರಿಗೆ ಅನುಕೂಲವಾಗಲಿದೆ.

ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶ:

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿರುವ ಉದ್ಯೋಗಾಂಕ್ಷಿ ಯುವಕ, ಯುವತಿಯರ ವಿದ್ಯಾರ್ಹತೆ, ಆಸಕ್ತಿ ಕುರಿತು ವೈಜ್ಞಾನಿಕವಾಗಿ ಮಾಹಿತಿ ಸಂಗ್ರಹಿಸಿ, ನವೋದ್ಯಮ, ಸ್ವಯಂ ಉದ್ಯೋಗ, ಖಾಸಗಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಹೆಚ್ಚು ಕನ್ನಡಿಗರಿಗೆ ಲಭ್ಯವಾಗುವಂತೆ ಮಾಡಬಹುದಾಗಿದೆ.

ಸಿ.ಐ.ಐ–ಮೆಕೆನ್ಸಿ ಸಹಯೋಗದಲ್ಲಿ ಇಡೀ ರಾಜ್ಯದ ಸಮೀಕ್ಷೆ ನೆಡೆಸಿ ತಯಾರಿಸಿ ರಾಜ್ಯ ಸರ್ಕಾರಕ್ಕೆ ನೀಡಲಾದ ಯೋಜನಾ ವರದಿಯನ್ನು ಸಿದ್ಧಪಡಿಸಿದ ಐಟಿ ತಜ್ಞರ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದೆ. ಈ ವರದಿಯಂತೆ 5 ವರ್ಷಗಳಲ್ಲಿ ರಾಜ್ಯಾದಂತ್ಯ ಐಟಿ ಮತ್ತು ಐಟಿ ಆಧಾರಿತ ಸೇವೆಗಳ ಉದ್ಯಮಗಳು ಸ್ಥಾಪನೆಯಾಗುತ್ತಿದ್ದವು ಮತ್ತು 10 ಲಕ್ಷ ಜನ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿತ್ತು. ಆದರೆ ರಾಜ್ಯ ಸರ್ಕಾರ ಈ ಯೋಜನಾ ವರದಿಯ ಅನುಷ್ಠಾನಕ್ಕೆ ಮುಂದಾಗಲಿಲ್ಲ. ಈ ವರದಿಯನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಮರುಪರಿಶೀಲಿಸಿದರೆ, ಸಾವಿರಾರು ಜನ ಕನ್ನಡ ಮಾಧ್ಯಮದ ವಿಜ್ಞಾನ ಪದವಿಧರರಿಗೆ ಉದ್ಯೋಗ ದೊರೆಯಬಹುದಾಗಿದೆ.

ನನ್ನ ಪ್ರಯತ್ನದಿಂದಾಗಿ ನೂರಾರು ಜನ ಕನ್ನಡಿಗರಿಗೆ ರಾಜ್ಯದಲ್ಲಿರುವ ಮೊಬೈಲ್ ಸೇವೆ ಸಂಸ್ಥೆಗಳು ಮತ್ತು ಅಮೇಜಾನ್‌ನಂತಹ ಬಹುರಾಷ್ಟ್ರೀಯ ಸಂಸ್ಥೆಗಳು ನೆಡೆಸುವ ಗ್ರಾಹಕ ಸೇವಾ ಕೇಂದ್ರಗಳಲ್ಲಿ ಕೆಲಸ ಸಿಕ್ಕಿರುವುದನ್ನು ಇಲ್ಲಿ ಒಂದು ಉದಾಹರಣೆಯಾಗಿ ನೀಡಲು ಬಯಸುತ್ತೇನೆ.

13ನೆ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಹಲವಾರು ಗೋಷ್ಠಿಗಳಿವೆ. ಇಲ್ಲಿ ನೆಡೆಯುವ ವಿಚಾರ ವಿನಿಮಯ ಈ ಸಮ್ಮೇಳನಕ್ಕೆ ಸೀಮಿತವಾಗದೆ, ಅಜ್ಞಾನದ ಕತ್ತಲ್ಲನ್ನು ದೂರವಾಗಿಸುವ ವಿಜ್ಞಾನದ ಬೆಳಕಾಗಿ, ಮನೆ ಮನೆಯನ್ನೂ ಬೆಳಗಲಿ ಎಂದು ಆಶಿಸುತ್ತೇನೆ.

ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರ ಜನ್ಮದಿನದಂದು ಆಯೋಜಿಸಲಾಗಿರುವ 13ನೆ ಕನ್ನಡ ವಿಜ್ಞಾನ ಸಮ್ಮೇಳನವನ್ನು ಉದ್ಘಾಟಿಸುವ ಅವಕಾಶ ನೀಡಿದ ಅಧ್ಯಕ್ಷರಿಗೂ, ಸಮ್ಮೇಳನದ ಆಯೋಜಕರಾದ ಸ್ವದೇಶಿ ವಿಜ್ಞಾನ ಆಂದೋಳನ – ಕರ್ನಾಟಕ, ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಜೈ ಕರ್ನಾಟಕ ಜೈ ವಿಜ್ಞಾನ

ಪಾಣಿನೀಯಮ್

ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು

PANINEEYAM

Humanities and Linguistic Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಆಧುನಿಕ ಭಾರತೀಯರಿಗೆ 38 ಅಕ್ಷರಗಳ (ಹೆಚ್ಚುವರಿಯಾಗಿ) ಹೊಸ ಲಿಪಿ	ಡಾ. ದತ್ತಾತ್ರೇಯ ವಿ. ನಾ.	10 – 14
2.	ಶಬ್ದಸಾಧುತ್ವಮ್	ಶಶಾಂಕ ಹತ್ವಾರ್. ಟಿ. ವಿ.	14 – 16
3.	ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೈ ಬರಹದ ಪಾತ್ರ	ಡಾ. ನೂತನ್ ರಾವ್	
		ಇಮ್ರಾನ್ ಬೇಗ್	17 – 20
4.	ಗ್ರಾಮೀಣ ಭಾಗದತಾರುಣ್ಯಾವಧಿಯವರಲ್ಲಿ ಮಾರ್ಗದರ್ಶನದ	ವಿನುತ.ಆರ್	
	ಅಗತ್ಯಗಳು	ಇಂದಿರಮ್ಮ. ಬಿ.ಎಸ್	20 – 27

ಆಧುನಿಕ ಭಾರತೀಯರಿಗೆ 38 ಅಕ್ಷರಗಳ (ಹೆಚ್ಚುವರಿಯಾಗಿ) ಹೊಸ ಲಿಪಿ

ಡಾ. ದತ್ತಾತ್ರೇಯ ವಿ. ನಾ.
ಕೇಣಿ ರಸ್ತೆ, ಅಂಕೋಲಾ

ಆಧುನಿಕ ಭಾರತೀಯರು 'ಡಿಜಿಟಲ್ ಇಂಡಿಯಾ'ದ ಕಾಲಘಟ್ಟದಲ್ಲಿದ್ದಾರೆ. ಇವರು ಇಡೀ ವಿಶ್ವದ ಜೊತೆ ಹೆಜ್ಜೆ ಹಾಕುತ್ತ, ಚರವಾಣಿ ಮತ್ತು ಗಣಕಗಳನ್ನು ಹೆಚ್ಚು ಹೆಚ್ಚಾಗಿ ಬಳಸುತ್ತ, ಅವನ್ನೇ ತಮ್ಮ ಜೀವನದ ಭಾಗವಾಗಿಸಿಕೊಳ್ಳತೊಡಗಿದ್ದಾರೆ; ಕಾಗದ ರಹಿತ ಜಗತ್ತಿನತ್ತ ಹೆಜ್ಜೆ ಹಾಕುತ್ತಿದ್ದಾರೆ.

ಭಾರತೀಯ ಭಾಷೆಗಳು ತಮ್ಮ ಈಗಿನ ಲಿಪಿಗಳಿಗೆ ಹೆಚ್ಚುವರಿಯಾಗಿ ಒಂದು ಸರಳ-ಸಂಪನ್ನ, ಆಧುನಿಕ, ಕಡಿಮೆ ಅಕ್ಷರ ಚಿಹ್ನೆಗಳನ್ನು ಹೊಂದಿದ ಮಾದರಿ ಲಿಪಿಯೊಂದನ್ನು ಹೊಂದುವುದು ಇಂದಿನ ಅವಶ್ಯಕತೆ ಮತ್ತು ಇದು ಅವುಗಳ ಹಿತದೃಷ್ಟಿಯಿಂದ ಲಾಭದಾಯಕ. ಏಕೆಂದರೆ, 1) ಇದು ಅವುಗಳ ಬೆರಳಚ್ಚಿನ ವೇಗವನ್ನು ಹೆಚ್ಚಿಸಬೇಕಿದೆ. 2) ಅವುಗಳ ಬೆರಳಚ್ಚಿನ ಕೆಲಸವನ್ನು ಸುಗಮಗೊಳಿಸಬೇಕಾಗಿದೆ. 3) ಗಣಕದ ಕೀಲಿಮಣೆಯಲ್ಲಿ ಅವುಗಳಿಗೆ ಪ್ರಧಾನ ಸ್ಥಾನವನ್ನು ನೀಡಬೇಕಾಗಿದೆ. ಈ ದೃಷ್ಟಿಯಿಂದ ಒಂದು ಮಾದರಿ ಲಿಪಿಯನ್ನು ಕನ್ನಡ ಸಹಿತ ಇತರ ಭಾರತೀಯ ಭಾಷೆಗಳಿಗೆ ನೀಡುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಸುಮಾರು 40 ವರ್ಷಗಳ ಹಿಂದೆ ನಾವು ಶಾಲೆಗಳಲ್ಲಿ ಕಲಿಯುತ್ತಿದ್ದಾಗ ನಮಗೆ 'ಸಿ' ಫೊರ್ 'ಕ್ಯಾಟ್' ಎಂದು ಕಲಿಸುತ್ತಿದ್ದರು; ಇಂದು ಶಾಲೆಗಳಲ್ಲಿ ಮಕ್ಕಳಿಗೆ 'ಸಿ' ಫೊರ್ 'ಚೆರ್ರಿ' ಎಂದು ಕಲಿಸುತ್ತಿದ್ದಾರೆ. ಜರ್ಮನಿಯಲ್ಲಿ DOCTOR ಎನ್ನುವ ಬದಲಿಗೆ DOKTOR ಎಂದು ಬರೆಯುತ್ತಿದ್ದಾರೆ. ಅಂದರೆ ಇಡೀ ವಿಶ್ವವೇ ಇಂದು ಧ್ವನಿಶಾಸ್ತ್ರದಿಂದ ಪ್ರಭಾವಿತವಾಗಿ ಅದರೆಡಿಗೆ ವಾಲುತ್ತಿದೆ.

40 ವರ್ಷಗಳ ಹಿಂದೆ ಗಣಕ ಚರವಾಣಿಗಳು ಇರಲಿಲ್ಲ. ಆದರೆ ಇಂದು ಇವುಗಳು ನಿತ್ಯದ ಬದುಕಿನ ಭಾಗವಾಗುತ್ತಿವೆ. ನಾವು ಸುಮಾರು 30 ವರ್ಷಗಳಿಗೂ ಹೆಚ್ಚಿನ ಸಮಯದಿಂದ 'ಗಣಕಯುಗ'ದಲ್ಲಿದ್ದೇವೆ. ಆಧುನಿಕ ಭಾರತೀಯರು "ಡಿಜಿಟಲ್ ಇಂಡಿಯಾ"ದ ಕಾಲಘಟ್ಟದಲ್ಲಿದ್ದಾರೆ. ಇವರು ಇಡೀ ವಿಶ್ವದ ಜೊತೆ ಹೆಜ್ಜೆ ಹಾಕುತ್ತಾ ಗಣಕ ಮತ್ತು ಚಲವಾಣಿಗಳನ್ನು ಹೆಚ್ಚು ಹೆಚ್ಚಾಗಿ ಬಳಸುತ್ತಾ ಅದನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದಾರೆ; ಕಾಗದ ರಹಿತ ಜಗತ್ತಿನತ್ತ ಸಾಗತೊಡಗಿದ್ದಾರೆ.

ಇಂದು 'ಗಣಕಯುಗ' ಆರಂಭವಾಗಿ ಸುಮಾರು 3 ದಶಕಗಳಿಗಿಂತಲೂ ಹೆಚ್ಚಿನ ಸಮಯವಾಗಿದೆ. ಗಣಕದ, ಚಲವಾಣಿಯ, ಉಪಯೋಗ ವ್ಯಾಪಕವಾಗಿರುವ ಈ ಕಾಲದಲ್ಲಿ 5,000 ವರ್ಷಗಳಿಗೂ ಅಧಿಕವಾದ ನಾಗರಿಕ ಇತಿಹಾಸ ಹೊಂದಿರುವ ಭಾರತಿಯರು ಇಂದಿಗೂ ಅಂದರೆ **'ಗಣಕಯುಗ'ದ ಆರಂಭದ 25ಕ್ಕೂ ಹೆಚ್ಚು ವರ್ಷಗಳು ಕಳೆದರೂ ಇಂದಿಗೂ ನಾವು ನಮ್ಮ ಕೀಲಿಮಣೆ ಹೊಂದಿಲ್ಲ; ಬದಲಿಗೆ ಇಂಗ್ಲೀಷ ಕೀಲಿಮಣೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದೇವೆ.** ಇದಕ್ಕೆ ವ್ಯತಿರಿಕ್ತವಾಗಿ ಪ್ರಾಚೀನ ನಾಗರಿಕತೆಯನ್ನು ಹೊಂದಿದ **ಚೀನಾ ದೇಶ** ಕೂಡ ತನ್ನ ಕ್ಲಿಷ್ಟ ಎನ್ನಬಹುದಾದ ಲಿಪಿಯನ್ನು ಸರಳೀಕರಿಸಿ ಗಣಕದ ಕೀಲಿಮಣೆಯಲ್ಲಿ ಅದು ಸ್ಥಾನ ಪಡೆಯುವಂತೆ ಮಾಡಿ **ಚೀನಿ ಕೀಲಿಮಣೆ**ಯಿಂದಲೇ ತನ್ನ ವ್ಯವಹಾರವನ್ನು ನಡೆಸುತ್ತಿದೆ.

ಇಂದು ನಾವು ನಮ್ಮ ಭಾಷೆಗಳಲ್ಲಿ ಬರೆಯಲೂ ಇಂಗ್ಲೀಷ್ ಕೀಲಿಮಣೆಯಿಂದ ಕಾರ್ಯನಿರ್ವಹಿಸುತ್ತಿದ್ದೇವೆ. ಶಿಫ್ಟ್ ಮುಂತಾದ ಅಡೆತಡೆಗಳಿಂದ ಬಹುವಾಗಿ ಕೂಡಿದ ನಿಧಾನವಾದ, ಸರಳವಲ್ಲದ ಹಾಗೂ ಸುಗಮವಲ್ಲದ ಭಾರತೀಯ ಭಾಷಾ ಬೆರಳೊತ್ತು ಕಾರ್ಯವ್ಯವಸ್ಥೆಯನ್ನು ಹೊಂದಿದ್ದೇವೆ. ಮತ್ತು ಅದರಲ್ಲಿಯೇ ತೃಪ್ತಿಪಟ್ಟುಕೊಂಡು ಸಮಾಧಾನದಲ್ಲಿದ್ದೇವೆ. ಇದಕ್ಕೆ ವ್ಯತಿರಿಕ್ತವಾಗಿ ಇದೇ ಇಂಗ್ಲೀಷ್ ಕೀಲಿಮಣೆಯಿಂದ ಇಂಗ್ಲೀಷ್ ಬೆರಳೊತ್ತಿನ ಕಾರ್ಯವು ಸರಳವೂ, ಸುಗಮವೂ, ವೇಗವಾದದ್ದೂ ಆಗಿದ್ದು, ಇದೆಲ್ಲ ಕಾರಣಗಳಿಂದ ಅದು ಗಣಕಕ್ಕೆ ಸೂಕ್ತವಾಗಿದೆ. ಆದ್ದರಿಂದ ನಮ್ಮ ಮಕ್ಕಳಲ್ಲಿ ಇಂಗ್ಲಿಷ್ ಸುಲಭ-ಶ್ರೇಷ್ಠ, ನಮ್ಮದು ಕ್ಲಿಷ್ಟ-ಕನಿಷ್ಠ ಎಂಬ ಕೀಳರಿಮೆ ಮನಸ್ಸಿನಲ್ಲಿ ಮೂಡುವುದು ಸಹಜವಾಗಿದೆ. ನಮ್ಮ ಮಕ್ಕಳು ನಮ್ಮ ಭಾಷೆಯಲ್ಲಿ ಬೆರಳೊತ್ತು ಕಾರ್ಯ ಕಲಿಯಲು ನಿರಾಸಕ್ತಿ ತೋರುತ್ತಿದ್ದಾರೆ. ಇದೆಲ್ಲದಕ್ಕೆ ಪರಿಹಾರವನ್ನು ಹುಡುಕಬೇಕಾಗಿದೆ.

ಭಾರತೀಯರು, ತಮ್ಮ ಭಾಷೆಗಳು ಬೇರೆ ಬೇರೆ ಆದರೂ ಒಂದೇ ದೇಶ, ಸಮಾನವಾದ ತಾಯ್ನೆಲ, ಸಮಾನವಾದ ಪೂರ್ವಜರು-ಸಂಸ್ಕೃತಿ-ನಾಗರಿಕತೆಯನ್ನು ಹೊಂದಿದ್ದಾರೆ; ಹೆಚ್ಚು ಕಡಿಮೆ **ಸಮಾನವಾದ ಶಬ್ದಾಕ್ಷರಗಳು ಮತ್ತು ಮಾದರಿ ಅಕ್ಷರ ಮಾಲೆಯನ್ನು ಹೊಂದಿದ್ದಾರೆ.** ಇವರ ಶಬ್ದಾಕ್ಷರಗಳು ಈಗಾಗಲೇ ಧ್ವನಿಶಾಸ್ತ್ರಾಧಾರಿತವಾಗಿವೆ. ಅಂದರೆ **ನಾವು ಹೇಳಿ(ಆಡಿ)ದಂತೆ ಬರೆಯಬಲ್ಲೆವು ಮತ್ತು ಬರೆದಂತೆ ಓದಬಲ್ಲೆವು.** ನಮ್ಮ ಪಾಣಿನಿಯ ವ್ಯಾಕರಣವು ವಿಶ್ವ ಪ್ರಸಿದ್ಧವಾಗಿದ್ದು, ಇದನ್ನು ಅಳವಡಿಸಿಕೊಂಡ ಪರಿಣಾಮವಾಗಿ ಭಾರತೀಯ ಭಾಷೆಗಳ ತಾಯಿ ಭಾಷೆಯಾದ ಸಂಸ್ಕೃತವು ಸುಮಾರು 2500 ವರ್ಷಗಳಿಗಿಂದ ಬದಲಾಗದೆ ಹಾಗೇ ಉಳಿದ ವಿಶ್ವದ ಭಾಷೆ ಎಂದು ಖ್ಯಾತವಾಗಿದೆ. ಭಾರತೀಯ ಭಾಷೆಗಳಲ್ಲಿ ಶೇ. 60ರಷ್ಟು ಸಂಸ್ಕೃತ ಪದಗಳಿವೆ. ಉಳಿದ ಶೇ. 20ರಷ್ಟು ಪದಗಳು ಆಯಾ ಭಾಷೆಯ ಪದಗಳಾವೆ ಮತ್ತು ಉಳಿದ ಶೇ. 20 ಇತರ ಸಂಪರ್ಕದಲ್ಲಿ ಬಂದ ಭಾಷೆಗಳಿಂದ ಪಡೆದ ಪದಗಳಾಗಿವೆ. ಭಾರತೀಯ ಭಾಷೆಯ ಶಬ್ದಾಕ್ಷರಗಳು ಪಾಣಿನಿಯ ವ್ಯಾಕರಣದಂತೆ ಪಂಚ ಉತ್ಪತ್ತಿ ಸ್ಥಾನಗಳನ್ನು ಹೊಂದಿವೆ. ಇವುಗಳ ಲೇಖನವು ಈಗ ಧ್ವನಿಶಾಸ್ತ್ರಾಧಾರಿತವಾಗಿದೆ. **"ಭಾರತೀಯ ಶಬ್ದಾಕ್ಷರಗಳ ಉಚ್ಛಾರಣೆಯನ್ನು ಸರಿಯಾಗಿ ಕಲಿತಲ್ಲಿ ಆ ವ್ಯಕ್ತಿ ವಿಶ್ವದ ಯಾವ ಭಾಷೆಯಲ್ಲೂ ಚೆನ್ನಾಗಿ ಉಚ್ಛಾರ ಮಾಡಬಲ್ಲ"** ಎಂದು ಲಂಡನ್ನಿನ ಸಂಸ್ಕೃತ

ಮಾಧ್ಯಮದ ಐರಿಶ್ ಶಾಲೆಯ ಅಧ್ಯಾಪಕರೊಬ್ಬರು ಹೇಳಿರುವ ಮಾತು ಯೋಗ್ಯವೇ ಆಗಿದೆ. ಸಂಸ್ಕೃತವು ಇಂಡೋ ಯುರೋಪಿಯನ್ ಭಾಷಾ ವರ್ಗದ ತಾಯಿ ಭಾಷೆ ಎಂದು ಪರಿಗಣಿಸಲ್ಪಟ್ಟಿದೆ. ಹಾಗೇ ಇದರ ಪ್ರಭಾವವು ಪೂರ್ವ, ಆಗ್ನೇಯ ಮತ್ತು ದಕ್ಷಿಣ ಏಷ್ಯಾದ ಭಾಷೆಗಳ ಮೇಲೆ ಕಾಣಬಹುದಾಗಿದೆ.

ಭಾರತೀಯ ಭಾಷೆಗಳಲ್ಲಿ, ಒಟ್ಟೂ 17 (ಸ್ವರಗಳು) + 2 (ಅಂ, ಅಃ) + 25 (ವರ್ಗೀಯ ವ್ಯಂಜನಗಳು) + 9 (ಅವರ್ಗೀಯ ವ್ಯಂಜನಗಳು) ಹೀಗೆ **ಒಟ್ಟೂ ಸುಮಾರು 51 ಅಕ್ಷರಗಳು ಇವೆ.** (**'ಲೃ'– ದೀರ್ಘ** ಇಲ್ಲ. ಮತ್ತು **'ಕ್ಷ'** ಮತ್ತು **'ಜ್ಞ'**–ಇವೆರಡು ಸಂಯುಕ್ತಾಕ್ಷರಗಳು). **ಆದರೆ ಬರೆಯಲು ಇವಿಷ್ಟೇ ಸಾಲದಾಗಿದೆ. ಇವುಗಳ ಜೊತೆಗೆ ಕಾಗುಣಿತ ರೂಪಗಳು, ಒತ್ತಕ್ಷರ ರೂಪಗಳೂ ಇವೆ ಮತ್ತು ಬರೆಯಲು ಇವು ಅವಶ್ಯವಾಗಿವೆ.**

ಗಣಕದ ಕೀಲಿಮಣೆಯ ಒಂದು ಬೆರಳೊತ್ತಿಗೆ (ಕೀಲಿಗೆ, ಗುಂಡಿಗೆ, ಬಟನಿಕಾಗೆ) ಒಂದು ಚಿನ್ಹೆ / ಸಂಕೇತ ಎಂಬ ತತ್ವ ಇದೆ. ಆದ್ದರಿಂದ 51 ಅಕ್ಷರಗಳಿಗೆ 51 ಚಿನ್ಹೆ ಸಾಕಾಗಬೇಕಿತ್ತು. ಆದರೆ **ಭಾರತೀಯ ಭಾಷೆಗಳ ಲಿಪಿಗಳು ಮೇಲ್ನೋಟಕ್ಕೆ ಬೇರೆ ಬೇರೆ ಕಂಡರೂ ಜಾತಿಯಿಂದ ಮಾತ್ರ ಒಂದೇ ಜಾತಿಗೆ ಸೇರಿವೆ.** ಇವುಗಳ ಸ್ವಭಾವದಂತೆ 15 ಸ್ವರಗಳು ಮತ್ತು ಅಂ, ಅಃ ಇವೆರಡು ಕೂಡಿ 17 ಕಾಗುಣಿತಗಳಿಗೆ **ಹೆಚ್ಚುವರಿಯಾಗಿ ಒಟ್ಟೂ 17 ಕಾಗುಣಿತ ಚಿನ್ಹೆಗಳನ್ನು ಹೊಂದಿವೆ** ಮತ್ತು 34 ವ್ಯಂಜನಗಳಿಗೆ ಗುಣಿಸಿದಾಗ ಅಂದರೆ 34 x 17 = **578 ಕಾಗುಣಿತ ರೂಪಗಳು** ಸಾಧ್ಯವಾಗುತ್ತವೆ. ಹಾಗೇ ಭಾರತೀಯ ಭಾಷೆಗಳು **34 ವ್ಯಂಜನಗಳಿಗೆ 35 ಹೆಚ್ಚುವರಿಯಾದ ಒತ್ತಕ್ಷರ ಚಿನ್ಹೆಗಳು (ಅರ್ಕಾವಲಿ ಸಹಿತ; 'ರ' ಕಾರಕ್ಕೆ ಎರಡು ರೀತಿಯ ಒತ್ತಕ್ಷರ – 1)** ್ರ, 2) ರ್,) ಇವೆ. ಇದರಿಂದಾಗಿ 34 x 17 = 578 x35 = **20,230 ಸಂಯುಕ್ತಾಕ್ಷರ ರೂಪಗಳು** ಸಾಧ್ಯವಾಗುತ್ತದೆ; **– ಇದು ಕೇವಲ ಒಂದು ಒತ್ತಕ್ಷರವಿದ್ದಾಗ.** ಎರಡು ಒತ್ತಕ್ಷರಗಳು ಇದ್ದಾಗ ಇದು ಇನ್ನೂ ಹೆಚ್ಚಾಗುತ್ತದೆ; ಮೂರು ಒತ್ತಕ್ಷರಗಳು ಇದ್ದಾಗ ಇದು ಇನ್ನೂ ಇನ್ನೂ ಹೆಚ್ಚಾಗುತ್ತದೆ; 2–3 ಒತ್ತಕ್ಷರಗಳಿದ್ದಾಗ ಒತ್ತಕ್ಷರದ ಸ್ಥಾನ ಮೇಲೆ, ಕೆಳಗೆ ಅಥವಾ ಸ್ವಜಾತಿಯ / ವಿಜಾತಿಯ ಇತ್ಯಾದಿ ಬದಲಾವಣೆಯಿಂದ ಇದು ಇನ್ನೂ ಇನ್ನೂ ಇನ್ನೂ ಬಹಳ ಹೆಚ್ಚಾಗುತ್ತದೆ. ಆದ್ದರಿಂದ **ಅತೀ ಕಡಿಮೆ ಎಂದರೂ 51 (ಅಕ್ಷರ ಚಿನ್ಹೆಗಳು) + 52 (ಕಾಗುಣಿತ ಚಿನ್ಹೆಗಳು ಮತ್ತು ಒತ್ತಕ್ಷರ ಚಿನ್ಹೆಗಳು) = 103 ಸಂಕೇತಗಳಾಗುತ್ತವೆ. ಇವೆಲ್ಲವನ್ನೂ ಗಣಕವು ಪ್ರತ್ಯೇಕ ಚಿನ್ಹೆಗಳೆಂದೇ ಗುರುತಿಸುತ್ತದೆ.** ಆದ್ದರಿಂದ ಇವನ್ನು ಕೀಲಿಮಣೆಯಲ್ಲಿ ಎರಡು ಶಿಫ್ಟ್‌ಗಳಲ್ಲಿ (ವಿಭಾಗಗಳಲ್ಲಿ) ಹಂಚಿಕೊಡಲಾಗಿದೆ. ಆದ್ದರಿಂದ ದೀರ್ಘ ಸ್ವರಕ್ಕೆ 4 ಸಲ, ಮಹಾಪ್ರಾಣಕ್ಕೆ 10 ಸಲ ಮತ್ತು ಒತ್ತಕ್ಷರಕ್ಕೆ 35 ಸಲ ಶಿಫ್ಟ್ ಒತ್ತಬೇಕಾಗುತ್ತದೆ. **ಹೀಗೆ ಒಟ್ಟೂ 4+10+35=49 ಸಲವಾದರೂ ಶಿಫ್ಟನ್ನು ಒತ್ತಬೇಕಾಗುತ್ತದೆ. ಅಂದರೆ ಸರಿಸುಮಾರು ಅರ್ಧದಷ್ಟು ಸಂದರ್ಭಗಳಲ್ಲಿ ಶಿಫ್ಟನ್ನು ಒತ್ತಬೇಕಾಗುತ್ತದೆ.** ಇದರಿಂದ ಬೆರಳೊತ್ತಿನ ಕಾರ್ಯಕ್ಕೆ ಅಡೆತಡೆ ಉಂಟಾಗಿ ವೇಗ ಕಡಿಮೆಯಾಗುತ್ತದೆ. ಹೀಗೆ ಭಾರತೀಯ ಭಾಷೆಗಳ ಬೆರಳೊತ್ತು ಕೆಲಸ ಸರಳ, ಸುಲಲಿತವಾಗಿರದೆ, ವೇಗವಾಗಿರದೆ ಅದು ಕ್ಲಿಷ್ಟವಾಗಿದ್ದು, ಅಡೆತಡೆಗಳಿಂದ ಕೂಡಿದ್ದು, ನಿಧಾನವಾಗಿದೆ. ಪರಿಣಾಮವಾಗಿ ಇವು **ಗ್ರಾಹಕಸ್ನೇಹಿಯಾಗಿರದೇ 'ಗಣಕವಿಶ್ವ'ದಲ್ಲಿ ಸ್ಪರ್ಧಾಸಕ್ಷಮವಾಗಿಲ್ಲ.** ಆದ್ದರಿಂದ ಗಣಕದ ಕಾಲದವರೆಗೂ ನಮ್ಮನ್ನು ಮುನ್ನಡೆಸಿಕೊಂಡು ಬಂದ ಭಾರತೀಯ ಭಾಷೆಗಳ ಲಿಪಿಗಳು ಗಣಕದ ಬೆರಳೊತ್ತಿನ ಕೆಲಸದಲ್ಲಿ ಇಂದಿನ ಸ್ಪರ್ಧಾತ್ಮಕ ಪ್ರಪಂಚದೊಡನೆ ಪೈಪೋಟಿ ಮಾಡುವಲ್ಲಿ ಹಿಂದೆ ಬಿದ್ದಿವೆ.

ಆದ್ದರಿಂದ ಇಂದಿನ ಗಣಕಯುಗದಲ್ಲಿ ಈ ಕೆಳಗಿನ ಕಾರಣಗಳಿಗಾಗಿ ಸಾಮಾನ್ಯವಾದ, ಕಡಿಮೆ ಅಕ್ಷರದ, ಮಾದರಿ ಹೊಸ ರೂಪಾಕ್ಷರ (ಹೊಸ ಲಿಪಿಯನ್ನು) ಹೆಚ್ಚುವರಿಯಾಗಿ ಹೊಂದಬೇಕಾಗಿದೆ :–

1) ಗಣಕದ ಕೀಲಿಮಣೆಯಲ್ಲಿ ಪ್ರಧಾನ ಸ್ಥಾನ ಪಡೆಯಲು.

2) ಬೆರಳೊತ್ತನ್ನು ಸರಳ ಮತ್ತು ಸುಗಮಗೊಳಿಸಲು

3) ಬೆರಳೊತ್ತಿನ ವೇಗವನ್ನು ಹೆಚ್ಚಿಸಲು.

4) ಇವೆಲ್ಲದರ ಮೂಲಕ ಗ್ರಾಹಕ–ಸ್ನೇಹಿಯಾಗಿ (ಬಳಕೆದಾರ ಮಿತ್ರನಾಗಿ).

5) ವಿಶ್ವದಲ್ಲಿ ಸ್ಪರ್ಧಾ ಸಕ್ಷಮವಾಗುವಂತೆ ಮಾಡಲು.

ಕೀಲಿಮಣೆ :

ಗಣಕದ ಹೊರಭಾಗವಾದ ಕೀಲಿಮಣೆಯಿಂದಲೇ ಅದರ ನಿರ್ವಹಣೆಯಿರುತ್ತದೆ. ಇದರಲ್ಲಿ ಪ್ರಧಾನ ಸ್ಥಾನ ಪಡೆದಲ್ಲಿ ಗಣಕದ ನಿರ್ವಹಣೆಯಲ್ಲಿ ಪ್ರಧಾನ / ಪ್ರಥಮ ಪಾತ್ರ ವಹಿಸಬಹುದಾಗಿದೆ.

ಇಂದಿನ ಕೀಲಿಮಣೆ, ಬೆರಳಚ್ಚು ಯಂತ್ರದ ಕೀಲಿಮಣೆಯಿಂದಲೇ ಬಂದುದಾಗಿದೆ.

ಗಣಕ – ಕೀಲಿಮಣೆ – ಗಣಕಿ (ಬಳಕೆದಾರ)

ಕುದುರೆ – ಲಗಾಮು – ಸವಾರ..................... ಕುದುರೆ ಸವಾರನಿಗೆ ಲಗಾಮು ಇದ್ದಂತೆ ಗಣಕಿಗೆ ಗಣಕದ ಕೀಲಿಮಣೆಯಾಗಿರುತ್ತದೆ.

ಇಂದು ನಾವು ಇಂಗ್ಲೀಷ್ ಕೀಲಿಮಣೆಯನ್ನು ಉಪಯೋಗಿಸುತ್ತಿದ್ದೇವೆ. ಇದರಲ್ಲಿ ಒಟ್ಟೂ 108 ಸಂಕೇತ/ಅಕ್ಷರ ಚಿನ್ಹೆಗಳಿಗೆ ಸ್ಥಾನವಿದ್ದು, ಅವು ತಲಾ 54ರಂತೆ 2 ಶಿಫ್ಟ್ (ವಿಭಾಗ)ಗಳಲ್ಲಿ ಹಂಚಿಕೆಯಾಗಿವೆ. **ಇದರಲ್ಲಿ ಇಂಗ್ಲೀಷರು ತಮ್ಮ ಮೊದಲಿನ ಲಿಪಿಯನ್ನು ತ್ಯಜಿಸಿ ಸುಮಾರು ಸಾವಿರ ವರ್ಷಗಳ ಹಿಂದೆ ಸ್ವೀಕರಿಸಿದ ರೋಮನ್ ಲಿಪಿಯ ಅಕ್ಷರಗಳು ಇವೆ.** ಮೊದಲ ಶಿಫ್ಟ್‌ನಲ್ಲಿ ದೊಡ್ಡ (ಕ್ಯಾಪಿಟಲ್) ಅಕ್ಷರಗಳು 26 ಮತ್ತು ಎರಡನೇ ಶಿಫ್ಟ್‌ನಲ್ಲಿ ಸಣ್ಣ (ಸ್ಮಾಲ್) ಅಕ್ಷರಗಳು 26 ಇವೆ. ಉಳಿದ ಜಾಗದಲ್ಲಿ ಅಂಕೆಗಳು (0 ಯಿಂದ 9) ಮತ್ತು ಲೇಖನ ಚಿನ್ಹೆಗಳು (ಉದಾ: ಅಲ್ಪ ವಿರಾಮ, ಅರ್ಧ ವಿರಾಮ, ಪೂರ್ಣ ವಿರಾಮ, ಪ್ರಶ್ನಾರ್ಥಕ, ಆಶ್ಚರ್ಯಕರ ಚಿನ್ಹೆ ಇತ್ಯಾದಿ) & ಗಣಿತ ಚಿನ್ಹೆಗಳು (+, –, x ಇತ್ಯಾದಿ) ಸ್ಥಾನ ಪಡೆದಿವೆ.

ಇಂಗ್ಲಿಷ್‌ನಲ್ಲಿ 26 (5 ಸ್ವರಗಳು + 21 ವ್ಯಂಜನಗಳು) ಅಕ್ಷರಗಳಿವೆ. ಆದರೆ **ಪ್ರತ್ಯೇಕವಾದ, ಹೆಚ್ಚುವರಿಯಾದ ಕಾಗುಣಿತ ಚಿನ್ಹೆಗಳಾಗಲಿ, ಕಾಗುಣಿತ ರೂಪಗಳಾಗಲಿ ಇಲ್ಲ. ಇದ್ದ ಸ್ವರಗಳೇ ಅದರ ಸ್ಥಾನವನ್ನು ತೆಗೆದುಕೊಳ್ಳುತ್ತವೆ. ಹಾಗೆಯೇ ಒತ್ತಕ್ಷರಗಳಿಗಾಗಿ ಹೆಚ್ಚುವರಿಯಾದ ಒತ್ತಕ್ಷರ ಚಿನ್ಹೆಗಳು ಇಲ್ಲ. ಬದಲಿಗೆ ಇದ್ದ ವ್ಯಂಜನಗಳೇ ಅದರ ಸ್ಥಾನವನ್ನು ತೆಗೆದುಕೊಳ್ಳುತ್ತವೆ.**

ಉದಾ: ನಮ್ಮ ಕನ್ನಡ ಲಿಪಿ ನೋಡಲು ಚೆನ್ನ = Namma kannada lipi nodalu cenna ?

ನ	ಮ್ಮ	ಕ	ನ್ನ	ಡ	ಲಿ	ಪಿ	ನೋ	ಡ	ಲು	ಚೆ	ನ್ನ.
ನ್ಅ	ಮ್ಮ್ಅ	ಕ್ಅ	ನ್ನ್ಅ	ಡ್ಅ	ಲ್ಇ	ಪ್ಇ	ನ್ಓ	ಡ್ಅ	ಲ್ಉ	ಚ್ಎ	ನ್ನ್ಅ.
na	mma	ka	nna	da	li	pi	no	da	lu	ce	nna.
NA	MMA	KA	NNA	DA	LI	PI	NO	DA	LU	CE	NNA.

ಇಲ್ಲಿ 'ಕ್'='K' ಮತ್ತು 'ಅ'='ο'. ಆದ್ದರಿಂದ 'ಕ್'+'ಅ' = 'ಕ್ಅ' = "KA" = ಇದಕ್ಕೆ 'ಕ' ಅನ್ನುತ್ತೇವೆ. ಆದರೆ 'ಕ್ಅ'.... ಇದಕ್ಕೆ 'ಕ' ಎನ್ನದೇ, ಇದರ ಬದಲಿಗೆ ಇದರ ಸರಿಸಮಾನವಾದ 'ಕ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹಾಗೆಯೇ 'ನ್'+'ನ್'+'ಅ'='ನ್ನ್ಅ'='N'+'N'+'A'='NNA'..... ಇದನ್ನು 'ನ್ನ' ಎನ್ನದೇ, 'ನ'ದರ ಒತ್ತಕ್ಷರ ಚಿನ್ಹೆಯನ್ನು ಬಳಸಿ, ಇದರ ಬದಲಿಗೆ ಇದರ ಸರಿಸಮಾನವಾದ 'ನ್ನ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹಾಗೆಯೇ 'ಲ್'+'ಇ'='ಲ್ಇ'='L'+'I'='LI'..... ಇಲ್ಲಿ 'LI' ಇದನ್ನು 'ಲಿ' ಎನ್ನುತ್ತೇವೆ. ಆದರೆ 'ಲ್'+'ಇ'='ಲ್ಇ' ಇದನ್ನು 'ಲಿ' ಎನ್ನದೇ ಇದರ ಬದಲಾಗಿ ಇದರ ಸರಿಸಮಾನವಾದ 'ಲಿ' ಎಂಬ ಅಕ್ಷರ ಚಿನ್ಹೆಯಿಂದ ಬರೆಯುತ್ತೇವೆ.

ಹೀಗೆ ನಮ್ಮಲ್ಲಿ ಹೆಚ್ಚುವರಿ ಅಕ್ಷರ ಚಿನ್ಹೆಗಳನ್ನು ಬಳಸುತ್ತೇವೆ. ಕಾಗುಣಿತಗಳಿಗಾಗಿ 17 ಅಕ್ಷರ ಚಿನ್ಹೆಗಳು ಮತ್ತು 34 ವ್ಯಂಜನಗಳಿಗಾಗಿ 35 ಹೆಚ್ಚುವರಿ ಒತ್ತಕ್ಷರ ಚಿನ್ಹೆಗಳನ್ನು ಹೀಗೆ ಒಟ್ಟೂ 52 ಹೆಚ್ಚುವರಿ ಚಿನ್ಹೆಗಳನ್ನು ಬಳಸುತ್ತೇವೆ ಮತ್ತು ಬರವಣಿಗೆಯ ಎಲ್ಲ ಅಕ್ಷರ ರೂಪಗಳನ್ನು ತಯಾರಿಸುತ್ತೇವೆ.

ಆದರೆ ಇಂಗ್ಲೀಷ್ ಲಿಪಿ ಕಡಿಮೆ ಅಕ್ಷರ ಚಿನ್ಹೆಗಳಿಂದ ಎಲ್ಲ ಕಾಗುಣಿತ ಮತ್ತು ಸಂಯುಕ್ತಾಕ್ಷರ ರೂಪಗಳನ್ನು ದೀರ್ಘಿಸುವಲ್ಲಿ ಶಕ್ತವಾಗಿದೆ.

ಧ್ವನಿ = ಇದು ಭಾಷೆಯ ಮೂಲ ಸೆಲೆ ಅಥವಾ ಘಟಕ.

ಧ್ವನಿಶಾಸ್ತ್ರ (ಫೊನೆಟಿಕ್ಸ್) = ಒಂದು ಧ್ವನಿಗೆ ಒಂದು ಚಿನ್ಹೆ / ಸಂಕೇತ ಎನ್ನುವುದು ಇದರ ತತ್ವ.

ಧ್ವನಿಶಾಸ್ತ್ರ ಅಳವಡಿಸಿಕೊಂಡರೆ ಬೆರಳೊತ್ತಿನ ಕೆಲಸ ಸುಲಲಿತವಾಗಿ, ಸರಳವಾಗಿ ಆಗುತ್ತದೆ.

ಆದ್ದರಿಂದ ಧ್ವನಿಶಾಸ್ತ್ರೀಯವಾದ ಅಕ್ಷರ ಮಾಲೆಯನ್ನು ಹೊಂದಿದ ನಮಗೆ ಇದರ ಲಾಭವನ್ನು ಭವಿಷ್ಯದಲ್ಲಿ ಪಡೆಯಬೇಕಿದೆ.

ಗಣಕದ ಮೂಲ ತತ್ವ :

ಗಣಕಕ್ಕೆ ಯಾವ ಭಾಷೆಯೂ ಬಾರದು. ಅದರ ಒಳಭಾಗ 0 ಮತ್ತು 1 ರ ದ್ವಿಮಾನ ಪದ್ಧತಿಯಲ್ಲಿ ಕಾರ್ಯಾಚರಿಸುತ್ತದೆ (ಯೋಚಿಸುತ್ತದೆ).

ಒಂದು ಗುಂಡಿ (ಕೀಲಿ, ಬಟನಿಕಾ) ಒತ್ತಿದರೆ ಒಂದು ಚಿನ್ಹೆ / ಸಂಕೇತ.

ಆದ್ದರಿಂದ **ಗಣಕ + ಧ್ವನಿಶಾಸ್ತ್ರ** ಬೆಸೆದರೆ (ಕೂಡಿದರೆ), ಗಣಕದ ಕೀಲಿಮಣೆಯಲ್ಲಿ ಒಂದು ಧ್ವನಿಗೆ ಒಂದು ಕೀಲಿಯ ಮುಖಾಂತರ ಒಂದು

ಚಿನ್ಹೆ / ಸಂಕೇತ ಎಂದಾಗುತ್ತದೆ. ಧ್ವನಿಯನ್ನು ಕೇಳುತ್ತಲೇ ಬೆರಳು ಆ ಕೀಲಿಯತ್ತ ಓಡುತ್ತದೆ ಮತ್ತು ಬೆರಳೊತ್ತಿನೊಂದಿಗೆ ಆ ನಿಶ್ಚಿತ ಚಿನ್ಹೆ ಮೂಡುತ್ತದೆ. ಹೀಗೆ ಬೆರಳೊತ್ತು ಕೆಲಸಕ್ಕೆ ಇದು ಬಹಳ ಸಹಾಯಕವಾಗುತ್ತದೆ ಎನ್ನುವುದು ಅನುಭವ. **ಆದ್ದರಿಂದ ಒಂದು ಧ್ವನಿ = ಒಂದು ಕೀಲಿ (ಗುಂಡಿ, ಬಟನಿಕಾ) = ಒಂದು ಸಂಕೇತ / ಚಿನ್ಹೆ.**

ಇಂದು ವಿಶ್ವದಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಲಿಪಿ ಚಿನ್ಹೆಯನ್ನು ಹುಡುಕಿ ಒಂದೊಂದು ಶಬ್ದಾಕ್ಷರಕ್ಕೆ (ಧ್ವನಿಗೆ) ನೀಡುವ ಪ್ರಯತ್ನವನ್ನು ಮಾಡಲಾಗಿದೆ. ಈ ದೃಷ್ಟಿಯಿಂದ **ನಾವು ನಮ್ಮ ಲಿಪಿಯ ಎಲ್ಲ ಶಬ್ದಾಕ್ಷರಗಳಿಗೂ ಚಿನ್ಹೆಗಳ ಮಾನಕೀಕರಣ ಮಾಡುವುದು ಅತ್ಯಂತ ಅವಶ್ಯಕವಾಗಿದೆ ಮತ್ತು ಹೀಗಾದಲ್ಲಿ ಕೇವಲ ಭಾರತೀಯ ಭಾಷೆಗಳಿಗಷ್ಟೇ ಅಲ್ಲದೆ ಜಗತ್ತಿನ ಯಾವುದೇ ಧ್ವನಿ ಶಾಸ್ತ್ರೀಯತೆಯನ್ನು ಆಶ್ರಯಿಸಿದ ಭಾಷೆಗಳಿಗೆ ಬೆರಳೊತ್ತಿನ ಕೆಲಸದಲ್ಲಿ ಇದರಿಂದ ಲಾಭವಾಗಲಿದೆ.**

ನಮ್ಮ ಅಕ್ಷರಮಾಲೆಯನ್ನು ಸುಧಾರಿತ ರೋಮನ್ ಲಿಪಿಯಲ್ಲಿ ಪ್ರತಿನಿಧಿಸಿ, (ಧ್ವನಿಶಾಸ್ತ್ರಾಧಾರಿತವಾದ), ಸಂಸ್ಕೃತದ ಪಾಣಿನಿಯ ವ್ಯಾಕರಣದ ಸೂತ್ರಗಳಂತೆ ಮತ್ತು ಏಕಸ್ತರೀಯವಾಗಿ ಬರೆಯಲು, ವಿನ್ಯಾಸಗೊಳಿಸಿದ '38 ಅಕ್ಷರಗಳ ಮಾದರಿ

ಹೊಸ ಲಿಪಿ':–

ಅ ಆ ಇ ಈ ಉ ಊ ಋ ಋ–ಲೃ	ಏ ಐ ಓ ಔ	ಅಂ ಅಃ	ಎ ಒ
(ಮೂಲ –ಸ್ವರಗಳು)	(ಸಂಯುಕ್ತ –ಸ್ವರಗಳು)	(ಯೋಗವಾಹಗಳು)	(ತೆರೆದ(open)ಬಾಯಿ
(C+C) (E+E) (G+G) (IÄ+IÄ) (a+a) (i+i) (u+u) (ж +ж)	(ಅ+ಇ) (ಅ+ಏ) (ಅ+ಉ) (ಅ+ಓ) (a+i) (a+e) (a+u) (a+o)	(ಅ+ಂ) (ಅ+ಃ) (a+A) (a+B)	
a aa i ii u uu /w ж ж- L- A AA I II U UU/W ж ж- L -	e ae /æ o ao/ю E AE /Æ O AO/ю	aಂ aಃ Aಂ Aಃ	∑ ? ∑ □

ಕ ಖ ಗ ಘ ಙ
ka kﬁa ga gﬁa x-a
KA KﬁA GA GﬁA X-A
ಚ ಛ ಜ ಝ ಞ
ca cﬁa ja jﬁa z-a
Ca Cﬁa Ja Jﬁa Z-a
ಟ ಠ ಡ ಢ ಣ
ta tﬁa da đﬁa бa
TA TﬁA DA ĐﬁA БA
ತ ಥ ದ ಧ ನ
ħa ħﬁa đa dﬁa na
ĦA ĦﬁA ĐA DﬁA NA
ಪ ಫ ಬ ಭ ಮ
pa pﬁa/fa ba bﬁa ma
PA PﬁA/FA BA BﬁA MA
ಯ ರ ಲ ವ ಶ ಷ ಸ ಹ ಳ ಕ್ಷ ಜ್ಞ
ya ra la va яa q-a sa ha Φa k x- a jz-a
YA RA LA VA ЯA Q-A SA HA ΦA K X-A JZ-A

(бБ, ΦΦ, жж, юю,Я Я_____ ಈ 5 ಅಕ್ಷರ–ಚಿಹ್ನೆಗಳನ್ನು **ರಷ್ಯನ್** ಲಿಪಿಯಿಂದ ಸ್ವೀಕರಿಸಲಾಗಿದೆ. ಇವನ್ನು ಕ್ರಮವಾಗಿ ಬೆ, ಎಫ್, ಝೆ, ಯು, ಯಾ ಎಂದು ಅವರು ಓದುತ್ತಾರೆ). (∑, □ =**ಗ್ರೀಕ್ ಅಕ್ಷರಗಳು)**

(L-L–ವನ್ನು ಗಣಕದಿಂದ ಪಡೆಯಲಾಗಿದೆ.)

(**ħĦ, đĐ**)= ಈ 2 ಲಿಪಿ– ಚಿಹ್ನೆಗಳನ್ನು ಮತ್ತು **ಮಹಾಪ್ರಾಣ ಚಿಹ್ನೆ'ﬁ',** ಈ ಚಿಹ್ನೆಗಳನ್ನು ಇವುಗಳನ್ನು ಸಂಗಣಕದಿಂದ ಆರಸಲಾಗಿದೆ. (**ħĦ**--ಇದು ಸರ್ಬಿಯಾ ಭಾಷೆಯ ವಿಶೇಷ ಅಕ್ಷರವಾಗಿರುತ್ತ**ದು; đĐ--** ಇದು ಹಳೆಯ ಇಂಗ್ಲಿಷ್ ಅಕ್ಷರ.)

(ಅನುಸ್ವಾರ ಅಂ= aoಅಥವಾ `o` ಮತ್ತು ವಿಸರ್ಗ ಅಃ=aಃ ಅಥವಾ'ಃ'––ಚಿಹ್ನೆಗಳನ್ನು ಕನ್ನಡ ಲಿಪಿಯಿಂದ ಸ್ವೀಕರಸಲಾಗಿದೆ.)

(f, q,w,x,z ಈ 5 ಅಕ್ಷರಚಿಹ್ನೆಗಳನ್ನು ಸ್ವಲ್ಪ ಬದಲಾದರೂಪ (Modified form)ದಲ್ಲಿ ಬಳಸಲಾಗಿದೆ.)

(ಎ, ಒ ಇವು ಸಂಸ್ಕೃತ ಸಂಧಿಗಳಲ್ಲಿ ಭಾಗವಹಿಸುವದಿಲ್ಲ. ಆದ್ದರಿಂದ ಇವುಗಳಿಗೆ ಅಂ, ಅಃ ದ ನಂತರ ಕ್ರಮವಾಗಿ ಸ್ಥಾನವನ್ನು ನೀಡಿ, ಎ, ಒ ಎಂದು ಬರೆಯಲಾಗಿದೆ.)

ಇದು ಪಾಣಿನೀಯ ವ್ಯಾಕರಣದಲ್ಲಿ ಸ್ವೀಕರಿಸಲ್ಪಟ್ಟಿಲ್ಲ ಆದ್ದರಿಂದ 'ಳ' = (Φa, ΦA) – ಇದಕ್ಕೆ `ಹ`ನಂತರದ ಸ್ಥಾನ ನೀಡಲಾಗಿದೆ. ಉದಾ:
1) ದತ್ತಾತ್ರೇಯ = daħħaaħreya(Hosalipi,ಹೊಸಲಿಪಿ), dattatreya (English roman latin), daTTaTreя(Russian)

ಕೆಲವು ಉಖಿಾಹರಣೆಗಳು :-1) ಪಾಣಿನಿ = Paaб ini (Hosalipi)=Panini(English).

2) ಪತಂಜಲಿ = Paħaz-jali(H)=Patanjali.

3) ಅಣ್ಣ = Aббa(H)=Anna(E).

4) ಬಲ = Bala (H)=Bala(E).

ಬಲಾ = Balaa(H)= Bala(E).

ಬಾಲಾ = Baalaa(H)= Bala(E).

ಬಾಲ = Baala(H) = Bala(

1) ಆ = ಅ + ಅ = a + a = 2ಅ = 2a = ಅಅ = aa. ಆದ್ದರಿಂದ ಈ = ii, ಊ = uu, ಋೂ = жж. ಹೀಗೆ 4 ದೀರ್ಘ ಸ್ವರಗಳ ಕಡಿಮೆ ಮಾಡಲಾಗಿದೆ.

2) ಇನ್ನು ವರ್ಗೀಯ ವ್ಯಂಜನಗಳಲ್ಲಿ ಒಂದು ಮಹಾಪ್ರಾಣ ಚಿನ್ಹೆಯನ್ನು ಬಳಸಿ ಅದನ್ನು ಅಲ್ಪಪ್ರಾಣಕ್ಕೆ ಸೇರಿಸಿ 10 ಮಹಾಪ್ರಾಣಗಳನ್ನು ರಚಿಸಲಾಗಿದೆ. ಇದರಿಂದ 9 ಮಹಾಪ್ರಾಣ ಚಿನ್ಹೆಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಆದ್ದರಿಂದ **ಅಲ್ಪಪ್ರಾಣ + ಮಹಾಪ್ರಾಣ–ಚಿನ್ಹೆ = ಮಹಾಪ್ರಾಣ. ಉದಾ : ಖ = KﬁA = ಕ್+ﬁ+ಅ = ಏ+ﬁ+ಂ.**

ಹೀಗೆ ಒಟ್ಟೂ 13 (4 ದೀರ್ಘ ಸ್ವರ ಚಿನ್ಹೆಗಳು + 9 ಮಹಾಪ್ರಾಣ ಚಿನ್ಹೆಗಳು) ಅಕ್ಷರ ಚಿನ್ಹೆಗಳನ್ನು ಕಡಿಮೆ ಮಾಡಿ 38 ಅಕ್ಷರ ಚಿನ್ಹೆಗಳ (51–13) ಲಿಪಿಯ ಮಾದರಿಯನ್ನು ಪ್ರಸ್ತುತಪಡಿಸಲಾಗಿದೆ. ಇದರಲ್ಲಿ ಪ್ರತ್ಯೇಕವಾದ ಕಾಗುಣಿತ ಚಿನ್ಹೆಗಳಾಗಲೀ ಹೆಚ್ಚುವರಿಯಾದ ಒತ್ತಕ್ಷರಗಳಾಗಲೀ ಇರುವುದಿಲ್ಲ. ಇದು ಗಣಕಯಂತ್ರಕ್ಕೆ ಸೂಕ್ತವಾಗಿದೆ.

ಶಬ್ದಸಾಧುತ್ವಮ್

ಶಶಾಂಕ ಹತ್ವಾರ್. ಟಿ. ವಿ.
ಸಹಯಾಕ ಪ್ರಾಧ್ಯಾಪಕ, ಸಂಸ್ಕೃತ ವಿಭಾಗ, ರಾಮಯ್ಯ ವಿಜ್ಞಾನ, ಕಲಾ, ವಾಣಿಜ್ಯ ವಿದ್ಯಾಲಯ, ಬೆಂಗಳೂರು,
hatwar1@yahoo.com

ವಾಕ್ಯಕಾರಂ ವರರುಚಿಂ ಭಾಷ್ಯಕಾರಂ ಪತಂಜಲಿಮ್।
ಪಾಣಿನೀಂ ಸೂತ್ರಕಾರಂ ಚ ಪ್ರಣತೋಽಸ್ಮಿ ಮುನಿತ್ರಯಮ್॥

ಭಾರತೀಯ ಶಾಸ್ತ್ರ ಪರಂಪರೆಯಲ್ಲಿ ಪರಂಪರಾ ಅಧ್ಯಯನವನ್ನು ವಿಶೇಷವಾಗಿ ಪರಿಗಣಿಸಲಾಗುತ್ತದೆ. ಅಂತೆಯೇ ವ್ಯಾಕರಣ ವಿಭಾಗದಲ್ಲಿ ಈ ಮೂರು ಕರ್ತೃಗಳನ್ನು (ಪಾಣಿನಿ, ಪತಂಜಲಿ ಮತ್ತು ವರರುಚಿ) ಸ್ಮರಿಸಲಾಗುತ್ತದೆ. ವ್ಯಾಕ್ರಿಂತೇ ಶಬ್ದಾಃ ಅನೇನ ಇತಿ ವ್ಯಾಕರಣಮ್,

ಶಬ್ದಗಳನ್ನು ಇಲ್ಲಿ ವಿವರಿಸಲಾಗುತ್ತದೆ ಎಂದು ಇದು ವ್ಯಾಕರಣ,. ವ್ಯಾಕ್ರಿಯಂತೇ ವ್ಯುತ್ಪದ್ಯಂತೇ ಶಬ್ದಾಃ ಅನೇನೇತಿ ಶಬ್ದಜ್ಞಾನಜನಕಂ ವ್ಯಾಕರಣಮ್. ಶಬ್ದಗಳನ್ನು ಇಲ್ಲಿ ಉತ್ಪಾದಿಸಲಾಗುತ್ತದೆ ಮತ್ತು ವಿವರಿಸಲಾಗುತ್ತದೆ ಎಂದು ಶಬ್ದದ ಬಗೆಗಿನ ಜ್ಞಾನವನ್ನು ಹುಟ್ಟಿಸುವುದರಿಂದ ಇದು ವ್ಯಾಕರಣ. ಹೀಗಾಗಿ ವ್ಯಾಕರಣ ಎಂದರೆ ಸಹಜವಾಗಿ ಗೋಚರಿಸುವ ಕೇವಲ ಸಂಧಿಸಮಾಸಗಳ ಕಬ್ಬಿಣದ ಕಡಲೆಯಲ್ಲ. ಹೊರತಾಗಿ ಪ್ರೈತಿಯೊಂದು ಪದ, ಪ್ರತಿಯೊಂದು ಅಕ್ಷರದ ಉತ್ಪತ್ತಿಗೆ ಸಂಬಂಧಿಸಿದ ವೈಜ್ಞಾನಿಕ ಪ್ರಕ್ರಿಯೆ. ಇಲ್ಲಿ ವೈಜ್ಞಾನಿಕ ಎಂದರೆ ಸೈನ್ ಅಲ್ಲ. ವಿಶೇಷವಾದ ಜ್ಞಾನ ಎಂದಷ್ಟೇ ಅರ್ಥೈಸಬೇಕು. ಅನೇಕ ವರ್ಷಗಳ ಪರಕೀಯ ಆಡಳಿತದ ಪ್ರಭಾವದಿಂದಾಗಿ ಭಾರತೀಯರಲ್ಲಿರುವ ತಥಾ ಕಥಿತ ವಿಜ್ಞಾನದ ಮನೋಭಾವವನ್ನು ಶಾಸ್ತ್ರ ಪರಂಪರೆ ಒಳಗೊಂಡಿರುವುದಿಲ. ಹೀಗಾಗಿ ಶಾಸ್ತ್ರ ಪ್ರಪಂಚದ ಯಾವೊಂದು ಪ್ರಕ್ರಿಯೆಗೂ ಸೈನ್ಸ್ ನ ಪ್ರಮಾಣ ಅಥವಾ ಅನುಮೋದನೆ ಬೇಕಾಗುವುದಿಲ್ಲ.

ಇಂದ್ರಶ್ಚಂದ್ರಃ ಕಾಶಕೃತ್ಸ್ನಾಪಿಶಲೀ ಶಾಕಟಾಯನಃ ।

ಪಾಣಿನ್ಯಮರಜೈನೇಂದ್ರಾಃ ಜಯನ್ತ್ಯಷ್ಟೌ ಚ ಶಾಬ್ದಿಕಾಃ ॥

ಪದಶಾಸ್ತ್ರದ ಪ್ರವರ್ತಕರಲ್ಲಿ ಅನೇಕರಿದ್ದರೂ ಪ್ರಧಾನವಾಗಿ ಇಂದ್ರ, ಚಂದ್ರ, ಕಾಶಕೃತ್ಸ್ನ, ಪಿಶಲೀ, ಶಾಕಟಾಯನ, ಪಾಣಿನಿ, ಅಮರ, ಜೈನೇಂದ್ರರೆಂಬ ಎಂಟು ಮಂದಿಯನ್ನು ಪರಿಗಣಿಸಲಾಗುತ್ತದೆ. ಇಷ್ಟಿದ್ದರೂ ಸಂಸ್ಕೃತ ಪ್ರಪಂಚದಲ್ಲಿ ವ್ಯಾಕರಣ ಎಂಬ ಪದವನ್ನು ಉಚ್ಚರಿಸುತ್ತಿದ್ದಂತೆಯೇ ಪಾಣಿನಿ ಎಂಬ ಹೆಸರು ತನ್ನಷ್ಟಕ್ಕೇ ಅನುಸರಿಸುತ್ತದೆ. ಹೀಗಾಗಿ ಪಾಣಿನೀಯ ವ್ಯಾಕರಣವೇ ಸಂಸ್ಕೃತವ್ಯಾಕರಣ ಎಂಬಷ್ಟರ ಮಟ್ಟಿಗೆ ಪ್ರಸಿದ್ಧಿ.

ವ್ಯಾಕರಣಕ್ಕೆ ಪದಶಾಸ್ತ್ರ ಎಂಬ ಹೆಸರಿದೆ. ಏಕಃ ಶಬ್ದಃ ಸಮ್ಯಕ್ ಜ್ಞಾತಃ ಸುಷ್ಠು ಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಕ್ ಭವತಿ ಎಂಬುದು ವ್ಯಾಕರಣಜ್ಞರ ವಿಚಾರ. ವೈಶೇಷಿಕರ ತತ್ವಜ್ಞಾನಾತ್ ನಿಃಶ್ರೇಯಸಾಧಿಗಮಃ ಎಂಬ ಮಾತಿನಂತೆಯೇ ವೈಯಾಕರಣರ ಈ ವಿಚಾರ ಸಮಂಜಸವಾಗಿ ತೋರುತ್ತದೆ. ಹೀಗಾಗಿ ಪ್ರತಿಯೊಂದು ಪದ, ಪ್ರತಿಯೊಂದು ಅಕ್ಷರವನ್ನೂ ತಿಳಿಯುವುದು ಇಲ್ಲಿ ವಿಜ್ಞಾನ.

ತುಲ್ಯಾಸ್ಯಪ್ರಯತ್ನಂ ಸವರ್ಣಮ್ ॥1.1.9॥

ಪಾಣಿನೀಯ ಅಷ್ಟಾಧ್ಯಾಯಿಯ ಈ ಸೂತ್ರ ಸವರ್ಣ ಎಂಬ ಸಂಜ್ಞೆಯನ್ನು ನೀಡಲು ಹೊರಟಿದೆ. ಅದರೊಂದಿಗೆ ಪ್ರತಿಯೊಂದು ಅಕ್ಷರದ ವ್ಯುತ್ಪತ್ತಿ ಸ್ಥಾನಗಳನ್ನೂ ತಿಳಿಸುತ್ತದೆ. ಲೋಕಪ್ರತೀತಿಯಂತೆ ಯಾವುದಾದರೂ ಕೆಲಸವನ್ನು ಅಥವಾ ಪ್ರಕ್ರಿಯೆಯನ್ನು ಮಾಡಲು ಹೊರಟು ನಿಂತವರಿಗೆ ಆ ಕೆಲಸದ ಅಥವಾ ಆ ಪ್ರಕ್ರಿಯೆಯ ಸಂಪೂರ್ಣ ಜ್ಞಾನವಿದ್ದಲ್ಲಿ ಅದು ನಿರ್ದೋಷವಾಗಿ ಹೊರಹೊಮ್ಮುತ್ತದೆ. ಈ ದೃಷ್ಟಿಂದ ಪ್ರತಿಯೊಂದು ಅಕ್ಷರದ ಉಚ್ಚಾರಣೆಯ ಬಗೆಗಿನ ಪಾಣಿನೀಯ ವಿಚಾರ ಧಾರೆಯನ್ನು ಗಮನಿಸೋಣ.

ಅಕುಹವಿಸರ್ಜನೀಯಾನಾಂ ಕಂಠಃ ।

ಅ ಕು ಹ ಮತ್ತು ಃ ಇವುಗಳ ಸ್ಥಾನವು ಕಂಠವಾಗಿರುತ್ತದೆ. ಇಲ್ಲಿ ಕು ಎಂದರೆ ಕ ವರ್ಗದ ನಾಲ್ಕು ಅಕ್ಷರಗಳು. ಕ, ಖ, ಗ ಮತ್ತು ಘ. ಈ ಸ್ವರಗಳ ಉತ್ಪತ್ತಿ ಸ್ಥಾನವು ಕಂಠವಾಗಿದೆ.

ಇಚುಯಶಾನಾಂ ತಾಲೂ ।

ಇ ಚು ಯ ಮತ್ತು ಶ ಇವುಗಳ ಸ್ಥಾನವು ತಾಲುವಾಗಿರುತ್ತದೆ. ಇಲ್ಲಿ ಚು ಎಂದರೆ ಚ ವರ್ಗದ ನಾಲ್ಕು ಅಕ್ಷರಗಳು. ಚ, ಛ, ಜ ಮತ್ತು ಝ. ಈ ಸ್ವರಗಳ ಉತ್ಪತ್ತಿ ಸ್ಥಾನವು ಅಂಗಲದ ಮುಂಭಾಗವಾಗಿದೆ. ಇದನ್ನು ತಾಲೂ ಎನ್ನುವರು.

ಋಟುರಷಾಣಾಂ ಮೂರ್ಧಾ ।

ಋ, ಟು, ರ ಮತ್ತು ಷ ಇವುಗಳ ಸ್ಥಾನವು ಮೂರ್ಧವಾಗಿರುತ್ತದೆ. ಇಲ್ಲಿ ಟು ಎಂದರೆ ಟ ವರ್ಗದ ನಾಲ್ಕು ಅಕ್ಷರಗಳು. ಟ, ಠ, ಡ ಮತ್ತು ಢ. ಈ ಸ್ವರಗಳ ಉತ್ಪತ್ತಿ ಸ್ಥಾನವು ಅಂಗಲದ ಹಿಂಭಾಗವಾಗಿದೆ. ಇದನ್ನು ಮೂರ್ಧಾ ಎನ್ನುವರು.

ಲೃತುಲಸಾನಾಂ ದಂತಾಃ ।

ಲೃ, ತು, ಲ ಮತ್ತು ಸ ಇವುಗಳ ಸ್ಥಾನವು ಹಲ್ಲುಗಳು. ಇಲ್ಲಿ ತು ಎಂದರೆ ತ ವರ್ಗದ ನಾಲ್ಕು ಅಕ್ಷರಗಳು. ತ, ಥ, ದ ಮತ್ತು ಧ. ಈ ಸ್ವರಗಳ ಉತ್ಪತ್ತಿ ಸ್ಥಾನವು ಹಲ್ಲುಗಳಾಗಿವೆ.

ಉಪೂಪಧ್ಮಾನೀಯಾನಾಂ ಓಷ್ಠೌ ।

ಉ, ಪು, ಮತ್ತು ಉಪಧ್ಮಾನೀಯ ಇವುಗಳ ಸ್ಥಾನವು ತುಟಿಗಳಾಗಿವೆ. ಇಲ್ಲಿ ಪು ಎಂದರೆ ಪ ವರ್ಗದ ನಾಲ್ಕು ಅಕ್ಷರಗಳು. ಪ, ಫ, ಬ

ಮತ್ತು ಭ. ಈ ಸ್ವರಗಳ ಉತ್ಪತ್ತಿ ಸ್ಥಾನವು ತುಟಿಗಳಾಗಿವೆ.

ಙಮಙಣನಾನಾಂ ನಾಸಿಕಾ ಚ ।

ಙ, ಮ, ಙ, ಣ ಮತ್ತು ನ ಇವುಗಳ ಸ್ಥಾನವು ಮೂಗು. ಇವುಗಳ ಉತ್ಪತ್ತಿಸ್ಥಾನವು ಮೂಗಾಗಿರುತ್ತದೆ.

ಏದೈತೋಃ ಕಂಠತಾಲೂ ।

ಏ ಮತ್ತು ಐ ಈ ಎರಡು ವರ್ಣಗಳ ಉತ್ಪತ್ತಿಸ್ಥಾನವು ಕಂಠ ಮತ್ತು ಮುಂಬದಿಯ ಅಂಗಲ.

ಓದೌತೋಃ ಕಠೋಷ್ಠಮ್ ।

ಓ ಮತ್ತು ಔ ಈ ಎರಡು ಅಕ್ಷರಗಳ ಉತ್ಪತ್ತಿಸ್ಥಾನವು ಕಂಠ ಮತ್ತು ತುಟಿಗಳು.

ವಕಾರಸ್ಯ ದಂತೋಷ್ಠಮ್ ।

ವಕಾರದ ಉತ್ಪತ್ತಿಸ್ಥಾನವು ಹಲ್ಲು ಮತ್ತು ತುಟಿಗಳು.

ಜಿಹ್ವಾಮೂಲೀಯಸ್ಯ ಜಿಹ್ವಾಮೂಲಮ್ ।

ಜಿಹ್ವಾಮೂಲದ ಉತ್ಪತ್ತಿಸ್ಥಾನವು ಜಿಹ್ವಾಮೂಲ.

ನಾಸಿಕಾನುಸ್ವಾರಸ್ಯ ।

ಅನುಸ್ವಾರದ ಉತ್ಪತ್ತಿಸ್ಥಾನವು ಮೂಗು.

ಪದಾರ್ಥವಿಜ್ಞಾನದ ಪ್ರಕಾರ ಪ್ರತಿಯೊಂದು ವಸ್ತುವಿನಲ್ಲೂ ಶಕ್ತಿಅಡಗಿರುತ್ತದೆ. ಅದನ್ನೇ ಅಣುಶಕ್ತಿ ಎಂದು ಕರೆಯಲಾಗುತ್ತದೆ. ಅಂತೆಯೇ ಪ್ರತಿಯೊಂದು ಕ್ರಿಯೆಯಲ್ಲೂ ಶಕ್ತಿ ಇರಲೇಬೇಕು. ಹೀಗಾಗಿ ಶಬ್ದಶಕ್ತಿಯನ್ನು ಪರಿಗಣಿಸಬೇಕಾಗುತ್ತದೆ. ಆದ್ದರಿಂದಲೇ ನಮ್ಮಲ್ಲಿ ಪ್ರತಿಯೊಂದು ಪಾರಾಯಣ, ಪಠಣ, ಜಪಗಳಲ್ಲಿ ವಿಶಿಷ್ಟವಾದ ಶಕ್ತಿಯನ್ನು ಬಿಂಬಿಸಲಾಗುತ್ತದೆ. ಶಬ್ದಶಕ್ತಿಯ ಪ್ರಭಾವದಿಂದ ವ್ಯಕ್ತಿಯಲ್ಲಿನ ದೋಷಗಳು ದೂರಾಗುವುದನ್ನು ಕಂಡಿದ್ದೇವೆ ಕೇಳಿದ್ದೇವೆ. ಆದ್ದರಿಂದಲೇ ಶಬ್ದಪರಂಪರೆಯಾದ ವೇದಗಳಲ್ಲಿ ಸ್ವರ ಮತ್ತು ಉಚ್ಚಾಗಳಿಗೆ ವಿಶೇಷವಾದ ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ. ಅಲ್ಪಪ್ರಾಣ–ಮಹಾಪ್ರಾಣಗಳ ವ್ಯತ್ಯದಿಂದ ಫಲ–ಪಲ ಎಂಬಲ್ಲಿ ಹಣ್ಣು ಮಾಂಸವಾಗುತ್ತದೆ. ಇಂದ್ರಶತ್ರುರ್ವರ್ಧ ಸ್ವಾಹಾ ಎಂಬ ಉಚ್ಚಾರಣೆಯಲ್ಲಿ ಸ್ವರ ವ್ಯತ್ಯಯದಿಂದ ಇಂದ್ರನನ್ನು ಕೊಲ್ಲುವ ಮಗನ ಬದಲಾಗಿ ಇಂದ್ರನಿಂದ ಕೊಲ್ಲಲ್ಪಡುವ ಮಗನ ಜಜನ ಕೇಳಿದ್ದೇವಷ್ಟೆ.

ಹೀಗೆ ಪ್ರತಿಯೊಂದು ಅಕ್ಷರವೂ ತನ್ನದೇ ಆದ ಸ್ಥಾನದಲ್ಲಿ ಉತ್ಪತ್ತಿಯನ್ನು ಹೊಂದುತ್ತವೆ. ಅವುಗಳನ್ನು ಅನುಸರಿಸಿ ಉಚ್ಚರಿಸಿದಾಗ ಶಬ್ದಸಾಧುತ್ವದ ಸಿದ್ಧಿಯಾಗುತ್ತದೆ. ಆಗ "ಏಕಃ ಶಬ್ದಃ ಸಮ್ಯಕ್ ಜ್ಞಾತಃ ಸುಷ್ಠು ಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಕ್ ಭವತಿ" ಎಂಬ ವಾಕ್ಯದ ಅರಿವಾಗುತ್ತದೆ.

ಉಚ್ಚಾರಣ ಸ್ಥಾನಗಳು



ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೈ ಬರಹದ ಪಾತ್ರ

ಡಾ. ನೂತನ್ ರಾವ್[1], ಇಮ್ರಾನ್ ಬೇಗ್[2]
[1]ಅಂತರ್ರಾಷ್ಟ್ರೀಯ ಕೈ ಬರಹ ತಜ್ಞೆ ಹಾಗೂ ಆಪ್ತ ಸಲಹೆಗಾರ್ತಿ, ರೈಟ್ ಸ್ಟ್ರೋಕ್ಸ್ ವಿದ್ ರೈಟ್ ಥಾಟ್ಸ್, 49/1, ಪಾವನ, ಶ್ರೀ ರಾಮ ಮಂದಿರ ರಸ್ತೆ, ಬಸವನಗುಡಿ, ಬೆಂಗಳೂರು – 560004;
[2]ಅಂತರ್ರಾಷ್ಟ್ರೀಯ ಕೈ ಬರಹ ತಜ್ಞರು, ಹ್ಯಾಂಡ್ ರೈಟಿಂಗ್ ಇನ್ಸ್ಟಿಟ್ಯೂಟ್, ಸಂ. 16, ಚರ್ಚ ರಸ್ತೆ, ಬಸವನಗುಡಿ, ಬೆಂಗಳೂರು – 560004,

ಈ ಪ್ರಪಂಚದ ಯಾವುದೇ ಜೀವಿಯ ಮುಂದಿನ ಪೀಳಿಗೆಯ ಬೆಳವಣಿಗೆಯು ಬಹಳ ಸ್ವಾಭಾವಿಕವಾಗಿ ನಡೆಯುವುದು. ಹಾಗಾದಲ್ಲಿ ಮನುಷ್ಯನ ಮುಂದಿನ ಪೀಳಿಗೆಯ ಬೆಳವಣಿಗೆಯ ಬಗ್ಗೆ ಇಷ್ಟೊಂದು ಕಾಳಜಿ ವಹಿಸುವ ಅಗತ್ಯವಿದೆಯೇ? ಸ್ಪರ್ಧಾತ್ಮಕ ಜಗತ್ತಿನಲ್ಲಿ ಜಯಿಸಿ ಉಳಿದ ಯಾವುದೇ ತಳಿಯ ಉಳಿಯುವಿಕೆಯು ನಿಶ್ಚಿತ. ಹಾಗೇ ಮಾನವ ಕುಲದ ಉಳಿಗಾಲವೂ ಜೀವನವೆಂಬ ಹೋರಾಟದಲ್ಲಿ ಉಳಿದರೆ ಮಾತ್ರ ಸಾಧ್ಯ. ಇದಕ್ಕಾಗಿ ಹೆತ್ತವರು ಅತ್ಯಧಿಕ ಶ್ರಮ ಪಡುತ್ತಾರೆ. ತಮ್ಮ ಮಕ್ಕಳು ಎಷ್ಟು ಬೇಗ ಜೀವನದ ಎಲ್ಲಾ ಆಯಾಮದಲ್ಲಿ ಸಶಕ್ತರಾಗುವರು ಎನ್ನುವ ವಿಪರೀತ ಕಾಳಜಿ ಹೆತ್ತವರಲ್ಲಿ ಸಹಜವಾಗಿಯೇ ಇರುವುದು.

ನಾವು ಅರ್ಥಮಾಡಿಕೊಳ್ಳದ ಒಂದು ಸಾಮಾನ್ಯ ಸಂಗತಿಯೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಹಾಗೇ ಮಗುವೂ ವಿಶಿಷ್ಟ. ಆ ವೈಶಿಷ್ಟತೆಯನ್ನು ಗುರುತಿಸಿ ಅದಕ್ಕೆ ತಕ್ಕ ಸೌಲಭ್ಯವನ್ನು ಒದಗಿಸಿದರೆ ಪ್ರತಿಯೊಬ್ಬ ಮಗುವಿನ ಸಮಗ್ರ ಬೆಳವಣಿಗೆಯು ಸಾಧ್ಯವಾಗಬಹುದು. ಈ ವೈಶಿಷ್ಟತೆಯನ್ನು ಗುರುತಿಸಲು ಇರುವ ಒಂದು ವಿಶಿಷ್ಟ ಸಾಧನ ಕೈ ಬರಹ. ಕೈ ಬರಹದ ಮೂಲ ನಮ್ಮ ಸುಪ್ತ ಮನಸ್ಸು. ಬರಹ ಶಾಸ್ತ್ರದಲ್ಲಿ ಬರವಣಿಗೆ, ಉಪಯೋಗಿಸುವ ಪರಿಕರಗಳು, ಅದನ್ನು ಉಪಯೋಗಿಸುವ ರೀತಿ, ದೇಹಭಂಗಿ, ಏಕಾಗ್ರತೆ, ಆಸಕ್ತಿ, ಗ್ರಹಿಸುವ ಶಕ್ತಿ, ಇತ್ಯಾದಿಗಳು ಒಳಗೊಂಡಿವೆ.

ಮಕ್ಕಳ ಬರವಣಿಗೆಯಿಂದ ಅವರ ವ್ಯಕ್ತಿತ್ವವನ್ನು ಅಳೆಯಬಾರದು. ಅದು ಅವರ ಅಂತಿಮ ಸ್ವಭಾವವಲ್ಲ. ಬದಲಾವಣೆಗೆ ಅವಕಾಶವಿರುವ ವಯಸ್ಸು. ಕೈ ಬರಹ ಅಭಿವೃದ್ಧಿ ತರಗತಿ ನಡೆಸಿ, ಕೈ ಬರಹ ಬದಲಾವಣೆಯಿಂದ ಖಚಿತ ಫಲಿತಾಂಶ ಸಿಕ್ಕಿದೆ. ಹಾಗೆಯೇ ಮಕ್ಕಳ ಕಲಿಕಾ ನ್ಯೂನತೆಗಳು/ಬುದ್ಧಿ ಮಟ್ಟದ ಗುರುತಿಸುವಿಕೆಯೂ ಸಾಧ್ಯವಾಗಿದೆ. ಸಮಸ್ಯೆಯನ್ನು ಎಷ್ಟು ಬೇಗ ಗುರುತಿಸುತ್ತೇವೋ ಅಷ್ಟೇ ಬೇಗ ಪರಿಹಾರ ಕಾರ್ಯಗತಗೊಳಿಸಬಹುದು. ಮುಖ್ಯವಾಗಿ ಪಾಲಕರು ಸಮಸ್ಯೆಯನ್ನು ನಿರಾಕರಿಸುವ ಸಾಧ್ಯತೆಯೇ ಹೆಚ್ಚು. ಈ ನಿಟ್ಟಿನಲ್ಲಿ ಪಾಲಕರು/ಶಿಕ್ಷಕರಿಗೆ ಈ ಸಂಶೋಧನೆಯು ತುಂಬಾ ಸಹಾಯ ಮಾಡುವುದು.

ಈ ಸಂಶೋಧನೆಯ ಮುಖ್ಯ ಉದ್ದೇಶವೇ ಮಗುವಿಗೆ ಬರವಣಿಗೆಯ ಸರಳ ಕ್ರಿಯೆಗಳನ್ನು ಒದಗಿಸುವುದು ಮತ್ತು ಅದರಿಂದ ಅವನ/ಅವಳ ಮೆದುಳಿನ ಉತ್ಪಾದಕ ಭವನವಾದ ಸುಪ್ತ ಪ್ರಜ್ಞೆಯ ಮನಸ್ಸನ್ನು ಬೆಳೆಸಲು ಮತ್ತು ಪ್ರಭಾವಗೊಳಿಸಲು ಸಹಾಯ ಮಾಡುವುದು ಮತ್ತು ನಡವಳಿಕೆಯಲ್ಲಿ ಸಕಾರಾತ್ಮಕ ಪರಿವರ್ತನೆಗಳನ್ನು ತರುವುದು. ಪ್ರಪಂಚದಲ್ಲಿ ಲಭ್ಯವಿರುವ ಸಂಶೋಧನೆಗಳನ್ನು ಆಧಾರವಾಗಿಟ್ಟುಕೊಂಡು, ಭಾರತದ ಶ್ರೋತೃಗಳಿಗೆ ಸರಿಹೊಂದುವ ಹಾಗೆ ಅದನ್ನು ಅಭಿವೃದ್ಧಿಗೊಳಿಸಲಾಗಿದೆ.

ಮಕ್ಕಳಲ್ಲಿ ಕಲಿಯುವ ಮತ್ತು ಅರ್ಥೈಸಿಕೊಳ್ಳುವ ಪ್ರಕ್ರಿಯೆ: ಎಲ್ಲಾ ಚಿಕ್ಕ ಮಕ್ಕಳೂ ಅರ್ಥಪೂರ್ಣವಾದ, ಅನುಭವಸ್ಥ ಕೈಗಳ ಮೂಲಕ ಕಲಿಯುತ್ತಾರೆ. ಅದರಲ್ಲಿ ಮೂರು ಪ್ರಮುಖ ವಿಧವಾದ ಕಲಿಕೆಯ ಶೈಲಿಗಳಿವೆ.

1. ದೃಶ್ಯದ ಮೂಲಕ ಕಲಿಯುವವರು : ಮಕ್ಕಳು ಅನುಮೋದನೆಗಾಗಿ, ಪೋಷಕರ ಅಥವಾ ಶಿಕ್ಷಕರ ದೈಹಿಕ ಭಾಷೆಯನ್ನು ಅಥವಾ ಮುಖಭಾವವನ್ನು ಗಮನಿಸುತ್ತಾರೆ ಮತ್ತು ಪ್ರದರ್ಶನಗಳ ಮೂಲಕ ಹಾಗೂ ವರ್ಣನೆಗಳ ಮೂಲಕ ಕಲಿಯುತ್ತಾರೆ. ಹಲವು ಬಾರಿ ಚಿತ್ರಗಳಲ್ಲಿ ಯೋಚಿಸಲು ಹವಣಿಸುತ್ತಾರೆ.

2. ಶ್ರವಣೇಂದ್ರಿಯಗಳ ಮೂಲಕ ಕಲಿಯುವವರು : ಮಕ್ಕಳು ಚರ್ಚೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಮತ್ತು ಕೇಳುವುದರ ಮೂಲಕ ಕಲಿಯುತ್ತಾರೆ. ಬಾಯಿ ಮಾತಿನ ನಿರ್ದೇಶನಗಳು ಸೂಚನೆಗಳನ್ನು ಸ್ಪಷ್ಟಪಡಿಸಲು ಸಹಾಯವಾಗುತ್ತದೆ. ಅಧಿಕ ಸದ್ದು/ಶಬ್ದಗಳು ಈ ಸಾಮರ್ಥ್ಯದ ಮಕ್ಕಳನ್ನು ಕಂಗೆಡಿಸಬಹುದು.

3. ಸ್ಪರ್ಶದ ಮೂಲಕ ಕಲಿಯುವವರು : ಮಕ್ಕಳು ತಮ್ಮ ಹಸ್ತಗಳನ್ನು ಬಳಸಲು ಅನುವು ಮಾಡಿಕೊಡುವ ಚಟುವಟಿಕೆಗಳು ಅಥವಾ ಯೋಜನೆಗಳನ್ನು ಇಷ್ಟ ಪಡುತ್ತಾರೆ. ಶಾರೀರಿಕ ಸಂವೇದನಾ ಶಕ್ತಿ ಹೆಚ್ಚಾಗಿರುವ ಇವರು ಒಂದೇ ಸ್ಥಳದಲ್ಲಿ ಕುಳಿತುಕೊಳ್ಳವಲ್ಲಿ ತೊಂದರೆ ಅನುಭವಿಸುತ್ತಾರೆ. ಮಗುವಿಗೆ ಕ್ರಿಯಾಶೀಲವಾಗಿ ಅನ್ವೇಷಿಸಲು ಅನುವು ಮಾಡಿಕೊಡುವ ಕೈಗಳು, ಮಗುವು ಉತ್ತಮವಾಗಿ ಕಲಿಯಲು ಸಹಾಯವಾಗುತ್ತವೆ.

ಇಲ್ಲಿ ಮುಖ್ಯವಾಗಿ ಅರ್ಥ ಮಾಡಿಕೊಳ್ಳಬೇಕಾಗಿದ್ದು ಏನೆಂದರೆ, ನಾವು ಪೋಷಕರು ಅಥವಾ ಶಿಕ್ಷಕರು ನಮಗೆ ಹಿತಕರವಾದ ಕಲಿಕೆಯ ಶೈಲಿಯನ್ನು ಮಕ್ಕಳ ಮೇಲೆ ಹೇರಲು ಬಯಸುತ್ತೇವೆ. ಅಲ್ಲಿಯೇ ಅರ್ಥೈಸುವಿಕೆಯಲ್ಲಿನ ವೆತ್ಯಾಸ ಸಂಭವಿಸುವುದು.

ಈ ಪ್ರಪಂಚದ ಯವುದೇ ಜೀವಿಯ ಮುಂದಿನ ಪೀಳಿಗೆಯ ಬೆಳವಣಿಗೆಯು ಬಹಳ ಸ್ವಾಭಾವಿಕವಾಗಿ ನಡೆಯುವುದು. ಹಾಗಾದಲ್ಲಿ ಮನುಷ್ಯನ ಮುಂದಿನ ಪೀಳಿಗೆಯ ಬೆಳವಣಿಗೆಯ ಬಗ್ಗೆ ಇಷ್ಟೊಂದು ಕಾಳಜಿ ವಹಿಸುವ ಅಗತ್ಯವಿದೆಯೇ? ಸ್ಪರ್ಧಾತ್ಮಕ ಜಗತ್ತಿನಲ್ಲಿ ಜಯಿಸಿ ಉಳಿದ ಯಾವುದೇ ತಳಿಯ ಉಳಿಯುವಿಕೆಯು ನಿಶ್ಚಿತ. ಹಾಗೇ ಮಾನವ ಕುಲದ ಉಳಿಗಾಲವೂ ಜೀವನವೆಂಬ ಹೋರಾಟದಲ್ಲಿ ಉಳಿದರೆ ಮಾತ್ರ ಸಾಧ್ಯ. ಇದಕ್ಕಾಗಿ ಹೆತ್ತವರು ಅತ್ಯಧಿಕ ಶ್ರಮ ಪಡುತ್ತಾರೆ. ತಮ್ಮ ಮಕ್ಕಳು ಎಷ್ಟು ಬೇಗ ಜೀವನದ ಎಲ್ಲಾ ಆಯಾಮದಲ್ಲಿ ಸಶಕ್ತರಾಗುವರು ಎನ್ನುವ ವಿಪರೀತ ಕಾಳಜಿ ಹೆತ್ತವರಲ್ಲಿ ಸಹಜವಾಗಿಯೇ ಇರುವುದು.

ನಾವು ಅರ್ಥಮಾಡಿಕೊಳ್ಳದ ಒಂದು ಸಾಮಾನ್ಯ ಸಂಗತಿಯೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಹಾಗೇ ಮಗುವೂ ವಿಶಿಷ್ಟ. ಆ ವೈಶಿಷ್ಟತೆಯನ್ನು ಗುರುತಿಸಿ ಅದಕ್ಕೆ ತಕ್ಕ ಸೌಲಭ್ಯವನ್ನು ಒದಗಿಸಿದರೆ ಪ್ರತಿಯೊಬ್ಬ ಮಗುವಿನ ಸಮಗ್ರ ಬೆಳವಣಿಗೆಯು ಸಾಧ್ಯವಾಗಬಹುದು. ಈ ವೈಶಿಷ್ಟತೆಯನ್ನು ಗುರುತಿಸಲು ಇರುವ ಒಂದು ವಿಶಿಷ್ಟ ಸಾಧನ ಕೈ ಬರಹ. ಕೈ ಬರಹದ ಮೂಲ ನಮ್ಮ ಸುಪ್ತ ಮನಸ್ಸು. ಬರಹ ಶಾಸ್ತ್ರದಲ್ಲಿ ಬರವಣಿಗೆ, ಉಪಯೋಗಿಸುವ ಪರಿಕರಗಳು, ಅದನ್ನು ಉಪಯೋಗಿಸುವ ರೀತಿ, ದೇಹಭಂಗಿ, ಏಕಾಗ್ರತೆ, ಆಸಕ್ತಿ, ಗ್ರಹಿಸುವ ಶಕ್ತಿ, ಇತ್ಯಾದಿಗಳು ಒಳಗೊಂಡಿವೆ.

ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಹಸ್ತಲೇಖನ/ಕೈ ಬರಹದ ಪ್ರಾಮುಖ್ಯತೆ : ತಾಂತ್ರಿಕತೆಯು ನಮ್ಮ ದಿನನಿತ್ಯದ ಜೀವನದಲ್ಲಿ ಹೆಚ್ಚಾಗಿ ಬೆರೆತು ಹೋಗಿರುವುದರಿಂದ, ಸಾಂಪ್ರದಾಯಿಕವಾಗಿ ಲೇಖನಿಯಿಂದ ಬರೆಯುವ ಕ್ರಿಯೆಯು ಬಹುಪಾಲು ಮರೆತಂತಾಗಿದೆ ಎಂದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಏನೇ ಆದರೂ ಬರೆಯುವುದನ್ನು ಮರೆಯಬಾರದು. ಅದಕ್ಕೆ ಸಂದಿರುವ ಕೀರ್ತಿಗಿಂತಲೂ ಅಧಿಕವಾದ ಉಪಯುಕ್ತತೆಯನ್ನು ಬರವಣಿಗೆಯು ಹೊಂದಿದೆ.

ಮುಂಚಿನ ದಿನಗಳಲ್ಲಿ ಮಕ್ಕಳು ಬರೆಯುವುದನ್ನು ಪ್ರೀತಿಸುತ್ತಿದ್ದರು. ಏಕೆಂದರೆ ಅವರು ತಮ್ಮ ಹಿರಿಯರು ಬರೆಯುವುದನ್ನು ಅಥವಾ ಆಗಿಂದಾಗ್ಗೆ ಟಿಪ್ಪಣಿಗಳನ್ನು ಹಾಕಿಕೊಳ್ಳುವುದನ್ನು ಗಮನಿಸುತ್ತಿದ್ದರು ಮತ್ತು ಅದರ ಅನುಕರಣೆಯನ್ನು ಮಾಡುತ್ತಿದ್ದರು.

ಬರಹವನ್ನು ನಶಿಸುತ್ತಿರುವ ಕಲೆ ಎಂದು ಪರಿಗಣಿಸುತ್ತಿರುವ ಈ ಕಾಲದಲ್ಲಿ ಈ ಸಂಶೋಧನೆಯ ಔಚಿತ್ಯವೇನು ಎಂಬ ಪ್ರಶ್ನೆ ಮೂಡುವುದು ಸಹಜ. ಬರವಣಿಗೆಯು ಯಾಕೆ ಅಗತ್ಯ ಎನ್ನುವ ಮೂಲ ಪ್ರಶ್ನೆಗೆ ಮೊದಲನೆಯದಾಗಿ ಉತ್ತರ ಕೊಡಬೇಕಾಗಿದೆ. ನಮ್ಮ ಹಿರಿಯರು ನಮಗೆ ಯಾವಾಗಲೂ ಬರೆದು ಕಲಿಯಲು ಒತ್ತಾಯಿಸುತ್ತಿದ್ದ ನೆನಪು ಎಲ್ಲರಿಗೂ ಇರಬಹುದು. "ಒಂದು ಸಲ ಬರೆಯುವುದು ಹತ್ತು ಸಲ ಓದುವುದಕ್ಕೆ ಸಮ" ಎನ್ನುವ ಆಡುನುಡಿ ಪ್ರಸಿದ್ಧ. ನಾವು ಬರೆಯುವಾಗ ಪೆನ್ / ಪೆನ್ಸಿಲ್‌ನ್ನು (ಯಾವುದೇ ಪರಿಕರ) ಹೆಬ್ಬೆರಳಿನ ತುದಿಯಿಂದ ಒತ್ತಿ ಹಿಡಿಯಲೇ ಬೇಕು. ಅದುವೇ ಸರಿಯಾದ ಕ್ರಮ. ಹೆಬ್ಬೆರಳಿನ ತುದಿಯಲ್ಲಿ ನಮ್ಮ ಮೆದುಳಿನ ಆಕ್ಯುಪ್ರೆಷರ್ ಬಿಂದು ಇರುವುದು. ಹೇಗೆ ಫ್ಯಾನ್ ಇಲ್ಲವೇ ಲೈಟ್ ನಡೆಯಲು ಸ್ವಿಚ್ ಅಗತ್ಯ ಇರುವುದೋ ಹಾಗೇ ನಮ್ಮ ಮೆದುಳಿನ ಸ್ವಿಚ್ ಇರುವುದು ಹೆಬ್ಬೆರಳಿನ ತುದಿಯಲ್ಲಿ. (ಆಕರ – ಯಾವುದೇ ಆಕ್ಯುಪ್ರೆಷರ್ ಗ್ರಂಥಗಳು) ಬರೆಯುವಾಗ ನಾವು ಈ ಬಿಂದುವನ್ನು ಒತ್ತುವುದರಿಂದ ನಮ್ಮ ಮೆದುಳು ಸಕ್ರಿಯವಾಗಿ ಇರುವುದು. ನಮ್ಮ ಮೆದುಳನ್ನು ಸಚೇತನಗೊಳಿಸಿದಷ್ಟೂ ನಾವು ಸುಸ್ಥಿತಿಯಲ್ಲಿರುವೆವು. ಇದೇ ಕಾರಣಕ್ಕೆ ಹೆಚ್ಚಿನ ಬರಹಗಾರರೆಲ್ಲರೂ ದೀರ್ಘಾಯುಷಿಗಳೂ, ಆರೋಗ್ಯವಂತರೂ ಆಗಿರುವುದು.

ಇದೇ ರೀತಿ ಮಕ್ಕಳ ಮಾನಸಿಕ ವಿಕಸನಕ್ಕೆ ಕೂಡಾ ಬರಹವು ಸಹಾಯ ಮಾಡುವುದು. ಅವರಲ್ಲಿನ ಕಲಿಕಾ ಸಾಮರ್ಥ್ಯದ ಕೊರತೆ ನೀಗಿಸಲೂ ಕೂಡಾ ಇದು ಸಹಾಯಕಾರಿ. ಸಣ್ಣ ಸಣ್ಣ ಸಂಗತಿಗಳಾದ, ನಡವಳಿಕೆಯಲ್ಲಿ ನಿಷ್ಠುರತೆ, ಮೊಂಡುತನ, (ಕಠಿನತೆ), ಹೊಸ ಉಪಾಯಗಳಿಗೆ ತೆರೆದುಕೊಳ್ಳದಿರುವಿಕೆ ಅಥವಾ ವಾದಪ್ರಿಯರಾಗಿರುವುದು ಮುಂತಾದ ವ್ಯಕ್ತಿತ್ವ ದೋಷಗಳನ್ನು ಕೂಡಾ ಸಕಾರಾತ್ಮಕ ರೀತಿಯಲ್ಲಿ ಬದಲಾಯಿಸಬಹುದು.

ಕೈ ಬರಹ ವಿಶ್ಲೇಷಣೆ: ನಾವು ನಮ್ಮ ಬರಹವನ್ನು ಶುರು ಮಾಡಿದಾಗ, ನಮಗೆ ಹೇಳಿಕೊಟ್ಟವರು ಯಾರೇ ಇರಲಿ, ಅವರ ಬರಹವನ್ನು ಯಥಾವತ್ ನಕಲು ಮಾಡಲು ಸಾಧ್ಯವಾಗಿಲ್ಲ. ನಮ್ಮ ಕೈ ಬರಹವು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವುದರಿಂದ ಅದು ಇನ್ನೊಬ್ಬರ ಬರಹಕ್ಕಿಂತ ಭಿನ್ನವಾಗಿರುವುದು. ನಮ್ಮ ಕೈ ಬರಹ ನಮ್ಮ ಸುಪ್ತ ಮನಸ್ಸಿಗೆ ಕಿಂಡಿಯಿರುವಂತೆ. ಅಲ್ಲಿ ಏನು ನಡೆಯುತ್ತಿದೆ ಅನ್ನುವುದನ್ನು ಕೈ ಬರಹ ಹೊರ ತರುವುದು.

ಸಾಮರ್ಥ್ಯ, ದೌರ್ಬಲ್ಯ, ಆತಂಕ, ಭಯ, ಧೈರ್ಯ, ಶಕ್ತಿ, ಸುಸ್ತು, ಜಾಗ್ರತೆ, ಉಢಾಫೆ, ಮರೆಗುಳಿತನ, ಜ್ಞಾಪಕ ಶಕ್ತಿ, ಮುಂದಾಲೋಚನಾ ಶಕ್ತಿ, ಮುಂದಾಳತ್ವ, ಮಾತು, ಸಂಹವನ ಕಲೆ, ಎಲ್ಲರೊಡನೆ ಹೇಗೆ ಬೆರೆಯುತ್ತಾರೆ, ಜೀವನದ ಗುರಿ, ಉದ್ದೇಶ, ಆಸೆಗಳು, ಲೈಂಗಿಕ ಆಸಕ್ತಿ, ಕಾಮತೃಷೆ, ಸೂಕ್ಷ್ಮತೆ, ಕಲಿಕಾ ವಿಧಾನ, ವೇಗ, ಮಾನಸಿಕ/ದೈಹಿಕ/ಮನೋದೈಹಿಕ ಆರೋಗ್ಯ, ಆತ್ಮಹತ್ಯಾ ಆಲೋಚನೆ, ನಗು/ಅಳು/ಕೋಪ ವ್ಯಕ್ತಪಡಿಸುವ ರೀತಿ, ಸಂದರ್ಭ ನಿಭಾಯಿಸುವ ರೀತಿ, ಚಾಕಚಕ್ಯತೆ, ನಂಬಿಗಸ್ತ ನಡವಳಿಕೆ, ರೀತಿ/ನೀತಿ/ಆದರ್ಶ ನಡವಳಿಕೆ, ಸ್ಪರ್ಧಾತ್ಮಕ ನಡವಳಿಕೆ, ಆಡಳಿತಾತ್ಮಕ ವ್ಯವಹಾರ, ರಾಜನೀತಿ, ಕ್ರೂರ/ಹಿಂಸಾ ನಡವಳಿಕೆ, ಕಾರುಣ್ಯ, ಲವಲವಿಕೆ, ವ್ಯವಹಾರ ಚತುರತೆ, ಕುಟಿಲತೆ, ನಿಭಾಯಿಸುವಿಕೆ, ಯಾವ ಉದ್ಯೋಗಕ್ಕೆ ಸೂಕ್ತ – ಹೀಗೆ ಎಲ್ಲವನ್ನೂ ಕೈ ಬರಹ ವಿಶ್ಲೇಷಣೆಯಿಂದ ತಿಳಿಯಬಹುದು.

ಹಸ್ತಲೇಖನವು ಹಲವು ಬಾರಿ "ಮೆದುಳು ಲೇಖನ" ಎಂದು ಉಲ್ಲೇಖಿಸಲ್ಪಡುತ್ತದೆ. ಪ್ರತೀ ಮೆದುಳಿನ ನರಗಳ ವಿನ್ಯಾಸವೂ ನಿರ್ದಿಷ್ಟವಾದ ವ್ಯಕ್ತಿತ್ವ ಗುಣಲಕ್ಷಣವನ್ನು ಹೊಂದಿರುವ ಪ್ರತೀ ವ್ಯಕ್ತಿಯಲ್ಲೂ ಒಂದೇ ತೆರನಾದ ಅದ್ವಿತೀಯ ನರಮಾಂಸಗಳ ಚಲನೆಯನ್ನು ಉತ್ಪಾದಿಸುತ್ತದೆ. ಬರೆಯುವಾಗ ಈ ಚಿಕ್ಕ ಚಲನೆಗಳು ಅರಿವಿಲ್ಲದೇ ಸಂಭವಿಸುತ್ತವೆ. ಬರೆಯಲ್ಪಟ್ಟ ಪ್ರತೀ ಚಲನೆಗಳು ಅಥವಾ ಗೀಟುಗಳು ನಿರ್ದಿಷ್ಟವಾದ ವ್ಯಕ್ತಿತ್ವಗುಣಲಕ್ಷಣಗಳನ್ನು ಬಯಲು ಮಾಡುತ್ತವೆ.

ಕೈ ಬರಹ ವಿಶ್ಲೇಷಣೆಯು ಈ ಗೀಟುಗಳನ್ನು ಅವುಗಳು ಬರಹದಲ್ಲಿ ಕಾಣಿಸುವ ಹಾಗೆಯೇ ಗುರುತಿಸಲು ಮತ್ತು ಅನುರೂಪವಾದ ವ್ಯಕ್ತಿತ್ವ ಗುಣಲಕ್ಷಣಗಳನ್ನು ವಿವರಿಸಲು ಸಹಾಯ ಮಾಡುತ್ತದೆ. ಪ್ರಪಂಚದಲ್ಲಿ ಯಾವ ಎರಡು ಕೈ ಬರಹಗಳೂ ಒಂದೇ ಸಮನಾಗಿರುವುದಿಲ್ಲ ಮತ್ತು ಯಾವ ಎರಡು ವ್ಯಕ್ತಿತ್ವಗಳೂ ಒಂದೇ ಸಮನಾಗಿರುವುದಿಲ್ಲ.

ಹಸ್ತಲೇಖನ ಬೆಳವಣಿಗೆ / ಚಿಕಿತ್ಸೆ ಮತ್ತು ಗ್ರಾಫೋಥೆರಪಿ: ಕೈ ಬರಹವು ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ ಎಂದು ಒಪ್ಪಿಕೊಂಡಾದ ಮೇಲೆ, ಕೈ ಬರಹದ ಬದಲಾವಣೆಯಿಂದ ನಮ್ಮ ವ್ಯಕ್ತಿತ್ವದ ಬದಲಾವಣೆ ಸಾಧ್ಯವೇ ಎಂಬ ಪ್ರಶ್ನೆ ಏಳುವುದು. ಶತಮಾನಗಳ ಸಂಶೋಧನೆಗಳಿಂದ ಇದು ಸಾಧ್ಯ ಎಂದು ಧೃಢೀಕರಿಸಲ್ಪಟ್ಟಿದೆ. ಇದನ್ನೇ ಹಸ್ತಲೇಖನ ಚಿಕಿತ್ಸೆ ಅಥವಾ ಗ್ರಾಫೋಥೆರಪಿ ಎಂದು ಕರೆಯಲಾಗುತ್ತದೆ. ಗ್ರಾಫೋಥೆರಪಿಯು, ಒಬ್ಬರ ವ್ಯಕ್ತಿತ್ವದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವಲ್ಲಿ ಅವರ ಹಸ್ತಲೇಖನವನ್ನು ಮಾರ್ಪಡಿಸುವ ವೈಜ್ಞಾನಿಕ ಕ್ರಿಯೆಯಾಗಿದೆ. ಪುನರಾವರ್ತನೆಯ ಅಭ್ಯಾಸಗಳೊಂದಿಗೆ ನಮ್ಮ ಹಸ್ತಲೇಖನದಲ್ಲಿನ ಗೀಟುಗಳ ಬದಲಾವಣೆಯನ್ನು ನಾವು ಯಾವಾಗ ನಮ್ಮ ಸ್ವ ಇಚ್ಛೆಯಿಂದ ಕೈಗೊಳ್ಳುತ್ತೇವೆಯೋ, ಆಗ ನಾವು ನಮ್ಮ ಸುಪ್ತಪ್ರಜ್ಞೆಗೆ ಪ್ರಬಲವಾದ ಸೂಚನೆಗಳನ್ನು ಕಳಿಸುತ್ತೇವೆ. ಇದರ ಪ್ರಭಾವ ಹಸ್ತಲೇಖನ ಹಾಗೂ ವ್ಯಕ್ತಿತ್ವದ ಮೇಲಾಗುತ್ತದೆ.

ಇದೊಂದು ವಿಶೇಷ ಕಾರ್ಯಕ್ರಮ. ಇಲ್ಲಿ ನಾವು ಕೇವಲ ವಿದ್ಯಾರ್ಥಿಗಳ ಬರಹವನ್ನು ಮಾರ್ಪಡಿಸುವುದಿಲ್ಲ. ತಾಂತ್ರಿಕ ಹಾಗೂ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಅವರ ಸಮಗ್ರ ಬೆಳವಣಿಗೆಯನ್ನು ರೂಪಿಸುತ್ತೇವೆ. ಮಕ್ಕಳ ಅಂಗೈಯ ಮಾಂಸಖಂಡಗಳ ಬೆಳವಣಿಗೆಯೊಂದಿಗೆ ಶುರು ಮಾಡಲಾಗುವ ಈ ಕಾರ್ಯಕ್ರಮವು ಹಸ್ತಲೇಖನದ ಐದು ಪ್ರಮುಖ ತತ್ವಗಳ ಮೇಲೆ ಕೇಂದ್ರೀಕೃತವಾಗಿದೆ.

* ಅಕ್ಷರ ರಚನೆ
* ಜೋಡಣೆ
* ವಲಯಗಳು
* ಅಂತರ
* ಬರವಣಿಗೆಯ ವೇಗ

ಈ ಸಂಗತಿಗಳು ಸಾಮಾನ್ಯ ಬರವಣಿಗೆಯನ್ನು ವೈಜ್ಞಾನಿಕ ಬರವಣಿಗೆಯಾಗುವಂತೆ ಸಹಾಯ ಮಾಡುತ್ತದೆ. ಇದು ಮಗುವನ್ನು ವೇಗವಾಗಿ ಮತ್ತು ಸ್ಪಷ್ಟವಾಗಿ ಬರೆಯುವಂತೆ ಬಲಪಡಿಸುತ್ತದೆ ಮತ್ತು ಮಗುವಿನ ವ್ಯಕ್ತಿತ್ವವನ್ನು ರೂಪಾಂತರಗೊಳಿಸುತ್ತದೆ. ನಮ್ಮ ಸುಪ್ತ ಪ್ರಜ್ಞೆಯ ಮನಸ್ಸು ಸಕಾರಾತ್ಮಕ ಬದಲಾವಣೆಗಳನ್ನು ಸ್ವೀಕರಿಸುವ ಮಾರ್ಗವಾಗಿದೆ.

ಪ್ರತಿ ಮಗುವಿಗೂ ಪ್ರತ್ಯೇಕವಾದ ಗಮನವನ್ನು ಕೊಡಲಾಗುವ ಈ ಕಾರ್ಯಕ್ರಮವು 3 ಹಂತಗಳನ್ನು ಹೊಂದಿದೆ. ಕಾರ್ಯಕ್ರಮದ ಮೊದಲನೇ ದಿನ ಮಗುವಿನ ಹಸ್ತಲೇಖನದ ಮಾದರಿಯನ್ನು ಸಂಗ್ರಹಿಸುವುದರ ಮೂಲಕ ಆರಂಭವಾಗುತ್ತದೆ. (ಯಾವುದೇ ಸೂಚನೆ ಹಾಗೂ ಬೋಧನೆಗಳಿಲ್ಲದೆ). ಈ ಮಾದರಿಯನ್ನು ತರಬೇತಿಯ ನಡುವೆ ಸಂಗ್ರಹಿಸಿದ ಇನ್ನೂ 3 ಮಾದರಿಗಳೊಂದಿಗೆ ಹೋಲಿಸಲಾಗುತ್ತದೆ.

20000 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತರಬೇತುಗೊಳಿಸಿರುವ ಅನುಭವವು, ಮಕ್ಕಳ ಪ್ರಗತಿಯ ಬಗ್ಗೆ ಅಧ್ಯಯನ ನಡೆಸಲು ಸಹಾಯಕವಾಗಿದೆ. ಮಗುವಿನ ಮೊದಲನೇ ಮಾದರಿಯಿಂದ (ಕಾರ್ಯಕ್ರಮದ ಪೂರ್ವ ಸಂಗ್ರಹಿಸಿದ) ಮತ್ತು ಮಾದರಿ 4 (ಕಾರ್ಯಕ್ರಮದ ಕೊನೆಯಲ್ಲಿ ಸಂಗ್ರಹಿಸಿದ) ರವರೆಗಿನ ಬೆಳವಣಿಗೆಯನ್ನು ಕಂಡು ಪೋಷಕರು ಹಾಗೂ ಶಿಕ್ಷಕರು ಆಶ್ಚರ್ಯ ಚಕಿತರಾಗಿದ್ದಾರೆ. ಕೇವಲ ಇಷ್ಟು ಮಾತ್ರವಲ್ಲ, ಮಗುವಿನ ತರಗತಿಯ ಪುಸ್ತಕಗಳಲ್ಲಿನ ಪ್ರದರ್ಶನವನ್ನೂ (ಕಾರ್ಯಕ್ರಮದ ಪೂರ್ವ ಮತ್ತು ನಂತರ) ಮಾಪನ ಮಾಡಲಾಗುತ್ತದೆ. ಪೋಷಕರುಗಳಿಂದ ಮಕ್ಕಳ ಪ್ರಗತಿಯ ಬಗ್ಗೆ ಲಿಖಿತ ಮರುಮಾಹಿತಿಯನ್ನು ಪಡೆದ ನಂತರವೇ ತರಗತಿಗಳನ್ನು ಮುಕ್ತಾಯಗೊಳಿಸಲಾಗುತ್ತದೆ.

ಮುಕ್ತಾಯ / ನಿರ್ಣಯ: ಮಕ್ಕಳ ಬರವಣಿಗೆಯಿಂದ ಅವರ ವ್ಯಕ್ತಿತ್ವವನ್ನು ಅಳೆಯಬಾರದು. ಅದು ಅವರ ಅಂತಿಮ ಸ್ವಭಾವವಲ್ಲ. ಬದಲಾವಣೆಗೆ ಅವಕಾಶವಿರುವ ವಯಸ್ಸು, ಕೈ ಬರಹ ಅಭಿವದ್ಧಿ ತರಗತಿ ನಡೆಸಿ, ಕೈ ಬರಹ ಬದಲಾವಣೆಯಿಂದ ಖಚಿತ ಫಲಿತಾಂಶ ಸಿಕ್ಕಿದೆ. ಹಾಗೆಯೇ ಮಕ್ಕಳ ಕಲಿಕಾ ನ್ಯೂನತೆಗಳು/ಬುದ್ಧಿ ಮಟ್ಟದ ಗುರುತಿಸುವಿಕೆಯೂ ಸಾಧ್ಯವಾಗಿದೆ. ಸಮಸ್ಯೆಯನ್ನು ಎಷ್ಟು ಬೇಗ ಗುರುತಿಸುತ್ತೇವೋ ಅಷ್ಟೇ ಬೇಗ ಪರಿಹಾರ ಕಾರ್ಯಗತಗೊಳಿಸಬಹುದು. ಮುಖ್ಯವಾಗಿ ಪಾಲಕರು ಸಮಸ್ಯೆಯನ್ನು ನಿರಾಕರಿಸುವ

ಸಾಧ್ಯತೆಯೇ ಹೆಚ್ಚು. ಈ ನಿಟ್ಟಿನಲ್ಲಿ ಪಾಲಕರು/ಶಿಕ್ಷಕರಿಗೆ ಈ ಸಂಶೋಧನೆಯು ತುಂಬಾ ಸಹಾಯ ಮಾಡುವುದು.

ಈ ಸಂಶೋಧನೆಯ ಮುಖ್ಯ ಉದ್ದೇಶವೇ ಮಗುವಿಗೆ ಬರವಣಿಗೆಯ ಸರಳ ಕ್ರಿಯೆಗಳನ್ನು ಒದಗಿಸುವುದು ಮತ್ತು ಅದರಿಂದ ಅವನ/ಅವಳ ಮೆದುಳಿನ ಉತ್ಪಾದಕ ಭವನವಾದ ಸುಪ್ತ ಪ್ರಜ್ಞೆಯ ಮನಸ್ಸನ್ನು ಬೆಳೆಸಲು ಮತ್ತು ಪ್ರಭಾವಗೊಳಿಸಲು ಸಹಾಯ ಮಾಡುವುದು ಮತ್ತು ನಡವಳಿಕೆಯಲ್ಲಿ ಸಕಾರಾತ್ಮಕ ಪರಿವರ್ತನೆಗಳನ್ನು ತರುವುದು. ಪ್ರಪಂಚದಲ್ಲಿ ಲಭ್ಯವಿರುವ ಸಂಶೋಧನೆಗಳನ್ನು ಆಧಾರವಾಗಿಟ್ಟುಕೊಂಡು, ಭಾರತದ ಶ್ರೋತೃಗಳಿಗೆ ಸರಿಹೊಂದುವ ಹಾಗೆ ಅದನ್ನು ಅಭಿವೃದ್ಧಿಗೊಳಿಸಲಾಗಿದೆ.

ಗ್ರಾಮೀಣ ಭಾಗದತಾರುಣ್ಯಾವಧಿಯವರಲ್ಲಿ ಮಾರ್ಗದರ್ಶನದ ಅಗತ್ಯಗಳು

ವಿನುತ.ಆರ್* ಮತ್ತುಇಂದಿರಮ್ಮ. ಬಿ.ಎಸ್.**

*ಎಂ.ಎಸ್ಸಿ ವಿದ್ಯಾರ್ಥಿನಿ, **ಸಹಾಯಕ ಪ್ರಾಧ್ಯಾಪಕರು, ಮಾನವ ವಿಕಾಸ ವಿಭಾಗಮತ್ತು ಸಂಶೋಧನಾಕೇಂದ್ರ, ಶ್ರೀಮತಿ. ವಿ.ಹೆಚ್.ಡಿ. ಕೇಂದ್ರೀಯ ಗೃಹ ವಿಜ್ಞಾನ ಸಂಸ್ಥೆ (ಸ್ವಾಯತ್ತ) ಬೆಂಗಳೂರು-560001, ಇಮೇಲ್ ವಿಳಾಸ: vinutha.yashu@gmail.com

ಮಾನವನಜೀವಿತಾವಧಿಯಎಲ್ಲಾ ಹಂತಗಳಲ್ಲಿ ಹಲವಾರು ವಿಧದ ಮಾರ್ಗದರ್ಶನದಅಗತ್ಯತೆ, ಪ್ರಾಮುಖ್ಯತೆ ಹಾಗೂ ಉಪಯುಕ್ತತೆಗಳು ಕಾಣಸಿಗುತ್ತವೆ. ಜೀವಿತಾವಧಿಯಅವಧಿಗಳಲ್ಲಿ ಮುಖ್ಯವಾದದ್ದುತಾರುಣ್ಯಾವಧಿ.ತಾರುಣ್ಯಾವಧಿಎಂದರೆ 10 ರಿಂದ 19 ವರ್ಷಗಳ ನಡುವಿನ ಹಂತ. ಈ ಹಂತದಲ್ಲಿತರುಣತರುಣಿಯರಿಗೆ ಹಲವು ವಿಧದ ಮಾರ್ಗದರ್ಶನಗಳ ಅಗತ್ಯತೆ ಹೆಚ್ಚಾಗಿ ಕಂಡು ಬರುತ್ತದೆ. ಬೆಳವಣಿಗೆ ಮತ್ತು ವಿಕಾಸದಎಲ್ಲಾ ಆಯಾಮಗಳಲ್ಲಿ ಕಂಡುಬರುವ ಮಹತ್ವವಾದ ಬದಲಾವಣೆಗಳು ಅವರ ವರ್ತನೆಗಳ ಮೇಲೆ ಮತ್ತು ಶೈಕ್ಷಣಿಕ ಸಾಧನೆಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತವೆ. ಈ ಹಂತದಲ್ಲಿಆಗುವ ದೇಹದಬದಲಾವಣೆಗಳು, ಶೈಕ್ಷಣಿಕ ಹಾಗೂ ಸಾಮಾಜಿ-ಕ ವಲಯಗಳಲ್ಲಿ ಉಂಟಾಗುವ ಏರಿಳಿತಗಳನ್ನು ಎದುರಿಸಲುತಾರುಣ್ಯದವರಿಗೆ ಮಾರ್ಗದರ್ಶನದಅವಶ್ಯಕತೆಇದೆ. ತಾರುಣ್ಯಾವಧಿಯ ಹಂತವನ್ನು ಬಾಲ್ಯಾವಧಿ ಮತ್ತು ವಯಸ್ಕಾವಧಿಯ ನಡುವಿನ ಕ್ಲಿಷ್ಟಕರ ಸೇತುವೆಎನ್ನಲಾಗುತ್ತದೆ.ಈತಾರುಣ್ಯಾವಧಿಯಕಷ್ಟಕರಹಂತವನ್ನು ಸುಸೂತ್ರವಾಗಿದಾಟಿ ಹೊರಬರಲುಅವರಿಗೆ ಮಾರ್ಗದರ್ಶನದಅವಶ್ಯಕತೆ ಹೆಚ್ಚಾಗಿರುತ್ತದೆ.ಅವರ ಈ ಅವಶ್ಯಕತೆಗಳು ಅನೇಕ ಅಂಶಗಳನ್ನು ಅವಲಂಬಿಸಿರುತ್ತವೆ.ಈ ಅಂಶಗಳು ಅವರ ಲಿಂಗ, ವಾಸಿಸುತ್ತಿರುವ ಸ್ಥಳ, ಕುಟುಂಬದ ವಿಧ, ಪೋಷಕರ ವಿದ್ಯಾಭ್ಯಾಸ ಹಾಗೂ ಉದ್ಯೋಗ ಇವೇ ಮುಂತಾದವು.ಪ್ರಸ್ತುತಅಧ್ಯಯನದಲ್ಲಿಗ್ರಾಮೀಣ ಭಾಗದಲ್ಲಿ ವಾಸಿಸುವ ತಾರುಣ್ಯದವರಮಾರ್ಗದರ್ಶನದಅವಶ್ಯಕತೆಗಳನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ.ಈಉದ್ದೇಶಕ್ಕಾಗಿ 14 ರಿಂದ 15 ವರ್ಷ ವಯಸ್ಸಿನ 60 ತರುಣ ಹಾಗು 60 ತರುಣಿಯರನ್ನುಒಂದು ಸಮೀಕ್ಷೆಗೆ ಒಳಪಡಿಸಿ ಅವರ ಮಾರ್ಗದರ್ಶನದ ಅಗತ್ಯಗಳನ್ನು ತಿಳಿಯಲಾಯಿತು.ಅಗತ್ಯವಾದಮಾಹಿತಿಯನ್ನುಡಾ. ಜೆ.ಎಸ್. ಗ್ರೇವಾಲ್‌ರವರು ಸಿದ್ಧಪಡಿಸಿದ"ಮಾರ್ಗದರ್ಶನದ ಅಗತ್ಯಗಳ ಪ್ರಶ್ನಾವಳಿ" ಪ್ರಶ್ನಾವಳಿಯ ಮೂಲಕ ಸಂಗ್ರಹಿಸಲಾಯಿತು.ಈ ವಿಧಾನದಿಂದ ಸಂಗ್ರಹಿಸಿದ ಮಾಹಿತಿಯನ್ನು ಅಂಕಿ ಅಂಶಗಳ ಪರೀಕ್ಷೆಗಳ ಮೂಲಕ ಪರಿಶೀಲಿಸಲಾಯಿತು.ಈಫಲಿಂತಾಂಶದಿಂದಕಂಡು ಬಂದ ಮಾಹಿತಿಏನೆಂದರೆಗ್ರಾಮೀಣ ಭಾಗದತರುಣತರುಣಿಯರಿಬ್ಬರಲ್ಲೂ ದೈಹಿಕ,ಸಾಮಾಜಿಕ,ಮಾನಸಿಕ, ಶೈಕ್ಷಣಿಕ ಮತ್ತುಔದ್ಯೋಗಿಕ ಮಾರ್ಗದರ್ಶನದಅವಶ್ಯಕತೆಹೆಚ್ಚಾಗಿ ಇದೆ.ಈ ಫಲಿತಾಂಶಗಳು ತಾರುಣ್ಯಾವಧಿಯಲ್ಲಿಎಲ್ಲಾ ವಿಧದ ಮಾರ್ಗದರ್ಶನದ ಅಗತ್ಯತೆಗಳು ಹೆಚ್ಚಾಗಿರುತ್ತವೆ-ಎಂಬುದನ್ನುದೃಢಪಡಿಸುತ್ತವೆ.

ಕೀ ಪದಗಳು:ತಾರುಣ್ಯಾವಧಿ, ತರುಣ,ತರುಣಿ,ಮಾರ್ಗದರ್ಶನ,ಗ್ರಾಮೀಣ.

ಪೀಠಿಕೆ: ತಾರುಣ್ಯಾವಧಿಯು ಮಾನವನ ಜೀವಿತಾವಧಿಯ ಒಂದು ಮುಖ್ಯ ಅವಧಿಯಾಗಿದೆ.10 ವರ್ಷದಿಂದ 19 ವರ್ಷಗಳ ಒಳಗಿನ ಈ ಅವಧಿಯಲ್ಲಿ ತರುಣ ತರುಣಿಯರು ತಮ್ಮನ್ನು ತಾವು ವೈಯಕ್ತಿಕವಾಗಿ, ಸಾಮಾಜಿಕವಾಗಿ ಮತ್ತು ಔದ್ಯೋಗಿಕವಾಗಿ ಗುರುತಿಸಿಕೊಳ್ಳಲು ಪ್ರಯತ್ನಪಡುತ್ತಾರೆ.ಈ ಅವಧಿಯಲ್ಲಿ ದೈಹಿಕವಾಗಿ, ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಮಹತ್ತರವಾದ ಬದಲಾವಣೆಗಳು ಉಂಟಾಗುತ್ತವೆ (ಪಪಾಲಿಯ 2014).ಪ್ರಸ್ತುತ ಸಂದರ್ಭದಲ್ಲಿ ತಾರುಣ್ಯದವರು ಯಾವುದೇ ನಿಗದಿತ ಕಟ್ಟುಪಾಡುಗಳಿಲ್ಲದೆ ಅವರಿಗೆ ಎದುರಾಗುವ ಹೊಸ ಬದಲಾವಣೆಗಳನ್ನು ಅಥವಾ ಅವಕಾಶಗಳನ್ನು ಸ್ವಚ್ಛಂಧವಾಗಿ ಒಪ್ಪಿಕೊಳ್ಳುತ್ತಾ ಮುನ್ನಡೆಯುತ್ತಿದ್ದಾರೆ. ಈ ಪ್ರಯಾಣದಲ್ಲಿ ಅವರು ಅನೇಕ ವಿಧದ ಸಂಕಷ್ಟಗಳಿಗೆ ಗುರಿಯಾಗುತ್ತಿದ್ದಾರೆ.ಕುಟುಂಬ ವ್ಯವಸ್ಥೆಯಲ್ಲಿ ಹಾಗೂ ಮೌಲ್ಯಗಳಲ್ಲಿ ಕಂಡುಬರುತ್ತಿರುವ ಬದಲಾವಣೆಗಳು ಹಾಗೂ ತ್ವರಿತವಾಗಿ ಉಂಟಾಗುತ್ತಿರುವ ತಾಂತ್ರಿಕ ಪ್ರಗತಿಗಳು ತಾರುಣ್ಯದವರನ್ನು ಒಂದು ಹೊಸ ಲೋಕಕ್ಕೆ ಕೊಂಡೊಯ್ಯುತ್ತಿವೆ. ಈ ಹೊಸ ಜಗತ್ತಿಗೆ ಹೊಂದಾಣಿಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಅವರು ಅನೇಕ ವಿಧದ ಒತ್ತಡಗಳಿಗೆ ಒಳಗಾಗುತ್ತಿದ್ದಾರೆ (ಸೀಜಾ 2015).ಇಂತಹ ಕ್ಲಿಷ್ಟಕರ ಸಂದರ್ಭಗಳಲ್ಲಿ ತಾರುಣ್ಯದವರು ಗೊಂದಲಮಯ ಸನ್ನಿವೇಶಗಳಿಗೆ ತುತ್ತಾಗುತ್ತಿದ್ದಾರೆ. ಅವುಗಳೆಂದರೆ ತಮ್ಮ ಪಾತ್ರ, ಜವಾಬ್ದಾರಿಗಳನ್ನು ಅರಿಯುವುದು, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಸಮರ್ಥ ಆಯ್ಕೆ, ಶೈಕ್ಷಣಿಕ ಕೌಶಲ್ಯಗಳ ಕೊರತೆ, ಸಮವಯಸ್ಕರೊಂದಿಗೆ ಹೊಂದಾಣಿಕೆಯ ತೊಂದರೆಗಳು, ವೈಯಕ್ತಿಕ ಆರೈಕೆ, ನೈತಿಕ ಗೊಂದಲಗಳು ಮತ್ತು ವೇಳೆಯ ಸಮರ್ಪಕ ಬಳಕೆ, ವ್ಯಸನಗಳು ಇವೇ ಮುಂತಾದವು.

ತಾರುಣ್ಯದವರ ಇಂತಹ ಸಮಸ್ಯೆಗಳಿಗೆ ಮಾರ್ಗೋಪಾಯವೆಂದರೆ– 'ಮಾರ್ಗದರ್ಶನ'ಪ್ರಸ್ತುತ ದಿನಗಳಲ್ಲಿ ತರುಣ, ತರುಣಿಯರು ತಮ್ಮನ್ನುತಾವು ಅರ್ಥಮಾಡಿಕೊಳ್ಳಲು, ಅವರ ಸಾಮರ್ಥ್ಯಗಳನ್ನು ಅರಿಯಲು ಅವರ ಆಸಕ್ತಿಗಳನ್ನು ಗುರುತಿಸಿ ಪೋಷಿಸಲು, ಅವರ ನೈತಿಕ ನಿಲುವುಗಳು ಮತ್ತು ನಂಬಿಕೆಗಳನ್ನು ಬಲಪಡಿಸಲು ಹಾಗೂ ಅವರ ಸರ್ವತೋಮುಖ ಬೆಳವಣಿಗೆಗೆ ತಾರುಣ್ಯದವರಿಗೆ ಮಾರ್ಗದರ್ಶನದ ಅಗತ್ಯವಿದೆ (ಕೆನೆತ್ 2007).ಕೊಚ್ಚಾರ್ (2006) ರವರ ಪ್ರಕಾರ ಮಾರ್ಗದರ್ಶನವು "ಯಾವುದೇವ್ಯಕ್ತಿಗೆ ತನ್ನ ಗುಣಲಕ್ಷಣ ಹಾಗೂಸಾಮರ್ಥ್ಯಗಳನ್ನು ಅರಿತು ತನ್ನನ್ನು ತಾನುಗುರುತಿಸಿಕೊಳ್ಳುವ ಜೊತೆಗೆ ಸಾಮಾಜಿಕ ಹಾಗೂ ನೈತಿಕ ಮೌಲ್ಯಗಳನ್ನು ಅರಿತುಕೊಳ್ಳುವ ಒಂದು ವಿಧದ ಶಿಕ್ಷಣ"ವಾಗಿದೆ.ಈ ನಿಟ್ಟಿನಲ್ಲಿ ನಡೆದ ಸಂಶೋಧನೆಗಳು ತಾರುಣ್ಯದವರಿಗೆ ಮಾರ್ಗದರ್ಶನದ ಅಗತ್ಯತೆ ಇದೆ ಎಂದು ತಿಳಿಸಿವೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ತರುಣ ತರುಣಿಯರಿಗೆ ಮಾರ್ಗದರ್ಶನದ ಅವಶ್ಯಕತೆ ಹೆಚ್ಚಾಗಿ ಇದೆ.ತರುಣರಿಗೆ ತರುಣಿಯರಿಗಿಂತ ಹೆಚ್ಚಿನ ಮಾರ್ಗದರ್ಶನದ ಅವಶ್ಯಕತೆ ಇದೆ (ಕಲ್‌ಹೋತ್ರ 2012, ಶರ್ಮಾ ಮತ್ತು ಕೌರ್ 2012).ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅವರು ಎದುರಿಸುವ ಶೈಕ್ಷಣಿಕ ಆತಂಕವನ್ನು ಸಮರ್ಥವಾಗಿ ಎದುರಿಸಲು ಅವರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ (ಶರ್ಮಾ 2014, ಪ್ರಭು 2015).

ತಾರುಣ್ಯದವರಿಗೆ ಅಗತ್ಯವಾದ ಮಾರ್ಗದರ್ಶನಗಳು ಈ ಕೆಳಕಂಡತಿವೆ. ಅವುಗಳೆಂದರೆ

1. **ವೈಯಕ್ತಿಕ ಮಾರ್ಗದರ್ಶನ:** ವೈಯಕ್ತಿಕವಾಗಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಸಹಾಯ ಮಾಡುವುದೇ ವೈಯಕ್ತಿಕ ಮಾರ್ಗದರ್ಶನ. ಇದುತಾರುಣ್ಯದವರಿಗೆ ವೈಯಕ್ತಿಕವಾಗಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಮತ್ತು ಜೀವನದಲ್ಲಿ ಯಶಸ್ಸನ್ನು ಸಾಧಿಸಲು ವೈಯಕ್ತಿಕ ಮಾರ್ಗದರ್ಶನದ ಅವಶ್ಯಕತೆ ಇದೆ.

2. **ದೈಹಿಕ ಮಾರ್ಗದರ್ಶನ:** ದೈಹಿಕ ಮಾರ್ಗದರ್ಶನ ಎಂದರೆ ತಾರುಣ್ಯದವರುತಮ್ಮದೇಹದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರಲ್ಲಿದೈಹಿಕ ಚಟುವಟಿಕೆಯಲ್ಲಿ ಭಾಗವಹಿಸುವ ಇಚ್ಛೆಯನ್ನು ಸೃಷ್ಟಿಸುವುದು.ದೈಹಿಕ ಮಾರ್ಗದರ್ಶನವನ್ನು ವಿದ್ಯಾರ್ಥಿಗಳಿಗೆ ನೀಡುವುದರಿಂದ ಅವರು ಜೀವನದುದ್ದಕ್ಕೂ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಆರೋಗ್ಯವಂತರಾಗಿ ಇರುವಂತೆ ಸಹಾಯ ಮಾಡಬಹುದು.

3. **ಸಾಮಾಜಿಕ ಮಾರ್ಗದರ್ಶನ:** ವೈಯಕ್ತಿಕವಾಗಿ ಸ್ವತ: ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು, ಇತರರ ಜೊತೆಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಅರಿಯಲು ಮತ್ತು ಸಾಮಾಜಿಕ ಕೌಶಲ್ಯಗಳನ್ನು ರೂಢಿಸಿಕೊಳ್ಳಲು ನೀಡುವ ಮಾರ್ಗದರ್ಶನವನ್ನು ಸಾಮಾಜಿಕ ಮಾರ್ಗದರ್ಶನ ಎನ್ನಲಾಗುತ್ತದೆ.ಈ ಮಾರ್ಗದರ್ಶನವು ತಾರುಣ್ಯದವರಿಗೆ ಅಂತರ್‌ವ್ಯಕ್ತಿ ಮತ್ತು ಪರಸ್ಪರ ಸಂಬಂಧಗಳನ್ನು ಉತ್ತಮವಾಗಿ ಹೊಂದಲು ಸಹಕರಿಸುತ್ತದೆ.ಇದಲ್ಲದೆ ಒಳ್ಳೆಯ ಸ್ವಭಾವ,ಸಭ್ಯತೆ ಹಾಗೂ ಸಮಾಜವು ಒಪ್ಪಿಕೊಳ್ಳುವಂತಹ ವರ್ತನೆಯನ್ನು ರೂಢಿಸಿಕೊಳ್ಳಲು ಸಹ ಸಹಕರಿಸುತ್ತದೆ.

4. **ನೈತಿಕ ಮಾರ್ಗದರ್ಶನ:** ಜೀವನದಲ್ಲಿ ತಮ್ಮದೇ ಆದ ವಿಚಾರಗಳನ್ನು ರೂಡಿಸಿಕೊಳ್ಳಲು ಮತ್ತು ಅವುಗಳನ್ನು ಸಮಾಜವು ಒಪ್ಪುವಂತಹ ವಿಧದಲ್ಲಿ ಅಳವಡಿಸಿಕೊಳ್ಳಲು ನೀಡುವ ಮಾರ್ಗದರ್ಶನವನ್ನು ನೈತಿಕ ಮಾರ್ಗದರ್ಶನ ಎನ್ನಲಾಗುತ್ತದೆ.ಪ್ರತಿಯೊಬ್ಬರೂತಮ್ಮ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಿಂದ ಸಮಾಜದಲ್ಲಿ ಉತ್ತಮ ಸ್ಥಾನಗಳಿಸಬಹುದು.ಕೆಲವೊಮ್ಮೆ ಹಲವು ಕಾರಣಗಳುತಾರುಣ್ಯದವರ ಮೇಲೆ ವಿವಿಧ ಅನಪೇಕ್ಷಿತ ಆಚರಣೆಗಳಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸುತ್ತವೆ. ಇಂತಹ ಕಷ್ಟಕರ ಸಂದರ್ಭಗಳಲ್ಲಿ ಅವರು ಸೂಕ್ತ ನಿರ್ಣಯ ಕೈಗೊಳ್ಳಲು ನೈತಿಕ ಮಾರ್ಗದರ್ಶನವು ಸಹಕರಿಸುತ್ತದೆ.

5. **ಆರೋಗ್ಯ ಮಾರ್ಗದರ್ಶನ:** ಆರೋಗ್ಯ ಮಾರ್ಗದರ್ಶನ ಎಂದರೆ ತಾರುಣ್ಯದವರು ತಮ್ಮ ದೇಹದ ಆರೋಗ್ಯವನ್ನು ಉತ್ತಮವಾಗಿಟ್ಟುಕೊಂಡು ಯಾವುದೇ ಖಾಯಿಲೆಗಳಿಂದ ದೂರವಿರಲು ಸಹಕರಿಸುವ ಒಂದು ಮಾರ್ಗವಾಗಿದೆ.ಈ ಮಾರ್ಗದರ್ಶನವು ತಾರುಣ್ಯದವರು ಅವರ ಆರೋಗ್ಯದ ಬಗ್ಗೆ ಕಾಳಜಿವಹಿಸಲು ಮತ್ತು ಇತರ ಯಾವುದೇ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗದಂತೆ ಅವರನ್ನು ರಕ್ಷಿಸಿಕೊಳ್ಳಲು ಸಹಕರಿಸುತ್ತದೆ.

6. **ಮಾನಸಿಕ ಮಾರ್ಗದರ್ಶನ:** ವೈಯಕ್ತಿಕ ಬೇಕು ಬೇಡಗಳ ಗ್ರಹಿಕೆಯನ್ನು ಅರಿಯಲು ಮತ್ತು ಇದಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ಮಾನಸಿಕ ಅಥವಾ ಭಾವನಾತ್ಮಕ ತೃಪ್ತಿಯನ್ನು ಹೊಂದಲು ನೀಡುವ ಮಾರ್ಗದರ್ಶನವನ್ನು ಮಾನಸಿಕ ಮಾರ್ಗದರ್ಶನ ಎನ್ನಲಾಗುತ್ತದೆ.ಈ ವಿಧದ ಮಾರ್ಗದರ್ಶನವು ತಾರುಣ್ಯದವರಿಗೆ ಮಾನಸಿಕವಾಗಿ ಸಂತೃಪ್ತ ಭಾವನೆ ಹೊಂದಲು ಮತ್ತು ಸದಾ ಉಲ್ಲಾಸದಿಂದಿದ್ದು ಯಾವುದೇ ಮಾನಸಿಕ ಕ್ಲೇಶಗಳಿಗೆ ಒಳಗಾಗದಂತೆ ಸಹಕರಿಸುತ್ತದೆ.

7. **ಶೈಕ್ಷಣಿಕ ಮಾರ್ಗದರ್ಶನ:** ತಾರುಣ್ಯದವರಿಗೆ ಲಭ್ಯವಿರುವ ವಿವಿಧ ಶೈಕ್ಷಣಿಕ ಅವಕಾಶಗಳ ಮಾಹಿತಿಯನ್ನು ನೀಡುವುದು ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ತೊಂದರೆಗಳಿಂದ ಹೊರಬರಲು ನೀಡುವ ಮಾರ್ಗದರ್ಶನವನ್ನು ಶೈಕ್ಷಣಿಕ ಮಾರ್ಗದರ್ಶನ ಎನ್ನಲಾಗುತ್ತದೆ.ಈ ಮಾರ್ಗದರ್ಶನವು ಅವರುಗಳು ತಮ್ಮ ಮುಂದಿನ ಶಿಕ್ಷಣವನ್ನು ಮುಂದುವರಿಸಲು ಮತ್ತು ಲಭ್ಯವಿರುವ ಶೈಕ್ಷಣಿಕ ಅವಕಾಶಗಳನ್ನು ಅರಿಯಲು ಸಹಕರಿಸುತ್ತದೆ.

8. ಔದ್ಯೋಗಿಕ ಮಾರ್ಗದರ್ಶನ: ಕಲಿತ ವಿದ್ಯೆಗೆ ಲಭ್ಯವಿರುವ ಸೂಕ್ತ ಉದ್ಯೋಗಗಳ ಮಾಹಿತಿಯನ್ನು ನೀಡುವುದನ್ನು ಔದ್ಯೋಗಿಕ ಮಾರ್ಗದರ್ಶನ ಎನ್ನಲಾಗುತ್ತದೆ.ಈ ಔದ್ಯೋಗಿಕ ಮಾರ್ಗದರ್ಶನದಿಂದ ತಾರುಣ್ಯದವರು ಅವರಲ್ಲಿರುವ ಉದ್ಯೋಗಾಸಕ್ತಿ ಮತ್ತು ವಿಧ್ಯಾರ್ಹತೆಗಳನ್ನು ಗಳಿಸಿಕೊಳ್ಳಲು ಸಹಾಯ ಮಾಡುತ್ತದೆ.

9. ವಿರಾಮ ಸಮಯದ ಮಾರ್ಗದರ್ಶನ: ವಿರಾಮ ಸಮಯದ ಮಾರ್ಗದರ್ಶನವು ಬಿಡುವಿನ ಸಮಯವನ್ನು ಯಾವ ವಿಧದಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಡುವುದಾಗಿದೆ.ಈ ಮಾರ್ಗದರ್ಶನದಿಂದ ತಾರುಣ್ಯದವರು ತಮ್ಮ ಬಿಡುವಿನ ವೇಳೆಯಲ್ಲಿ ಸೂಕ್ತ ಕೌಶಲ್ಯಗಳನ್ನು ಮನರಂಜನೆಯನ್ನು ಹಾಗೂ ಅಗತ್ಯತರಬೇತಿಗಳನ್ನು ಪಡೆದುಕೊಳ್ಳಲು ಸಹಕರಿಸುತ್ತದೆ.

ಪ್ರಸ್ತುತ ದಿನಗಳಲ್ಲಿ ತಾರುಣ್ಯದವರಿಗೆ ಈ ಮೇಲೆ ತಿಳಿಸಿದಎಲ್ಲಾ ಮಾರ್ಗದರ್ಶನದಅವಶ್ಯಕತೆಗಳನ್ನುಅರಿತು ಅವುಗಳನ್ನು ನೀಡುವ ಪ್ರಯತ್ನವ 'ನ್ನುಮಾಡಿದರೆಅವರುಈ ಕ್ಲಿಷ್ಟಕರವಾದಹಂತವನ್ನು ಸುಲಭವಾಗಿಹಾಗೂಸುಲಲಿತವಾಗಿದಾಟಿ ಮುನ್ನಡೆಯಬಹುದು. ಪ್ರಸ್ತುತಅಧ್ಯಯನದಲ್ಲಿ ಗ್ರಾಮೀಣ ಭಾಗದಲ್ಲಿ ವಾಸಿಸುವ ತಾರುಣ್ಯದವರ ಅವಶ್ಯಕತೆಗಳನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ಗುರಿ:

ಗ್ರಾಮೀಣ ಭಾಗದ ತಾರುಣ್ಯಾವಧಿಯವರ ಮಾರ್ಗದರ್ಶನದ ಅಗತ್ಯಗಳನ್ನು ತಿಳಿಯುವುದು.

ಅಧ್ಯಯನದ ಉದ್ದೇಶಗಳು:

1. ದೈಹಿಕ, ಸಾಮಾಜಿಕ, ಮಾನಸಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಗ್ರಾಮೀಣ ಭಾಗದ ತಾರುಣ್ಯದವರ ಮಾರ್ಗದರ್ಶನದ ಅಗತ್ಯತೆಗಳನ್ನು ತಿಳಿಯುವುದು.

2. ಗ್ರಾಮೀಣ ಭಾಗದ ತರುಣ ತರುಣಿಯರಲ್ಲಿ ಒಟ್ಟಾರೆ ಮಾರ್ಗದರ್ಶನದ ಅಗತ್ಯತೆಯನ್ನು ತಿಳಿಯುವುದು.

ಅಧ್ಯಯನದ ವಿಧಾನ : ಪ್ರಸ್ತುತ ಅಧ್ಯಯನದಲ್ಲಿ ಸಮೀಕ್ಷಾ ಸಂಶೋಧನಾ ವಿನ್ಯಾಸವನ್ನು ಅಳವಡಿಸಲಾಗಿದೆ.ಈ ಉದ್ದೇಶಕ್ಕಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 14 ರಿಂದ 15 ವರ್ಷ ವಯಸ್ಸಿನ 60 ತರುಣ ಹಾಗೂ 60 ತರುಣಿಯರನ್ನು ಯಾದೃಚ್ಛಿಕ (ರ್ಯಾಂಡಮ್) ಮಾದರಿಯ ಮೂಲಕ ಆರಿಸಿ ಒಂದು ಸಮೀಕ್ಷೆಗೆ ಒಳಪಡಿಸಲಾಯಿತು.ಅಗತ್ಯವಾದ ಮಾಹಿತಿಯನ್ನು ಡಾ॥.ಜೆ. ಎಸ್. ಗ್ರೇವಾಲ್ ರವರು ಸಿದ್ಧಪಡಿಸಿದ " ಮಾರ್ಗದರ್ಶನದ ಅಗತ್ಯಗಳ ಪ್ರಶ್ನಾವಳಿ"ಯನ್ನು ಬಳಸಿ ಸಂಗ್ರಹಿಸಲಾಯಿತು. ಈ ಪ್ರಶ್ನಾವಳಿಯಲ್ಲಿ 65 ಹೇಳಿಕೆಗಳಿದ್ದು ಮಾರ್ಗದರ್ಶನದ ಅಗತ್ಯಗಳ ಪ್ರಶ್ನಾವಳಿಯು ಐದು ಕ್ಷೇತ್ರಗಳ ಅಗತ್ಯಗಳ ತೀವ್ರತೆಯನ್ನು ಅಳೆಯುತ್ತದೆ.ಈ ಐದು ಕ್ಷೇತ್ರಗಳೆಂದರೆ ದೈಹಿಕ, ಸಾಮಾಜಿಕ, ಮಾನಸಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರಗಳು.ಅಂಕಿ ಅಂಶಗಳ ಪರೀಕ್ಷೆಗಳಿಗಾಗಿ ಹೇಳಿಕೆಗಳ ಪ್ರತಿಕ್ರಿಯೆಗಳನ್ನು ಮೂರು ಮಟ್ಟದಲ್ಲಿ ಅಂದರೆ"ಹೆಚ್ಚು", "ಸರಾಸರಿ" ಮತ್ತು "ಕಡಿಮೆ" ಮಾರ್ಗದರ್ಶನದ ಅವಶ್ಯಕತೆ ಎಂದು ವರ್ಗೀಕರಣ ಮಾಡಲಾಗಿದೆ. ಸರಾಸರಿ ಅಂಕಗಳು 10 ಅಂಕಗಳಿಗಿಂತ ಕಡಿಮೆ ಇದ್ದರೆ 'ಕಡಿಮೆ' ಮಟ್ಟದ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದು, ಅಂಕಗಳು 11 ರಿಂದ 22 ರ ನಡುವೆ ಇದ್ದರೆ 'ಸರಾಸರಿ' ಮಟ್ಟದ ಮಾರ್ಗದರ್ಶನದ ಅವಶ್ಯಕತೆ ಇದೆ ಎಂದು ಹಾಗೂ ಅಂಕಗಳು 23 ಕ್ಕಿಂತ ಹೆಚ್ಚು ಇದ್ದರೆ' ಹೆಚ್ಚಿನ' ಮಟ್ಟದಲ್ಲಿ ಮಾರ್ಗದರ್ಶನದ ಅವಶ್ಯತೆ ಇದೆ ಎಂದು ತೀರ್ಮಾನಿಸಲಾಗಿದೆ.ಸಂಗ್ರಹಿಸಿದ ಮಾಹಿತಿಯನ್ನುಶೇಕಡಾವಾರುಹಾಗೂಕೈ ಸ್ಕ್ವೇರ್ ಪರೀಕ್ಷೆಗೆ ಒಳಪಡಿಸಲಾಯಿತು.ಅಂಕಿ ಅಂಶಗಳ ಪರೀಕ್ಷೆಗಳಿಗೆ ಒಳಪಡಿಸಿದವಿವರಗಳ ಫಲಿತಾಂಶಗಳನ್ನುಈಕೆಳಗೆನೀಡಲಾಗಿದೆ.

ಕೋಷ್ಟಕ 1 : ಅಧ್ಯಯನದಲ್ಲಿ ಪಾಲ್ಗೊಂಡವರ ಮೂಲ ಮಾಹಿತಿಯ ವಿವರ.

ವಿವರಗಳು	ವರ್ಗ	ಸಂಖ್ಯೆ	ಶೇಕಡಾವಾರು
ಜನನದ ಕ್ರಮಾಂಕ	ಮೊದಲನೆಯ	42	35
	ಎರಡನೆಯ	62	52
	ಮೂರನೆಯ	16	13
ಒಡಹುಟ್ಟಿದವರ ಸಂಖ್ಯೆ	ಇಲ್ಲ	9	7
	ಒಂದು	41	34
	ಎರಡು	45	38
	ಮೂರು	25	21
ಕುಟುಂಬದ ಮಾದರಿ	ವಿಭಕ್ತ	81	67
	ಅವಿಭಕ್ತ/ಕೂಡು ಕುಟುಂಬ	39	33

ಕುಟುಂಬದಲ್ಲಿ ವಾಸಿಸುವಸದಸ್ಯರ ಸಂಖ್ಯೆ	3–4	56	47
	5–6	48	40
	7 ಕ್ಕಿಂತ ಅಧಿಕ	16	13
ಕುಟುಂಬದ ಮಾಸಿಕ ಆದಾಯ (ರೂಪಾಯಿಗಳಲ್ಲಿ)	< ರೂ.10,000	45	37
	ರೂ.10,001–19,000	66	55
	> ರೂ.20,000	9	8

ಅಧ್ಯಯನದಲ್ಲಿ ಪಾಲ್ಗೊಂಡವರ ಮೂಲ ಮಾಹಿತಿಯನ್ನು ಕೋಷ್ಟಕ 1ರಲ್ಲಿ ನೀಡಲಾಗಿದೆ.ಅಧ್ಯಯನದಲ್ಲಿ ಪಾಲ್ಗೊಂಡ ತಾರುಣ್ಯದವರು 14 ರಿಂದ 15 ವರ್ಷವಯಸ್ಸಿನವರಾಗಿರುತ್ತಾರೆ.ಜನನದ ಕ್ರಮಾಂಕಕ್ಕೆ ಸಂಬಂಧಿಸಿದಂತೆ, ಸುಮಾರು ಶೇಕಡಾ 52 ರಷ್ಟು ತಾರುಣ್ಯದವರು ಎರಡನೆಯ ಜನನದ ಕ್ರಮಾಂಕಕ್ಕೆ ಸೇರಿದ್ದು, ಶೇಕಡಾ 35 ರಷ್ಟು ಮೊದಲನೆಯ ಜನನದ ಕ್ರಮಾಂಕಕ್ಕೆ ಸೇರಿದವರಾಗಿದ್ದಾರೆ.ಇನ್ನುಳಿದ ಕೇವಲ ಶೇಕಡಾ 13 ರಷ್ಟು ತಾರುಣ್ಯದವರು ಮೂರನೆಯ ಜನನದ ಕ್ರಮಾಂಕಕ್ಕೆ ಸೇರಿದವರಾಗಿದ್ದಾರೆ.ಒಡಹುಟ್ಟಿದವರ ಸಂಖ್ಯೆಗೆ ಸಂಬಂಧಿಸಿದಂತೆಸುಮಾರು ಶೇಕಡಾ 38ರಷ್ಟು ತಾರುಣ್ಯದವರಿಗೆ ಇಬ್ಬರು ಒಡಹುಟ್ಟಿದವರಿದ್ದು, ಶೇಕಡಾ 34 ರಷ್ಟು ತಾರುಣ್ಯದವರಿಗೆ ಒಬ್ಬರೇ ಒಡಹುಟ್ಟಿದವರಿದ್ದಾರೆ.ಶೇಕಡಾ 21 ರಷ್ಟು ತಾರುಣ್ಯದವರಿಗೆ ಮೂರು ಮಂದಿ ಒಡಹುಟ್ಟಿದವರಿದ್ದು, ಇನ್ನುಳಿದ ಕೇವಲ ಶೇಕಡಾ 7 ರಷ್ಟು ತಾರುಣ್ಯದವರ ಕುಟುಂಬದಲ್ಲಿ ಒಂದೇ ಮಗುವಾಗಿದ್ದಾರೆ.ಶೇಕಡಾ 67 ರಷ್ಟು ತಾರುಣ್ಯದವರು ವಿಭಕ್ತ ಕುಟುಂಬಕ್ಕೆ ಸೇರಿದವರಾಗಿದ್ದು, ಶೇಕಡಾ 33 ರಷ್ಟುಮಾತ್ರ ಅವಿಭಕ್ತ/ಕೂಡು ಕುಟುಂಬಕ್ಕೆ ಸೇರಿದವರಾಗಿದ್ದಾರೆ.ಶೇಕಡಾ 47 ರಷ್ಟು ತಾರುಣ್ಯದವರ ಕುಟುಂಬದಲ್ಲಿ 3 ರಿಂದ 4 ಸದಸ್ಯರಿದ್ದಾರೆ ಮತ್ತು ಶೇಕಡಾ 40 ರಷ್ಟು ತಾರುಣ್ಯದವರ ಕುಟುಂಬದಲ್ಲಿ 5 ರಿಂದ 6 ಜನ ಸದಸ್ಯರಿದ್ದಾರೆ.ಕೇವಲ ಶೇಕಡಾ 13 ರಷ್ಟು ರವರ ಕುಟುಂಬದಲ್ಲಿ 7 ಜನಕ್ಕಿಂತ ಹೆಚ್ಚಿನ ಸದಸ್ಯರಿದ್ದರೆ.ಗ್ರಾಮೀಣ ಭಾಗದ ಕುಟುಂಬದವರಮಾಸಿಕ ಆದಾಯಕ್ಕೆಸಂಬಂಧಿಸಿದಂತೆ ಶೇಕಡಾ 55ರಷ್ಟು ಕುಟುಂಬದವರು ರೂ.10,000–19,000 ದ ವರೆಗೆಮಾಸಿಕ ಆದಾಯವನ್ನು ಹೊಂದಿದ್ದುಶೇಕಡಾ 37 ರಷ್ಟು ಕುಟುಂಬದವರು ರೂ.10,000 ಕ್ಕಿಂತ ಕಡಿಮೆ ಮಾಸಿಕ ಆದಾಯವನ್ನು ಹೊಂದಿದ್ದಾರೆ.ಕೇವಲ 7.5 ರಷ್ಟು ಕುಟುಂಬದವರು ರೂ.20,000 ಕ್ಕಿಂತ ಅಧಿಕ ಮಾಸಿಕ ಆದಾಯವನ್ನು ಹೊಂದಿದ್ದಾರೆ.

ಕೋಷ್ಟಕ 2: ಪೋಷಕರ ಶೈಕ್ಷಣಿಕ ವಿವರ

ಕ್ರ. ಸಂ.	ಶೈಕ್ಷಣಿಕ ವಿವರ	ತಂದೆ		ತಾಯಿ	
		ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು
1	ಅನಕ್ಷರಸ್ಥರು	19	16	26	22
2	ಪ್ರಾಥಮಿಕ ಶಿಕ್ಷಣ	40	33	33	27
3	ಮಾಧ್ಯಮಿಕ ಶಿಕ್ಷಣ	12	10	21	17
4	ಪ್ರೌಢ ಶಿಕ್ಷಣ	38	32	26	22
5	ಪಿಯುಸಿ	11	9	14	12

ಪೋಷಕರ ಶೈಕ್ಷಣಿಕ ವಿವರವನ್ನು ಕೋಷ್ಟಕ 2 ರಲ್ಲಿ ನೀಡಲಾಗಿದೆ.ಇದರಿಂದ ತಿಳಿದು ಬಂದಿರುವ ಮಾಹಿತಿ ಏನೆಂದರೆ ಸುಮಾರು ಶೇಕಡಾ 33 ರಷ್ಟು ತಂದೆಯಂದಿರು ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪಡೆದವರಾಗಿದ್ದು, ಶೇಕಡಾ 32 ರಷ್ಟು ತಂದೆಯಂದಿರು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಹಾಗೆಯೆ ಶೇಕಡಾ 10 ರಷ್ಟು ತಂದೆಯಂದಿರು ಮಾಧ್ಯಮಿಕ ಶಿಕ್ಷಣ ಪಡೆದವರಾಗಿದ್ದು, ಶೇಕಡಾ 9 ರಷ್ಟು ತಂದೆಯಂದಿರು ಪಿಯುಸಿ ಶಿಕ್ಷಣವನ್ನು ಪಡೆದಿದ್ದಾರೆ ಕೇವಲ ಶೇಕಡಾ 16 ರಷ್ಟು ತಂದೆಯಂದಿರು ಅನಕ್ಷರಸ್ಥರಾಗಿರುತ್ತಾರೆ. ಅದೇ ರೀತಿ ತಾಯಂದಿರಲ್ಲಿ ಸುಮಾರು ಶೇಕಡಾ22 ರಷ್ಟು ಪ್ರೌಢ ಶಿಕ್ಷಣ ಪಡೆದವರಾಗಿದ್ದು ಹಾಗೂ ಶೇಕಡಾ 17ರಷ್ಟು ಮಂದಿ ಮಾಧ್ಯಮಿಕ ಶಿಕ್ಷಣ ಪಡೆದವರಾಗಿರುತ್ತಾರೆ.ಹಾಗೆಯೆ ಅದರೊಂದಿಗೆ ಶೇಕಡಾ 12 ರಷ್ಟು ತಾಯಂದಿರು ಪಿಯುಸಿ ಶಿಕ್ಷಣವನ್ನು ಪಡೆದವರಾಗಿದ್ದು, ಶೇಕಡಾ 22 ರಷ್ಟು ತಾಯಂದಿರು ಅನಕ್ಷರಸ್ಥರಾಗಿದ್ದಾರೆ.

ಕೋಷ್ಟಕ 3; ಪೋಷಕರ ಉದ್ಯೋಗದ ವಿವರ

ಕ್ರ. ಸಂ.	ಉದ್ಯೋಗದ ವಿವರ	ತಂದೆ		ತಾಯಿ	
		ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು
1	ನಿರುದ್ಯೋಗಿ/ಗೃಹ ಕೆಲಸ	0	0	36	30
2	ಸ್ವಯಂ ಉದ್ಯೋಗ	42	35	11	9
3	ಸರ್ಕಾರಿ ವೃತ್ತಿ	6	5	2	2
4	ಖಾಸಗಿ ವೃತ್ತಿ	34	28	32	27
5	ಕೃಷಿ ಸಂಬಂಧಿತ ವೃತ್ತಿ	38	32	39	32

ಪೋಷಕರ ಉದ್ಯೋಗದ ವಿವರವನ್ನು ಕೋಷ್ಟಕ 3 ರಲ್ಲಿ ನೀಡಲಾಗಿದೆ. ಇದರಿಂದ ತಿಳಿದು ಬಂದಿರುವ ಮಾಹಿತಿ ಏನೆಂದರೆ ಸುಮಾರು ಶೇಕಡಾ 35 ರಷ್ಟು ತಂದೆಯಂದಿರು ಸ್ವಯಂಉದ್ಯೋಗವನ್ನು ಹೊಂದಿದ್ದು ಹಾಗೂ ಶೇಕಡಾ 32 ರಷ್ಟು ತಂದೆಯರು ಕೃಷಿ ಸಂಬಂಧಿತ ವೃತ್ತಿಯನ್ನು ಹೊಂದಿದವರಾಗಿದ್ದಾರೆ. ಹಾಗೆಯೇ ಶೇಕಡಾ 28 ರಷ್ಟು ತಂದೆಯಂದಿರು ಖಾಸಗಿ ವೃತ್ತಿಯನ್ನು ಹೊಂದಿದವರಾಗಿದ್ದಾರೆ. ಕೇವಲ 5 ರಷ್ಟು ತಂದೆಯಂದಿರು ಸರ್ಕಾರಿ ವೃತ್ತಿಯನ್ನು ಹೊಂದಿದವರಾಗಿದ್ದಾರೆ.ತಾಯಂದಿರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸುಮಾರು ಶೇಕಡಾ 30 ರಷ್ಟು ತಾಯಂದಿರು ಗೃಹಿಣಿಯರಾಗಿದ್ದು, ಶೇಕಡಾ 27 ರಷ್ಟು ಖಾಸಗಿ ಉದ್ಯೋಗವನ್ನು ಹೊಂದಿದವರಾಗಿದ್ದಾರೆ. ಇದರಂತೆ ಶೇಕಡಾ 9 ರಷ್ಟು ತಾಯಂದಿರು ಸ್ವಯಂ ಉದ್ಯೋಗಿಗಳಾಗಿದ್ದು, ಶೇಕಡಾ 2 ರಷ್ಟು ಸರ್ಕಾರಿ ವೃತ್ತಿಯನ್ನು ಹೊಂದಿರುತ್ತಾರೆ.ಕೇವಲ ಶೇಕಡಾ 32 ರಷ್ಟು ತಾಯಂದಿರು ಕೃಷಿ ಸಂಬಂಧಿತ ವೃತ್ತಿಯನ್ನು ಹೊಂದಿರುತ್ತಾರೆ.

ಕೋಷ್ಟಕ 4: ಗ್ರಾಮೀಣ ಭಾಗದ ತಾರುಣ್ಯದವರ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಮಾರ್ಗದರ್ಶನದ ಅವಶ್ಯಕತೆಗಳ ವಿವರ

ಮಾರ್ಗದರ್ಶನದ ಮಟ್ಟ	ದೈಹಿಕಮಾರ್ಗದರ್ಶನ		ಸಾಮಾಜಿಕಮಾರ್ಗದರ್ಶನ		ಮಾನಸಿಕಮಾರ್ಗದರ್ಶನ	
	ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು
ಕಡಿಮೆ	0	0	1	1	0	0
ಸಾಮಾನ್ಯ	43	36	45	37	22	18
ಹೆಚ್ಚಿನ	77	64	74	62	98	82

ಗ್ರಾಮೀಣ ಭಾಗದ ತಾರುಣ್ಯದವರ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಮಾರ್ಗದರ್ಶನದ ಅವಶ್ಯಕತೆಗಳ ವಿವರಗಳನ್ನುಕೋಷ್ಟಕ 4 ರಲ್ಲಿ ನೀಡಲಾಗಿದೆ.ದೈಹಿಕ ಮಾರ್ಗದರ್ಶದ ಅವಶ್ಯಕತೆಗಳಲ್ಲಿ ಸುಮಾರು ಶೇಕಡಾ 64 ರಷ್ಟು ತಾರುಣ್ಯದವರಿಗೆ ಹೆಚ್ಚಿನ ಮಟ್ಟದಲ್ಲಿ ದೈಹಿಕ ಮಾರ್ಗದರ್ಶದ ಅವಶ್ಯಕತೆ ಹಾಗೂ ಶೇಕಡಾ 36 ರಷ್ಟು ತಾರುಣ್ಯದವರಿಗೆ ಸಾಮಾನ್ಯ ಮಟ್ಟದಲ್ಲಿ ದೈಹಿಕ ಮಾರ್ಗದರ್ಶದ ಅವಶ್ಯಕತೆ ಇರುವುದು ಕಂಡು ಬಂದಿದೆ.ಸಾಮಾಜಿಕ ಮಾರ್ಗದರ್ಶನದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ, ಸುಮಾರು ಶೇಕಡಾ 62 ರಷ್ಟು ತಾರುಣ್ಯದವರಿಗೆ ಹೆಚ್ಚಿನ ಮಟ್ಟದಲ್ಲಿ ಸಾಮಾಜಿಕ ಮಾರ್ಗದರ್ಶನದ ಅವಶ್ಯಕತೆ ಹಾಗೂ ಶೇಕಡಾ 37 ರಷ್ಟು ತಾರುಣ್ಯದವರಿಗೆ ಸಾಮಾನ್ಯ ಮಟ್ಟದಲ್ಲಿ ಸಾಮಾಜಿಕ ಮಾರ್ಗದರ್ಶದ ಅವಶ್ಯಕತೆ ಇರುವುದು ಕಂಡುಬಂದಿದೆ.ಮಾನಸಿಕ ಮಾರ್ಗದರ್ಶನದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ, ಸುಮಾರು ಶೇಕಡಾ 82 ರಷ್ಟು ತಾರುಣ್ಯದವರಿಗೆ ಹೆಚ್ಚಿನ ಮಟ್ಟದಲ್ಲಿ ಮಾನಸಿಕ ಮಾರ್ಗದರ್ಶನದ ಅವಶ್ಯಕತೆ ಹಾಗೂ ಶೇಕಡಾ 18 ರಷ್ಟು ತಾರುಣ್ಯದವರಿಗೆ ಸಾಮಾನ್ಯ ಮಟ್ಟದಲ್ಲಿ ಮಾನಸಿಕ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡುಬಂದಿದೆ.

ಕೋಷ್ಟಕ 5: ಗ್ರಾಮೀಣ ಭಾಗದ ತಾರುಣ್ಯದವರ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆಗಳ ವಿವರ.

ಮಾರ್ಗದರ್ಶನದ ಮಟ್ಟ	ಶೈಕ್ಷಣಿಕಮಾರ್ಗದರ್ಶನ		ಔದ್ಯೋಗಿಕಮಾರ್ಗದರ್ಶನ	
	ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು
ಕಡಿಮೆ	3	2	3	3

ಸಾಮಾನ್ಯ	25	21	46	38
ಹೆಚ್ಚಿನ	92	77	71	59

ಗ್ರಾಮೀಣ ಭಾಗದ ತಾರುಣ್ಯದವರ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆಗಳ ವಿವರಗಳನ್ನುಕೋಷ್ಟಕ 5 ರಲ್ಲಿ ನೀಡಲಾಗಿದೆ.ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆಗಳಲ್ಲಿ ಸುಮಾರು ಶೇಕಡಾ 77 ರಷ್ಟು ತಾರುಣ್ಯದವರಿಗೆ ಹೆಚ್ಚಿನ ಮಟ್ಟದಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ ಹಾಗೂ ಶೇಕಡಾ 21 ರಷ್ಟು ತಾರುಣ್ಯದವರಿಗೆ ಸಾಮಾನ್ಯ ಮಟ್ಟದಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡುಬಂದಿದೆ.ಇನ್ನುಳಿದ ಕೇವಲ ಶೇಕಡಾ 2 ರಷ್ಟು ತಾರುಣ್ಯದವರಲ್ಲಿ ಕಡಿಮೆ ಮಟ್ಟದಲ್ಲಿ ಶೈಕ್ಷಣಿಕ ಮಾರ್ಗದರ್ಶನದ ಅಗತ್ಯತೆಗಳು ಇರುವುದು ಕಂಡು ಬಂದಿದೆ.ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ, ಸುಮಾರು ಶೇಕಡಾ 59 ರಷ್ಟು ತಾರುಣ್ಯದವರಿಗೆ ಹೆಚ್ಚಿನ ಮಟ್ಟದಲ್ಲಿ ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆ ಹಾಗೂ ಶೇಕಡಾ 38 ರಷ್ಟು ತಾರುಣ್ಯದವರಿಗೆ ಸಾಮಾನ್ಯ ಮಟ್ಟದಲ್ಲಿ ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡು ಬಂದಿದೆ.ಇನ್ನುಳಿದ ಕೇವಲ ಶೇಕಡಾ 3 ರಷ್ಟು ತಾರುಣ್ಯದವರಲ್ಲಿ ಕಡಿಮೆ ಮಟ್ಟದಲ್ಲಿ ಔದ್ಯೋಗಿಕ ಮಾರ್ಗದರ್ಶನದ ಅವಶ್ಯಕತೆಗಳು ಇರುವುದು ಕಂಡುಬಂದಿದೆ.

ಕೋಷ್ಟಕ6 :ಗ್ರಾಮೀಣ ಭಾಗದ ತರುಣ ತರುಣಿಯರ ಒಟ್ಟುಮಾರ್ಗದರ್ಶನದ ಅವಶ್ಯಕತೆಗಳ ವಿವರ.

ಗ್ರಾಮೀಣ	ಮಾರ್ಗದರ್ಶನದ ಮಟ್ಟ	ತರುಣ		ತರುಣಿ		ಕೈ ಸ್ಕೇರ್ ಪರೀಕ್ಷೆ
		ಸಂಖ್ಯೆ	ಶೇಕಡಾವಾರು	ಸಂಖ್ಯೆ	ಶೇಕಡಾವಾರು	
	ಕಡಿಮೆ	1	2	0	0	4.14^{NS}
	ಸಾಮಾನ್ಯ	3	5	0	0	
	ಹೆಚ್ಚಿನ	56	93	60	100	

NS: Non-Significant, $\chi 2$ (0.05,2df) = 5.991

ಗ್ರಾಮೀಣ ಭಾಗದ ತರುಣ ತರುಣಿಯರ ಮಾರ್ಗದರ್ಶನದ ಅಗತ್ಯತೆಗಳನ್ನು ಕೋಷ್ಟಕ 6 ರಲ್ಲಿ ನೀಡಲಾಗಿದೆ. ಅಂಕಿ ಅಂಶಗಳ ಪ್ರಕಾರ ಶೇಕಡಾ 93 ರಷ್ಟು ತರುಣರಿಗೆ ಹೆಚ್ಚಿನ ಮಟ್ಟದ ಮಾರ್ಗದರ್ಶನದ ಅವಶ್ಯಕತೆ ಮತ್ತು ಕೇವಲ ಶೇಕಡಾ 5 ರಷ್ಟು ತರುಣರಿಗೆ ಸಾಮಾನ್ಯ ಮಟ್ಟದಲ್ಲಿ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡು ಬಂದಿದೆ.ಕೇವಲ 2 ರಷ್ಟು ಮಾತ್ರ ತರುಣರಲ್ಲಿ ಕಡಿಮೆ ಮಟ್ಟದಲ್ಲಿ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡು ಬಂದಿದೆ. ಅದೇ ರೀತಿ ಗ್ರಾಮೀಣ ಭಾಗದ ಎಲ್ಲಾ ತರುಣಿಯರಲ್ಲೂ (ಶೇಕಡಾ 100) ಎಲ್ಲಾ ಕ್ಷೇತ್ರಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡು ಬಂದಿದೆ. ಕೈ ಸ್ಕೇರ್ ಪರೀಕ್ಷೆಯ ಮೂಲಕ ದೃಢ ಪಟ್ಟಿರುವ ಮಾಹಿತಿ ಏನೆಂದರೆ ತರುಣ ಮತ್ತು ತರುಣಿಯರಲ್ಲಿ ಅವರ ಮಾರ್ಗದರ್ಶನದ ಅವಶ್ಯಕತೆಗಳ ನಡುವೆ ಯಾವುದೇ ರೀತಿಯ ಗಮನಾರ್ಹವಾದ ವ್ಯತ್ಯಾಸವಿರುವುದಿಲ್ಲ ಗ್ರಾಮೀಣ ಭಾಗದ ತರುಣ ತರುಣಿಯರಿಬ್ಬರಲ್ಲೂ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿನ ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡು ಬಂದಿದೆ. ಇದರಿಂದ ತಿಳಿದು ಬರುವ ಅಂಶವೇನೆಂದರೆ ತಾರುಣ್ಯಾವಧಿಯವರ ಮಾರ್ಗದರ್ಶನದ ಅವಶ್ಯಕತೆಗಳಲ್ಲಿ ಯಾವುದೇ ಲಿಂಗ ಭೇಧ ಕಂಡು ಬಂದಿಲ್ಲ. ಗ್ರಾಮೀಣ ಭಾಗದ ತರುಣ ಮತ್ತು ತರುಣಿಯರಿಬ್ಬರಿಗೂ ಹೆಚ್ಚಿನ ಮಾರ್ಗದರ್ಶನದ ಅವಶ್ಯಕತೆ ಇದೆ.ಈ ಫಲಿತಾಂಶಗಳು ಅಗ್ನಿಹೋತ್ರಿ (2012) ರವರ ಸಂಶೋಧನಾ ಫಲಿತಾಂಶಗಳೊಂದಿಗೆ ಸಾಮ್ಯತೆ ಹೊಂದಿವೆ. ಅಗ್ನಿಹೋತ್ರಿ (2012) ಇವರ ಪ್ರಕಾರ ತಾರುಣ್ಯಾವಧಿಯ ಮಾರ್ಗದರ್ಶನದ ಅವಶ್ಯಕತೆಗಳಲ್ಲಿ ಯಾವುದೇ ರೀತಿಯ ಲಿಂಗಭೇಧ ಕಂಡುಬರುವುದಿಲ್ಲ.

ಸಾರಾಂಶ ಮತ್ತು ಉಪಸಂಹಾರ: ಈ ಅಧ್ಯಯನದ ಫಲಿತಾಂಶದಿಂದ ತಿಳಿದು ಬಂದಿರುವ ಮಾಹಿತಿ ಏನೆಂದರೆ ಗ್ರಾಮೀಣ ಭಾಗದ ತಾರುಣ್ಯದವರಿಗೆ ದೈಹಿಕ, ಸಾಮಾಜಿಕ, ಮಾನಸಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಅತೀ ಹೆಚ್ಚಿನ ಮಟ್ಟದಲ್ಲಿ ಮಾರ್ಗದರ್ಶನದ ಅವಶ್ಯಕತೆ ಇದೆ.ತರುಣ ತರುಣಿಯರಿಬ್ಬರಲ್ಲೂ ಒಟ್ಟಾರೆ ಮಾರ್ಗದರ್ಶನದ ಹೆಚ್ಚಿನ ಅವಶ್ಯಕತೆ ಇರುವುದು ಕಂಡುಬಂದಿದೆ. ದೈಹಿಕ, ಸಾಮಾಜಿಕ, ಮಾನಸಿಕ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ತರುಣ ತರುಣಿಯರ ನಡುವೆ ಯಾವುದೇ ಗಮನಾರ್ಹವಾದ ವ್ಯತ್ಯಾಸ ಕಂಡುಬಂದಿಲ್ಲ.ತಾರುಣ್ಯಾವಸ್ಥೆಯಲ್ಲಿ ತರುಣ ತರುಣಿಯರಿಗೆ ಹಲವು ವಿಧದ ಮಾರ್ಗದರ್ಶನಗಳ ಅಗತ್ಯತೆ ಹೆಚ್ಚಾಗಿ ಕಂಡುಬರುತ್ತದೆ.ಬೆಳವಣಿಗೆ ಮತ್ತು ವಿಕಾಸದ ಎಲ್ಲಾ ಆಯಾಮಗಳಲ್ಲಿ ಕಂಡುಬರುವ ಮಹತ್ವವಾದ ಬದಲಾವಣೆಗಳು ಅವರ ವರ್ತನೆಗಳ ಮೇಲೆ ಮತ್ತು ಶೈಕ್ಷಣಿಕ ಸಾಧನೆಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತವೆ. ಈ ಹಂತದಲ್ಲಿ ಆಗುವ ದೇಹದ ಬದಲಾವಣೆಗಳು, ಶೈಕ್ಷಣಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಉಂಟಾಗುವ ಏರಿಳಿತಗಳನ್ನು ಎದುರಿಸಲು ತಾರುಣ್ಯದವರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ. ತಾರುಣ್ಯಾವಧಿಯ ಹಂತವನ್ನು ಬಾಲ್ಯಾವಧಿ ಮತ್ತು ವಯಸ್ಕಾವಧಿಯ ನಡುವಿನ ಕ್ಲಿಷ್ಟಕರ ಸೇತುವೆ ಎನ್ನಲಾಗುತ್ತದೆ.ಈ ತಾರುಣ್ಯಾವಧಿಯ ಕಷ್ಟಕರ ಹಂತವನ್ನು ಸುಸೂತ್ರವಾಗಿ ದಾಟಿ ಹೊರಬರಲು ಅವರಿಗೆ ಮಾರ್ಗದರ್ಶನದ ಅವಶ್ಯಕತೆ ಹೆಚ್ಚಾಗಿರುತ್ತದೆ.

ಆಕರಗಳು:

1. ಅನಿಲ್ ಕುಮಾರ್ ಅಗ್ನಿಹೋತ್ರಿ., (2012), Guidance Needs among Senior Secondary School Students in relation to sex and stream, Indian Streams Research Journal. Volume 2, Issue-10

2. ಕೆನೆಥ್ ರಾಬರ್ಟ್ಸ್., (2007), The social conditions, consequences and limitations of careers guidance, British Journal of Guidance & Counselling , Volume 5, 1977 - Issue

3. ಕೌರ್ ಎಸ್., (1992), Evaluation of Guidance Services in High/Higher Secondary Schools of Punjab and Chandigarh. PhD (Education), Punjab University, Fifth Survey of Educational Research, Volume 2 (1)

4. ಗ್ರೇವಾಲ್ ಜೆ.ಎಸ್., (1971), Guidance Need Inventory Manual, National Psychological Corporation, 4/230, Kacheri Ghat, Agra

5. ಡೈನೆ ಇ ಪಪಾಲಿಯ, ಸಾಲಿ ವೆಂಡಕೊಸ್ ಓಲ್ಡ್ಸ್ ಮತ್ತು ರುತ ಡಸ್ಕಿನ್‌ಫೆಲ್ಡ್‌ಮ್ಯಾನ್ (2004), "Human Development" Ninth Edition, Tata McGraw Hill Education Private Limited, New Delhi.

6. ದಶ್ ಬಿ.ಎನ್., (2007), Career guidance and counselling, Vinod Pustak Mandir, Agra-2

7. ದೀಪ್ತಿ ಶರ್ಮಾ ಮತ್ತು ಮನ್‌ಮಿಂದರ್ ಕೌರ್, (2012), Guidance Needs Of Adolescents In Relation To Gender Locale And Type Of School. Indian Streams Research Journal, Volume 2, Issue- 9

8. ನೆಹರು ಆರ್.ಎಸ್.ಎಸ್., (2013), Guidance and Counselling, A.P.H. Publishing corporation 4435-36/7, Ansari Road, Darya Ganj, New Delhi-110002

9. ಮೊನೀಕಾ ಶರ್ಮಾ., (2014), Guidance needs of secondary school students in relation to academic anxiety, My research journals, Volume 3, Issue 2

10. ರಮೇಶ್ ಚತುರ್ವೇದಿ., (2008), Career Guidance and Counselling, Crescent Publishing Corporation 4831/24, Prahlad Street, Ansari Road, Darya Ganj, New Delhi-110002

11. ಸುರೇಶ್ ಪ್ರಭು., (2015), A Study on Guidance Needs among Higher Secondary Students, Journal Of Humanities And Social Science (IOSR-JHSS) Volume 20, Issue 7, PP 14-17

12. ಸಿಜಾ ಕೆ.ಆರ್. (2015), Identification of Guidance Needs among Higher Secondary School Students of Kerala, Minor Research Project Submitted to UGC (pdf), (www.snmtrainingcollege.org)

13. ಡೈನೆ ಇ ಪಪಾಲಿಯ, ಸಾಲಿ ವೆಂಡಕೊಸ್ ಓಲ್ಡ್ಸ್ ಮತ್ತು ರುತ ಡಸ್ಕಿನ ಪೆಲ್ಡ್‌ಮ್ಯಾನ್ (2004), "Human Development" Ninth Edition, Tata McGraw Hill Education Private Limited, New Delhi.

14. ಗ್ರೇವಾಲ್ ಜೆ.ಎಸ್., (1971), Guidance Need Inventory Manual, National Psychological Corporation, 4/230, Kacheri Ghat, Agra

15. ಕೌರ್ ಎಸ್., (1992), Evaluation of Guidance Services in High/Higher Secondary Schools of Punjab and Chandigarh. PhD (Education), Punjab University, Fifth Survey of Educational Research, Volume 2 (1)

16. ಕೆನೆಥ್ ರಾಬರ್ಟ್ಸ್., (2007), The social conditions, consequences and limitations of careers guidance, British Journal of Guidance & Counselling , Volume 5, 1977 - Issue

17. Monika Sharma., (2014), Guidance needs of secondary school students in relation to academic anxiety, My research journals, Volume 3, Issue 2

18. Nehru, R.S.S ., (2013), Guidance and Counselling, A.P.H. Publishing corporation 4435-36/7, Ansari Road, Darya Ganj, New Delhi-110002

19. Ramesh Chaturvedi., (2008), Career Guidance and Counselling, Crescent Publishing Corporation 4831/24, Prahlad Street, Ansari Road, Darya Ganj, New Delhi-110002

20. Seeja. K. R. (2015), Identification of Guidance Needs among Higher Secondary School Students of Kerala, Minor Research Project Submitted to UGC (pdf), (www.snmtrainingcollege.org)

21. Suresh Prabu., (2015), A Study on Guidance Needs among Higher Secondary Students, Journal Of Humanities And Social Science (IOSR-JHSS) Volume 20, Issue 7, PP 14-17

ಪತಂಜಲೀಯಮ್

ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು

PATANJALEEYAM

Psychospiritual and Philosophical Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಭಾವನಾತ್ಮಕ ಅಸಮತೋಲನ ನಿರ್ವಹಣೆಯಲ್ಲಿ ನಿತ್ಯಯೋಗದ ಪರಿಣಾಮ	ಡಾ.ಶೋಭಾ.ಅ.ಹೂಲಿಕಟ್ಟಿ	30 – 37
2.	ಮಾನವನ ಐಚ್ಛಿಕ ವಿಕಾಸದ ಹಾದಿಯಲ್ಲಿ ವ್ಯಕ್ತೀಕರಣ ಎಂಬುವುದರ ಪಾತ್ರ	ಚಂದ್ರಮೌಳಿ ಎಂ.ಎಸ್	37 – 41
3.	ಐಚ್ಛಿಕ ವಿಕಾಸದ ಹಾದಿಯಲ್ಲಿ ವಿವಿಧ ಕಾಲ ಆಯಾಮದಲ್ಲಿನ ಸಾಧಕನ ಗ್ರಹಿಕಾ ಪ್ರಕ್ರಿಯೆಗಳು	ಚಂದ್ರಮೌಳಿ ಎಂ.ಎಸ್	41 – 46
4.	'ಪ್ರತ್ಯಾಹಾರ' ಒಂದು ವಿಶ್ಲೇಷಣೆ	ಡಾ.ಕೆ.ವಿ.ಜುಕ್ತಿಮಠ	46 – 49
5.	ಬಸವಣ್ಣನವರ ವಚನಗಳಲ್ಲಿ ಸದಾಚಾರ ಮತ್ತು ವೈಜ್ಞಾನಿಕತೆ	ಡಾ. ಡೈಸಿ ಜಾಸ್ಮಿನ್ ಜಾರ್ಜ್	50 – 52
6.	ಪಂಚಕೋಶ ಮತ್ತು ಮಾನ ಕಲ್ಯಾಣ	ಅಕ್ಷತ ಜಿ. ಕುಲಕರ್ಣಿ ಡಾ. ಎಚ್. ಎಸ್. ಆಶೋಕ್	52 – 54
7.	ಮೊಕ್ಷದ ಮಾರ್ಗವಾಗಿ ಶವಸಂಸ್ಕಾರ ಪದ್ಧತಿಗಳು	ಶಿವನಾಗಯ್ಯ. ಎಂ. ಹಿರೇಮಠ	54 – 60

ಭಾವನಾತ್ಮಕ ಅಸಮತೋಲನ ನಿರ್ವಹಣೆಯಲ್ಲಿ ನಿತ್ಯಯೋಗದ ಪರಿಣಾಮ

ಡಾ.ಶೋಭಾ.ಅ.ಹೂಲಿಕಟ್ಟಿ.
ಯೋಗ ಚಿಕಿತ್ಸಕರು, ತಪೋವನ, ಧಾರವಾಡ. e-mail : sahulikatti@gmail.com

ಯೋಗವು ಒಂದು ಪ್ರಾಯೋಗಿಕವಾದ ಅಧ್ಯಾತ್ಮ ಶಾಸ್ತ್ರವಾಗಿದೆ. ಆಧುನಿಕ ವಿದ್ವಾಂಸರು ಯೋಗವು ಆಧ್ಯಾತ್ಮ ಸಾಧನೆಯ ಜೊತೆಗೇ ಆರೋಗ್ಯ ನಿರ್ವಹಣೆ ಹಾಗೂ ಯೋಗಕ್ಷೇಮದ ಅನುಭವವನ್ನು ನೀಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ತಮ್ಮ ಸಂಶೋಧನೆಗಳ ಮೂಲಕ ಸಾಧಿಸಿ ತೋರಿಸಿದ್ದಾರೆ. ಆದರೆ ಯೋಗದ ಈ ಪ್ರಯೋಜನಗಳು ಪುಸ್ತಕದ ಜ್ಞಾನ ಸಂಪಾದನೆಯಿಂದ ಮಾತ್ರ ಪ್ರಾಪ್ತಿಯಾಗಲಾರವು. ಬದಲಾಗಿ ಯೋಗದ ನಿತ್ಯ ಪ್ರಾಯೋಗಿಕ ಅಭ್ಯಾಸ ಮತ್ತು ಅನುಷ್ಠಾನದ ಅಗತ್ಯವಿದೆ. ಹೀಗೆ ದಿನನಿತ್ಯ ಯೋಗಾಭ್ಯಾಸ ಮಾಡುತ್ತಿರುವ 68 ಜನ ಸ್ನಾತಕೋತ್ತರ ವಿದ್ಯಾರ್ಥಿನಿಯರ ಭಾವನಾತ್ಮಕ ಅಸಮತೋಲನದಲ್ಲಾದ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದ್ದು ಪ್ರಸ್ತುತ ಪ್ರಬಂಧದಲ್ಲಿ ಭಾವನಾತ್ಮಕ ಅಸಮತೋಲನದ ಸ್ವರೂಪ ಹಾಗೂ ಅದರ ಪರಿಣಾಮಗಳನ್ನು ಕುರಿತು ಕೂಲಂಕುಷವಾಗಿ ವಿಶ್ಲೇಷಿಸಲಾಗಿದೆ. ಅದರಂತೆ ಯುವತಿಯರಲ್ಲಿ ಭಾವನಾತ್ಮಕ ಸಮತೋಲನ ಉಂಟುಮಾಡಿದ ಯೋಗಾಭ್ಯಾಸಗಳನ್ನು ಕುರಿತಾದ ವಿವರಣೆ ನೀಡಲಾಗಿದ್ದು ಒಟ್ಟಾರೆ ಯುವತಿಯರ ಭಾವನಾತ್ಮಕ ಸ್ಥಿತಿಯ ಮೇಲೆ ನಿತ್ಯಯೋಗಾಭ್ಯಾಸದ ಪರಿಣಾಮದ ಫಲಿತಾಂಶಗಳನ್ನು ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಮುಖ್ಯ ಪದಗಳು : ಭಾವನಾತ್ಮಕ ಅಸಮತೋಲನ, ಅಧ್ಯಾತ್ಮಶಾಸ್ತ್ರ, ಆರೋಗ್ಯ, ಯೋಗಕ್ಷೇಮ.

ಯೋಗವು ಮೂಲತಃ ಒಂದು ಆಧ್ಯಾತ್ಮ ವಿದ್ಯೆಯಾಗಿದೆ. ಪರಂಪರಾನುಗತವಾಗಿ ಹರಿದು ಬಂದಿರುವ ಯೋಗವು ಅತ್ಯಂತ ಸುವ್ಯವಸ್ಥಿತವಾಗಿ ಸೂತ್ರೀಕರಿಸಲ್ಪಟ್ಟಿರುವ ಒಂದು ಪ್ರಯೋಗಾತ್ಮಕ ವಿಜ್ಞಾನವೂ ಆಗಿದೆ. ಯೋಗವು ಆಧ್ಯಾತ್ಮ ಸಾಧನೆಯ ಜೊತೆಗೇ ಆರೋಗ್ಯ ನಿರ್ವಹಣೆ ಹಾಗೂ ಯೋಗಕ್ಷೇಮದ ಅನುಭವವನ್ನು ನೀಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಆಧುನಿಕ ವಿದ್ವಾಂಸರು ತಮ್ಮ ಸಂಶೋಧನೆಗಳ ಮೂಲಕ ಸಾಧಿಸಿ ತೋರಿಸಿದ್ದಾರೆ. ಆದರೆ ಯೋಗದ ಈ ಪ್ರಯೋಜನಗಳು ಪುಸ್ತಕದ ಜ್ಞಾನ ಸಂಪಾದನೆಯಿಂದ ಮಾತ್ರ ಪ್ರಾಪ್ತಿಯಾಗಲಾರವು. ನಿತ್ಯವೂ ಪ್ರಾಯೋಗಿಕವಾಗಿ ಯೋಗದ ಅಭ್ಯಾಸ ಮತ್ತು ಅನುಷ್ಠಾನ ಮಾಡುವ ಅಗತ್ಯವಿದೆ. ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ದಿನನಿತ್ಯ ಯೋಗಾಭ್ಯಾಸ ಮಾಡುತ್ತಿರುವ 58 ಜನ ಸ್ನಾತಕೋತ್ತರ ವಿದ್ಯಾರ್ಥಿನಿಯರ ಭಾವನಾತ್ಮಕ ಅಸಮತೋಲನದಲ್ಲಾದ ಬದಲಾವಣೆಗಳನ್ನು ಅಧ್ಯಯನ ಮಾಡಲಾಗಿದ್ದು, ಭಾವನಾತ್ಮಕ ಅಸಮತೋಲನದ ಸ್ವರೂಪ ಹಾಗೂ ಅದರ ಪರಿಣಾಮಗಳನ್ನು ಕುರಿತು ಅವಲೋಕನ ಮಾಡಲಾಗಿದೆ. ಅದರಂತೆ ವಿದ್ಯಾರ್ಥಿನಿಯರಲ್ಲಿ ಭಾವನಾತ್ಮಕ ಸಮತೋಲನ ಉಂಟುಮಾಡಿದ ಯೋಗಾಭ್ಯಾಸಗಳನ್ನು ಕುರಿತು ಕೂಲಂಕುಷವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಅಗತ್ಯ: ವ್ಯಕ್ತಿಯ ಶರೀರವು ಆರೋಗ್ಯವಂತವಾಗಿರಲು ದಿನನಿತ್ಯ ಉತ್ಪನ್ನವಾಗುವ ಮಲಗಳನ್ನು ನಿತ್ಯವೂ ಹೊರಹಾಕುವದು ಅಗತ್ಯವಾಗಿರುತ್ತದೆ. ಅದರಂತೆಯೇ ಮನಸ್ಸು ಆರೋಗ್ಯವಾಗಿರಲು ಬೇಡದ ವಿಚಾರಗಳು ಮತ್ತು ನಕಾರಾತ್ಮಕ ಭಾವನೆಗಳು ಇತ್ಯಾದಿ ಮಾನಸಿಕ ಕಶ್ಮಲಗಳನ್ನು ಹೊರಹಾಕುವ ಅಗತ್ಯವಿದೆ. ಅಂದರೆ ವ್ಯಕ್ತಿಯ ಮಾನಸಿಕ ಆರೋಗ್ಯವು ಅವನ ಭಾವನೆಗಳ ಸಮತೋಲನ ಸ್ಥಿತಿಯನ್ನು ಆಧರಿಸಿರುತ್ತದೆ. ವ್ಯಕ್ತಿತ್ವದ ಪರಿಪೂರ್ಣ ವಿಕಸನಕ್ಕೆ ಮನೋದೈಹಿಕ ಸಮತೋಲನವು ಅವಶ್ಯವಾಗಿರುವದರಿಂದ ಭಾವನಾತ್ಮಕ ಅಸಮತೋಲನ ನಿರ್ವಹಣೆಯ ಅಗತ್ಯವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಅನೇಕ ರೀತಿಯ ಬಾಹ್ಯ ಪ್ರಚೋದನೆಗಳು, ವಿಫುಲವಾದ ಬದುಕಿನ ಅವಕಾಶಗಳು ಹರೆಯದ ಮಕ್ಕಳಲ್ಲಿ ವಿಶೇಷವಾಗಿ ವಿದ್ಯಾರ್ಥಿನಿಯರಲ್ಲಿ ಸಾಕಷ್ಟು ಭಾವನಾತ್ಮಕ ಅಸಮತೋಲನವನ್ನು ಉಂಟುಮಾಡುತ್ತಿವೆ. ಹಾಗಾಗಿ ಅವರಲ್ಲಿ ಏಕಾಗ್ರತೆಯ ಕೊರತೆ, ಮನೋ ದೈಹಿಕ ಆರೋಗ್ಯದಲ್ಲಿ ಏರುಪೇರು ಉಂಟಾಗುತ್ತಿದೆ. ಇದನ್ನು ತಡೆಯುವ ಕ್ರಮಗಳ ಅಗತ್ಯವು ಇಂದು ಹೆಚ್ಚಾಗಿದ್ದು, ಈ ನಿಟ್ಟಿನಲ್ಲಿ ಯೋಗಾಭ್ಯಾಸದ ಪರಿಣಾಮದ ಅಧ್ಯಯನವು ಅತ್ಯಂತ ಅವಶ್ಯವಾಗಿದೆ.

ಸಾಹಿತ್ಯಾವಲೋಕನ: ವ್ಯಕ್ತಿಯ ಆರೋಗ್ಯ ಹಾಗೂ ಯೋಗಕ್ಷೇಮದ ನಿರ್ವಹಣೆಯಲ್ಲಿ ಯೋಗಾಭ್ಯಾಸದ ಪ್ರಯೋಜನಗಳನ್ನು ಕುರಿತಾಗಿ ಯೋಗಸಾಧಕರು ಹಾಗೂ ವೈದ್ಯರಿಂದ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿವೆ ಹಾಗೂ ನಡೆಯುತ್ತಿವೆ. ಪ್ರಸ್ತುತ ಸಂಶೋಧನೆಗೆ ಪ್ರೇರಣೆ ಹಾಗೂ ಮೂಲಸಾಮಗ್ರಿಯನ್ನು ಒದಗಿಸಿದ ಕೆಲವು ಮಹತ್ವದ ಸಾಹಿತ್ಯಾಕರಗಳು ಕೆಳಗಿನಂತಿವೆ:

* ಕೋಲಿನ್ಸ್. ಸಿ. 1998: ಯೋಗವು ಶರೀರದ ಕ್ರೀಯಾಶೀಲತೆಯನ್ನು ಚುರುಕುಗೊಳಿಸಿ, ಸೂಕ್ತ ಉಸಿರಾಟದೊಂದಿಗೆ ಪ್ರಾಣವನ್ನು ಸಮತೋಲನಗೋಳಿಸುತ್ತದೆ. ಏಕಾಗ್ರತೆಯನ್ನು ಹೆಚ್ಚಿಸಿ ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತದೆ.

* ದೇಸಿಕಾಚಾರ್ ಮತ್ತು ಇತರರು. 2005: ಯೋಗದ ನಿರಂತರ ಅಭ್ಯಾಸವು ವ್ಯಕ್ತಿಯಲ್ಲಿ ಸ್ವಯಂ ಜಾಗೃತಿ, ಅನುಭವದ ವಿಸ್ತಾರ, ಭಾವನೆಗಳ ಸಂಸ್ಕಾರ ಹಾಗೂ ಯೋಗಕ್ಷೇಮದ ಅರಿವನ್ನು ನೀಡುವ ಮೂಲಕ ಅವನು ಬದುಕನ್ನು ಪ್ರೀತಿಸುವಂತೆ ಮಾಡುತ್ತದೆ ಹಾಗೂ ಅದನ್ನು ಅರ್ಥಪೂರ್ಣಗೊಳಿಸುತ್ತದೆ.

* ಡಾ.ಎಚ್.ಆರ್. ನಾಗೇಂದ್ರ ಮತ್ತು ಡಾ. ಎಚ್. ನಾಗರತ್ನಾ, 2013: ಯೋಗವು ಒಂದು ಸಮಗ್ರವಾದ ಚಿಕಿತ್ಸಾ ವಿಧಾನವಾಗಿದ್ದು,

ಸಂಪೂರ್ಣ ವ್ಯಕ್ತಿತ್ವಕ್ಕೆ ಅನ್ವಯವಾಗುವ ತಾತ್ವಿಕ ಹಾಗೂ ಪ್ರಾಯೋಗಿಕ ವಿದಾನಗಳನ್ನು ಒಳಗೊಂಡಿದೆ. ಇದು ವ್ಯಕ್ತಿಯ ಜೀವನಶೈಲಿಯನ್ನು ಸಕಾರಾತ್ಮಕವಾಗಿ ಪರಿವರ್ತಿಸುವುದರೊಂದಿಗೆ ಪರಿಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಉತ್ತಮವಾದ ಸಾಧನೆಯಾಗಿದ್ದು ವ್ಯಕ್ತಿಯ ಮನೋಬಲವನ್ನು ಹೆಚ್ಚಿಸುವ ಮೂಲಕ ಮನೋದೈಹಿಕ ಆರೋಗ್ಯವನ್ನು ಕಾಪಾಡುತ್ತದೆ.

* ಊಲೇರಿ, ಮತ್ತು ಇತರರು. 2004: ಯೋಗಾಭ್ಯಾಸವು ವ್ಯಕ್ತಿಯಲ್ಲಿ ಒತ್ತಡ, ಉದ್ವೇಗ, ಖಿನ್ನತೆ, ಹಾಗೂ ನಿದ್ರಾಹೀನತೆಯಂಥ ದೀರ್ಘಕಾಲೀನ ಮನೋಜಾಡ್ಯಗಳನ್ನು ನಿವಾರಿಸಿ ಆರೋಗ್ಯ ಹಾಗೂ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ.

ಅಧ್ಯಯನದ ಉದ್ದೇಶಗಳು:

* ಭಾವನಾತ್ಮಕ ಅಸಮತೋಲನದ ಲಕ್ಷಣಗಳು, ಕಾರಣಗಳು ಹಾಗೂ ಅದರ ಪರಿಣಾಮಗಳನ್ನು ಕುರಿತು ಅವಲೋಕನ ಮಾಡುವುದು.

* ಆಧ್ಯಾತ್ಮ ಶಾಸ್ತ್ರವಾದ ಯೋಗದ ಪ್ರಾಯೋಗಿಕ ವಿಧನಗಳು ಮಾನಸಿಕ ಸಮತೋಲನ ಕಾಪಾಡುವಲ್ಲಿ ಪ್ರಯೋಜನಕಾರಿಯಾಗಿದೆ ಎಂಬುದನ್ನು ವಿಶ್ಲೇಷಿಸುವುದು.

* ಸ್ನಾತಕೋತ್ತರ ವಿದ್ಯಾರ್ಥಿನಿಯರ ಭಾವನಾತ್ಮಕ ಅಸಮತೋಲನ ಸ್ಥಿತಿಯ ನಿರ್ವಹಣೆಯಲ್ಲಿ ನಿತ್ಯಯೋಗಾಭ್ಯಾಸದ ಪರಿಣಾಮವನ್ನು ಪ್ರಾಯೋಗಿಕ ಅದ್ಯಯನದಿಂದ ಪ್ರಸ್ತುತಪಡಿಸುವುದು.

ಪ್ರಾಕ್ಕಲ್ಪನೆಗಳು(ಊಹನಾ ಸಿದ್ಧಾಂತ):

* ಯೋಗವು ಮನೋದೈಹಿಕ ಸಮತೋಲನವನ್ನು ಕಾಪಾಡುವ ಒಂದು ಪರಿಣಾಮಕಾರಿ ಸಾಧನಾ ಕ್ರಮವಾಗಿದೆ.

* ನಿತ್ಯಯೋಗಾಭ್ಯಾಸವು ವಿದ್ಯಾರ್ಥಿನಿಯರ ಭಾವನಾತ್ಮಕ ಅಸಮತೋಲನವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಮಹತ್ವದ್ದಾಗಿದೆ.

ಸಂಶೋಧನಾ ವಿಧಾನ ಮತ್ತು ಸಾಮಗ್ರಿ :

* ಪ್ರಸ್ತುತ ಅಧ್ಯಯನದಲ್ಲಿ ಭಾವನಾತ್ಮಕ ಅಸಮತೋಲನ ಹಾಗೂ ಯೋಗದ ಸೈದ್ಧಾಂತಿಕ ವಿಚಾರಗಳನ್ನು ಮಂಡಿಸಲು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸಲಾಗಿದೆ.

* ಪ್ರಾಯೋಗಿಕ ಅಧ್ಯಯನಕ್ಕೆ "ಮೊದಲು ಮತ್ತು ನಂತರದ ನಮೂನೆ" ಯನ್ನು ಬಳಸಲಾಗಿದ್ದು ವರ್ಣನಾತ್ಮಕ ಸಂಖ್ಯಾಶಾಸ್ತ್ರದ ವಿಧಾನಗಳಾದ ಸರಾಸರಿ, ಸ್ಟ್ಯಾಂಡರ್ಡ ಡಿವೀಯೇಷನ್, ಟಿ–ಟೆಸ್ಟ್ ಗಳನ್ನು ಬಳಸಲಾಗಿದೆ. ಫಲಿತಾಂಶಗಳನ್ನು ತೋರಿಸಲು ಸ್ತಂಭಲೇಖಗಳನ್ನು ತುಲನಾತ್ಮಕವಾಗಿ ನಿರೂಪಿಸಲಾಗಿದೆ.

ಮಾದರಿ ಸಂಗ್ರಹ:

ಪ್ರಸ್ತುತ ಅಧ್ಯಯನಕ್ಕೆ ಧಾರವಾಡದ ಬಿ.ಸಿ.ಎಮ್ ಸ್ನಾತಕೋತ್ತರ ವಿದ್ಯಾರ್ಥಿನಿಯರ ವಸತಿ ನಿಲಯದ 58 ವಿಧ್ಯಾರ್ಥಿನಿಯರನ್ನು ಆಯ್ದುಕೊಳ್ಳಲಾಗಿತ್ತು. ಅವರಿಗೆ ಯೋಗಾಭ್ಯಾಸದ ಪೂರ್ವದಲ್ಲಿ ಹಾಗೂ 6 ತಿಂಗಳು ನಿರಂತರವಾಗಿ ಯೋಗಾಭ್ಯಾಸ ಮಾಡಿದ ನಂತರ ಭಾವನಾತ್ಮಕ ಅಸಮತೋಲನದ ಕುರಿತಾದ ಅವರ ಅನುಭವಗಳನ್ನು ನಿರ್ದಿಷ್ಟ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಯಿತು.

ಭಾವನಾತ್ಮಕ ಅಸಮತೋಲನದ ಪರಿಕಲ್ಪನೆ:

ಭಾವನಾತ್ಮಕ ಅಸಮತೋಲನ ಎನ್ನುವುದು ಒಂದು ಮಾನಸಿಕ ಸ್ಥಿತಿ. ಕೆಲವೊಮ್ಮೆ ನಾವು ಅತ್ಯಂತ ಕಳವಳ ಪಡುತ್ತೇವೆ. ಇಲ್ಲವೆ ಏಕೆ, ಏನು ಎಂದು ಹೇಳಲಿಕ್ಕಾಗದ ಸ್ಥಿತಿಯಲ್ಲಿ ಒದ್ದಾಡುತ್ತೇವೆ. ಇನ್ನೂ ಕೆಲವು ಬಾರಿ ಯಾವುದೋ ಘಟನೆಯನ್ನು ಓದಿ ಇಲ್ಲವೆ ಕೇಳಿ, ಭವಿಷ್ಯದಲ್ಲಿ ನಮ್ಮ ಜೀವನದಲ್ಲೂ ಹಾಗೆ ನಡೆದುಬಿಡಬಹುದೆಂದು ಕಂಗಾಲಾಗುತ್ತೇವೆ. ಇದರಿಂದ ಕಾರ್ಯಾಸಕ್ತಿ, ಉತ್ಸಾಹ ಹಾಗೂ ಕೆಲವೊಮ್ಮೆ ಜೀವನದಲ್ಲಿ ಭರವಸೆಗಳೇ ಇಲ್ಲದಂತಾಗಿ ಮನಸ್ಸು ನಿಯಂತ್ರಣ ತಪ್ಪುವ ಹಂತಕ್ಕೆ ಬರುತ್ತದೆ. ಇದನ್ನೇ ಬಾವನಾತ್ಮಕ ಅಸಮತೋಲನ ಎನ್ನುವರು.

ಭಾವನೆಗಳ ಅಸಮತೋಲನದ ನಿರ್ವಹಣೆ ಎನ್ನುವದು ಕೇವಲ ನೇತ್ಯರ್ಥಕ ಭಾವನೆಗಳಿಂದ ಬಿಡುಗಡೆ ಹೊಂದುವುದಷ್ಟೆ ಅಲ್ಲ. ಅವುಗಳನ್ನು ಹೇಗೆ ನಿರ್ವಹಿಸಬೇಕು? ಸಂದರ್ಭಾನುಸಾರ ಉಂಟಾಗುವ ಇಂತಹ ಭಾವನೆಗಳೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದನ್ನು ಅರಿಯುವುದಾಗಿದೆ.

ಭಾವನೆಗಳು ನಕಾರಾತ್ಮಕ ಅಥವಾ ಸಕಾರಾತ್ಮಕ ಆಗಿರಬಹುದು. ಒಟ್ಟಾರೆ ಅವು ನಾನು ಯಾರು ಮತ್ತು ಹೇಗಿದ್ದೇನೆ ಎಂಬುದನ್ನು ಕುರಿತಾಗಿ ಸ್ವಂತಕ್ಕೆ ಮತ್ತು ಇತರರಿಗೆ ತಿಳಿಯಪಡಿಸುವ ಅಭಿವ್ಯಕ್ತಿಯೇ ಆಗಿದೆ. ಅಂದರೆ ಒಂದು ಘಟನೆಯ ಕುರಿತಾಗಿ ಮನಸ್ಸಿನಲ್ಲಿ

ಉಂಟಾಗುವ ಅಥವಾ ಹೊರಗೆ ಅಭಿವ್ಯಕ್ತಿ ಆಗುವ ಅರ್ಥಪೂರ್ಣ ಸ್ಪಂದನೆಯೇ ಭಾವನೆಯಾಗಿದೆ. ಉದಾ: ನಾವು ಅತಿಯಾಗಿ ಪ್ರೀತಿಸುವ ವ್ಯಕ್ತಿಯನ್ನು ಕಳೆದುಕೊಂಡಾಗ ಅನುಭವಿಸುವ ನೋವು ಒಂದು "ಭಾವನೆ"ಯೇ ಆಗಿದೆ. ಅದರಂತೆ ಭಯಸಿದ್ದು ಸಿಗಲಾರದ ಹತಾಶೆಯು ಒಂದು ಭಾವನೆಯಾದರೆ, ನಮ್ಮ ಹತ್ತಿರದವರಿಗೆ ದೊಡ್ಡ ಅಧಿಕಾರ ಸಿಕ್ಕಾಗ ಆಗುವುದು ಹೆಮ್ಮೆಯ ಭಾವನೆಯಾಗಿದೆ. ಹೀಗೆ ಸಂದರ್ಭಕ್ಕೆ ಅನುಸಾರವಾಗಿ ಮೂಡುವ ಸ್ಪಂದನೆಯು ಅಭಿವ್ಯಕ್ತಗೊಂಡು ಇಲ್ಲವೇ ಹಾಗೆಯೇ ಮರೆಯಾಗಬೇಕೇ ಹೊರತು ದೀರ್ಘಕಾಲದವರೆಗೆ ಅದೇ ನಾವಾಗಬೇಕಾಗಿಲ್ಲ. ಹಾಗೇನಾದರೂ ಆದರೆ ಭಾವನೆಗಳಲ್ಲಿ ಅಸಮತೋಲನವಾಗಿ ಮಾನಸಿಕ ಅಸ್ಥಿರತೆಯನ್ನು ಉಂಟು ಮಾಡಿ ಒಟ್ಟಾರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ ಭಾವನೆಗಳನ್ನು ಸರಿಯಾಗಿ ನಿರ್ವಹಿಸುವದು ಅವುಗಳನ್ನು ಸಮತೋಲನದಲ್ಲಿಡುವಲ್ಲಿ ಅಗತ್ಯವಾಗಿದೆ. ಈ ರೀತಿ ಭಾವನೆಗಳನ್ನು ಸಮತೋಲನದಲ್ಲಿಟ್ಟುಕೊಳ್ಳುವದಕ್ಕೆ "ಭಾವನಾತ್ಮಕ ಬುದ್ಧಿವಂತಿಕೆ" ಎನ್ನುವರು. ಭಾವನೆಗಳ ನಿಯಂತ್ರಣ, ಸೂಕ್ತವಾದ ಪ್ರತಿಸ್ಪಂದನೆ ಮತ್ತು ಬೇರೆಯವರ ಭಾವನೆಗಳಿಗೆ ಸರಿಯಾಗಿ ಸ್ಪಂದಿಸುವದು ಮೊದಲಾದವುಗಳು ಭಾವನಾತ್ಮ ಅಸಮತೋಲನ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳನ್ನು ಸರಿಯಾಗಿ ನಿರ್ವಹಿಸದಿದ್ದರೇ ಅದೇ ಭಾವನೆಗಳು ಮಾನಸಿಕ ಅಸ್ಥಿರತೆಗೆ ಕಾರಣವಾಗುತ್ತದೆ.

ಯುವತಿರಲ್ಲಿ ಭಾವನಾತ್ಮಕ ಅಸಮತೋಲನ: ಸಾಮಾನ್ಯವಾಗಿ ಯುವತಿಯರಲ್ಲಿ ಶಾರೀರಿಕ ಅಂಶಗಳು ಹಾಗೂ ಮಾನಸಿಕ ಸ್ಥಿತಿಗತಿಯು ಅತ್ಯಂತ ಸಂಕೀರ್ಣವಾಗಿರುತ್ತದೆ. ಏಕೆಂದರೆ ಯುವತಿಯರು ಬಲವಾದ ಭಾವನಾತ್ಮಕ ಸ್ಥಿತಿಯನ್ನು ಹೊಂದಿರುತ್ತಾರೆ. ಅದರಂತೆ ದುಃಖ, ಅವಮಾನ ಹಾಗೂ ಒತ್ತಡದ ಸನ್ನಿವೇಶಗಳನ್ನು ದೀರ್ಘಕಾಲದ ವರೆಗೆ ಮನಸ್ಸಿನಲ್ಲಿಟ್ಟುಕೊಳ್ಳುವ ಸ್ವಭಾವದವರಾಗಿರುತ್ತಾರೆ. ಏಕೆಂದರೆ ಅವರು ಹುಡುಗರಿಗಿಂತ ಭಾವನಾತ್ಮಕವಾಗಿ ಬಹು ಸೂಕ್ಷ್ಮವಾಗಿರುತ್ತಾರೆ. ಹಾಗಾಗಿ ಯುವತಿಯರಲ್ಲಿ ಭಾವನೆಗಳ ಅಸಮತೋಲನವು ಸಂಭವನೀಯವಾಗಿದ್ದು ಅದು ಖಿನ್ನತೆ ಮತ್ತು ಉದ್ವೇಗದಂತ ಮಾನಸಿಕ ತೊಂದರೆಗಳನ್ನು ಉಂಟುಮಾಡುತ್ತದೆ.

ಭಾವನಾತ್ಮಕ ಅಸಮತೋಲನದ ಲಕ್ಷಣಗಳು:

* ಒಮ್ಮೆಲೆ ಭಾವನೆಗಳ ಅತಿರೇಕಕ್ಕೆ ಒಳಗಾಗುವುದು. ಕೆಲವೊಮ್ಮೆ ಮನೋವ್ಯಾಧಿಯ ಲಕ್ಷಣಗಳಾದ ಭ್ರಮೆ ಮತ್ತು ಕನವರಿಕೆಗಳಿಗೆ ಒಳಗಾಗುವುದು.

* ನಿರಂತರ ಖಿನ್ನತೆಗೆ ಒಳಗಾಗುವುದು ಇಲ್ಲವೆ ಆಗಾಗ ಖಿನ್ನತೆಯನ್ನು ಅನುಭವಿಸುವುದು.

* ಉನ್ಮಾದದ ಲಕ್ಷಣಗಳು.

* ಕಾರಣ ಗೊತ್ತಿರದೆ ದು:ಖಿಯಾಗುವುದು.

ಭಾವನಾತ್ಮಕ ಅಸಮತೋಲನದ ಕಾರಣಗಳು:

ಭಾವನಾತ್ಮಕ ಅಸಮತೋಲನಕ್ಕೆ ಕಾರಣಗಳನ್ನು ಮನೋವಿಜ್ಞಾನಿಗಳು 4 ಭಾಗಗಳಾಗಿ ವಿಂಗಡಿಸಿದ್ದಾರೆ.

1. ಜೈವಿಕ ಅಂಶಗಳು: ಪಾಲಕರ ಕಾಳಜಿಯ ಕೊರತೆ, ತಲೆಯ ಭಾಗಕ್ಕೆ ಬಿದ್ದ ಪೆಟ್ಟು, ವಿಷಕಾರಿ ವಸ್ತುಗಳ ಸೇವನೆ, ದೀರ್ಘಕಾಲೀನ ಅನಾರೋಗ್ಯದ ಸ್ಥಿತಿ.

2. ಮಾನಸಿಕ ಅಂಶಗಳು: ಕಡಿಮೆ ಬುದ್ಧಿವಂತಿಕೆ, ಒತ್ತಡ, ಕಲಿಕಾ ಸಮಸ್ಯೆಗಳು.

3. ಕೌಟುಂಬಿಕ ಅಂಶಗಳು: ಒಂದು ವೇಳೆ ತಂದೆ-ತಾಯಿ ಅಪ್ರಬುದ್ಧವಾಗಿದ್ದರೆ, ಮನೋ ರೋಗಿಗಳಾಗಿದ್ದರೆ, ಯಾವುದೇ ರೀತಿಯ ಅಪರಾಧ ಕೃತ್ಯಗಳಲ್ಲಿ ತೊಡಗಿಕೊಂಡಿದ್ದರೆ, ಅವರ ವೈವಾಹಿಕ ಸಂಬಂದವು ಸರಿಯಾಗಿರದಿದ್ದರೆ ಮಕ್ಕಳು ಭಾವನಾತ್ಮಕ ಅಸಮತೋಲನಕ್ಕೆ ಒಳಗಾಗುವ ಸಂಭವವಿರುತ್ತದೆ.

4. ಸಾಮಾಜಿಕ ಅಂಶಗಳು: ಬಡತನ, ನಿರ್ಗತಿಕತೆ, ಒತ್ತಡಮುಕ್ತ ವಾತಾವರಣ.

ಭಾವನಾತ್ಮಕ ಅಸ್ಥಿರತೆಯ ಪರಿಹಾರಗಳು-ಚಿಕಿತ್ಸಾತ್ಮಕ ಕ್ರಮಗಳು: ಮಾನಸಿಕ ಸ್ಥಿರತೆನ್ನು ಕಾಯ್ದುಕೊಳ್ಳಲು ಭಾವನೆಗಳ ಸಕಾರಾತ್ಮಕವಾದ ಹಾಗೂ ಪರಿಣಾಮಕಾರಿಯಾದ ನಿರ್ವಹಣಾ ಕ್ರಮಗಳನ್ನು ಸಕಾಲಕ್ಕೆ ಅನುಸರಿಸುವುದು ಅಗತ್ಯವಾಗಿದೆ. ಅವುಗಳೆಂದರೆ-

1. ಮನೋಚಿಕಿತ್ಸೆ- ಆಪ್ತ ಸಮಾಲೋಚನೆ, ತಿಳುವಳಿಕೆ- ಅರಿವು ಮೂಡಿಸುವುದು. ಜೀವನ ವಿಧಾನ ಸರಿಪಡಿಸುವುದು.

2. ವೈದ್ಯಕೀಯ ಚಿಕಿತ್ಸೆ-ಔಷಧಿಗಳ ಬಳಕೆ

3. ಯೋಗ ಚಿಕಿತ್ಸೆ- ಯೋಗದ ಅಭ್ಯಾಸ

ಯೋಗ ಚಿಕಿತ್ಸೆ: ಯೋಗವು ಪ್ರಾಯೋಗಿಕ ಹಾಗೂ ವೈಜ್ಞಾನಿಕ ತಳಹದಿಯನ್ನು ಹೊಂದಿರುವ ಭಾರತದ ಪ್ರಾಚೀನ ಆಧ್ಯಾತ್ಮ ಶಾಸ್ತ್ರವಾಗಿದೆ. ಯೋಗದ ಅಭ್ಯಾಸ ಮತ್ತು ಧೀರ್ಘ ಕಾಲೀನ ಅನುಷ್ಟಾನಗಳಿಂದ ಬದುಕಿನ ಪ್ರತಿ ಹೆಜ್ಜೆಯಲ್ಲಿ ಅದರ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ವಿವಿಧ ಕ್ಷೇತ್ರಗಳಲ್ಲಿ ನಡೆದಿರುವ ಸಂಶೋಧನೆಗಳು ಪುಷ್ಟಿಕರಿಸಿವೆ. ಅದರಂತೆ ಇತ್ತೀಚಿಗೆ ನಡೆದ ವೈದ್ಯಕೀಯ ಸಂಶೋಧನೆಗಳು ಮನುಷ್ಯನ ಮನೋದೈಹಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸವಾಲುಗಳಿಗೆ ಯೋಗಾಭ್ಯಾಸವು ಅತ್ಯಂತ ಪರಿಣಾಮಕಾರಿ ಚಿಕಿತ್ಸೆಯಾಗಿದೆ ಎಂಬುದನ್ನು ಸಾಬೀತುಪಡಿಸಿವೆ. ಅಂತರರಾಷ್ಟ್ರೀಯ ಯೋಗ ಚಿಕಿತ್ಸಕರ ಸಂಘ(ಐಎವಾಯ್‌ಟಿ)ದ ಪ್ರಕಾರ, ಯೋಗದ ತಾತ್ವಿಕ ಮತ್ತು ಪ್ರಾಯೋಗಿಕ ವಿಧಾನಗಳನ್ನು ಅನುಷ್ಠಾನಗೊಳಿಸುವ ಮೂಲಕ ಸುಧಾರಿತ ಆರೋಗ್ಯ ಹಾಗೂ ಯೋಗಕ್ಷೇಮದ ಅರಿವನ್ನು ಹೊಂದುವಂತೆ ವ್ಯಕ್ತಿಯನ್ನು ಸಬಲೀಕರಣಗೊಳಿಸುವುದೇ ಯೋಗ ಚಿಕಿತ್ಸೆಯಾಗಿದೆ. ರಾಷ್ಟ್ರೀಯ ಆರೋಗ್ಯ ಸಂಸ್ಥೆಯು(ಸಿಎಎಮ್)– ಯೋಗವು ಒಂದು ಪೂರಕ ಹಾಗೂ ಬದಲಿ ಚಿಕಿತ್ಸಾ ವಿಧಾನವಾಗಿದೆ ಎಂಬುದನ್ನು ತಿಳಿಸಿದೆ.

ಅತ್ಯಂತ ಪ್ರಾಚೀನ ಆಧ್ಯಾತ್ಮ ಶಾಸ್ತ್ರವಾಗಿರುವ ಯೋಗವು ಮನುಷ್ಯನ ಮಾನಸಿಕ-ಭಾವನಾತ್ಮಕ ಹಾಗೂ ದೈಹಿಕ ತೊಂದರೆಗಳನ್ನು ಆಳವಾಗಿ ಅರಿಯಲು ಮಾಡಿದ ಪ್ರಪಂಚದ ಮೊದಲ ಪ್ರಯತ್ನವಾಗಿದೆ. ಹಾಗಾಗಿ ಯೋಗವು ಜಗತ್ತಿನ ಅತೀ ಪ್ರಾಚೀನವಾದ ಮತ್ತು ಸಮಷ್ಟಿ ಗುಣವುಳ್ಳ ಚಿಕಿತ್ಸಾ ಕ್ರಮವಾಗಿದೆ ಎಂದು ಹೇಳಬಹುದು.ಯೋಗವು ಚಿಕಿತ್ಸಾ ರೂಪದಲ್ಲಿ ಲಿಂಗ-ವಯಸ್ಸಿನ ಮಿತಿಗಳಿಲ್ಲದೆ ರೋಗಗಳಿಂದ ಬಳಲುವವರಿಗೆ ಉತ್ತಮ ಪರಿಣಾಮವನ್ನು ನೀಡುತ್ತದೆ. ವ್ಯಕ್ತಿಯ ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಉನ್ನತೀಕರಣದಲ್ಲಿ ಯೋಗವು ಬಹುಮುಖ್ಯ ಪಾತ್ರ ವಹಿಸುತ್ತದೆ.

ಯೋಗ ಚಿಕಿತ್ಸೆಯ ಮೂಲಾಂಶಗಳು: ವೇದ-ಉಪನಿಷತ್ತು-ದರ್ಶನಗಳು ಮುಂತಾಗಿ ಭಾರತೀಯ ಚಿಂತನ ಪರಂಪರೆಯ ಮಹತ್ವದ ಕೊಡುಗೆಯಾಗಿರುವ ಯೋಗದ ಮುಖ್ಯ ಅಂಶಗಳೇ ಚಿಕಿತ್ಸಾ ವಿಧಾನದಲ್ಲಿ ಅದರ ಮೂಲಾಂಶಗಳಾಗಿವೆ. ಅವುಗಳೆಂದರೆ,

1. ಮನೋ ವಿಶ್ಲೇಷಣೆ: ಎಲ್ಲ ರೀತಿಯ ವ್ಯಾಧಿಗಳ ಮೂಲ ಮನಸ್ಸೇ ಆಗಿದೆ. ದೀರ್ಘಕಾಲೀನ ಬದುಕಿನ ಒತ್ತಡಗಳು ಸೃಷ್ಟಿಸುವ ಮಾನಸಿಕ ಅಸಮತೋಲನವೇ ರೋಗಕ್ಕೆ ಕಾರಣವಾಗಿದೆ. ಏಕೆಂದರೆ ಯೋಗದ ಮೂಲಾಂಶವು ಮನಸ್ಸಿನ ವಿಶ್ಲೇಷಣೆ ಹಾಗೂ ಅದನ್ನು ಪ್ರಶಮನಗೊಳಿಸುವ ಉಪಾಯವೇ ಆಗಿದೆ.

2. ಪ್ರಜ್ಞೆಯ ಜಾಗೃತಿ: ಯೋಗವು ಒಂದು ಪ್ರಜ್ಞಾಪೂರ್ವಕವಾಗಿ ಮಾಡುವ ಅಭ್ಯಾಸವಾಗಿದೆ. ಅದು ಶರೀರ ಹಾಗೂ ಮನಸ್ಸುಗಳ ಕುರಿತು ಅರಿವನ್ನು ಹೆಚ್ಚಿಸುವ ಮೂಲಕ ಅಲ್ಲಿ ಅಪೇಕ್ಷಿತ ಸುಧಾರಣೆಯನ್ನು ತರುತ್ತದೆ. ಪ್ರಜ್ಞೆಯ ಮೂಲಕ ಇಂದ್ರಿಯಗಳನ್ನು ನಿಯಂತ್ರಿಸುವದು ಮನೋಸ್ವಾಸ್ಥ್ಯಕ್ಕೆ ಅಗತ್ಯ ವಿಚಾರವಾಗಿದೆ. ಸ್ಥೂಲ ಇಂದ್ರಿಯಗಳ ಆಚಾರಗಳನ್ನು ಪಾಲಿಸುವ ಸೂಕ್ಷ್ಮ ಇಂದ್ರಿಯಗಳು ಜಾಗೃತವಾಗುತ್ತವೆ. ಇದು ವಿಕ್ಷಿಪ್ತ ಮನಸ್ಸನ್ನು ಒಂದು ನಿರ್ದಿಷ್ಟ ವಸ್ತುವಿನ ಮೇಲೆ ಏಕಾಗ್ರಗೊಳಿಸುವ ವಿಧಾನವಾಗಿದೆ. ಇದರಿಂದ ಮನೋವಿಹಿತ ಕಾರ್ಯಗಳನ್ನೇ ಆಯ್ಕೆ ಮಾಡಿ ಅವುಗಳ ಮೇಲೆ ಮನಸ್ಸನ್ನು ಕೇಂದ್ರೀಕರಿಸುವದರಿಂದ ಚಿಂತನೆಯ ಏಕ ಮುಖ ಹರಿಯುವಿಕೆಗೆ ಅನುಕೂಲವಾಗುತ್ತದೆ.

3. ಗಮನಿಸುವಿಕೆ: ಇದು ಯೋಗಾಭ್ಯಾಸದಲ್ಲಿ ಪ್ರಮುಖ ಅಂಶವಾಗಿದ್ದು ಮನಸ್ಸಿನ ಏಕಾಗ್ರತಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

4. ಸಮಗ್ರತೆ: ಯೋಗವು ವ್ಯಕ್ತಿಯ ವ್ಯಕ್ತಿತ್ವದ ಎಲ್ಲ ಆಯಾಮಗಳನ್ನು(ಪಂಚಕೋಶಗಳು) ತಲುಪಲು ಅನೇಕ ರೀತಿಯ ಸಾಧನಾ ವಿಧಾನಗಳನ್ನು ಒಳಗೊಂಡಿದೆ. ವ್ಯಕ್ತಿಯ ಶರೀರ-ಪ್ರಾಣ-ಮನಸ್ಸು-ಬುದ್ಧಿ-ಆನಂದ ಇವೆಲ್ಲವನ್ನೂ ಸಮೀಕರಿಸಿ ಯೋಗಚಿಕಿತ್ಸೆಯು ಪರಿಣಾಮ ನೀಡುವುದು. ವ್ಯಕ್ತಿಯ ರೋಗಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯಲ್ಲಿ ಯೋಗದ ವಿಧಾನಗಳನ್ನು ಬಳಸಿಕೊಳ್ಳಲಾಗುತ್ತದೆ.

5. ಆಧ್ಯಾತ್ಮಿಕ ಅನುಭೂತಿ: ಆನಂದವೇ ಮನುಷ್ಯನ ಮೂಲ ಸ್ವರೂಪ. ವ್ಯಕ್ತಿಯ ಆರೋಗ್ಯವನ್ನು ಸುಧಾರಿಸಿ ಅವನಲ್ಲಿ ಯೋಗಕ್ಷೇಮದ ಅರಿವು ಮೂಡಬೇಕಾದರೆ, ಆಧ್ಯಾತ್ಮಿಕ ಅನುಭೂತಿ ಪಡೆಯಲೇಬೇಕಾಗುತ್ತದೆ. ಯೋಗದ ಆತ್ಯಂತಿಕ ಗುರಿಯೇ ಅದಾಗಿದೆ.

ನಿತ್ಯ ಯೋಗಾಭ್ಯಾಸಕ್ಕೆ ಆಯ್ದುಕೊಂಡ ಯೋಗದ ಸಾಧನಾ ಕ್ರಮಗಳು:

ಆಸನಪ್ರಾಣಾಯಾಮಾದಿ ಯೋಗಾಭ್ಯಾಸಗಳು ಮತ್ತು ಯುಕ್ತವಾದ ಆಹಾರವಿಹಾರ, ನಿದ್ರಾವಿಧಾನಗಳನ್ನೊಳಗೊಂಡ ಹಾಗೂ ಸಂಪೂರ್ಣ ವ್ಯಕ್ತಿತ್ವಕ್ಕೆ ಅನ್ವಯವಾಗುವ ಯೋಗಸಾಧನೆಯ ವ್ಯವಸ್ಥೆಯನ್ನು ಸಮಗ್ರಯೋಗ ಎನ್ನುವರು. ಇದು ವ್ಯಕ್ತಿಯ ಜೀವನಶೈಲಿಯನ್ನು ಸಕಾರಾತ್ಮಕವಾಗಿ ಪರಿವರ್ತಿಸುವುದರೊಂದಿಗೆ ಪರಿಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಉತ್ತಮವಾದ ಸಾಧನಾ ವಿಧಾನವಾಗಿದೆ. ಸಮಗ್ರಯೋಗಾಭ್ಯಾಸವು ಈ ಕೆಳಗಿನ ಅಂಶಗಳನ್ನು ಒಳಗೊಡಿದೆ.

ಶುದ್ಧೀಕರಣ ಕ್ರಿಯೆಗಳು: ಶರೀರವನ್ನು ಶುದ್ಧೀಕರಣಗೊಳಿಸುವ ಮೂಲಕ ಎಲ್ಲಾ ಆಂತರಿಕ ಅಂಗಗಳನ್ನು ಪುನಃಶ್ಚೇತನಗೊಳಿಸಿ ಅವುಗಳ ಕ್ರಿಯಾಶೀಲತೆ ಮತ್ತು ಕಾರ್ಯ ಕ್ಷಮತೆಯನ್ನು ಹೆಚ್ಚಿಸುತ್ತವೆ. ಕಪಾಲಭಾತಿ, ನೇತಿ, ಧೌತಿ, ತ್ರಾಟಕ ಮತ್ತು ಅಗ್ನಿಸಾರ ಕ್ರಿಯೆಗಳನ್ನು ಮಾಡಲಾಗುತ್ತಿತ್ತು.

ಆಸನ-ಬಂಧ-ಮುದ್ರೆಗಳು: ಸೂರ್ಯನಮಸ್ಕಾರವನ್ನು ಒಳಗೊಂಡಂತೆ ಹಲವಾರು ಆಸನಗಳಲ್ಲಿ, ನಿಂತು, ಕುಳಿತು, ಹೊಟ್ಟೆ ಮೇಲೆ ಮತ್ತು

ಬೆನ್ನ ಮೇಲೆ ಮಲಗಿ ಮಾಡುವ 22 ಆಸನಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಅದರಂತೆ ತ್ರಿಬಂಧಗಳಾದ ಜಾಲಂದರ, ಉಡ್ಡಿಯಾನ & ಮೂಲಬಂಧಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಈ ಆಸನಗಳು ಶರೀರಕ್ಕೆ ಲಘುತ್ವ, ಬಲ, ವಿಶ್ರಾಂತಿಯನ್ನು ನೀಡುವ ಮೂಲಕ ಶರೀರದ ಎಲ್ಲ ಅಂಗಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಅವುಗಳ ಕಾರ್ಯಗಳನ್ನು ಸಮನ್ವಯಗೊಳಿಸುವಂಥವಾಗಿದ್ದವು. ಶರೀರಕ್ಕೆ ಸ್ಥಿರತೆಯನ್ನು ಮತ್ತು ಮನಸ್ಸಿಗೆ ಸುಖವನ್ನು ನೀಡುವ ಆಸನಗಳು ಕೂಡಾ ಮನೋಸ್ವಾಸ್ಥ್ಯಕ್ಕೆ ಸಹಾಯಕಾರಿಯಾಗಿವೆ. ಮನೋದೈಹಿಕ ದ್ವಂದ್ವಗಳನ್ನು ನೀಗಿ ಮನಸ್ಸು ಶಾಂತ ಸ್ಥಿತಿಯನ್ನು ತಲುಪಲು ಸಹಾಯಕವಾಗಿದೆ. ಇದರಿಂದ ವ್ಯಕ್ತಿ ತನ್ನ ಸ್ವರೂಪವನ್ನು ಅರಿಯಲು, ಉದ್ವೇಗ, ಖಿನ್ನತೆ ಮತ್ತು ನಿದ್ರಾಹೀನತೆಗಳಂಥ ಮನೋವ್ಯಾಧಿಗಳಿಂದ ಮುಕ್ತವಾಗಬಹುದು.

ಪ್ರಾಣಾಯಾಮ: ಉಸಿರಾಟದ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಪ್ರಾಣ ಶಕ್ತಿಯನ್ನು ಊರ್ಜಗೊಳಿಸುವಂಥ ಅಭ್ಯಾಸವೇ ಪ್ರಾಣಾಯಾಮ. ಇಲ್ಲಿ ನಾಡಿಶುದ್ಧಿ, ಉಜ್ಜಾಯಿ, ಶೀತ್ಕಾರಿ & ಬ್ರಾಮರಿ ಪ್ರಣಾಯಾಮಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಈ ಪ್ರಾಣಾಯಾಮಗಳು ಉಸಿರಿನ ಗತಿಯನ್ನು ನಿಧಾನ ಹಾಗೂ ದೀರ್ಘವಾಗಿಸುವ ಮೂಲಕ ಪ್ರತಿ ಜೀವಕೋಶದ ಪ್ರಾಣಶಕ್ತಿಯನ್ನು ಹೆಚ್ಚಿಸಿ ಮಾನಸಿಕ ಏಕಾಗ್ರತೆ ಹಾಗೂ ಶಾಂತತೆಯನ್ನು ಉಂಟುಮಾಡುತ್ತದೆ. ಇದು ಮನೋವೃತ್ತಿಗಳನ್ನು ಹತೋಟಿಯಲ್ಲಿಡುವ ಬಹುಮುಖ್ಯ ಸಾಧನವಾಗಿದೆ. ಪ್ರಾಣಾಯಾಮದಿಂದ ನಾಡಿಗಳಲ್ಲಿ ಸಂಚರಿಸುವ ಪ್ರಾಣವು ನೈಧಾನ್ಯತೆ ಮತ್ತು ಕ್ರಮಬದ್ಧತೆಯನ್ನು ಹೊಂದುವ ಮೂಲಕ ಮನೋವ್ಯಾಪಾರದ ಆವೇಗವನ್ನು ಶಾಂತಗೊಳಿಸುತ್ತದೆ. ಯೋಚನೆಗಳಲ್ಲಿ ಸ್ಪಷ್ಟತೆಯುಂಟಾಗಿ ಅರಿವು ಜಾಗೃತವಾಗುತ್ತದೆ. ಮನಸ್ಸು ಶಾಂತ ಸ್ಥಿತಿಯನ್ನು ತಲುಪಿ ಬೇಡದ ವಿಷಯಗಳು ಮನಸ್ಸನ್ನು ಹಾಳುಮಾಡಲಾರವು. ಅಸಂತುಷ್ಟತೆ, ಆವೇಗ, ಹಣದ ಮೋಹ, ಅತಿರೇಕ ವೃತ್ತಿ, ಕಾಮಾಂಧತೆ, ಮೋಹ, ದ್ವೇಷ, ಮತ್ಸರ ಈ ಅಪವೃತ್ತಿಗಳಿಂದ ಸಾವರಿಸಿಕೊಳ್ಳಲು ಯಾವ ರೀತಿಯ ಆಂತರಿಕ ಜಾಗೃತಿ ಉಂಟಾಗಬೇಕೋ ಅದು ಆಸನ, ಪ್ರಾಣಾಯಾಮಗಳಿಂದ ಸಾಧ್ಯವಾಗುತ್ತದೆ.

ಶೀಥಲಿಕರಣ ವ್ಯಯಾಮಗಳು: ಕೀಲುಗಳ ಜಡತ್ವವನ್ನು ಕಡಿಮೆ ಮಾಡಿ, ಸ್ನಾಯುಗಳ ಬಲವನ್ನು ಹೆಚ್ಚಿಸುವ ಹಾಗೂ ಅಧಿಕ ಕೊಬ್ಬನ್ನು ಕರಗಿಸುವಂತೆ ಆಸನಗಳನ್ನು ತುಸು ವೇಗವಾದ ಮತ್ತು ಬಹು ಸಂಖ್ಯೆಯಲ್ಲಿ ಮಾಡುವ ಕ್ರಮಗಳಾಗಿವೆ. ಇವುಗಳಿಂದ ಶರೀರದ ಬಲ, ಸ್ಥಿರತೆ ಮತ್ತು ಲಘುತ್ವ ಹೆಚ್ಚಾಗುವುದಲ್ಲದೆ ಶರೀರ ಹಾಗೂ ಮನಸ್ಸುಗಳ ಕಾರ್ಯದಲ್ಲಿ ಸಮತೋಲನ ಉಂಟಾಗುತ್ತದೆ.

ಸೂಕ್ಷ್ಮವ್ಯಾಯಾಮ: ಕಾಲ್ಬೆರಳಿನಿಂದ ತಲೆಯವರೆಗೆ ಶರೀರದ ಒಂದೊಂದೇ ಭಾಗದ ಚಲನೆಯನ್ನು ಉಸಿರಿನೊಂದಿಗೆ ಸಮೀಕರಿಸಿ ಆಚರಿಸುವ ವಿಧಾನ ಇದಾಗಿದೆ. ಇವುಗಳ ಆಚರಣೆಯಿಂದ ಒಟ್ಟಾರೆ ಮನೋ ದೈಹಿಕ ಶಕ್ತಿಯ ವಿಕಸನವಾಗುತ್ತದೆ.

ಪ್ರಾಣಶಕ್ತಿಯನ್ನು ಊರ್ಜಗೊಳಿಸುವ ಧ್ಯಾನಕ್ರಮ: ಶರೀರದ ಒಳಗೆ ಮತ್ತು ಹೊರಗೆ ಇರುವ ಪ್ರಾಣಶಕ್ತಿಯನ್ನು ಗುರುತಿಸಿ ಅದರ ಮೇಲೆ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುವ ವಿಧಾನ ಇದಾಗಿದ್ದು, ಒಟ್ಟಾರೆ ಅಂತಃಶಕ್ತಿಯ ಮಟ್ಟವನ್ನು ಹೆಚ್ಚಿಸುವ ಮೂಲಕ ಶರೀರ ಮತ್ತು ಮನಸ್ಸಿಗೆ ದೃಢತೆಯನ್ನು ಹಾಗೂ ಸ್ಥಿರತೆಯನ್ನು ನೀಡುತ್ತದೆ.

ಶಬ್ದಕಂಪನಗಳ ಧ್ಯಾನಕ್ರಮ: ಅ. ಉ. ಮ, ಓಂಕಾರ ಹಾಗೂ ಮಹಾಮೃತ್ಯುಂಜಯ ಮಂತ್ರದ ಧ್ವನಿತರಂಗಗಳನ್ನು ನಿರಂತರವಾಗಿ ಉತ್ಪನ್ನ ಮಾಡುವ ಮೂಲಕ ಆಹತ ಮತ್ತು ಅನಾಹತ ನಾದಗಳನ್ನು ಮಿಳಿತಗೊಳಿಸುವ ಧ್ಯಾನಕ್ರಮ ಇದಾಗಿದೆ. ಇದರಿಂದ ಸ್ವಪ್ರಜ್ಞೆ ಜಾಗೃತವಾಗಿ, ಸಕಾರಾತ್ಮಕ ಮನೋಭಾವದ ಬೆಳೆವಣಿಗೆಯಾಗುತ್ತದೆ. ಶಾಂತವಾದ ಹಾಗೂ ಅನಂತತೆಯ ಸ್ಥಿತಿಯಲ್ಲಿ ಕೈಗೊಳ್ಳುವ ಸ್ವಯಂ ಸಂಕಲ್ಪಗಳು ಒಟ್ಟಾರೆ ವ್ಯಕ್ತಿತ್ವದ ಊರ್ಜೆಗೆ ಸಹಾಯಕವಾಗಿದೆ.

ಆವರ್ತನ ಧ್ಯಾನ: ಪ್ರಜ್ಞಾಪೂರ್ವಕವಾಗಿ ಆಚರಿಸುವ ಆಸನಗಳು ಹಾಗೂ ವಿಶ್ರಾಂತಿಯ ವಿಧಾನಗಳನ್ನು ಪ್ರಚೋದನೆ & ವಿಶ್ರಾಂತಿಯ ಕ್ರಮದಲ್ಲಿ ಮಾಡುವ ಅಭ್ಯಾಸ ಇದಾಗಿದ್ದು, ಶರೀರ ಮನಸ್ಸುಗಳ ಸ್ಥಿರತೆ & ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.

ಓಂಕಾರಧ್ಯಾನ: ವಿವಿಧ ಕರ ಮುದ್ರೆಗಳೊಂದಿಗೆ ದೀರ್ಘವಾದ ಓಂಕಾರದ ಉಚ್ಚಾರಣೆಯೊಂದಿಗೆ ಆಚರಿಸುವ ಧ್ಯಾನ ಪದ್ಧತಿ ಇದಾಗಿದೆ. ಇದರಿಂದ ಮನಸ್ಸಿನ ಎಲ್ಲ ನಕಾರಾತ್ಮಕ ವಿಚಾರಗಳು & ಭಾವನೆಗಳು ನಿರ್ಮೂಲನೆಗೊಳ್ಳುತ್ತವೆ.

ಪ್ರಾರ್ಥನೆ & ಪಾರಾಯಣಗಳು: ಶುದ್ಧ ಭಕ್ತಿ, ಪ್ರೀತಿ, ದಯೆ ಹಾಗೂ ಶರಣಾಗತ ಸಮರ್ಪಣಾ ಭಾವಗಳನ್ನು ಬೆಳೆಸಲು ಪ್ರಾರ್ಥನೆ & ಪಾರಾಯಾಣಗಳಂಥ ಭಕ್ತಿಯೋಗದ ಅಭ್ಯಾಸವನ್ನು ಅಳವಡಿಸಿಕೊಳ್ಳಲಾಗಿತ್ತು.

ಸೂಕ್ತ ಆಹಾರ ಪದ್ಧತಿ: ಸಾತ್ವಿಕ ಆಹಾರ ಪದ್ಧತಿಯನ್ನು ಅನುಸರಿಸಲಾಗಿತ್ತು. ಅಂದರೆ ಸಸ್ಯಾಹಾರ, ಮಿತಾಹಾರ & ಪೌಷ್ಟಿಕಾಹಾರಗಳ ಸೇವನೆಯನ್ನು ಮಾಡಲು ಸೂಚಿಸಲಾಗಿತ್ತು.

ಉಪನ್ಯಾಸಗಳು & ಆಪ್ತಸಮಾಲೋಚನೆ: ಯೋಗದ ತಾತ್ವಿಕತೆ, ಪ್ರಾಯೋಗಿಕತೆ, ಮನೋದೈಹಿಕ ಹಾಗೂ ಮಾನಸಿಕ ಆರೋಗ್ಯದ ಕುರಿತಂತೆ ಉಪನ್ಯಾಸಗಳನ್ನು ನೀಡಲಾಯಿತು. ಅದರಂತೆ ಭಾವನಾತ್ಮಕವಾಗಿ ತುಂಬ ಬಲಹೀನವಾಗಿರುವ ವಿಧ್ಯಾರ್ಥಿನಿಯರಿಗೆ ಯೋಗದ ಪದ್ಧತಿಯ ಪ್ರಕಾರ ಆಪ್ತಸಮಾಲೋಚನೆಯನ್ನು ಕೂಡ ನಡೆಸಲಾಯಿತು.

ಈ ಮೇಲಿನ ಎಲ್ಲ ಅಭ್ಯಾಸಗಳನ್ನು ವಿಧ್ಯಾರ್ಥಿನಿಯರ ಒಟ್ಟಾರೆ ಶಾರೀರಿಕ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಉನ್ನತೀಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿತ್ತು. ಇವುಗಳನ್ನು ವಿಧ್ಯಾರ್ಥಿನಿಯರು ಪ್ರತಿದಿನ ಅಭ್ಯಾಸ ಮಾಡುತ್ತಿದ್ದರು.

ಪ್ರಯೋಗಾತ್ಮಕ ಅಧ್ಯಯನದ ವಿಶ್ಲೇಷಣೆ: ಯೋಗಾಭ್ಯಾಸವನ್ನು ಆರಂಭಿಸುವ ಮೊದಲು ವಸತಿನಿಲಯದ 126 ವಿದಾರ್ಥಿನಿಯರಿಗೆ ಹೌದು/ ಅಲ್ಲ ಎಂಬುದನ್ನು ಮಾತ್ರ ಆಯ್ಕೆ ಮಾಡುವಂಥ 60 ಪ್ರಶ್ನೆಗಳ ಪ್ರಶ್ನಾವಳಿಯನ್ನು ನೀಡಲಾಗಿತ್ತು. ಇದರಲ್ಲಿ 'ನಿಮಗೆ ವಿನಾಕಾರಣ ದು:ಖವಾಗುತ್ತದೆಯೇ?', 'ಆಗಾಗ ದೈನಂದಿನ ಚಟುವಟಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತೀರಾ?' 'ಕೂಡಲೇ ಉದ್ವೇಗಕ್ಕೆ ಒಳಗಾಗುತ್ತೀರಾ?' 'ಇತ್ತೀಚೆಗೆ ಮರೆವು ಹೆಚ್ಚಾಗಿದೆ ಎನಿಸುತ್ತದೆಯೇ?'ಇತ್ಯಾದಿ ಪ್ರಶ್ನೆಗಳನ್ನು ನೀಡಲಾಗಿತ್ತು. ಇವುಗಳಿಗೆ ಪ್ರತಿಶತ 80 ರಷ್ಟು 'ಹೌದು' ಎಂದು ಆಯ್ಕೆ ಮಾಡಿದ 58 ವಿದ್ಯಾರ್ಥಿನಿಯರಿಗೆ 8 ಆಯಾಮಗಳನ್ನು ಒಳಗೊಂಡ ಪ್ರಶ್ನಾವಳಿಯನ್ನು ನೀಡಲಾಯಿತು. ಇದರಲ್ಲಿ ವಿದ್ಯಾರ್ಥಿನಿಯರ ಭಾವನಾತ್ಮಕ ಸಾಮರ್ಥ್ಯ, ಮನೋಭಾವದ ಸ್ಥಿರತೆ, ಆತ್ಮವಿಶ್ವಾಸದ ಮಟ್ಟ, ಚುರುಕುತನ, ಧೈರ್ಯ, ಬದ್ಧತೆ, ಪರೋಪಕಾರಿ ವರ್ತನೆ, ಅನುಭೂತಿ ಶಕ್ತಿ ಮೊದಲಾದ ಭಾವನಾತ್ಮಕ ಅಸಮತೋಲನವ ವಿವಿಧ ಮಗ್ಗುಲಗಳನ್ನು ತೋರಿಸಲಾಗಿತ್ತು. ಪ್ರತಿ ಪ್ರಶ್ನೆಗೆ 'ಯಾವಾಗಲೂ/ ಆಗಾಗ/ ಎಂದೂ ಇಲ್ಲ ಎಂಬ ಮೂರು ಆಯ್ಕೆಗಳನ್ನು ಹಾಗೂ ಅವುಗಳಿಗೆ ನಿರ್ದಿಷ್ಟ ಅಂಕಗಳನ್ನು ನೀಡಲಾಗಿತ್ತು.

ನಿತ್ಯ ಯೋಗಾಭ್ಯಾಸದಿಂದ ವಿದ್ಯಾರ್ಥಿನಿಯರ ಭಾವನಾತ್ಮಕ ಅಸಮತೋಲನದಲ್ಲಿ ಉಂಟಾದ ಸುಧಾರಣೆ:

ಭಾವನಾತ್ಮಕ ಸಮತೋಲನದ 8 ಆಯಾಮಗಳಿಗೆ ವಿದ್ಯಾರ್ಥಿನಿಯರು ಪಡೆದ ಸರಾಸರಿ ಅಂಕಗಳು (ಒಟ್ಟು=58).

ಆಯಾಮಗಳು	**ಯೋಗಕ್ಕೆ ಮೊದಲು**	**ಯೋಗದ ನಂತರ**
ಭಾವನಾತ್ಮಕ ಸಾಮರ್ಥ್ಯ Emotional Strength	45.31	50.68
ಮನೋಭಾವದ ಸ್ಥಿರತೆ Mood Stability	44.64	55.54
ಆತ್ಮವಿಶ್ವಾಸ Confidence	46.17	53.83
ಚುರುಕುತನ Activene	46.05	53.95
ಧೈರ್ಯ Courage	48.57	51.43
ಬದ್ಧತೆ Commitment	47.21	52.79
ಪರೋಪಕಾರಿ ವರ್ತನೆ Altruistic behavior	47.07	52.93
ಅನುಭೂತಿ ಶಕ್ತಿ Empathy	45.78	54.22

ಸರಾಸರಿ ಅಂಕಗಳನ್ನು ತೋರಿಸುವ ಲಂಬನಕ್ಷೆ



ಭಾವನಾತ್ಮಕ ಸಮತೋಲನದ 8 ಆಯಾಮಗಳಿಗೆ ವಿದ್ಯಾರ್ಥಿನಿಯರು ಪಡೆದ ಸರಾಸರಿ ಅಂಕಗಳ ಖಆ & ಣ –ಮೌಲ್ಯ

ಆಯಾಮಗಳು	ಯೋಗಕ್ಕೆ ಮೊದಲು		ಯೋಗದ ನಂತರ		ಸುಧಾರಣೆಯ ಪ್ರಮಾಣ
	Mean	SD	Mean	SD	t-Value
ಭಾವನಾತ್ಮಕ ಸಾಮರ್ಥ್ಯ Emotional Strength	45.31	11.21	50.68	8.37	5.73***
ಮನೋಭಾವದ ಸ್ಥಿರತೆ Mood Stability	44.64	8.64	55.54	8.04	8.88***
ಆತ್ಮವಿಶ್ವಾಸ Confidence	46.17	11.09	53.83	7.01	6.03***
ಚುರುಕುತನ Activeness	46.05	11.17	53.95	6.72	6.1***
ಧೈರ್ಯ Courage	48.57	11.73	51.43	7.76	2.22***
ಬದ್ಧತೆ Commitment	47.21	11.88	52.79	6.7	4.14***
ಪರೋಪಕಾರಿ ವರ್ತನೆ Altruistic behavior	47.07	12.1	52.93	6.16	4.88***
ಅನುಭೂತಿ ಶಕ್ತಿ Empathy	45.78	11.18	54.22	6.36	5.47***

***p<0.001 = Very highly significant

ಸರಾಸರಿ ಅಂಕಗಳ SD, t –ಮೌಲ್ಯ ಮತ್ತು p - ಮೌಲ್ಯ ತೋರಿಸುವ ಲಂಬನಕ್ಷೆ



ಫಲಿತಾಂಶಗಳ ಚರ್ಚೆ: ಕೋಷ್ಟಕದಲ್ಲಿ ತೋರಿಸಿದಂತೆ ಭಾವನಾತ್ಮಕ ಸಮತೋಲನವನ್ನು ಪ್ರಸ್ತುತಪಡಿಸುವ 8 ಆಯಾಮಗಳ ಒಟ್ಟು ಅಂಕಗಳ ಒಟ್ಟು ಮೊತ್ತವು ಯೋಗಾಭ್ಯಾಸಕ್ಕಿಂತ ಮೊದಲು ಕಡಿಮೆ ಇದೆ ಮತ್ತು ಯೋಗಾಭ್ಯಾಸದ ನಂತರ ಗಣನೀಯವಾಗಿ ಹೆಚ್ಚಳವಾಗಿದೆ. ಭಾವನಾತ್ಮಕ ಸಮತೋಲನದ 8 ಆಯಾಮಗಳಲ್ಲಿ ಭಾವ ಸಾಮರ್ಥ್ಯ, ಆತ್ಮವಿಶ್ವಾಸ ಚುರುಕುತನ, ಧೈರ್ಯ, ಬದ್ಧತೆ, ಪರಹಿತ ಚಿಂತನೆಗಳು ಮತ್ತು ಅನುಭೂತಿ ಶಕ್ತಿ ಮೊದಲಾದವುಗಳು ಕೂಡ ಸುಧಾರಿಸಿದ್ದನ್ನು ಕಾಣಬಹುದು.

ವಿದ್ಯಾರ್ಥಿನಿಯರು ನಿತ್ಯಯೋಗಾಭ್ಯಾಸ ಮಾಡಿದ್ದರಿಂದ ಶಾರೀರಿಕವಾಗಿ ಮೃದುತ್ವ ಹೆಚ್ಚಾಗಿ ನೋವುಗಳು ನಿವಾರಣೆಯಾದವು. ದೇಹದಲ್ಲಿ ಹಗುರತೆ, ಸುಲಭವಾದ ಚಲನೆ, ಸಾಮರ್ಥ್ಯವೃದ್ಧಿ ಹಾಗೂ ಆರೋಗ್ಯವನ್ನು ಪಡೆದುಕೊಂಡರು. ಜೊತೆಗೆ ಅವರ ಉಸಿರಾಟದ ಸಾಮರ್ಥ್ಯ ಕೂಡ ಸುಧಾರಿಸಿತು. ಹಸಿವು, ನಿದ್ರೆಗೆ ಸಂಬಂಧಿಸಿದ ತೊಂದರೆಗಳು ಕಡಿಮೆಯಾದವು.

ವಿದ್ಯಾರ್ಥಿನಿಯರು ದಿನಪೂರ್ತಿ ತಾಜಾತನವನ್ನು ಅನುಭವಿಸುತ್ತಿದ್ದರು ಮತ್ತು ಹೆಚ್ಚು ಕ್ರಿಯಾಶೀಲರಾಗಿದ್ದರು. ಅವರು ಸಾಮಾನ್ಯವಾಗಿ ವ್ಯಕ್ತಮಾಡಿದ್ದ ಮಾನಸಿಕ ಒತ್ತಡ ಉದ್ವೇಗ, ಖಿನ್ನತೆ, ಕಿರಿಕಿರಿ ಇತ್ಯಾದಿ ಮಾನಸಿಕ ನ್ಯೂನತೆಗಳು ಕಡಿಮೆಯಾದವು. ಏಕಾಗ್ರತೆಯಲ್ಲಿ ಹೆಚ್ಚಳ ಹಾಗೂ ನೆನಪಿನ ಶಕ್ತಿಯಲ್ಲಿ ವೃದ್ಧಿಯಾಯಿತು. ಮನೋದೈಹಿಕ ಸಮತೋಲನದಲ್ಲಿ ಗಣನೀಯವಾದ ಸುಧಾರಣೆಯಾಯಿತು.

ಯೋಗಾಭ್ಯಾಸದಿಂದ ಅವರ ಜೀವನ ಪದ್ಧತಿಯೇ ಬದಲಾಯಿತು ಹಾಗೂ ಜೀವನದಲ್ಲಿ ಆತ್ಮವಿಶ್ವಾಸ ಮತ್ತು ಪ್ರೀತಿಯನ್ನು ಬೆಳೆಸಿಕೊಂಡರು. ಅವರ ಅಧ್ಯಯನ ಸಾಮರ್ಥ್ಯದಲ್ಲಿ ಸುಧಾರಣೆಯಾಯಿತು. ವಿದ್ಯಾರ್ಥಿನಿಯರಲ್ಲಿ ಆಧ್ಯಾತ್ಮಿಕ ಒಲವು ಹೆಚ್ಚಾಯಿತು. ಒಟ್ಟಾರೆ ಅವರ ವ್ಯಕ್ತಿತ್ವವು ಗುಣಾತ್ಮಕವಾಗಿ ಪರಿವರ್ತನೆ ಹೊಂದಿತು ಹಾಗೂ ತಾವು ಬದುಕನ್ನು ನೋಡುವ ದೃಷ್ಟಿಕೋನವೇ ಬದಲಾಯಿತೆಂದು ತಮ್ಮ ಅಭಿಪ್ರಾಯದಲ್ಲಿ ತಿಳಿಸಿದ್ದರು.

ಸಲಹೆಗಳು: ಯೋಗ ತಜ್ಞರ ಹಾಗೂ ವೈದ್ಯಕೀಯ ಕ್ಷೇತ್ರದ ಸಹಯೋಗದಲ್ಲಿ ಯೋಗದ ಕುರಿತು ಸಂಶೋಧನೆ ಮಾಡುವ, ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ತರಬೇತಿ ನೀಡುವ ಕಾರ್ಯಕ್ರಮವನ್ನು ಆಯೋಜಿಸುವದು ಈ ನಿಟ್ಟಿನಲ್ಲಿ ಮಾಡಲೇಬೇಕಾದ ಆದ್ಯ ಕಾರ್ಯವಾಗಿದೆ. ವಿಶೇಷವಾಗಿ ಯುವಜನತೆಯಲ್ಲಿ ಈ ಕುರಿತು ಅರಿವು ಮೂಡಿಸುವ ಪ್ರಯತ್ನಗಳನ್ನು ವ್ಯಾಪಕವಾಗಿ ಕೈಗೊಂಡರೆ ಭವಿಷ್ಯದ ಸಮಾಜವು ಅನಾರೋಗ್ಯದಿಂದ ಮುಕ್ತವಾಗಬಹುದು.

ಉಪಸಂಹಾರ: ಒಟ್ಟಾರೆ ಒಬ್ಬ ಆರೋಗ್ಯವಂತ ಮನುಷ್ಯನ ವ್ಯಾಖ್ಯಾನವು ಅವನ ಶಾರೀರಿಕ, ಮಾನಸಿಕ ಸ್ವಾಸ್ಥ್ಯದ ಜೊತೆಗೆ ಅವನ ಬದುಕುತ್ತಿರುವ ಸಮಾಜದೊಡನೆ ಹೊಂದಾಣಿಕೆ ಹಾಗೂ ವೈಯಕ್ತಿಕವಾದ ಆಧ್ಯಾತ್ಮಿಕ ಉನ್ನತೀಕರಣವನ್ನು ಒಳಗೊಂಡಿರುತ್ತದೆ. ಮನುಷ್ಯ ಆರೋಗ್ಯವಂತನಾಗಿರಬೇಕಾದರೆ ಈ ಎಲ್ಲ ಆಯಾಮಗಳ ಸ್ವಾಸ್ಥ್ಯ ಮತ್ತು ಅವುಗಳಲ್ಲಿಯ ಸಾಮರಸ್ಯ ಅಗತ್ಯವಾಗಿದೆ. ಪ್ರಾಚೀನ ಕಾಲದ ಮನಶಾಸ್ತ್ರ ಎಂದೇ ಪರಿಗಣಿಸಲ್ಪಟ್ಟಿರುವ ಯೋಗವು ಮನೋವೃತ್ತಿಗಳನ್ನು ನಿರೋಧಿಸುವ ಮೂಲಕ ಪರಿಪೂರ್ಣbfg ಆರೋಗ್ಯವನ್ನು ಪಡೆಯಬಹುದಾದ ಒಂದು ವೈಜ್ಞಾನಿಕವಾದ ಸಾಧನಾಮಾರ್ಗವಾಗಿದೆ. "ಮನಯೇವ ಮನುಷ್ಯಾಣಾಂ ಬಂಧ ಮೋಕ್ಷಯೋಹೋ" ಎಂದು ಹೇಳಿರುವಂತೆ ಮನುಷ್ಯನ ಅನಾರೋಗ್ಯದ ಬೀಜ ಮನಸ್ಸೇ ಆಗಿದೆ. ಈ ಮನಸ್ಸಿನ ಸಂಸ್ಕಾರಗಳು ಹಾಗೂ ಆಲೋಚನೆ (ವೃತ್ತಿ) ಗಳೇ ಎಲ್ಲ ರೀತಿಯ ವ್ಯಾಧಿಗಳು ಮತ್ತು ದುಃಖದ ಮೂಲವಾಗಿದೆ. ಹಾಗಾಗಿ ಮನಸ್ಸನ್ನು ಶುದ್ಧವಾಗಿ, ಶಾಂತವಾಗಿಡುವ ಮೂಲಕ ಶಾರೀರಿಕ ಆರೋಗ್ಯ, ಸಾಮಾಜಿಕ ಬದುಕಿನಲ್ಲಿ ಸಾಮರಸ್ಯ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಹುದಾಗಿದೆ.

ಆಧಾರಗಳು:

1. Nagaratna R. and Ngendra N. (2013),: Integrated approach of yoga therapy for Positive Heath. Swami Vivekananda Yoga Prakashana, Bangaluru.

2. Collins C.: Yoga Intuition, preventive medicine, and treatment. J Obstet Gynecol Neonatal Nurs. 1998;27:563–8. [PubMed]

3. Desikachar K, Bragdon L, Bossart C. The yoga of healing: Exploring yoga's holistic model for health and well-being. Int J Yoga Ther. 2005;15:17–39.

4. Woolery A, Myers H, Stemliebm B, Zeltzer L. A yoga intervention for young adults with elevated symptoms of depression. Altern Ther Health Med. 2004;10:60–3. [PubMed]

5. Michalsen A, et al. Rapid stress reduction and anxiolysis among distressed women as a consequence of a three-month intensive yoga program. Med Sci Monit. 2005;11:CR555–61. [PubMed]

6. Yoga for Rehabilitation - Shirley Telles, Conference Souvenir of the Yoga Mahotsav, Rishikesh : March, 2008

7. ಸಕಲರಿಗೂ ಯೋಗ, ಶರೀರ ವ್ಯಾಧಿ ಹಾಗೂ ಮನೋವ್ಯಾಧಿಗಳಿಗೆ ಉಪಚಾರ– ಡಾ. ಬಿ.ಕೆ.ಎಸ್. ಅಯ್ಯಂಗಾರ, ಶ್ರೀ,ಪತಂಜಲಿ ಯೋಗ ಶಿಕ್ಷಣ ಸಮಿತಿ(ರಿ), ಕರ್ನಾಟಕ.

ಮಾನವನ ಐಚ್ಛಿಕ ವಿಕಾಸದ ಹಾದಿಯಲ್ಲಿ ವ್ಯಕ್ತೀಕರಣ ಎಂಬುವುದರ ಪಾತ್ರ

ಚಂದ್ರಮೌಳಿ ಎಂ.ಎಸ್
ಮನಃಶಾಸ್ತ್ರಜ್ಞ, ಬೆಂಗಳೂರು

ಭಾರತೀಯ ತಾತ್ವಿಕ ವಿಜ್ಞಾನದಲ್ಲಿ ವೇದಗಳು, ಉಪನಿಷತ್ತುಗಳು ಇರುವುದು ಸರಿಯಷ್ಟೆ. ಇವುಗಳು ಸೃಷ್ಟಿಯ ಬಗೆಗೆ, ಸೃಷ್ಟಿಯ ಪೂರ್ವದ ಕಡೆಗೆ, ಸೃಷ್ಟಿಯ ನಂತರದಡೆಗೆ ಕರ್ಮ ಹಾಗು ಜ್ಞಾನ ಎಂಬೆರಡು ವಿಚಾರಗಳನ್ನು ಸವಿಸ್ತಾರವಾಗಿ ತಿಳಿಸುವುದಿದೆ. ಇವೆಲ್ಲದರ ಅವಶ್ಯಕತೆಯು ಯಾವುದೇ ವ್ಯಕ್ತಿಗೆ ಇರುವುದಾಗಿದೆ, ಏಕೆಂದರೆ, ಅವನ ಜೀವನದ ಮಹತ್ವದ ಗುರಿಯು ಐಚ್ಛಿಕ ವಿಕಾಸ ಎಂತೆಂಬುವುದನ್ನು ಸಾಧಿಸುವುದಷ್ಟೇ ಇರುವ ಕಾರಣದಿಂದಾಗಿಯೆ.

'ಏತಮಾನಮಾನಂದಮಯಮುಪಸಂಕ್ರಾಮತಿ' ಎಂಬ ಉಕ್ತಿಯು ಉಪನಿಷತ್ತಿನಲ್ಲಿ ಇರುವುದು ಸರಿಯಷ್ಟೆ. ಇದರ ಅರ್ಥವು, 'ಯಾವುದೇ ವ್ಯಕ್ತಿಯಲ್ಲಿ ಇರುವಂಥಾ ಆತ್ಮವು, ಆನಂದ ಎಂಬುವುದನ್ನು ಹೊಂದಲು ಅದರ ಎಡೆಗೆ ಸದಾಕಾಲವೂ ಚಲಿಸುವುದು' ಎಂಬುದಾಗಿದೆ. ಇದರ

ಗೂಢಾರ್ಥವು, 'ವಿಕಾಸ' ಎಂಬುವುದರೆಡೆಗೆ ಆತ್ಮವು ಚಲಿಸುವುದೇ ಆಗಿರುವುದಿದೆ. ಆತ್ಮವು ಪರಿಪೂರ್ಣವಾಗಿದ್ದರೂ ಅದನ್ನು ಹೊಂದಿರುವಂಥಃ ಅಸ್ತಿತ್ವವು ವಿಕಾಸದ ಹಾದಿಯಲ್ಲಿನ ಮಧ್ಯಂತರದಲ್ಲಿ ಇರುವುದರ ಕಾರಣದಿಂದಾಗಿ, ತನ್ನನ್ನು ತಾನು ಮೋಹ, ಮಾಯಾದಿಗಳ ಪ್ರಯುಕ್ತತೆಯಿಂದ ಸ್ವತಂತ್ರಗಳಿಸಿಕೊಳ್ಳುವುದು ಅತ್ಯಂತ ಅವಶ್ಯವಾಗಿರುವುದಿದೆ. ಸ್ವಂತಂತ್ರ ಗಳಿಸಿಕೊಳ್ಳುವಿಕೆಯ ಪ್ರಾಥಮಿಕ ಹಂತವು ಹತ್ತು ಹಲವಾರು ವಿಷಯಗಳನ್ನು 'ವ್ಯಕ್ತೀಕರಣ' ಎಂತೆಂಬುವುದಾಗಿ ಸಾಧಿಸಿಕೊಳ್ಳುವುದೇ ಆಗಿರುವುದಿದೆ. ಹೀಗಾಗಿ, ವ್ಯಕ್ತೀಕರಣ ಎಂಬ ವಿಚಾರವನ್ನು ಮನಃಶಾಸ್ತ್ರದ ಸ್ತರದಲ್ಲಿ ಈ ಪ್ರಬಂಧದ ಮೂಲಕ ಅವಲೋಕಿಸಿರುವುದಿದೆ.

ವಿಕಾಸದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು ಇರುವುದಾಗಿದೆ. ಇವುಗಳು ಮೊದಲನೆಯದಾಗಿ ಪ್ರಾಕೃತಿಕ ವಿಕಾಸ ಹಾಗು ಎರಡೆನೆಯದು ಐಚ್ಛಿಕ ವಿಕಾಸ ಎಂಬುದಾಗಿದೆ. ಪ್ರಾಕೃತಿಕ ಐಚ್ಛಿಕ ವಿಕಾಸ ಪ್ರಕ್ರಿಯೆಯಲ್ಲಿ, 'ಪ್ರಕೃತಿ' ಹಾಗು 'ಪುರುಷ' ಎಂಬೆರಡು ಸಂಗತಿಗಳು ಮಹತ್ವ ಪಾತ್ರವನ್ನು ವಹಿಸಿರುವುದಾಗಿ ವೇದ ವಿಜ್ಞಾನದ ಅಧ್ಯಯನದಿಂದ ಸಕಲರಿಗೂ ತಿಳಿದುಬರುವಂಥಃ ವಿಷಯವೇ ಆಗಿರುವುದಿದೆ. ಇವೆರಡೂ ಸಂಗತಿಗಳು ಸೃಷ್ಟಿಯ ಸ್ತರದಲ್ಲಿನ ಮಹತ್ವದ ಸ್ಥಿರರಾಶಿಗಳೇ ಆಗಿರುವುದಿದೆ.

ವೇದ ವಿಜ್ಞಾನ ಪ್ರಕಾರದಲ್ಲಿ ಶಕ್ತಿ ಹಾಗು ಸಾಮರ್ಥ್ಯ ಎಂಬುವುಗಳೇ ಸೃಷ್ಟಿಯ ಮೂಲಭೂತ ಅಂಶಗಳೇ ಆಗಿರುವುದಿದೆ. ಪ್ರಕೃತಿಯ ಎಂತೆಂಬುವುದು ಪ್ರಮುಖವಾಗಿ 'ಧನಾತ್ಮಕ' ಹಾಗು 'ಋಣಾತ್ಮಕ' ಎಂಬಂಥಃ ಶಕ್ತಿಗಳನ್ನು ಹೊಂದಿದ್ದರೆ (ಪ್ರಸಕ್ತದಲ್ಲಿ ಧನಾತ್ಮಕ ಹಾಗು ಋಣಾತ್ಮಕ ಎಂಬ ಪದಗಳು ಕೇವ ಶಕ್ತಿಯ ಅಂಶಗಳನ್ನು ಮಾತ್ರವೇ ಸೂಚಿಸುವುದಾಗಿದೆ), ಪುರುಷ ಎಂಬ ಸ್ಥಿರ ರಾಶಿಯದ್ದು 'ಸಾಮರ್ಥ್ಯ' ಎಂತೆಂಬುದೇ ಆಗಿರುವುದಿದೆ. ಪುರುಷ ಹಾಗು ಪ್ರಕೃತಿಯ ಮೂಲಭೂತ ಅಂಶಗಳ ಪ್ರಯುಕ್ತವಾಗಿಯೇ ಸೃಷ್ಟಿಯು ಕೃತಗೊಳ್ಳುವುದಾಗಿದೆ. ಸೃಷ್ಟಿಯ ಕೃತಗೊಳ್ಳುವಿಕೆಯ ಪ್ರಕ್ರಿಯೆಯ ಹಿಂದಿರುವಂಥಃ ಸಾಮರ್ಥ್ಯವು 'ಅಪೌರುಷೇಯವೇ' ಆಗಿರುವುದಿದೆ. ಅರ್ಥಾತ್, ಯಾವುದೇ ಎರಡು ಶಕ್ತಿಯು, ಧನಾತ್ಮಕ ಹಾಗು ಋಣಾತ್ಮಕ ಎಂಬುವುದರ ಸಂಯೋಜನೆಯು, ತಟಸ್ಥ ಎಂಬಂಥಃ ಮೂರನೇ ಶಕ್ತಿಯ ಒಳಗೊಳ್ಳುವಿಕೆಯ ಪ್ರಯುಕ್ತತೆಯಿಂದಾಗಿ ಮಾತ್ರವೇ ಹಳೆಯದಕ್ಕಿಂತ ಭಿನ್ನವಾದಂಥಃ, ಹೊಸತನದಿಂದ ಕೂಡಿರುವಂಥಃ, ನವ ರೀತಿಯ ಫಲಿತಾಂಶವನ್ನು ಆ ಅಪೌರುಷೇಯವು (ಸಾಮರ್ಥ್ಯವು) ಕೊಡಮಾಡುವುದಿದೆ. ಈ ಒಂದು ಪ್ರಕ್ರಿಯೆಯ ಭಿನ್ನವಾದಂಥಃ ಫಲ ಎಂಬುದಕ್ಕೆ ಕಾರಣವು, ಅಪೌರುಷೇಯ ಎಂಬುದೇ ಆಗಿರುವುದಿದೆ, ಅರ್ಥಾತ್, ಕಾರಣ ಎಂತೆಂಬುದು ಯಾವುದರ ಪ್ರಯತ್ನದ ಫಲವೂ ಆಗಿರದೆ, ಅಪೌರುಷೇಯ ಸಾಮರ್ಥ್ಯದ ಇಚ್ಛೆ ಎಂಬುದೇ ಆಗಿರುವುದಿದೆ.

ಇದು ಹೀಗೆಯೇ ಆಗಬೇಕು ಎಂಬುವುದರ ಹಿಂದಿರುವಂಥಃ ಕಾರಣವಾದರು ಏನು? ಎಂತೆಂಬಂಥಃ ಪ್ರಶ್ನೆಯು ಸಾಧಕನನ್ನು ಕಾಡಬಹುದಿದೆ. ಇದಕ್ಕೆ ಉತ್ತರವು, 'ಋತ' ಹಾಗು 'ಸತ್ಯ' ಎಂಬುದು ಎಂದಾಗಿ ವೇದ ವಿಜ್ಞಾನವು ಉಲ್ಲೇಖಿಸಿರುವುದಿದೆ. ಋತ ಎಂತೆಂಬುವುದು 'ವಿಶ್ವ ಕ್ರಮ' ಎಂಬುದಾದರೆ, ಸತ್ಯ ಎಂತೆಂಬುವುದು ಋತದ 'ತತ್ತ್ವ' ಎಂತೆಂಬುವುದೇ ಆಗಿರುವುದಿದೆ. ವಿಶ್ವ ಎಂತೆಂಬುವುದು 'ಇಂಥಃದ್ದೇ ಕ್ರಮದಲ್ಲಿ ಇರಬೇಕು' ಎಂತೆಂಬುದಾಗಲೀ, ಹಾಗು ಅದರ 'ತತ್ತ್ವವು ಹೀಗೆಯೇ ಇರಬೇಕು' ಎಂತೆಂಬುವುದು ವೇದ ವಿಜ್ಞಾನದ ಪ್ರಕಾರದಲ್ಲಿ ಅಪೌರುಷೇಯದ ಕಾರಣದಿಂದಲೇ ಆಗಿರುವುದಿದೆ. ಅರ್ಥಾತ್, ಈ ಪ್ರಕಾರಗಳು ಯಾವುದೇ ಅಸ್ತಿತ್ವದ ಪ್ರಯತ್ನ ಎಂಬುದರ ಫಲ ಆಲ್ಲವು ಎಂಬುದಾಗಿದೆ. ಸೃಷ್ಟಿಗೆ ಕಾರಣವಾಗಿರುವಂಥಃ ಪ್ರಕೃತಿ ಹಾಗು ಪುರುಷ ಎಂಬುವುದರ ಕ್ರಮ ಹಾಗು ಅವುಗಳ ಕಾರ್ಯನೀತಿಗಳ ಹಿಂದಿರುವ ತತ್ತ್ವಗಳ ರೂಪರೇಶೆಗಳು ಅಪೌರುಷೇಯವೇ ಆಗಿರುವುದಿದೆ.

ಸೃಷ್ಟಿಯ ವ್ಯಾಪ್ತಿಯಲ್ಲಿ ಕೃತಗೊಳ್ಳುವಂಥಃ ಫಲಗಳು ಎರಡು ರೀತಿಯಲ್ಲಿ ಇರುವುದಾಗಿದೆ. ಇವುಗಳು ಕ್ರಮವಾಗಿ 'ಕಲ್ಪಿತ ವಸ್ತು' ಹಾಗು 'ಸ್ಪಷ್ಟಗೊಳ್ಳುವಿಕೆ' (ಕುರುಹು) ಎಂತೆಂಬುದೇ ಆಗಿರುವುದಿದೆ. ಇವುಗಳು ಸೃಷ್ಟಿಯ ಸ್ತರದಲ್ಲಿ ಆಗಲೇ ಇರುವಂಥಃ ದ್ರವ್ಯ ಹಾಗು ಶಕ್ತಿ ಎಂಬೆರಡನ್ನು ಉಪಯೋಗಿಸಿಕೊಂಡು ತಮ್ಮ ಕಾರ್ಯವನ್ನು ಕೃತಗೊಳಿಸಿಕೊಳ್ಳುವುದಿದೆ. ಶಕ್ತಿ ಎಂತೆಂಬುವುದು ಮೂರು ರೀತಿಗಳಲ್ಲಿ ಇರುವುದಾಗಿದ್ದು, ಅದು ಕ್ರಮವಾಗಿ ಧನಾತ್ಮಕ, ಋಣಾತ್ಮಕ ಹಾಗು ತಟಸ್ಥ ಎಂಬುವುಗಳೇ ಆಗಿರುವುದಿದೆ. ಧನಾತ್ಮಕ ಹಾಗು ಋಣಾತ್ಮಕ ಎಂಬಂಥಃ ದ್ರವ್ಯ ಶಕ್ತಿಗಳು, ಮೂಲಭೂತ ಪದಾರ್ಥವನ್ನು ಪ್ರಕ್ರಿಯೆಗೆ ಒದಗಿಸುವುದಾಗಿದ್ದರೆ, ತಟಸ್ಥ ಎಂಬಂಥಃ ಶಕ್ತಿಯು ಇವುಗಳ ಮಿಶ್ರಣದ ರೂಪಾಂತರಕ್ಕೆ ಕಾರಣವಾಗುವುದಿದೆ. ಫಲಿತ ಎಂತೆಂಬುದು ಕಲ್ಪಿತ ವಸ್ತು ಎಂಬುದಾಗಿದ್ದರೆ, ರೂಪಾಂತರಗೊಳ್ಳುವಿಕೆಯು ಸ್ಪಷ್ಟಗೊಳ್ಳುವಿಕೆಯೇ ಆಗಿರುವುದಿದೆ. ಉದಾಹರಣೆಗೆ, ಗೋಧಿಹಿಟ್ಟು ಹಾಗು ನೀರು ಎಂತೆಂಬುದನ್ನು ಮಿಶ್ರಣಮಾಡಿಟ್ಟು, ಅದನ್ನು ಏನಾದರೂ ಬೆಂಕಿಯ ಶಾಖದಲ್ಲಿ ಸುಟ್ಟರೆ, ರೊಟ್ಟಿ ಎಂಬುದಾಗಿ ರೂಪಾಂತರಗೊಳ್ಳುವುದಿದೆ. ಒಂದು ವೇಳೆ ಬೆಂಕಿಯ ಶಾಖದಲ್ಲಿ ಸುಡದಿದ್ದರೆ ಅದರ ಮೂಲವಸ್ತುಗಳು ಯಾವುದೇ ಬದಲಾವಣೆ ಇಲ್ಲದಂತೆ ಹಾಗೆಯೇ ಉಳಿದುಕೊಳ್ಳುವುದಿದೆ. ಸುಟ್ಟರೆ ಮಾತ್ರವೇ ಭಿನ್ನವಾದಂಥಃ ಗುಣಗಳಿಂದ ಕೂಡಿದಂಥಃ ಫಲವು ಕೃತವಾಗುವುದಿದೆ.

ಪ್ರಾಕೃತಿಕವಾದಂಥಃ ವಿಕಾಸದ ಸ್ತರದಲ್ಲಿ ದ್ರವ್ಯ ಹಾಗು ಶಕ್ತಿಯ ಎಂಬುವುಗಳು ಪಾತ್ರವಹಿಸುವುದಾಗಿದ್ದು, ಅಪೌರುಷೇಯ ಎಂತೆಂಬ ಮಹತ್ವ ಸ್ಥಿರ ರಾಶಿಯಿಂದ ಸೃಷ್ಟಿಯು ಕೃತಗೊಳ್ಳುವುದಾಗಿದೆ. ಆದರೆ ಮಾನವನ ಐಚ್ಛಿಕ ವಿಕಾಸ ಎಂಬ ಸ್ತರದಲ್ಲಿ, ದ್ರವ್ಯ ಹಾಗು ಶಕ್ತಿ ಎಂತೆಂಬ ಸ್ಥಿರ ರಾಶಿಗಳ ಜೊತೆಗೆ ಭಾವ ಎಂತೆಂಬುದೂ ಕೂಡ ಇರುವುದಾಗಿದ್ದು, ಅಪೌರುಷೆಯ ಎಂತೆಂಬುವುದರ ಪಾತ್ರವನ್ನು 'ಬೌದ್ಧಿಕತೆ' ಎಂಬುವುದರ ಸಲಕರಣೆಯಿಂದ ಮಾತ್ರವೇ ವಾಸ್ತವಿಕ ಸ್ತರದಲ್ಲಿ ಕೃತಗೊಳಿಸಿಕೊಳ್ಳಬೇಕಾಗಿರುವುದಿದೆ. ವೇದ ವಿಜ್ಞಾನ ಹಾಗು ಮನಃಶಾಸ್ತ್ರದ ಪ್ರಕಾರವಾಗಿ, ದ್ರವ್ಯ ಹಾಗು ಶಕ್ತಿ ಎಂತೆಂಬ ಸ್ಥಿರ ರಾಶಿಗಳು ಯಾವುದೇ ವ್ಯಕ್ತಿಗೆ ಸಂಬಂಧಿಸಿದಂತೆ, ಅಪ್ರಜ್ಞಾ ಸ್ವರೂಪ ಸ್ಥಿತಿಯ ಸ್ತರದಲ್ಲಿ

ಇರುವುದಾಗಿದ್ದರೆ, ಬೌದ್ಧಿಕತೆ ಎಂತೆಂಬುದು ಪ್ರಜ್ಞಾ ಸ್ವರೂಪದ ಸ್ಥಿತಿಯಲ್ಲಿ ಇರುವುದಾಗಿದೆ.

ಬಹುತೇಕ ರೀತಿಯ ಧನಾತ್ಮಕ, ಋಣಾತ್ಮಕ ಹಾಗು ತಟಸ್ಥ ಎಂತೆಂಬ ಶಕ್ತಿ-ತ್ರಯಗಳು, ವ್ಯಕ್ತಿಯಲ್ಲಿಯೇ ಇರುವಂಥಃ 'ಪರಿಪೂರ್ಣತೆ' ಎಂಬುದರಲ್ಲಿಯೇ ಇರುವುದಾಗಿದೆ. ವೇದ ವಿಜ್ಞಾನ ಪ್ರಕಾರವೇ ಆದಂಥಃ ಗೌಡಪಾದರ ಕಾರಿಕೆಗಳ ಪ್ರಕಾರದಲ್ಲಿ, ಪರಿಪೂರ್ಣತೆ ಎಂತೆಂಬುದು ವ್ಯಕ್ತಿಯಲ್ಲಿ ಆಳವಾದಂಥಃ ನಿದ್ರಾವಸ್ಥೆಯಲ್ಲಿ ಕಂಡುಬರುವಂಥಃ 'ಶುದ್ಧ ಪ್ರಜ್ಞೆ' ಎಂಬ ಸ್ತರದಲ್ಲಿಯೇ ಅಡಕವಾಗಿರುವುದಿದೆ. ಇವುಗಳನ್ನು ಕೃತಗೊಳಸಿಕೊಳ್ಳಬೇಕಾದಲ್ಲಿ, ನಾಲ್ಕನೆಯ ಶಕ್ತಿಯನ್ನು ಸಾಧಕನು ಸ್ವಯಂ ಕಳಿಸಿಕೊಡಬೇಕಾಗಿರುವುದಿದೆ. ನಾಲ್ಕನೆಯ ಶಕ್ತಿಯೇ ಅವನ 'ಇಚ್ಛೆ' ಎಂಬ ಭಾವವೇ ಆಗಿರುವುದಿದೆ.

ಪರಿಪೂರ್ಣತೆ ಎಂಬುವುದರ 'ಸೃಜನಶೀಲ ಚಟುವಟಿಕೆ' ಹಾಗು 'ಸೃಷ್ಟಿಯ ನಂತರದ ವರ್ತನೆ' ಎಂಬುವುಗಳ ನಡುವಣ ವೆತ್ಯಾಸವು, 'ಪರಿಪೂರ್ಣತೆ ಎಂಬುವುದು ತನಗೋಸ್ಕರವಾಗಿಯೇ ಸೃಜನಗೊಳಿಕೊಳ್ಳುವುದಾಗಿದೆ' ಎಂತೆಂಬ ಅಂಶದಲ್ಲಿಯೇ ಅಡಕವಾಗಿರುವುದಿದೆ. ಪರಿಪೂರ್ಣತೆ ಎಂತೆಂಬುವುದು ಮಾತ್ರವೇ ಇಚ್ಛೆ ಎಂತೆಂಬುದನ್ನು ಹೊಂದಿರುವುದಾಗಿದೆ ಹಾಗು ಅದೊಂದೇ ಅವಶ್ಯವಾಗಿರುವಂಥಃ ನಾಲ್ಕನೆಯ ಶಕ್ತಿಯನ್ನು ತನ್ನಿಂದಲೇ ಕಳಿಸುವುದಾಗಿದೆ. ಆನಂತರದ ಸೃಷ್ಟಿ ಎಂಬುದರ ಕೃತ್ಯಗಳು ಯಾಂತ್ರಿಕವಾಗಿ ಮುಂದುವರೆಯುವುದಾಗಿದೆ. ಈ ಒಂದು ಮುಂದುವರಿಕೆಯು, ಆ 'ಮೂರು ಶಕ್ತಿಗಳ ಪರಸ್ಪರ ಕ್ರಿಯೆ' ಎಂಬುದರ ಅರ್ಥದಲ್ಲಿ ಇರುವುದಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಯಾವುದೇ ಒಂದು ಘಟಕವು ತನ್ನಿಂದಲೇ ಸೃಜನಗೊಳ್ಳುವುದಾಗಿರದೆ, ಅದು ಒಂದು 'ಸಮೂಹ' ಎಂಬುಬುದರಿಂದಲೇ ಸೃಷ್ಟಿಯಾಗಿರುವುದಿದೆ.

ಪರಿಪೂರ್ಣತೆಯು ಹೇಗೆ ಸೃಜಿಸುತ್ತದೆಯೋ, ಅದೇ ರೀತಿಯಲ್ಲಿ ಯಾವುದೇ ಸಾಧಕನಲ್ಲಿಯೂ ಕೂಡ ಸೃಜನತೆಯ ಪ್ರಕ್ರಿಯೆಯು ಕೃತಗೊಳ್ಳುವುದಾಗಿದೆ. ಅರ್ಥಾತ್, ಮೂರು ಶಕ್ತಿಗಳ ಪಾತ್ರವು ಸಾಧಕನ ಐಚ್ಛಿಕ ಪ್ರಕ್ರಿಯೆಯಲ್ಲೀಯೂ ಕೂಡ ಪಾತ್ರವಹಿಸುವುದಾಗಿದೆ. ಅವನು ಈ ಮೂರು ಶಕ್ತಿಗಳನ್ನು ಪ್ರಜ್ಞಾ ಪೂರ್ವಕವಾಗಿ ಅಂಗೀಕರಿಸಿಕೊಂಡು, ಅವುಗಳನ್ನು ಪುನಃ ಪ್ರಜ್ಞಾ ಪೂರ್ವಕವಾಗಿ ಹೊರಕ್ಕೆ (ಬಾಹ್ಯ ಜಗತ್ತಿಗೆ) ಕಳುಹಿಸಿಕೊಟ್ಟಲ್ಲಿ, ಸಾಧಕನು ಏನನ್ನು ಇಚ್ಛಿಸಿರುತ್ತಾನೋ ಅದನ್ನು ಕೃತಗೊಳಿಸಿಕೊಳ್ಳಬಹುದಿದೆ. ಇದೇ 'ಯದ್ಭಾವಂ ತದ್ ಭವತಿ' ಎಂತೆಂಬ ಶ್ರೀ ಶಂಕರಾಚಾರ್ಯರ ಉಕ್ತಿಯ ಹಿಂದಿನ ಮರ್ಮವೇ ಆಗಿರುವುದಿದೆ.

ಈ ಒಂದು ರೀತಿಯ ಸಂದರ್ಭದಲ್ಲಿ, ಆ ಮೂರೂ ಶಕ್ತಿಗಳು ಸಾಧಕನಿಂದಲೇ ಸ್ಪಷ್ಟೀಕರಣಗೊಳ್ಳುವುದಿದೆ ಹಾಗು ಹೊರಗಡೆ (ಬಾಹ್ಯದಲ್ಲಿ) ಮಿಶ್ರಣವಾಗುವುದಿದೆ. ವೇವ ವಿಜ್ಞಾನ, ವಿಜ್ಞಾನ ಹಾಗು ಮನಃಶಾಸ್ತ್ರ ಎಂತೆಂಬ ಮೂರೂ ಪ್ರಕಾರಗಳಲ್ಲಿ ಪ್ರತಿಯೊಂದು ಸೃಜನವೂ ವೈಯುಕ್ತಿಕ ಅಥವಾ ಉದ್ದೇಶ ಎಂಬುದಾಗಿ ಕೃತಗೊಳ್ಳುವುದಿದೆ, ಹಾಗೆಯೇ, ಪ್ರಜ್ಞಾ ಪೂರ್ವಕವೋ ಅಥವಾ ಯಾಂತ್ರಿಕವೋ ಆಗಿರುವುದಿದೆ.

ಇದುವರೆಗೆ ದಾಖಲಿಸಿದಂಥಃ ವಿಚಾರದ ಭಾಗವಾದಂಥಃ 'ಸಾಧಕನ ಐಚ್ಛಿಕ ವಿಕಾಸ' ಎಂಬುವುದನ್ನು ಮನಃಶಾಸ್ತ್ರವು 'ವ್ಯಕ್ತೀಕರಣ' ಎಂತೆಂಬುದಾಗಿ ಗುರುತಿಸಿರುವುದಿದೆ. ಈ ಶಾಸ್ತ್ರದ ಪ್ರಕಾರವಾಗಿ, 'ವ್ಯಕ್ತೀಕರಣ ಪ್ರಕ್ರಿಯೆ' ಎಂಬುವುದರಲ್ಲಿ 'ಪ್ರಜ್ಞೆ' ಎಂಬುವುದು ಮುಕ್ತಾಯಗೊಳ್ಳುವುದಿದೆ, ಹಾಗು, ಅಪ್ರಜ್ಞಾ ಅಂಶಗಳನ್ನು ಪ್ರಜ್ಞಾಸ್ತರಕ್ಕೆ ತರುವುದನ್ನೂ ಕೂಡ ಒಳಗೊಂಡಿರುವುದಿದೆ. ಮತ್ತೊಂದು ದೃಷ್ಟಿಕೋನದಲ್ಲಿ, 'ಅಭೌತ ಪ್ರಭಾವ' ಎಂಬುದಕ್ಕೆ ಒಳಗಾಗಿರುವಂಥಃ ವ್ಯಕ್ತಿಯು ಅಖಂಡವೇ ಆಗುವುದಾಗಿದ್ದು, 'ಅಹಂ ಪ್ರಜ್ಞೆ' ಎಂಬುವುದರ ಮೇಲೆ ಗಮನಾರ್ಹವಾದಂಥಃ ಪರಿಣಾಮವನ್ನು ಬೀರುವುದಿದೆ. ಒಂದು ಸಾರಿ ಅಪ್ರಜ್ಞೆ ಎಂಬುವುದರ ಘಟಕಗಳು ಪ್ರಜ್ಞಾಪೂರ್ವಕವಾದ ನಂತರದಲ್ಲಿ, ಈಗಾಗಲೇ ಅಹಂ ವ್ಯಕ್ತಿತ್ವವು ಏನನ್ನು ಹೊಂದಿರುವುದೋ ಅದರ ಜೊತೆಗೆ ಕೇವಲ ಹೊಂದಾಣಿಕೆಯಾಗುವುಷ್ಟೇ ಅಲ್ಲದೆ, ಆ ವ್ಯಕ್ತಿತ್ವವನ್ನು ಮಾರ್ಪಾಡುಗೊಳಿಸುವುದೂ ಕೂಡ ಇರುವುದಿದೆ.

ಈ ಮೇಲೆ ವ್ಯಾಖ್ಯಾನಿಸಿದಂಥಃ ಮಾರ್ಪಡಿಕೆಯ (ರೂಪಾಂತರದ) ವಿಧಿ ವಿಧಾನವನ್ನು ವಿವರಿಸುವುದು ಬಹು ಕಷ್ಟಸಾಧ್ಯವಾಗಿರುವುದಿದೆ, ಏಕೆಂದರೆ ವೇದ ವಿಜ್ಞಾನ ಪ್ರಕಾರದಲ್ಲಿನ 'ಅಪೌರುಷೇಯ' ಎಂಬುವುದರ ಪಾತ್ರ ಇರುವುದು ಒಂದು ಕಾರಣವಾದರೆ, ಮತ್ತೊಂದು ಕಾರಣವು, ಮನಃಶಾಸ್ತ್ರ ಸ್ತರದಲ್ಲಿ 'ಪ್ರಾಯೋಗಿಕವಾಗಿ' ಪ್ರಯೋಗಾಲದಲ್ಲಿ ಕಂಡುಕೊಳ್ಳುವುದು ಭಾಗಶಃ ದುಸ್ತರವೇ ಆಗಿರುವುದಿದೆ.

ವೈಜ್ಞಾನಿಕ ಸ್ತರದಲ್ಲಿನ ಮನಃಶಾಸ್ತ್ರ ಪ್ರಕಾರದಲ್ಲಿ, ವ್ಯಕ್ತೀಕರಣ ಪ್ರಕ್ರಿಯೆಯ ವಿವರವು ಈ ರೀತಿಯಾಗಿ ಇರುವುದಾಗಿದೆ: ಸಾಮಾನ್ಯವಾಗಿ 'ಅಹಂ' ಎಂದೆನ್ನುವುದು ಬಹು 'ಕಠಿಣ ಹಾಗು ವೇಗ' ಎಂಬುವುದನ್ನು ಒಳಗೊಂಡಿರುವಂಥಃ ಒಂದು 'ಸಂಕೀರ್ಣ ವ್ಯವಸ್ಥೆಯೇ' ಆಗಿರುವುದಿದೆ. 'ಪ್ರಜ್ಞೆ' ಎಂಬುವುದಕ್ಕೆ 'ಅಹಂ' ತನ್ನನ್ನು ತಾನು ನಿರ್ಬಂಧಿಸಿಕೊಂಡಿರುವುದಿದೆ. ಅಹಂ ಎಂಬುವುದರ ನಿರಂತರತೆಯಲ್ಲಿ (ರೋಗ ತೊಡಕನ್ನು ಸ್ವಯಂ ತಂದುಕೊಳ್ಳುವ ಪ್ರಯುಕ್ತತೆಯ ವಿನಃ), ಯಾವುದೇ ರೀತಿಯ ಬದಲಾವಣೆಯನ್ನು ಮಾಡಬಾರದಾಗಿರುವುದಿದೆ, ಏಕೆಂದರೆ, ಒತ್ತಡಪೂರ್ವಕವಾದಂಥಃ 'ಅಪ್ರಜ್ಞಾ ಅಂಶಗಳನ್ನು' ಪ್ರಜ್ಞೆ ಎಂಬ ಸ್ತರಕ್ಕೆ ಬಲವಂತವಾಗಿ ಹೇರುವುದರಿಂದ ಅದು 'ಹಿಂಸಾತ್ಮಕವಾದಂಥಃ ಮುನ್ನುಗ್ಗುವಿಕೆಯೇ' ಆಗುವುದಿದ್ದು, ಅಹಂ ಎಂದೆನ್ನುವುದು 'ಹೊಂದಾಣಿಕೆ' ಎಂತೆಂಬುವುದನ್ನು ಮಾಡಿಕೊಳ್ಳಲಿಚ್ಛಿಸದೆ, ಈ ಘಟನೆಯನ್ನು 'ಅನಾಹುತ' ಎಂಬುದಾಗಿ ಪರಿವರ್ತಿಸುವುದಿದೆ (ಗಮನಸಿ: ಅನಾಹುತ ಅರ್ಥಾತ್, ಮನಃಸ್ಸಿನ ಸ್ಥಿತಿ ಹಾಗು ಗತಿಯ ಛಿದ್ರತೆ, ವಿಸರ್ಜನೆ ಅಥವಾ ವಿಘಟನೆ ಎಂಬುದಾಗಿರುವುದಿದೆ). ಇದಕ್ಕೆ ಬದಲಾಗಿ, ಅಹಂ ಹಾಗು ಅದರ ಜೊತೆಜೊತೆಗೆ ಅಪ್ರಜ್ಞಾ ಅಂಶವನ್ನು ಮಾರ್ಪಾಡುಮಾಡಿಕೊಳ್ಳುವುದರ ಪ್ರಯುಕ್ತತೆಯಿಂದಾಗಿ ಹೊಂದಾಣಿಕೆಯು ಸಾಧಕನಲ್ಲಿ ಜರುಗಬಹುದಿದೆ. ಹೊಂದಣಿಕೆ ಎಂಬುದು ಕೃತಗೊಳ್ಳಬೇಕಾದಲ್ಲಿ ಅಹಂ ಎಂದೆನ್ನುವುದರ ಸಂಕೀರ್ಣವಾದಂಥಃ ರಚನಾ ಚೌಕಟ್ಟು ಬಹಳ ಬಲಶಾಲಿಯಾಗಿ ಮಾರ್ಪಾಡಾಗಿರಬೇಕಿದೆ

(ಗಮನಿಸಿ: ಈ ವಿಚಾರ ಕುರಿತಾಗಿ ವೇದ ವಿಜ್ಞಾನ ಹಾಗು ತಾತ್ತ್ವಿಕ ಶಾಸ್ತ್ರವು ವಿವರಗಳನ್ನು ವಿಸ್ತಾರವಾಗಿ ಪ್ರಸ್ತುತಪಡಿಸಿರುವುದಿದೆ).

ವ್ಯಕ್ತೀಕರಣ ಎಂಬಂಥಃ ಯಾವುದೇ ವ್ಯಕ್ತಿಯಲ್ಲಿನ ಪ್ರಕ್ರಿಯೆಯು, ಅಭೌತ ಪ್ರಭಾವ (ಸೈಕಿಕಲಿ) ಎಂಬಂಥಃ ಸ್ತರದಲ್ಲಿ, ಒಂದು ರೀತಿಯ 'ಗಡಿ ರೇಖೆಯಲ್ಲಿನ ವಿದ್ಯಮಾನ' ಎಂಬುದಾಗಿದ್ದು, ಅದು ಪ್ರಜ್ಞಾ ಪೂರ್ವಕವಾಗಲು ವಿಶೇಷ ರೀತಿಯ ಸ್ಥಿತಿಯನ್ನು ಅವಶ್ಯವಾಗಿ ಬಯಸುವುದಿದೆ. ಪ್ರಸಕ್ತದಲ್ಲಿ ಗಮನಿಸಬೇಕಾಗಿರುವಂಥಃ ಅಂಶ ಎಂದರೆ, 'ಇದು ಭವಿಷ್ಯದಲ್ಲಿನ ವ್ಯಕ್ತಿಗಳಿಂದ ಬಹುಶಃ ಬಳಕೆಯಾಗಬಹುದಾದಂಥಃ ಅಭಿವೃದ್ಧಿ ಎಡೆಗಿನ ಮೊದಲ ಹೆಜ್ಜೆಯೇ ಆಗಿರಬಹುದಿದೆ' ಎಂತೆಂಬುದು ಮನಃಶಾಸ್ತ್ರಜ್ಞರ ಸೈದ್ಧಾಂತಿಕ ಅಭಿಪ್ರಾಯವೇ ಆಗಿರುವುದಿದೆ. ಅರ್ಥಾತ್, ಐಚ್ಚಿಕ ವಿಕಾಸ ಪಥದಲ್ಲಿನ ಒಂದು ಪ್ರಾಥಮಿಕ ನಡೆಯೇ ಆಗಿರುವುದಿದೆ.

ಮನಃಶಾಸ್ತ್ರದ ಪ್ರಕಾರದಲ್ಲಿ, 'ಪ್ರಜ್ಞಾಪೂರ್ಣವಾಗುವಿಕೆ' ಹಾಗು 'ಮುಂಬರುವ ಸ್ವಯಂ' ಅರ್ಥಾತ್, 'ವ್ಯಕ್ತೀಕರಣ' ಎಂಬುದರ ನಡುವೆ ದೀರ್ಘ ಕಾಲದಿಂದ ಸ್ಥಾಪಿತವಾಗಿರುವಂಥಃ ವ್ಯತ್ಯಾಸವು ಇರುವುದಿದೆ. ಇದರ ಜೊತೆಗೆ ವ್ಯಕ್ತೀಕರಣ ಎಂಬುವುದು ಹತ್ತು ಹಲವಾರು ರೀತಿಯ ಸಿದ್ಧಾಂತಗಳನ್ನು ಹೊಂದಿದ್ದು, ಅದು ಸಾಧಕನನ್ನು ಗೊಂದಲಕ್ಕೆ ದೂಡುವುದಿದೆ. ಪ್ರಸಕ್ತದಲ್ಲಿ, ವ್ಯಕ್ತೀಕರಣ ಎಂಬುವುದು ಒಂದು 'ಅಹಂ ಕೇಂದ್ರೀಕೃತವು ಮತ್ತು ಸ್ವಯಂ-ಕಾಮವೆಂಬ ಪ್ರವೃತ್ತಿಯೇ ಆಗಿರುವುದಿದೆ' ಎಂಬುದನ್ನು ಸಧ್ಯಕ್ಕೆ ಸಾಧಕನು ತೆಗೆದುಕೊಳ್ಳಬೇಕಿರುವುದಿದೆ.

ಯಾವುದೇ ವ್ಯಕ್ತಿಯಲ್ಲಿನ 'ಸ್ವಯಂ' ಎಂದೆನ್ನುವುದು 'ಅಹಂ' ಎಂದೆನ್ನುವುದಕ್ಕಿಂತೂ ಅನಂತತೆಯನ್ನು ಹೊಂದಿರುವುದಿದೆ. ಇದು ಯಾವ ರೀತಿಯಲ್ಲಿ ಇರುವುದಿದೆ ಎಂದರೆ, ಬ್ರಹ್ಮಾಂಡದ ಸರ್ವರೀತಿಯ ಸ್ವಯಂ ಎಂಬುವುಗಳನ್ನೂ ಕೂಡ ಒಳಗೊಂಡಿರುವುದಾಗಿದೆ. ಕೊನೆಯದಾಗಿ, 'ವ್ಯಕ್ತೀಕರಣ ಎಂದೆನ್ನುವುದು ಬ್ರಹ್ಮಾಂಡದಿಂದ ಮುಚ್ಚಿಕೊಂಡು ಇರದೆ, ಸಕಲವನ್ನೂ ಒಳಗೊಂಡಿರುವುದಷ್ಟೇ ಅಲ್ಲದೆ ಸಕಲಕ್ಕೂ ತೆರೆದುಕೊಂಡಿರುವುದಿದೆ' ಎಂತೆಂಬುದು ಪ್ರಸಕ್ತದಲ್ಲಿ ಸಾಧಕನು ಗಮನಿಸಬೇಕಾಗಿರುವಂಥಃ ಪ್ರಮುಖ ಅಂಶವೇ ಆಗಿರುವುದಿದೆ.

ಪ್ರಕೃತಿಯ ಸ್ತರದಡಿಯಲ್ಲಿ, ಅನೈಚ್ಚಿಕ (ಅರ್ಥಾತ್, ಸ್ವಾಭಾವಿಕ ಸ್ತರ) ವ್ಯಕ್ತೀಕರಣ (ಅಪ್ರಜ್ಞಾ ಪೂರ್ವಕ) ಪ್ರಕ್ರಿಯೆಗೂ, ಐಚ್ಚಿಕ (ಅರ್ಥಾತ್, ಬೌದ್ಧಿಕ ಸ್ತರ) ವ್ಯಕ್ತೀಕರಣ (ಪ್ರಜ್ಞಾ ಪೂರ್ವಕ) ಪ್ರಕ್ರಿಯೆಗೂ ವಾಸ್ತವಿಕತೆಯಲ್ಲಿ ಬಹು ವ್ಯತ್ಯಾಸವು ಖಂಡಿತವಾಗಿಯೂ ಇರುವುದಾಗಿದೆ. ಪ್ರಜ್ಞಾ ಸ್ತರದಡಿಯಲ್ಲಿ ಸಾಧಕನು ಬೌದ್ಧಿಕತೆಯನ್ನು ಉಪಯೋಗಿಸಿಕೊಂಡು ಕೃತಮಾಡಿಕೊಳ್ಳುವಂಥಃ ಸಾಕ್ಷಾತ್ಕಾರವು ನಿಸ್ಸಂಶಯವಾಗಿ ಸಾಹಸಮಯತೆಯ ಅಧಿಕ್ಯವೇ ಆಗಿರುವುದಿದೆ.

ಅನೈಚ್ಚಿಕ ವಿಕಾಸ (ವ್ಯಕ್ತೀಕರಣ) ಎಂಬುವುದರಲ್ಲಿ ಪ್ರಜ್ಞೆ ಎಂತೆಂಬುವುದು, ಬೌದ್ಧಿಕತೆಯ ಸಮೇತವಾಗಿ ಎಲ್ಲೂ ಮಧ್ಯಪ್ರವೇಶಿಸದಿರುವುದಿದೆ, ಹಾಗೆಯೇ, ಅದರ ಅಂತ್ಯ ಎಂದೆನ್ನುವುದೂ ಕೂಡ ಆರಂಭದ ರೀತಿಯಲ್ಲಿಯೇ ಸಂಪೂರ್ಣವಾಗಿ ಅಂಧಕಾರದಿಂದ ತುಂಬಿರುವುದಿದೆ. ಆದರೆ ಐಚ್ಚಿಕ ವಿಕಾಸ (ವ್ಯಕ್ತೀಕರಣ) ಎಂಬುವುದರಲ್ಲಿ, ಅಂಧಕಾರದ ಹಲವಾರು ರೀತಿನೀತಿಗಳು ಬೆಳಕಿಗೆ ಬರುವುದಾಗಿದ್ದು, ವ್ಯಕ್ತಿಯ 'ವ್ಯಕ್ತಿತ್ವ' ಎಂಬುದು ಬೆಳಕಿನಿಂದ ಆವೃತಗೊಳ್ಳುವುದಿದೆ, ಹಾಗೆಯೇ, ಸೂಕ್ಷ್ಮದೃಷ್ಟಿ ಮತ್ತು ವ್ಯಾಪ್ತಿ ಎಂಬುದರ ರಾಶಿಗಳ ಪ್ರಯಕ್ತವಾಗಿ ಸಾಧಕನ ಪ್ರಜ್ಞೆಯು ಅವಶ್ಯವಾಗಿ ಲಾಭಮಾಡಿಕೊಳ್ಳುವುದಾಗಿದೆ. ಈ ಒಂದು ಐಚ್ಚಿಕ ಪ್ರಕ್ರಿಯೆಯಲ್ಲಿ, 'ಅಂಧಕಾರದಲ್ಲಿ ಬೆಳಗುವಂಥಃ ಬೆಳಕು ಕೇವಲ ಅದರ ಪ್ರಯುಕ್ತತೆಯಿಂದಾಗಿ ಮಾತ್ರವೇ ಬೆಳಗದೆ, ಅಂಧಕಾರವನ್ನೂ ಕೂಡ ಬೆಳಗಿಸುವುದಿದೆ' ಎಂಬ ಅಂಶವನ್ನು ನೆನಪಿನಲ್ಲಿ ಇರಿಸಿಕೊಳ್ಳುವಂಥಃ ಅವಶ್ಯಕತೆಯು ಸಾಧಕನಿಗೆ ಇರುವುದಾಗಿದೆ.

ವ್ಯಕ್ತೀಕರಣ ಎಂಬುವುದರ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳುವ ಮೊದಲು, 'ಸಮೂಹ ಗುಣಮಟ್ಟ ಎಂಬ ಕನಿಷ್ಠತಮ ಅವಶ್ಯಕತೆಯನ್ನು ಸಾಧಕನು ಗಳಿಸಿಕೊಳ್ಳಲೇಬೇಕಿದೆ' ಎಂಬುದಾಗಿ ಮನಃಶಾಸ್ತ್ರದ ವಿಜ್ಞಾನಿಗಳು ಅಭಿಪ್ರಾಯಪಡುವುದಿದೆ. ವ್ಯಕ್ತೀಕರಣ ಎಂತೆಂಬುವುದು ಸಮೂಹ ಸಂಪ್ರದಾಯಕ್ಕೆ ಹೆಚ್ಚೋ ಅಥವಾ ಕಡಿಮೆಯೋ, ಒಟ್ಟಿನಲ್ಲಿ ಸಾಮಾನ್ಯವಾಗಿ ವಿರುದ್ಧಾತ್ಮಕವಾಗಿಯೇ ಕಾಣಿಸಿಕೊಳ್ಳುವುದಿದೆ. ಇದರ ಅರ್ಥವು ಈ ಪ್ರಕ್ರಿಯೆಯು ಸಮೂಹ ಸಂಪ್ರದಾಯದ ಸಾಮಾನ್ಯ ಸ್ತರಕ್ಕಿಂತ ಬೇರೆಯಾಗಿಯೂ ಹಾಗು ಭಿನ್ನವಾಗಿಯೂ ಇರುವುದಿದೆ. ಹೀಗಾಗಿ, ವ್ಯಕ್ತೀಕರಣ ಎಂಬ ಪ್ರಕ್ರಿಯೆಯು ಸಾಧಕನ ಅಭೌತ ಪ್ರಭಾವಳಿಯಲ್ಲಿ (ಮಾನಸಿಕ ಸ್ತರದಲ್ಲಿ) ಒಂದು ವಿಶಿಷ್ಟವಾಗಿರುವಂಥಃ ಪ್ರಾಥಮಿಕ ತಳಪಾಯವನ್ನು ಆರಂಭದಲ್ಲಿ ಹುಟ್ಟುಹಾಕಿ, ನಂತರ, ಅದನ್ನು ಅಭಿವೃದ್ಧಿಗೊಳಿಕೊಳ್ಳಬೇಕಿದೆ.

ಸಾಧಕನಲ್ಲಿನ ವ್ಯಕ್ತೀಕರಣ ಪ್ರಕ್ರಿಯಾ ಫಲಿತಾಂಶದಲ್ಲಿ, 'ಅವನ ವೈಯುಕ್ತಿಕ ಗುಣಗಳ ಅಭಿವೃದ್ಧಿಯ ಪರಿಣಾಮ ಎಂಬುವುದು, ಸಮೂಹ ಮನಃಶಾಸ್ತ್ರ ಎಂಬ ಸಾಮಾನ್ಯ ಸ್ತರಕ್ಕಿಂತ ವಿಭಿನ್ನ ಅಸ್ತಿತ್ವವೇ ಎಂಬುದಾಗಿ ತೋರುವುದಿದೆ' ಎಂದು ಮನಃಶಾಸ್ತ್ರಜ್ಞರುಗಳು ಸೈದ್ಧಾಂತಿಕವಾಗಿ ದಾಖಲಿಸಿರುವುದಿದೆ. ಈ ವ್ಯಕ್ತೀಕರಣ ಪ್ರಕ್ರಿಯಾ ಫಲಿತಾಂಶಿತ ಅಭಿವೃದ್ಧಿ ಎಂಬುವುದು ಸಾಮಾನ್ಯ ಸ್ತರದಲ್ಲಿ, ವ್ಯಕ್ತಿಯ ವೈಯುಕ್ತಿಕ ಗುಣಗಳನ್ನು ರೂಪಿಸುವಂಥಃ ಹಾಗು ವಿಶೇಷಿಸುವಂಥಃ ಒಂದು ಪ್ರಕ್ರಿಯೆಯು ಎಂತೆಂಬುದಾಗಿ ತೋರುವುದಿದೆ. ವ್ಯಕ್ತೀಕರಣ ಎಂತೆಂಬುವುದು ಒಂದು ಹಂತದವರೆಗೂ ಪ್ರಾಕೃತಿಕವಾಗಿರುವಂಥಃ ಅವಶ್ಯಕತೆಯೇ ಆಗಿರುವುದಿದೆ. ಆದರೆ ಈ ಒಂದು ಪ್ರಕ್ರಿಯೆಯಲ್ಲಿ ಉಂಟಾಗುವ ತೊಡಕಿನ ಕಾರಣವು, ಸಮೂಹ ಗುಣಮಟ್ಟಕ್ಕೆ ವಿಸ್ತರಿಸಿದಂಥಃ ಹಾಗು ಪ್ರತ್ಯೇಕವಾಗಿ ಮಟ್ಟಸಮಾಡಿಕೊಳ್ಳುವ ಪ್ರಯುಕ್ತತೆಯ ಮುಖಾಂತರವಾಗಿ, ವ್ಯಕ್ತಿಯ ಜೀವಾಧಾರಕ ಚಟುವಟಿಕೆಗಳ ಮೇಲೆ ನಿರ್ದಿಷ್ಟವಾದಂಥಃ ನೋವನ್ನು ಉಂಟುಮಾಡುವಂಥಃ ಪರಿಣಾಮವನ್ನು ಒಳಗೊಂಡಿರುವುದಿದೆ. ಆದರೆ, ವೈಯುಕ್ತಿಕತೆಯ, ಭೌತಿಕ ದೇಹದ ರೀತಿಯಲ್ಲಿ, ಪ್ರಕೃತಿಯು ಈಗಾಗಲೇ ಸಾಧಕನಿಗೆ ಕೊಡಮಾಡಿರುವುದಿದೆ. ಹೀಗಾಗಿ, ಇದು ತಾನಾಗಿಯೇ ಮಾನಸಿಕ ಸ್ತರವನ್ನೂ ಕೂಡ ವ್ಯಕ್ತಪಡಿಸುವುದಾಗಿದೆ.

ಈ ಒಂದು ವ್ಯಕ್ತೀಕರಣ ಪ್ರಕ್ರಿಯೆಯು ವ್ಯಕ್ತಿಯಲ್ಲಿ ಒಂದು ಕೃತಕವಾದಂಥಃ ಊನಗೊಳಿಸುವಿಕೆಯನ್ನು (ಸಮೂಹ ಸಂಪ್ರದಾಯದ ಪ್ರಯುಕ್ತತೆಯಲ್ಲಿ) ಒಳಗೊಂಡಿರುವುದಿದೆ. ಆದರೆ ಸಾಧಕನು ತನ್ನನ್ನು ತಾನು ಸಮೂಹದಿಂದ ಪ್ರತ್ಯೇಕಿರಣ ಎಂಬುದನ್ನು ಕೈಗೆತ್ತಿಕೊಳ್ಳದೆ, ಇನ್ನೂ ಅಧಿಕವಾಗಿ ಸಮೂಹ ಸಂಪ್ರದಾಯದ ಅಖಂಡತೆ ಎಡೆಗೆ ಖಂಡಿತವಾಗಿಯೂ ಚಲಿಸಲೇಬೇಕಿರುವುದಿದೆ. ಇದೇ ಸಮಯದಲ್ಲಿ ಸಾಧಕನು ಹೆಚ್ಚು ಹೆಚ್ಚು ಅಂತರ್ಮುಖಿಯಾಗುವಂಥಃ ಸಂಭನೀಯತೆಯು ಇರುವುದಾಗಿದ್ದು, ಬಹಳ ಎಚ್ಚರಿಕೆಯಿಂದ ತನ್ನ ಮುಂದಿರುವ ನಡೆಗಳನ್ನು ಆರಿಸಿಕೊಳ್ಳಬೇಕಿದೆ. ಏಕೆಂದರೆ, (ಮನಃಶಾಸ್ತ್ರದ ಪ್ರಕಾರವಾಗಿ) ಸಾಧಕನು ಬಾಹ್ಯ ಜಗತ್ತಿನ ಮಹತ್ವದಿಂದ ತನ್ನನ್ನು ತಾನೇ ಹಿಂದೆಗೆದುಕೊಂಡು, ಅದನ್ನು ವಿಷಯಾತ್ಮಕತೆ ಎಂಬ ವೈಯುಕ್ತಿಕ ಸ್ತರದ ಅಂಶಕ್ಕೆ ಸ್ಥಳೀಕರಣಗೊಳಿಸಿಕೊಂಡು, ತನ್ನದೇ ಆದಂಥಃ ವ್ಯಕ್ತಿತ್ವವನ್ನು ಸೀಮಿತಗೊಳಸಿಕೊಳ್ಳುವಂಥಃ ಸಂಭವನೀಯತೆಯು ಬಹಳವಾಗಿ ಇರುವುದರ ಕಾರಣದಿಂದಾಗಿಯೆ.

ಈ ಮೇಲ್ಕಾಣಿಸಿದಂಥಃ ವಿಚಾರದ ಬಗೆಗೆ ಒಂದು ಪಕ್ಷಿನೋಟ ಈ ರೀತಿಯಾಗಿರುವುದಿದೆ: ಯಾವುದೇ ವ್ಯಕ್ತಿಯ ಮಾನಸಿಕ ಸ್ಥಿತಿಯು, ಅವನ ಪ್ರಜ್ಞೆ ಎಂಬುದನ್ನು ಖಂಡಿತವಾಗಿಯೂ (ಮನಃಶಾಸ್ತ್ರ ಸಿದ್ಧಾಂತದ ಪ್ರಕಾರದಲ್ಲಿ) ಅತೀತವಾಗಿಸುವುದಿದೆ. ಹಾಗೆಯೇ, ಯಾವುದೇ ವ್ಯಕ್ತಿಯು ಈ ಮಟ್ಟಕ್ಕೇ ಪ್ರಜ್ಞೆಯನ್ನು ಕಳೆದುಕೊಂಡಂಥಃ ಪಕ್ಷದಲ್ಲಿಯೂ ಕೂಡ ಅದನ್ನು ಖಂಡಿತವಾಗಿಯೂ ಅವನೇ ಅತೀತವಾಗಿಸುವುದೂ ಖಂಡಿತವಾಗಿಯೂ ಇರುವುದಿದೆ.

ಆಧಾರ:

– ವೇದ ವಿಜ್ಞಾನ

– ಕಾರಿಕೆಗಳು – ಗೌಡಪಾದರು

– ಬ್ರಹ್ಮಸೂತ್ರದ ಮೇಲಿನ ಶ್ರೀಶಂಕರರ ಭಾಷ್ಯ

– ಮನಃಶಾಸ್ತ್ರ ವಿಜ್ಞಾನ

– ಸಿ.ಜಿ.ಜಂಗ್ – ಸೈಕಾಲಜಿ ಆಫ್ ಇನ್ದುವಿಜುಯೇಷನ್

ಐಚ್ಛಿಕ ವಿಕಾಸದ ಹಾದಿಯಲ್ಲಿ ವಿವಿಧ ಕಾಲ ಆಯಾಮದಲ್ಲಿನ ಸಾಧಕನ ಗ್ರಹಿಕಾ ಪ್ರಕ್ರಿಯೆಗಳು

ಚಂದ್ರಮೌಳಿ ಎಂ.ಎಸ್
ಮನಃಶಾಸ್ತ್ರಜ್ಞ, ಬೆಂಗಳೂರು

ಪ್ರಸಕ್ತ ಋತ ಹಾಗು ಸತ್ಯ ಎಂಬುವುದರಡಿಯಲ್ಲಿ ಕಾಲ ಎಂತೆಂಬ ಸ್ಥಿರ ರಾಶಿಯು ಇರುವುದಾಗಿದ್ದು, ಅದು ಭೂತಕಾಲ, ವರ್ತಮಾನ ಕಾಲ ಹಾಗು ಭವಿಷ್ಯತ್ ಕಾಲ ಎಂತೆಂಬ ಮೂರು ಅಂಶಗಳನ್ನು ಹೊಂದಿರುವುದಾಗಿದೆ. ಈ ಒಂದು ಸ್ಥಿರ ರಾಶಿಯ ಪ್ರಯುಕ್ತತೆಯಿಂದಾಗಿಯೇ ಯಾವುದೇ ವ್ಯಕ್ತಿಯು ನಡೆಯುವಂಥಃ ಯಾವುದೇ ಘಟನಾವಳಿಗಳನ್ನು, ಅದರ ಹಿಂದಿರುವಂಥಃ ಕಾರ್ಯ, ಕಾರಣ ಹಾಗು ಸಿದ್ಧಿ ಎಂಬುವುಗಳನ್ನು ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲದೆ, ಅವುಗಳನ್ನು ನೆನಪಿನಲ್ಲೂ ಕೂಡ ಅವನು ಇಟ್ಟುಕೊಳ್ಳುವವನಾಗಿದ್ದಾನೆ. ಯಾವುದೇ ವ್ಯಕ್ತಿಯ ಅರ್ಥೈಸುವಿಕೆ, ನೆನಪು, ತಿಳುವಳಿಕೆ, ಸಂವಹನ ಎಂಬಿತ್ಯಾದಿಯಾದಂಥಃ ಹತ್ತು ಹಲವಾರು ವಿಷಯಗಳು ಕಾಲ ಎಂತೆಂಬ ಸ್ತರದ ಜೊತೆಗೆ ಸಂಬಂಧವನ್ನು ಹೊಂದಿರುವುದಾಗಿದೆ. 'ಕಾಲ ಎಂತೆಂಬ ಸ್ಥಿರ ರಾಶಿಯು ವಾಸ್ತವಿಕತೆಯಲ್ಲಿ ಇರುವುದಿಲ್ಲವಾದರೂ ಮಾನವನು ತನ್ನ ಇತಿಮಿತಯ ಪ್ರಯುಕ್ತತೆಯಿಂದಾಗಿಯೇ ಇದನ್ನ ಪರಿಕಲ್ಪಿಸಿಕೊಂಡಿರುವುದಿದೆ" ಎಂಬಾದ ರೀತಿಯ ವಾದವೂ ಕೂಡ ವಿಜ್ಞಾನಿಗಳ ವಲಯದಲ್ಲಿ ಇರುವುದಾಗಿದೆ.

ಮಾನವನ 'ಗ್ರಹಿಕೆ" ಎಂತೆಂಬುವುದು ಅವನ ಬಾಹ್ಯ ಹಾಗು ಅಂತರಂಗ ಎಂಬುವುದರಲ್ಲಿ ಮಾತ್ರವೇ ನಡೆಯದೆ ಮತ್ತೂ ಹಲವಾರು ಹಂತಗಳಲ್ಲಿ ಕೃತಗೊಳ್ಳುವುದಾಗಿದೆ. ಆಂತರಿಕ, ಬಾಹ್ಯ ಹಾಗು ಇನ್ನು ಆದಂಥಃ ಸ್ತರಗಳಲ್ಲಿ ಕಾಲ ಎಂತೆಂಬುವುದು ಹಲವೆಡೆ ಇರುವುದಿದೆ ಅಥವಾ ಇಲ್ಲದಿರುವುದಿದೆ ಅಥವಾ ಇರುವುದಿದೆ ಇಲ್ಲದಿರುವುದಿದೆ ಅಥವಾ ಮೀರಿರುವುದಾಗಿದೆ. 'ಯಾವುದೇ ವ್ಯಕ್ತಿಯು ಎಚ್ಚರ, ನಿದ್ರೆ, ಹಾಗು ಆಳವಾದಂಥಃ ನಿದ್ರಾ ಸ್ಥಿತಿಯು ಇರುವುದನ್ನೇ ಶುದ್ಧ ಪ್ರಜ್ಞೆಯ ಮೂರು ರೀತಿಯ ಸ್ಪಷ್ಟೀಕರಣವು ಎಂಬುದಾಗಿ ಇರುವುದಿದ್ದು, ಇದನ್ನು ಅರ್ಥೈಸಿಕೊಂಡು, ಅರಿವಿನಲ್ಲಿ ತಂದುಕೊಂಡಲ್ಲಿ ಸಾಧನೆಯನ್ನು ಮುಂದುವರೆಸಬಹುದು' ಎಂತೆಂಬುದಾಗಿ ಭಾರತೀಯ ವೇದ ವಿಜ್ಞಾನವು ನಿರ್ದೇಶಿಸುವುದಿದೆ. ಹೀಗಾಗಿ, ಈ ಮೂರು ಆಯಾಮಗಳಲ್ಲಿ (ಪ್ರಜ್ಞಾ ಸ್ತರದಲ್ಲಿ) ಮಾನವನ ಗ್ರಹಿಕೆ ಎಂತೆನ್ನುವುದು ಯಾವ ರೀತಿಯಲ್ಲಿ ಜರುಗುವುದಾಗಿದೆ? ಎಂತೆಂಬುದಾಗಿ ನೋಡುವುದೇ ಈ ಒಂದು ಪ್ರಬಂಧದ ಉದ್ದೇಶವಾಗಿರುವುದಿದೆ.

ಕಾಲ ಎಂತೆಂಬ ಸ್ಥಿರ ರಾಶಿಯು ಇರುವುದು ಎಲ್ಲರಿಗೂ ತಿಳಿದಂಥಃ ಸಾಮಾನ್ಯ ವಿಷಯವೇ ಆಗಿರುವುದಿದೆ. ಕಾಲ ಎಂಬಲ್ಲಿ ವೈಜ್ಞಾನಿಕವಾಗಿ ಒಂದು 'ಅವಧಿ' ಎಂತೆಂಬುದಾಗಿ ಮಾತ್ರವೇ ಇರುವುದಾಗಿದ್ದರೆ, ವೇದ ವಿಜ್ಞಾನ ಸ್ತರದಲ್ಲಿ ಅವಧಿ ಎಂತೆಂಬುವುದರ ಜೊತೆಗೆ 'ಅಂಧಕಾರ' ಎಂತೆಲೂ ಕೂಡ ಇರುವುದಾಗಿದೆ. ಯಾವುದೇ ಸಾಧಕನು ತನ್ನ ಐಚ್ಛಿಕತೆಯ ಸ್ತರದ ಮೇಲೆ ವಿಕಾಸ ಎಂತೆಂಬ ಪ್ರಕ್ರಿಯೆಯನ್ನು ಕೈಗೊಂಡಾಗ, ಕಾಲ ಎಂತೆಂಬುವುದು ಬಹುಮುಖ್ಯವಾದಂಥಃ ಪಾತ್ರವನ್ನು ವಹಿಸುವುದಾಗಿದೆ. ಹೀಗಾಗಿ, ಈ ಒಂದು ಸ್ಥಿರ ರಾಶಿಯ ಅರಿವು ಎಂತೆಂಬುವುದನ್ನು ಹೊಂದುವುದು ಅತ್ಯಂತ ಅವಶ್ಯವಾಗಿರುವುದಿದೆ.

ಕಾಲ ಎಂತೆಂಬ ಸ್ಥಿರ ರಾಶಿಯು ಭೂತ, ವರ್ತಮಾನ ಹಾಗು ಭವಿಷ್ಯ ಎಂತೆಂಬ ಮೂರು ವಿಭಾಗಗಳನ್ನು ಹೊಂದಿರುವುದು ಸರಿಯಷ್ಟೆ. ಈ ಒಂದು ವಿಭಾಗಗಳು ವ್ಯಕ್ತ ಪ್ರಜ್ಞೆ ಎಂತೆಂಬುವುದರ ಬಾಹ್ಯದಲ್ಲಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಇರುವುದಾಗಿದೆ. ಆದರ ವಿಕಾಸ ಎಂತೆಂಬುದನ್ನು ಮನೋದೈಹಿಕ ಹಾಗು ಮಾನಸಿಕ ಸ್ತರಗಳಲ್ಲಿ ಅವಲೋಕಿಸಿದಾಗ, ಅದು ಮೂರು ಪ್ರಕಾರಗಳನ್ನು ಹೊಂದಿರುವುದು ಅಧ್ಯಯಿಯ ಗಮನಕ್ಕೆ ಬರುವುದಾಗಿದೆ. ಮೂರು ಪ್ರಕಾರಗಳು ಕ್ರಮವಾಗಿ, ಬಾಹ್ಯದಲ್ಲಿಯ ಕಾಲ ಎಂಬ ಸ್ಥಿರ ರಾಶಿಯ ಇರುವಿಕೆಯ ಆಯಾಮ, ಆಂತರಿಕದಲ್ಲಿ ಕಾಲ ಎಬ ಸ್ಥಿರ ರಾಶಿಯ ಇರುವಿಕೆ ಹಾಗು ಇಲ್ಲದಿರುವಿಕೆಯ ಆಯಾಮ, ಹಾಗು ಕಾಲ ಎಂತೆಂಬ ಸ್ಥಿರ ರಾಶಿಯನ್ನು ಮೀರಿರುವಿಕೆಯ ಆಯಾಮ ಎಂತೆಂಬುದಾಗಿ ಇರುವುದಾಗಿದೆ. ಇವುಗಳನ್ನು ಭಿನ್ನತೆ ಅಥವಾ ದ್ವೈತ, ಸಮನ್ವಯತೆ ಅಥವಾ ಅದ್ವೈತ, ಹಾಗು ಸಮಗ್ರತೆ ಅಥವಾ ಅದ್ವೈತ ಎಂತಲೂ ಗಣಿತ ಸ್ಥಿರ ರಾಶಿಯ ಭಾಷೆಯಲ್ಲಿ ಕ್ರಮವಾಗಿ ಹಾಗು ಸಾಪೇಕ್ಷವಾಗಿ ಸಮೀಕರಿಸಿಕೊಳ್ಳಬಹುದಾಗಿದೆ.

'ತ್ರಿಕಾಲ ಜ್ಞಾನಿ' ಎಂತೆಂಬ ಸಾಧನೆಯು ವೇದ ವಿಜ್ಞಾನ ಪ್ರಕಾರದಲ್ಲಿ ಇರುವುದಾಗಿದ್ದು, ಅದು ಕಾಲ ಎಂಬ ಸ್ಥಿರ ರಾಶಿಯ ಮೂರೂ ಆಯಾಮಗಳ ಹಾಗು ಮೂರು ಅಂಶಗಳ ತಿಳುವಳಿಕೆಯನ್ನು ಸೂಚಿಸುವುದೇ ಆಗಿರುವುದಿದೆ. ಭೂತ, ವರ್ತಮಾನ ಹಾಗು ಭವಿಷ್ಯ ಎಂತೆಂಬ ಅಂಶಗಳನ್ನು ಯಾವುದೇ ವ್ಯಕ್ತಿಯು ತನ್ನ ಬಾಹ್ಯ ಸ್ತರದಲ್ಲಿ ಅನುಭವಿಸಿದರೆ, ಭಿನ್ನತೆ, ಸಮನ್ವಯತೆ ಹಾಗು ಸಮಗ್ರತೆ ಎಂತೆಂಬ ಆಯಾಮಗಳನ್ನು ಪ್ರಜ್ಞಾ ಸ್ತರದಲ್ಲಿ ಎಚ್ಚರ, ಸ್ವಪ್ನ ಹಾಗು ಆಳನಿದ್ರಾಸ್ತರ ಎಂತೆಂಬುದಾಗಿ ಪ್ರಾ–ಕೃತದಲ್ಲಿ ಅನುಭವಿಸುವುದಿದೆ. ಎಚ್ಚರ ಎಂತೆಂಬುವುದರ ಶಕ್ತಿ ರೂಪವು ವೈಶ್ವಾನರ ಎಂಬುದಾಗಿಯೂ, ಸ್ವಪ್ನ ಎಂತೆಂಬುವುದರ ಶಕ್ತಿ ರೂಪವು ತೈಜಸ ಎಂತೆಂಬುದಾಗಿಯೂ, ಹಾಗು ಆಳನಿದ್ರಾ ಸ್ತರ ಎಂತೆಂಬುದರ ಶಕ್ತಿಯ ರೂಪವು ಪ್ರಾಜ್ಞಾ ಎಂತೆಂಬುದಾಗಿಯು ಇರುವುದಾಗಿದ್ದು, ಅವುಗಳ ಬೀಜಾಕ್ಷರವು ಕ್ರಮವಾಗಿ, 'ಅ', 'ಉ', ಹಾಗು 'ಮ' ಎಂತೆಂಬುದಾಗಿ ಇರುವುದಿದೆ ಎಂಬುದಾಗಿ ವೇದ ವಿಜ್ಞಾನವು ಹೇಳಿರುವುದಿದೆ. ಇವುಗಳ ನಂತರದಲ್ಲಿ ಒದಗಿಬರುವಂಥಃ 'ತುರೀಯ' ಎಂತೆಂಬ ಅವಸ್ಥೆಯು 'ಓಂ'ಕಾರ ಎಂತೆಂಬುದಾಗಿ ಇರುವುದಾಗಿದ್ದು, ಅದು ಅಕಾರ, ಉಕಾರ ಹಾಗು ಮಕಾರ ಎಂತೆಂಬ ಮೂರೂ ಬೀಜಾಕ್ಷರಗಳ ಸಂಗಮವೇ ಆಗಿರುವುದಿದೆ ಎಂದು ಉಪನಿಷತ್ತುಗಳು ಹೇಳಿರುವುದಿದೆ. ಒಟ್ಟಾರೆಯಾಗಿ, ವೇದ ವಿಜ್ಞಾನ ಪ್ರಕಾರವಾಗಿ, ಓಂ ಕಾರ ಎಂತೆನ್ನುವುದು 'ಪ್ರಣವ' ಎಂತೆಂಬುದೇ ಆಗಿರುವುದಿದೆ.

ಇನ್ನು ಮುಂದೆ ಕಾಲ ಎಂತೆಂಬ ಸ್ಥಿರ ರಾಶಿಯ ಮೂರು ಆಯಾಮಗಳ ಬಗೆಗೆ ವ್ಯಕ್ತಿ ಸಂಬಂಧದಡಿಯಲ್ಲಿ ಒಂದು ಸಂಕ್ಷಿಪ್ತ ನೋಟವನ್ನು ಬೀರಿರುವುದಿದೆ: ಭಿನ್ನತೆ ಸ್ತರ ಸಂಬಂಧಿತ ಮಾನವನ ಆಲೋಚನಾ ಸ್ತರವನ್ನು ಗಣಿತ ಸ್ಥಿರ ರಾಶಿಯಡಿಯಲ್ಲಿ ಕಾಲ ಎಂಬುವುದರ ಸ್ಥಿರ ರಾಶಿಯನ್ನು ರಚಿತಗೊಳಿಸಬಹುದಿದೆ. ಆ ರಚನೆಯು ಈ ರೀತಿಯಾಗಿರುವುದಿದೆ: [ಅ<–>ಉ<–>ಮ] ಎಂತೆಂಬುವುದರಲ್ಲಿನ 'ಅ' ಎಂಬ ಬೀಜಾಕ್ಷರವು ಎಚ್ಚರ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ವೈಶ್ವಾನರ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಬಾಹ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಸೂಚಿಸುವುದಾಗಿದೆ. 'ಉ' ಎಂಬ ಬೀಜಾಕ್ಷರವು ಸ್ವಪ್ನ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ತೈಜಸ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಆಂತರ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಹಾಗು ಇಲ್ಲದಿರುವಿಕೆಯನ್ನು ಸೂಚಿಸುವುದಾಗಿದೆ. 'ಮ' ಎಂಬ ಬೀಜಾಕ್ಷರವು ಆಳ ನಿದ್ರಾ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ಪ್ರಾಜ್ಞಾ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಕಾಲ ಸ್ಥಿರ ರಾಶಿಯ ಮೀರುವಿಕೆಯನ್ನು ಸೂಚಿಸುವುದಾಗಿದೆ. ಇದರಲ್ಲಿ ಯಾವುದೇ ಬೀಜಾಕ್ಷರವು 'ಮೂಲ' ಎಂತೆಂಬುದಾಗಿ ಇರಬಹುದಾಗಿದ್ದು, ಉಳಿದೆರಡು ಅದರಿಂದ ಉದ್ಭವಿಸಿರಬಹುದಾಗಿದೆ. ಈ ಒಂದು ಆಲೋಚನಾ ಕ್ರಮದಲ್ಲಿ ಸೃಷ್ಟಿ ಹಾಗು ಸೃಷ್ಟಿ ಕರ್ತ ಎಂತೆಂಬ ಅಂಶಗಳು ಪ್ರಮುಖವಾಗಿ ಇರುವುದಾಗಿದೆ. ಈ ಬ್ರಹ್ಮಾಂಡದಲ್ಲಿನ ಪ್ರತಿಯೊಂದೂ ಕೂಡ ಸೃಷ್ಟಿ ಕರ್ತ ಎಂತೆಂಬ ಒಂದು ವ್ಯಕ್ತಿತ್ವದಿಂದ ಹೊರಹೊಮ್ಮಿರುವುದಾಗಿದೆ ಎಂತಾಗಲೀ, ಸೃಷ್ಟಿ ಕರ್ತನು ಸೃಷ್ಟಿಯ ಪ್ರತಿಯೊಂದು ಅಂಶವನ್ನು ತನ್ನಲ್ಲಿಯೇ ಹೊಂದಿರುವ ಕಾರಣದಿಂದ ಸೃಷ್ಟಿಯು ಕೃತಗೊಳ್ಳುವುದಾಗಿದೆ ಎಂಬುದಾಗಿಯೂ ಆಲೋಚಿಸಿರುವುದಿದೆ.

ಭಿನ್ನತೆ ಎಂಬ ಆಯಾಮದಲ್ಲಿ (ಮಾನವ ಸಂಬಂಧಿತ) ಗ್ರಹಿಕೆ ಹಾಗು ಅದರ ಪರಿಮಿತಿ ಎಂಬುವುದರ ಒಂದು ಕಿರುನೋಟವು ಕೆಳಕಂಡಂತೆ ಇರುವುದಿದೆ:


ಚಿತ್ರ–1

ಭಿನ್ನತೆ ಎಂಬ ಆಯಾಮದಲ್ಲಿ (ದ್ವೈತ ಸ್ತರದಲ್ಲಿನ) ಬಾಹ್ಯ ಎಂಬುವುದರಲ್ಲಿ ಕಾಲ ಎಂಬ ಸ್ಥಿರ ರಾಶಿಯು ಇರುವುದು ಸರಿಯಷ್ಟೆ. ಬಾಹ್ಯದಲ್ಲಿ ಕಾಲ ಎಂತೆಂಬ ಸ್ಥಿರ ಜೊತೆಗೆ ದೇಶ ಎಂತೆಂಬ ಸ್ಥಿರ ರಾಶಿಯೂ ಕೂಡ ಇರುವುದಾಗಿದ್ದು, ಅದು ಮಾನವನ ಗ್ರಹಿಕೆ ಎಂತೆಂಬುವುದರಲ್ಲಿ ಮಹತ್ತರವಾದಂಥಃ ಪಾತ್ರವನ್ನು (ವೈಜ್ಞಾನಿಕವಾಗಿ) ವಹಿಸಿರುವುದಿದೆ. ಈ ಸ್ಥರದ ಶಕ್ತಿಯ ಹೆಸರು ವೈಶ್ವಾನರ ಎಂತೆಂಬುದಾಗಿ ಇರುವುದಾಗಿದ್ದು, ಅದರ ಬೀಜಾಕ್ಷರವು 'ಅ' ಕಾರವೇ ಆಗಿರುವುದಿದೆ. ಈ ಸ್ತರದಲ್ಲಿನ ಯಾವುದೇ ವಿದ್ಯಮಾನಗಳು ಮಾನವ ಗ್ರಹಿಕಾ ಸ್ತರದಲ್ಲಿ ಯಾವ ರೀತಿಯಲ್ಲಿ ಕೃತಗೊಳ್ಳುತ್ತವೆ ಎಂಬುವುದನ್ನು ಚಿತ್ರ–1 ತೋರಿಸಲಾಗಿರುವುದಿದೆ.

ಈ ಚಿತ್ರದ ಪ್ರಕಾರದಲ್ಲಿ ಇರುವಂಥಃ 'ದೇಶ' ಹಾಗು 'ಕಾಲ' ಎಂತೆಂಬುವುಗಳು ಎರಡು ಅಕ್ಷರೇಖೆಗಳೇ ಆಗಿರುವುದಾಗಿದ್ದು, ಅದರಲ್ಲಿ ಕಾಣಿಸಿರುವಂಥಃ 'ಗ್ರಹಿಕೆ' ಎಂತೆಂಬುವುದು ಸ್ಥಿರ ಪಾರದ (ಸೈನ್ ವೇವ್) ಅಥವಾ ಸ್ಥಿರ ಅಲೆ ಎಂತೆಂಬುವುದೇ ಆಗಿರುವುದಿದೆ. ಈ ಒಂದು ಅಲೆಯು ಧಾರಾವಾಹಿ ರೂಪದಲ್ಲಿ ಇರುವುದಾಗಿದ್ದು, ಅದರ ಮೇಲಿನ ಯಾವುದೇ ಕಕ್ಷಾಂಶಗಳು ಕಾಲ ಹಾಗು ದೇಶ ಎಂಬುವುದರ ದತ್ತಾಂಶವನ್ನು ತೋರಿಸುವುದಾಗಿದೆ. ಮಾನವನಲ್ಲಿನ ಗ್ರಹಿಕೆ ಎಂತೆಂಬುವುದರಲ್ಲಿ ಕಾಲ ಎಂಬ ದತ್ತಾಂಶವು ಒಂದೇ ಮಜಲನ್ನು ಅರ್ಥಾತ್, ಕೇವಲ ಮುಂದುವರಿಕೆ (ಕೂಡುವಿಕೆ) ಮಾತ್ರವೇ ಹೊಂದಿರುವುದಾಗಿದ್ದರೆ, ದೇಶ ಎಂತೆಂಬುವುದು ಎರಡು ಮಜಲನ್ನು ಅರ್ಥಾತ್, ಇರುವಿಕೆ ಹಾಗು ಇಲ್ಲದಿರುವಿಕೆ ಎಂತೆಂಬ ಅಂಶವನ್ನು ಸ್ಪಷ್ಟವಾಗಿ ಹೊಂದಿರುವುದಾಗಿದೆ. ಕಾಲ ಅಥವಾ ದೇಶ ಎಂದೆನ್ನುವುದು ಗ್ರಹಿಕೆ ಎಂತೆಂಬುವುದರಲ್ಲಿ ಖಂಡಿತವಾಗಿಯೂ ತನ್ನದೇ ಆದಂಥಃ ಪಾತ್ರವನ್ನು ವಹಿಸುವುದಾಗಿದೆ. ವೇದ ಪ್ರಕಾರದಲ್ಲಿ, 'ಕಾಲ ಎಂತೆಂಬುವುದು ಕೇವಲ ಮುಂದುವರಿಕೆಯೇ ಆಗಿರುವುದಾಗಿದ್ದು ಅದು ಬದಲಾವಣೆ ಎಂತೆಂಬುವುದನ್ನು ತರುವುದಾಗಿದೆ' ಎಂತೆಂಬುದಾಗಿ ಉಲ್ಲೇಖವು ಇರುವುದಾಗಿದೆ. ಮಾನವನ ಗ್ರಹಿಕೆ ಎಂತೆಂಬುವುದರ ಮುಂದುವರಿಕೆಯು ಬದಲಾವಣೆ ಎಂತೆಂಬುವುದನ್ನು ಗುರುತಿಸುವುದೇ ಆಗಿರುವುದಾಗಿದ್ದು, ಅದರ ನೆನಪು ಹಾಗು ಅರ್ಥೈಸುವಿಕೆಯು ಹತ್ತು ಹಲವಾರು ಸ್ಥಿರ ರಾಶಿಗಳೊಡನೆ ಕಾಲ ಹಾಗು ದೇಶ ಎಂತೆಂಬ ಎರಡು ಸ್ಥಿರ ರಾಶಿಗಳನ್ನಂತೂ ಖಂಡಿತವಾಗಿಯೂ ಹೊಂದಿರುವುದಿದೆ. ವಿಜ್ಞಾನ ಪ್ರಕಾರವಾಗಿ ಕಾಲ ಎಂತೆಂಬುವುದು ಮೂರನೇ ಆಯಾಮ ಎಂತೆಂಬುವುದರ ಗಡಿರೇಖೆ ಎಂತೆಂಬುದೇ ಆಗಿರುವುದಿದೆ.

ಈ ಒಂದು ಸ್ತರವು ಯಾವುದೇ ಸಾಮಾನ್ಯ ಮಾನವನಿಗೆ ಪ್ರಾಕೃತಿಕವಾಗಿ ಬಂದಿರುವಂಥಃ ಬಳುವಳಿಯೇ ಆಗಿರುವುದಿದೆ. ಮತ್ತೊಂದು ಮಗ್ಗಲುವಿನಲ್ಲಿ ಅವಲೋಕಿಸಿದರೆ, ಇದು ಒಂದು ಮಾನವ ಅಸ್ತಿತ್ವಕ್ಕೆ ಜನ್ಮಥಃ ಒದಗಿ ಬಂದಿರುವಂಥಃ ಇತಿಮಿತಿಯೇ ಆಗಿರುವುದಿದೆ. ಯಾವುದೇ ಸಾಧನೆಯ ಅವಶ್ಯಕತೆಯು ಇಲ್ಲದೆ ಈ ಒಂದು ರೀತಿಯ ಗ್ರಹಿಕಾ ರೀತಿಯು, ಗ್ರಹಿಸಿದಂಥಃದ್ದನ್ನು ಅರ್ಥೈಸುವ ರೀತಿಯು ಹಾಗು ನೆನಪು ಎಂತೆಂಬ ಕ್ರಮವು ಮಾನವನಲ್ಲಿ ಹುಟ್ಟನಿಂದಲೇ ಇರುವುದಾಗಿದೆ. ಹೀಗಾಗಿ ಯಾವುದೇ ಸಾಧಕನಿರಲಿ ಅಥವಾ ಸಾಮಾನ್ಯ ವ್ಯಕ್ತಿಯೇ ಆಗಿರಲಿ ಅವನ ಆರಂಭಿಕ ಗ್ರಹಿಕಾ ರೀತಿಯು ಕಾಲ ಹಾಗು ದೇಶ ಎಂತೆಂಬ ಸ್ಥಿರ ರಾಶಿಯ ಪರಿಮಿತಿಯ ಒಳಗೇ ಇರುವುದಾಗಿದೆ. ಇದನ್ನೇ ಮತ್ತೊಂದು ಅರ್ಥದಲ್ಲಿ ದ್ವೈತ ಎಂತೆಂಬ ಸ್ತರದಲ್ಲಿ ಬಾಹ್ಯದ ಕಾಲ ಎಂತೆಂಬ ಸ್ಥಿರ ರಾಶಿಯು ಇರುವಂಥಃ ಆಯಾಮ ಎಂತೆಂಬುವುದರ ಗ್ರಹಿಕಾ ರೀತಿಯು ಹಾಗು ಅರ್ಥೈಸುವ ಕ್ರಮವೂ ಆಗಿರುವುದಿದ್ದು, ಅದರ ಪ್ರಕಾರದಲ್ಲೇ ನೆನಪು ಎಂತೆಂಬುವುದು ಇರುವುದಾಗಿದ್ದು, ಪ್ರತಿಯೊಂದು ವಿಚಾರವನ್ನು ಈ ಒಂದು ಸ್ತರದ ಪ್ರಯುಕ್ತತೆಯಲ್ಲಿಯೇ ಮಾನವನು ಅರ್ಥಮಾಡಿಕೊಳ್ಳುವಂಥಃ ಪ್ರಯತ್ನವನ್ನು ಸಹಜವಾಗಿ ಮಾಡುವುದಿದೆ ಹಾಗು ಮಾಡುತ್ತಾ ಬಂದಿರುವುದಿದೆ.

ಸಮನ್ವಯ ಆಯಾಮ: ಸಮನ್ವಯ (ವಿಶಿಷ್ಟಾದ್ವೈತ ಎಂಬ ಸ್ತರದಲ್ಲಿನ) ವಿಮೋಚನೆ ಎಂತೆಂಬ ಆಲೋಚನೆಯ ಅವಲೋಕನವು ಈ ರೀತಿಯಾಗಿ ಇರುವುದಿದೆ: ಈ ಒಂದು ಮಾನವ ಸಂಬಂಧಿತ ಆಲೋಚನಾ ಸ್ತರವನ್ನು ಗಣಿತ ಸ್ಥಿರ ರಾಶಿಯ ಅಡಿಯಲ್ಲಿ ಕಾಲ ಎಂಬುವುದರ ಸ್ಥಿರ ರಾಶಿಯ ಇರುವಿಕೆ ಹಾಗು ಇಲ್ಲದಿರುವಿಕೆ ಎಂಬ ಪ್ರಯುಕ್ತತೆಯಿಂದ ರಚಿತಗೊಳಿಸಬಹುದಿದೆ. ಆ ರಚನೆಯು ಈ ರೀತಿಯಾಗಿರುವುದಿದೆ: [ಅ+ಉ+ಮ] ಎಂತೆಂಬುವುದರಲ್ಲಿನ 'ಅ' ಎಂಬ ಬೀಜಾಕ್ಷರವು ಎಚ್ಚರ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ವೈಶ್ವಾನರ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಬಾಹ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಸೂಚಿಸುವುದಾಗಿದೆ. 'ಉ' ಎಂಬ ಬೀಜಾಕ್ಷರವು ಸ್ವಪ್ನ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ತೈಜಸ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಆಂತರ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಹಾಗು ಇಲ್ಲದಿರುವಿಕೆಯನ್ನು ಸೂಚಿಸುವುದಾಗಿದೆ. 'ಮ' ಎಂಬ ಬೀಜಾಕ್ಷರವು ಆಳ ನಿದ್ರಾ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ಪ್ರಾಜ್ಞಾ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಕಾಲ ಸ್ಥಿರ ರಾಶಿಯ ಮೀರುವಿಕೆಯನ್ನು ಸೂಚಿಸುವುದಾಗಿದೆ. ಇದರಲ್ಲಿ ಮೂರೂ ಬೀಜಾಕ್ಷರಗಳು ಒಂದು ಸಂಯುಕ್ತ ಏಕತೆ ಎಂಬುವುದರ ವಿಭಿನ್ನ ಅಭಿವ್ಯಕ್ತವೇ ಆಗಿರುವುದಿದೆ. ಈ ಒಂದು ಆಲೋಚನಾ ಕ್ರಮದಲ್ಲಿ ಸೃಷ್ಟಿ ಹಾಗು ಸೃಷ್ಟಿ ಕರ್ತ ಎಂತೆಂಬ ಅಂಶಗಳ ಸಂದರ್ಭಗಳಲ್ಲಿ ಈ ಅಂಶಗಳು ವಿಶೇಷವಾದಂಥಃ ಪಾತ್ರಗಳನ್ನು ವಹಿಸುವುದಾಗಿದೆ.

ಈ ಸ್ತರದಲ್ಲಿನ ಆಲೋಚನಾ ಕ್ರಮಗಳಿಗೆ ಹತ್ತು ಹಲವಾರು ಸಿದ್ಧಾಂತಗಳು ಭಾರತೀಯ ಸಂಸ್ಕೃತಿಯಲ್ಲೂ ಹಾಗು ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಅಧ್ಯಯಿಯು ಕಾಣಬಹುದಾಗಿದೆ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಹಾಗು ಬೌದ್ಧರಲ್ಲಿ ಕಂಡುಬರುವಂಥಃ ಶೂನ್ಯ ಸಿದ್ಧಾಂತವನ್ನು, ಇದಕ್ಕೆ ಉದಾಹರಣೆಯಾಗಿ ಅಧ್ಯಯಿಯು ತೆಗೆದುಕೊಳ್ಳಬಹುದಾಗಿದೆ. ಜೀವಾತ್ಮ ಹಾಗು ಪರಮಾತ್ಮ ಎಂತೆಂಬುವುಗಳು ಅಂತಿಮವೇ ಆದ ಪಕ್ಷದಲ್ಲಿ ದೇವ ಎಂಬುವನಲ್ಲಿ ಒಂದಾಗುವುದಿದ್ದರೂ, ಜೀವಾತ್ಮವು ತನ್ನ ಅಸ್ತಿತ್ವವನ್ನು ನಿತ್ಯವಾಗಿ ಪ್ರತ್ಯೇಕವಾಗಿಯೇ ಉಳಿಸಿಕೊಳ್ಳುವುದಿದೆ ಎಂತೆಂಬುದಾಗಿ ಸಿದ್ಧಾಂತವು ಒಂದು ಕಡೆಯಾಗಿದ್ದರೆ, ಮತ್ತೊಂದು ಮಗ್ಗಲುನಲ್ಲಿ, ಸಕಲವೂ ಶೂನ್ಯ ಎಂತೆಂಬುವುದರಲ್ಲಿ (ನಾಗಾರ್ಜುನ ಸಿದ್ಧಾಂತದ

ಪ್ರಕಾರದಲ್ಲಿ) ಕರಗಿಹೋಗುವುದಿದೆ ಎಂಬುದಾಗಿ ನಿರೂಪಿಸುವುದಿದೆ. ಶೂನ್ಯ ಎಂತೆಂಬುವದರಿಂದ ಸೃಷ್ಟಿಯೆಡೆಗೆ ಅವಲೋಕಿಸಿದಾಗ, ಆತ್ಮ ಎಂತೆಂವುದು ಪರಮಾತ್ಮ ಎಂತೆಂಬುವುದರಿಂದ ಬೇರೆಯಾಗಿಯೇ ಇರುವುದಾಗಿದ್ದು, ಅದು ಅವನನ್ನು ಸಾಧನೆಗಳ ಮುಖಾಂತರವಾಗಿ ಐಚ್ಛಿಕ ಮಾರ್ಗದಲ್ಲಿ ಕೃತಗೊಳಿಸಿಕೊಳ್ಳಬಹುದಾಗಿದೆ. ಆತ್ಮ ಎಂಬುವುದರ ಬಾಹ್ಯ ಸಂಬಂಧಿತ ವಿದ್ಯಾಮಾನ ಎಂಬುವುದರ ತಿಳಿವಳಿಕಾ ಪ್ರಕ್ರಿಯೆಯು ದ್ವೈತ ಸ್ತರದಲ್ಲಿ (ಭಿನ್ನತೆ) ಇರುವಂತೆಯೇ ಇರುವುದಿದೆ. ದೇವ ಹಾಗು ಮಾನವ ನಡುವಣ ಸಂಪರ್ಕ ಎಂಬುವುದು ಆತ್ಮ ಎಂಬುವುದಾಗಿದ್ದು, ಇದು ಕಾಲ ಎಂಬ ಸ್ಥಿರ ರಾಶಿಯು ಇರುವ ಹಾಗು ಇಲ್ಲದಿರುವಂಥಃ ಆಂತರಿಕ ಆಯಮವೇ ಆಗಿರುವುದಿದೆ.

ಸಮನ್ವಯ ಎಂಬ ಆಯಾಮದಲ್ಲಿ (ಮಾನವ ಸಂಬಂಧಿತ) ಗ್ರಹಿಕೆ ಹಾಗು ಅದರ ಪರಿಮಿತಿ ಎಂಬುವುದರ ಒಂದು ಕಿರುನೋಟವು ಕೆಳಕಂಡಂತೆ ಇರುವುದಿದೆ:



ಚಿತ್ರ–2

ಸಮನ್ವಯ ಅಯಾಮದಲ್ಲಿನ (ವಿಶಿಷ್ಟಾದ್ವೈತ ಸ್ತರದಲ್ಲಿನ) ಆಂತರ್ಯ ಎಂಬುವುದರಲ್ಲಿ ಕಾಲ ಎಂಬ ಸ್ಥಿರ ರಾಶಿಯು ಇರುವಿಕೆ ಹಾಗು ಇಲ್ಲದಿರುವಿಕೆ ಎಂಬೆರಡೂ ರೀತಿಯ ಸ್ಥಿರ ರಾಶಿಯು ಇರುವುದಾಗಿದೆ. ಆಂತರ್ಯದಲ್ಲಿ ಕಾಲ ಎಂತೆಂಬ ಸ್ಥಿರ ಜೊತೆಗೆ ದೇಶ ಎಂತೆಂಬ ಸ್ಥಿರ ರಾಶಿಯೂ ಕೂಡ ಇರುವುದಾಗಿದ್ದು, ಅದು ಮಾನವನ ಗ್ರಹಿಕೆ ಎಂತೆಂಬುವುದರಲ್ಲಿ ಮಹತ್ತರವಾದಂಥಃ ಪಾತ್ರವನ್ನು (ವೈಜ್ಞಾನಿಕವಾಗಿ) ವಹಿಸಿರುವುದಿದೆ. ಈ ಒಂದು ಆಯಾಮದ ಶಕ್ತಿಯ ಹೆಸರು 'ತೈಜಸ' ಎಂತೆಂಬುದಾಗಿ ಇರುವುದಾಗಿದ್ದು, ಅದರ ಬೀಜಾಕ್ಷರವು 'ಉ' ಕಾರವೇ ಆಗಿರುವುದಿದೆ. ಈ ಸ್ತರದಲ್ಲಿನ ಯಾವುದೇ ವಿದ್ಯಮಾನಗಳು ಮಾನವ ಗ್ರಹಿಕಾ ಸ್ತರದಲ್ಲಿ ಯಾವ ರೀತಿಯಲ್ಲಿ ಕೃತಗೊಳ್ಳುತ್ತವೆ ಎಂಬುವುದನ್ನು ಚಿತ್ರ–2 ತೋರಿಸಲಾಗಿರುವುದಿದೆ.

ಈ ಚಿತ್ರದ ಪ್ರಕಾರದಲ್ಲಿ ಇರುವಂಥಃ 'ದೇಶ' ಹಾಗು 'ಕಾಲ' ಎಂತೆಂಬುವುಗಳು ಎರಡು ಅಕ್ಷರೇಖೆಗಳೇ ಆಗಿರುವುದಾಗಿದ್ದು, ಅದರಲ್ಲಿ ಕಾಣಿಸಿರುವಂಥಃ 'ಗ್ರಹಿಕೆ' ಎಂತೆಂಬುವುದು ಚದರ ಪಾರದ (ಸ್ಕ್ವೇರ್ ವೇವ್) ಅಥವಾ ಚದರ ಅಲೆ ಎಂತೆಂಬುವುದೇ ಆಗಿರುವುದಿದೆ. ಈ ಒಂದು ಅಲೆಯು ಧಾರಾವಾಹಿ ರೂಪದಲ್ಲಿ ಇರುವುದಾಗಿದ್ದು, ಅದರ ಮೇಲಿನ ಯಾವುದೇ ಕಕ್ಷಾಂಶಗಳು ಕಾಲ ಎಂಬುವುದನ್ನು ಸ್ಥಿರವಾಗಿಟ್ಟುಕೊಂಡು ಹಾಗು ದೇಶ ಎಂಬುವುದರ ದತ್ತಾಂಶವನ್ನು ಅಥವಾ ದೇಶ ಎಂಬುವುದನ್ನು ಸ್ಥಿರವಾಗಿಟ್ಟುಕೊಂಡು ಹಾಗು ಕಾಲ ಎಂಬುವುದರ ದತ್ತಾಂಶವನ್ನು ತೋರಿಸುವುದಾಗಿದೆ. ಮಾನವನಲ್ಲಿನ ಗ್ರಹಿಕೆ ಎಂತೆಂಬುವುದರಲ್ಲಿ ಕಾಲ ಎಂಬ ದತ್ತಾಂಶವು ಒಂದೇ ಮಜಲನ್ನು ಅರ್ಥಾತ್, ಕೇವಲ ಮುಂದುವರಿಕೆ (ಕೂಡುವಿಕೆ) ಮಾತ್ರವೇ ಹೊಂದಿರುವುದಾಗಿದ್ದರೆ, ದೇಶ ಎಂತೆಂಬುವುದು ಎರಡು ಮಜಲನ್ನು ಅರ್ಥಾತ್, ಧನಾತ್ಮಕ ಹಾಗು ಋಣಾತ್ಮಕ ಎಂತೆಂಬ ಅಂಶವನ್ನು ಸ್ಪಷ್ಟವಾಗಿ ಹೊಂದಿರುವುದಾಗಿದೆ. ಕಾಲ ಅಥವಾ ದೇಶ ಎಂದೆನ್ನುವುದು ಗ್ರಹಿಕೆ ಎಂತೆಂಬುವುದರಲ್ಲಿ ಖಂಡಿತವಾಗಿಯೂ ತನ್ನದೇ ಆದಂಥಃ ಪಾತ್ರವನ್ನು ವಹಿಸುವುದಾಗಿದೆ. ವೇದ ಪ್ರಕಾರದಲ್ಲಿ, ಕಾಲ ಎಂತೆಂಬುವುದು ಕೇವಲ ಮುಂದುವರಿಕೆಯೇ ಆಗಿರುವುದಾಗಿದ್ದು ಅದು ಬದಲಾವಣೆ ಎಂತೆಂಬುವುದನ್ನು ತರುವುದಾಗಿದೆ ಎಂತೆಂಬುದಾಗಿ ಉಲ್ಲೇಖವು ಇರುವುದಾಗಿದೆ. ಮಾನವನ ಗ್ರಹಿಕೆ ಎಂತೆಂಬುವುದರ ಮುಂದುವರಿಕೆಯು ಬದಲಾವಣೆ ಎಂತೆಂಬುವುದನ್ನು ಗುರುತಿಸುವುದೇ ಆಗಿರುವುದಾಗಿದ್ದು, ಅದರ ನೆನಪು ಹಾಗು ಅರ್ಥೈಸುವಿಕೆಯು ಹತ್ತು ಹಲವಾರು ಸ್ಥಿರ ರಾಶಿಗಳೊಡನೆ ಕಾಲ ಹಾಗು ದೇಶ ಎಂತೆಂಬ ಎರಡು ಸ್ಥಿರ ರಾಶಿಗಳನ್ನಂತೂ ಖಂಡಿತವಾಗಿಯೂ ಹೊಂದಿರುವುದಿದೆ. ವಿಜ್ಞಾನ ಪ್ರಕಾರವಾಗಿ ಕಾಲ ಎಂತೆಂಬುವುದು ಮೂರನೇ ಆಯಾಮ ಎಂತೆಂಬುವುದರ ಗಡಿರೇಖೆ ಎಂತೆಂಬುದೇ ಆಗಿರುವುದಿದ್ದು, ಈ ಒಂದು ಆಯಾಮದಲ್ಲಿ ಅದರ ಇಲ್ಲದಿರುವಿಕೆಯನ್ನೂ ಕೂಡ ಪ್ರಸ್ತುತಪಡಿಸುವುದಾಗಿದೆ.

ಈ ಒಂದು ಸ್ತರವು ಯಾವುದೇ ಸಾಮಾನ್ಯ ಮಾನವನಿಗೆ ಪ್ರಾಕೃತಿಕವಾಗಿ ಬಂದಿರುವಂಥಃ ಬಳುವಳಿಯೇ ಆಗಿರುವುದಿದೆ. ಮತ್ತೊಂದು ಮಗ್ಗಲುವಿನಲ್ಲಿ ಅವಲೋಕಿಸಿದರೆ, ಇದು ಒಂದು ಮಾನವ ಅಸ್ತಿತ್ವಕ್ಕೆ ಜನ್ಮಥಃ ಒದಗಿ ಬಂದಿರುವಂಥಃ ಇತಿಮಿತಿಯೇ ಆಗಿರುವುದಿದೆ. ಯಾವುದೇ ಸಾಧನೆಯ ಅವಶ್ಯಕತೆಯು ಇಲ್ಲದೆ ಈ ಒಂದು ರೀತಿಯ ಗ್ರಹಿಕಾ ರೀತಿಯು, ಎಚ್ಚರದಲ್ಲಿನ ಸ್ಥಿತಿಯಲ್ಲಿ ಗ್ರಹಿಸಿದಂಥಃದ್ದನ್ನು ಅರ್ಥೈಸುವ ರೀತಿಯು ಹಾಗು ನೆನಪು ಎಂತೆಂಬ ಕ್ರಮವು ಮಾನವನಲ್ಲಿ ಹುಟ್ಟನಿಂದಲೇ ಇರುವುದಾಗಿದೆ. ಹೀಗಾಗಿ ಯಾವುದೇ ಸಾಧಕನಿರಲಿ ಅಥವಾ ಸಾಮಾನ್ಯ ವ್ಯಕ್ತಿಯೇ ಆಗಿರಲಿ ಅವನ ಸ್ವಪ್ನ ಎಂತೆಂಬುವುದರ ಗ್ರಹಿಕಾ ರೀತಿಯು ಕಾಲ ಹಾಗು ದೇಶ ಎಂತೆಂಬ ಸ್ಥಿರ ರಾಶಿಯ ಪರಿಮಿತಿಯ ಒಳಗೂ ಹಾಗು ಹೊರಗೂ ಕೂಡ ಇರುವುದಾಗಿದೆ. ಇದನ್ನೇ ಮತ್ತೊಂದು ಅರ್ಥದಲ್ಲಿ ವಿಶಿಷ್ಟಾದ್ವೈತ ಎಂತೆಂಬ ಸ್ತರದಲ್ಲಿ ಬಾಹ್ಯದ ಕಾಲ ಎಂತೆಂಬ ಸ್ಥಿರ ರಾಶಿಯು ಇರುವಂಥಃ ಹಾಗು ಇಲ್ಲದಿರುವಂಥಃ ಆಯಾಮ ಎಂತೆಂಬುವುದರ ಗ್ರಹಿಕಾ ರೀತಿಯು ಹಾಗು ಅರ್ಥೈಸುವ ಕ್ರಮವೂ ಆಗಿರುವುದಿದ್ದು, ಎಚ್ಚರ ಪ್ರಕಾರದಲ್ಲಿ ಮಾತ್ರವೇ ಪ್ರಕಾರದಲ್ಲೇ ನೆನಪು ಎಂತೆಂಬುವುದು ಇರುವುದಾಗಿದ್ದು, ಪ್ರತಿಯೊಂದು ವಿಚಾರವನ್ನು ಎಚ್ಚರ ಎಂಬ ಸ್ತರದ ಪ್ರಯುಕ್ತತೆಯಲ್ಲಿಯೇ ಮಾನವನು ಅರ್ಥಮಾಡಿಕೊಳ್ಳುವಂಥಃ ಪ್ರಯತ್ನವನ್ನು ಸಹಜವಾಗಿ ಮಾಡುವುದಿದೆ.

ಸಮಗ್ರತೆ: ಸಮಗ್ರತಾ (ಅದ್ವೈತ ಎಂಬ ಸ್ತರದಲ್ಲಿನ) ವಿಮೋಚನೆ ಎಂತೆಂಬ ಆಲೋಚನೆಯ ಅವಲೋಕನವು ಈ ರೀತಿಯಾಗಿ ಇರುವುದಿದೆ: ಈ ಒಂದು ಮಾನವ ಸಂಬಂಧಿತ ಆಲೋಚನಾ ಸ್ತರವನ್ನು ಗಣಿತ ಸ್ಥಿರ ರಾಶಿಯಡಿಯಲ್ಲಿ ಕಾಲ ಎಂಬುವುದರ ಸ್ಥಿರ ರಾಶಿಯ ಮೀರುವಿಕೆ ಎಂಬ ಪ್ರಯುಕ್ತತೆಯಿಂದ ರಚಿತಗೊಳಿಸಬಹುದಿದೆ. ಆ ರಚನೆಯು ಈ ರೀತಿಯಾಗಿರುವುದಿದೆ: [ಅ,ಉ,ಮ] ಎಂತೆಂಬುವುದರಲ್ಲಿನ 'ಅ' ಎಂಬ ಬೀಜಾಕ್ಷರವು ಎಚ್ಚರ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ವೈಶ್ವಾನರ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಬಾಹ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಸೂಚಿಸುವುದಾಗಿದೆ. 'ಉ' ಎಂಬ ಬೀಜಾಕ್ಷರವು ಸ್ವಪ್ನ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ತೈಜಸ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಆಂತರ್ಯದಲ್ಲಿ ಕಾಲ ಸ್ಥಿರ ರಾಶಿಯ ಇರುವಿಕೆಯನ್ನು ಹಾಗು ಇಲ್ಲದಿರುವಿಕೆಯನ್ನು ಸೂಚಿಸುವುದಾಗಿದೆ. 'ಮ' ಎಂಬ ಬೀಜಾಕ್ಷರವು ಆಳ ನಿದ್ರಾ ಸ್ಥಿತಿಯನ್ನು, ಶಕ್ತಿ ಎಂಬಂಥಃ ಸ್ತರದಲ್ಲಿ ಪ್ರಾಜ್ಞಾ ಎಂಬುವುದನ್ನು, ಕಾಲ ಎಂಬಂಥಃ ಸ್ಥಿರ ರಾಶಿಯಲ್ಲಿ ಕಾಲ ಸ್ಥಿರ ರಾಶಿಯ ಮೀರುವಿಕೆಯನ್ನು ಸೂಚಿಸುವುದಾಗಿದೆ. ಇದರಲ್ಲಿ ಮೂರೂ ಬೀಜಾಕ್ಷರಗಳು ಒಂದು ಅಖಂಡತೆ ಎಂಬುವುದರ ವಿಭಿನ್ನ ಅಭಿವ್ಯಕ್ತವೇ ಆಗಿರುವುದಿದೆ. ಈ ಒಂದು ಆಲೋಚನಾ ಕ್ರಮದಲ್ಲಿ ಸೃಷ್ಟಿ ಹಾಗು ಸರ್ವದರ ಆಕರ ಎಂತೆಂಬ ಅಂಶಗಳ ಸಂದರ್ಭಗಳಲ್ಲಿ ಈ ಅಂಶಗಳು ವಿಶೇಷವಾದಂಥಃ ಪಾತ್ರಗಳನ್ನು ವಹಿಸುವುದಾಗಿದೆ.

ಈ ಸ್ತರದಲ್ಲಿನ ಆಲೋಚನಾ ಕ್ರಮಗಳಿಗೆ ಹತ್ತು ಹಲವಾರು ಸಿದ್ಧಾಂತಗಳು ಭಾರತೀಯ ಸಂಸ್ಕೃತಿಯಲ್ಲಿ ಅಧ್ಯಯಿಯು ಕಾಣಬಹುದಾಗಿದೆ. ಅದ್ವೈತ ಸಿದ್ಧಾಂತವನ್ನು ಇದಕ್ಕೆ ಉದಾಹರಣೆಯಾಗಿ ಅಧ್ಯಯಿಯು ತೆಗೆದುಕೊಳ್ಳಬಹುದಾಗಿದೆ. ಆತ್ಮ ಹಾಗು ಪರಮಾತ್ಮ ಎಂತೆಂಬುವುಗಳು ಅಂತಿಮದಲ್ಲಿ ಏಕತೆ ಎಂಬುವುದನ್ನು ಹೊಂದುವುದಾಗಿದ್ದು, ಆತ್ಮವು ತಾನೇ ಬ್ರಹ್ಮವಾಗುವುದಾಗಿದೆ, ಅರ್ಥಾತ್, ಆತ್ಮವೇ ಪರಮಾತ್ಮ ಎಂತೆಂಬುದಾಗುವುದಿದೆ. ಅಖಂಡತೆ ಅಥವಾ ಏಕತೆ ಎಂತೆಂಬುವದರಿಂದ ಸೃಷ್ಟಿಯೆಡೆಗೆ ಅವಲೋಕಿಸಿದಾಗ, ಆತ್ಮ ಎಂತೆಂಬುವುದು ಪರಮಾತ್ಮ ಎಂತೆಂಬುವುದರಿಂದ ಬೇರೆಯಾಗಿಯೇ (ಅಂಶವಾಗಿಯೇ) ಇರುವುದಾಗಿದ್ದು, ಅದು ಪರಮಾತ್ಮ ಎಂಬುವವನನ್ನು ಸಾಧನೆಗಳ ಮುಖಾಂತರವಾಗಿ ಐಚ್ಛಿಕ ಮಾರ್ಗದಲ್ಲಿ ಕೃತಗೊಳಿಸಿಕೊಳ್ಳಬಹುದಾಗಿದೆ. ಆತ್ಮ ಎಂಬುವುದರ ಬಾಹ್ಯ ಸಂಬಂಧಿತ ವಿದ್ಯಾಮಾನ ಎಂಬುವುದರ ತಿಳಿವಳಿಕಾ ಪ್ರಕ್ರಿಯೆಯು ದ್ವೈತ ಸ್ತರದಲ್ಲಿ (ಭಿನ್ನತೆ) ಇರುವಂತೆಯೇ ಇರುವುದಿದೆ. ಆತ್ಮವೇ ಪರಮಾತ್ಮ ಎಂತೆಂಬುವುದಾಗಿದ್ದು (ಅರ್ಥಾತ್, ಶುದ್ಧ ಪ್ರಜ್ಞೆಯೇ ಆಗುವುದಾಗಿದ್ದೂ), ಇದು ಕಾಲ ಎಂಬ ಸ್ಥಿರ ರಾಶಿಯನ್ನು ಮೀರಿದಂಥಃ ಆಯಮವೇ ಆಗಿರುವುದಿದೆ.

ಸಾಧಕ ಸಂಬಂಧಿತವಾದಂಥಃ ಸಮಗ್ರತೆ (ಸಂಪೂರ್ಣತೆ) ಎಂತೆಂಬ ಆಯಾಮವನ್ನು ಸಮನ್ವಯ ಸ್ಥಿತಿಯ ಬೇಧಮಾಡುವಿಕೆ ಎಂತೆಂಬ ರೀತಿಯಲ್ಲಿ ಅವಲೋಕಿಸಬಹುದಾಗಿದೆ. ಈ ಒಂದು ಆಯಾಮವನ್ನು ಭಿನ್ನತೆ ಎಂತೆಂಬುವುದನ್ನು ಅರ್ಥೈಸುವಿಕೆ ರೀತಿಯಲ್ಲಿ ಹಾಗು ಮಾಧ್ಯಮದಲ್ಲಿ ವಿವರಿಸುವುದು ಬಹು ಕಷ್ಟ ಸಾಧ್ಯವೇ ಆಗಿರುವುದಿದೆ. ಏಕೆಂದರೆ, ಈ ಸ್ಥರದಲ್ಲಿನ ಸ್ಥಿರ ರಾಶಿಗಳಾಗಲೀ ಅಥವಾ ಭೌತ ಹಾಗು ಅಭೌತ ವಿಜ್ಞಾನದ ರೀತಿನೀತಿಗಳಾಗಲೀ ಭಿನ್ನತೆ ಸ್ತರದಲ್ಲಿನ ವೈಜ್ಞಾನಿಕ ಹಾಗು ಮಾನವ ಸಾಮಾನ್ಯ ಅರ್ಥೈಸುವ ಸ್ತರದಲ್ಲಾಗಲಿ ಇರದ ಕಾರಣ ಒಂದುಕಡೆಯಾದರೆ, ಅವುಗಳ ಎಡೆಗೆರುವ ಸೀಮಿತ ಜ್ಞಾನವು ಮತ್ತೊಂದೆಡೆಯಾಗಿದ್ದು, ತಿಳಿದಿರುವಂಥಃ ಸೀಮಿತ ಜ್ಞಾನವೂ ಕೂಡ ಅತೀಂದ್ರಿಯ ಸ್ತರದ್ದಾಗಿರುವುದು (ಕೇವಲ ಕೆಲವೇ ಕೆಲವು ವ್ಯಕ್ತಿಗಳ ಅತೀಂದ್ರಿಯ ಅನುಭವವೇ ಆಗಿರುವುದು) ಕಾರಣವಾಗಿರಬಹುದಾಗಿದೆ.

ಸಮಗ್ರತೆ ಎಂಬ ಆಯಾಮದಲ್ಲಿ (ಮಾನವ ಸಂಬಂಧಿತ) ಗ್ರಹಿಕೆ ಹಾಗು ಅದರ ಪರಿಮಿತಿ ಎಂಬುವುದರ ಒಂದು ಕಿರುನೋಟವು ಕೆಳಕಂಡಂತೆ ಇರುವುದಿದೆ:



ಚಿತ್ರ–3

ಸಮಗ್ರತೆ ಎಂಬ ಆಯಾಮದಲ್ಲಿ (ಅದ್ವೈತ ಸ್ತರದಲ್ಲಿನ) ಸ್ತರವು ಕಾಲ ಎಂಬ ಸ್ಥಿರ ರಾಶಿಯನ್ನು ಮೀರಿರುವುದಾಗಿದೆ. ಆಂತರ್ಯ ಹಾಗು ಬಾಹ್ಯದಲ್ಲಿ ಕಾಲ ಎಂತೆಂಬ ಸ್ಥಿರ ಜೊತೆಗೆ ದೇಶ ಎಂತೆಂಬ ಸ್ಥಿರ ರಾಶಿಯೂ ಕೂಡ ಇರುವುದಾಗಿದ್ದು, ಅದು ಈ ಸ್ತರದ ಸಾಧಕನ ಗ್ರಹಿಕೆ ಎಂತೆಂಬುವುದರಲ್ಲಿ ಮಹತ್ತರವಾದಂಥಃ ಪಾತ್ರವನ್ನು (ವೈಜ್ಞಾನಿಕವಾಗಿ) ವಹಿಸಿರುವುದಾಗಿದ್ದರೂ, ಗ್ರಹಿಕಾ ಪ್ರಯುಕ್ತತೆಯಿಂದ ಜನಿಸಿದಂತಃ ದತ್ತಾಂಶಗಳನ್ನು ಆಲೋಚನಾ ಪ್ರಕ್ರಿಯೆಗೆ ಕೇವಲ ಅವಶ್ಯಕತೆ ಇರುವಷ್ಟು ಮಾತ್ರದ ಪ್ರಯುಕ್ತತೆಯಿಲ್ಲಿ ಅವನು ಉಪಯೋಗಿಸಿಕೊಳ್ಳುವುದಿದೆ. ಈ ಸ್ತರದ ಶಕ್ತಿಯ ಹೆಸರು ಪ್ರಾಜ್ಞಾ ಎಂತೆಂಬುದಾಗಿ ಇರುವುದಾಗಿದ್ದು, ಅದರ ಬೀಜಾಕ್ಷರವು 'ಮ' ಕಾರವೇ ಆಗಿರುವುದಿದೆ. 'ಮ' ಕಾರ ಎಂಬ ಬೀಜಾಕ್ಷರದಲ್ಲಿ, 'ಮ್' ಎಂಬ ವ್ಯಂಜನ ಹಾಗು 'ಅ' ಕಾರ ಸ್ವರವು ಮಿಳಿತವಾಗಿರುವುದಿದೆ. ಈ ಪ್ರಯುಕ್ತತೆಯಲ್ಲಿ ಈ ಸ್ತರದಲ್ಲಿನ ಯಾವುದೇ ವಿದ್ಯಮಾನಗಳು ಮಾನವ ಗ್ರಹಿಕಾ ಸ್ತರದಲ್ಲಿ ಯಾವ ರೀತಿಯಲ್ಲಿ ಬಿಡಿಬಿಡಿಯಾಗಿ (ಅರ್ಥಾತ್, ಸಂದರ್ಭಾನುಸಾರವಾಗಿ) ಕೃತಗೊಳ್ಳುತ್ತವೆ ಎಂಬುವುದನ್ನು ಚಿತ್ರ–3 ತೋರಿಸಲಾಗಿರುವುದಿದೆ.

ಈ ಚಿತ್ರದ ಪ್ರಕಾರದಲ್ಲಿ ಇರುವಂಥಃ 'ದೇಶ' ಹಾಗು 'ಕಾಲ' ಎಂತೆಂಬುವುಗಳು ಎರಡು ಅಕ್ಷರೇಖೆಗಳೇ ಆಗಿರುವುದಾಗಿದ್ದು, ಅದರಲ್ಲಿ

ಕಾಣಿಸಿರುವಂಥಃ 'ಗ್ರಹಿಕೆ' ಎಂತೆಂಬುವುದು ಸ್ಥಿರ ಪಾರದ (ಸೈನ್ ವೇವ್) ಅಥವಾ ಸ್ಥಿರ ಅಲೆ ಎಂತೆಂಬುವುದೇ ಆಗಿರುವುದಿದೆ. ಈ ಒಂದು ಅಲೆಯು ಧಾರಾವಾಹಿ ರೂಪದಲ್ಲಿ ಇರುವುದಾಗಿದ್ದು, ಅದರ ಮೇಲಿನ ಯಾವುದೇ ಕಕ್ಷಾಂಶಗಳು ಕಾಲ ಹಾಗು ದೇಶ ಎಂಬುವುದರ ದತ್ತಾಂಶವನ್ನು ತೋರಿಸುವುದಾಗಿದ್ದರೂ, ಸಂದರ್ಭಾನುಸಾರ ಮಾತ್ರದಲ್ಲಿ ಇರುವುದರ ಪ್ರಯುಕ್ತತೆಯಿಂದಾಗಿ, ಪ್ರತಿಯೊಂದು ಗ್ರಹಿಕೆಯೂ ಗ್ರಹಿತವಾಗುವುದಾಗಿದ್ದರೂ, ಆಲೋಚನೆ ಎಂತೆಂಬ ಪ್ರಕ್ರಿಯೆಯನ್ನು ಉಪಯೋಗಿಸದ ಕಾರಣದಿಂದಾಗಿ, ಮಾಹಿತಿಯ ಸಂಸ್ಕರಣವು ಕೇವಲ ತಾತ್ಕಾಲಿಕತೆಯಲ್ಲಿ ಕಂಡುಬರುವುದಾಗಿದೆ. ಮಾನವನಲ್ಲಿನ ಗ್ರಹಿಕೆ ಎಂತೆಂಬುವುದರಲ್ಲಿ ಕಾಲ ಎಂಬ ದತ್ತಾಂಶವು ಒಂದೇ ಮಜಲನ್ನು ಅರ್ಥಾತ್, ಕೇವಲ ಮುಂದುವರಿಕೆ (ಕೂಡುವಿಕೆ) ಮಾತ್ರವೇ ಹೊಂದಿರುವುದಾಗಿದ್ದರೆ, ದೇಶ ಎಂತೆಂಬುವುದು ಎರಡು ಮಜಲನ್ನು ಅರ್ಥಾತ್, ಇರುವಿಕೆ ಹಾಗು ಇಲ್ಲದಿರುವಿಕೆ ಎಂತೆಂಬ ಅಂಶವನ್ನು ಸ್ಪಷ್ಟವಾಗಿ ಹೊಂದಿರುವುದಾಗಿದೆ. ಕಾಲ ಅಥವಾ ದೇಶ ಎಂದೆನ್ನುವುದು ಗ್ರಹಿಕೆ ಎಂತೆಂಬುವುದರಲ್ಲಿ ಖಂಡಿತವಾಗಿಯೂ ತನ್ನದೇ ಆದಂಥಃ ಪಾತ್ರವನ್ನು ವಹಿಸುವುದಾಗಿದೆ. ವೇದ ಪ್ರಕಾರದಲ್ಲಿ, ಕಾಲ ಎಂತೆಂಬುವುದು ಕೇವಲ ಮುಂದುವರಿಕೆಯೇ ಆಗಿರುವುದಾಗಿದ್ದು ಅದು ಬದಲಾವಣೆ ಎಂತೆಂಬುವುದನ್ನು ತರುವುದಾಗಿದೆ ಎಂತೆಂಬುದಾಗಿ ಉಲ್ಲೇಖವು ಇರುವುದಾಗಿದೆ. ಮಾನವನ ಗ್ರಹಿಕೆ ಎಂತೆಂಬುವುದರ ಮುಂದುವರಿಕೆಯು ಬದಲಾವಣೆ ಎಂತೆಂಬುವುದನ್ನು ಭಿನ್ನತೆ ಹಾಗು ಸಮಗ್ರತೆ ಎಂತೆಂಬ ಸ್ತರಗಳಲ್ಲಿ ಗುರುತಿಸುವುದೇ ಆಗಿರುವುದಾಗಿದ್ದರೂ ಕೂಡ ಮಾಹಿತಿ ಸಂಸ್ಕರಣ ಎಂತೆಂಬ ಪ್ರಕ್ರಿಯೆಯ ಅನುಪಸ್ಥಿತಿಯ ಕಾರಣದಿಂದಾಗಿ, ಬದಲಾವಣೆಯನ್ನು ಈ ಸ್ತರದ ಸಾಧಕನು ತನ್ನ ನೆನಪಿನಲ್ಲಿ ದಾಖಲಿಸದಿದೆ. ಮಾಹಿತಿ ಸಂಸ್ಕರಣ ಎಂತೆಂಬುವುದರ ಪ್ರಯುಕ್ತತೆಯಲ್ಲಿನ ನೆನಪು ಹಾಗು ಅರ್ಥೈಸುವಿಕೆಯು ಹತ್ತು ಹಲವಾರು ಸ್ಥಿರ ರಾಶಿಗಳೊಡನೆ ಕಾಲ ಹಾಗು ದೇಶ ಎಂತೆಂಬ ಎರಡು ಸ್ಥಿರ ರಾಶಿಗಳನ್ನಂತೂ ಖಂಡಿತವಾಗಿಯೂ ಹೊಂದಿರುವುದಿದ್ದರೂ ಕೂಡ ಅದು ಯಾವ ರೀತಿಯಲ್ಲೂ ಸಾಧಕನ ಉಪಯೋಗಕ್ಕೆ ಬರದಿದೆ. ವಿಜ್ಞಾನ ಪ್ರಕಾರವಾಗಿ ಕಾಲ ಎಂತೆಂಬುವುದು ಮೂರನೇ ಆಯಾಮ ಎಂತೆಂಬುವುದರ ಗಡಿರೇಖೆ ಎಂತೆಂಬುದೇ ಆಗಿರುವುದಾಗಿದ್ದರೂ, ಸಂದರ್ಭ ಪ್ರಯುಕ್ತತೆಯಲ್ಲಿ ಮಾತ್ರವೇ ಸಾಧಕನು ನಿಯಮದೊಳಗೆ ಇರುವುದಾಗಿದ್ದು, ನಂತರದಿ ಅವನು ಕಾಲ ಎಂತೆಂಬುವುದಕ್ಕೆ ಅತೀತವಾಗಿಯೇ (ಪ್ರಜ್ಞಾ ಸ್ತರದಲ್ಲಿ ಮಾತ್ರವೇ) ಜೀವಿಸುವುದಾಗಿದೆ.

ಐಚ್ಛಿಕ ಸ್ತರದಲ್ಲಿ ಸಾಧಕನು ಭಿನ್ನತೆ, ಸಮನ್ವಯ ಹಾಗು ಸಮಗ್ರ ಎಂತೆಂಬ ಆಯಾಮಗಳನ್ನು ಹಾಗು ಅವುಗಳಲ್ಲಿ ಕೃತಗೊಳ್ಳುವ ರೀತಿಯ ಗ್ರಹಿಕೆಗಳನ್ನು ಅರ್ಥಮಾಡಿಕೊಂಡಲ್ಲಿ, ಅವನಿಗೆ ವೇದ ವಿಜ್ಞಾನ ಪ್ರಕಾರದಲ್ಲಿ ಸಾಧನೆಯ ಮುಖಾಂತರದಲ್ಲಿ ವಿಕಾಸಹೊಂದುವುದು ಸುಲಭಸಾಧ್ಯವಾಗುವುದಿದೆ.

ಆಧಾರ:

– ಪ್ರಶ್ನೋಪನಿಷತ್ತು
– ಕಠೋಪನಿಷತ್ತು
– ತೈತ್ತರೀಯ ಉಪನಿಷತ್ತು
– ಶ್ರೀ ಗೌಡಪಾದರ ಕಾರಿಕೆಗಳು
– ಶ್ರೀ ಶಂಕರಾಚಾರ್ಯರ ಭಾಷ್ಯ
– ಮನಃಶಾಸ್ತ್ರ
– ನರವಿಜ್ಞಾನ

'ಪ್ರತ್ಯಾಹಾರ' ಒಂದು ವಿಶ್ಲೇಷಣೆ

ಡಾ.ಕೆ.ವಿ.ಜುಕ್ತಿಮಠ
ಸಹ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಯೋಗವು ಅತ್ಯಂತ ಪ್ರಾಚೀನ ವಿಜ್ಞಾನವೂ ಹೌದು. ದರ್ಶನವು ಹೌದು. ಅದು ಆರೋಗ್ಯ ವರ್ಧಕವಾಗಿದ್ದು ಹಾಗೂ ಸರ್ವೋತ್ತಮ ಮೋಕ್ಷೋಪಾಯವು ಹೌದು. ದು:ಖದಿಂದ ಕೂಡಿ ಭವತಾಪಕೊಳ್ಳಗಾದ ಜೀವರಿಗೆ ಪಶುಪತಿಯಾದ ಪರಮಾತ್ಮನಲ್ಲಿ ಲೀನರಾಗಲೂ ಯೋಗ ಅತ್ಯಂತ ಸರಳ ವಿಧಾನ. ಇದು ಭಕ್ತಿಯನ್ನು ಕ್ರಿಯೆಯನ್ನು ಜ್ಞಾನವನ್ನು ಧ್ಯಾನವನ್ನು ರಾಜಯೋಗದ ಲಕ್ಷಣಗಳನ್ನು ವೃದ್ಧಿಸುವ ಶಕ್ತಿಯನ್ನು ಹೊಂದಿದೆ. ನಮ್ಮ ಪ್ರಾಚೀನ ಋಷಿಗಳ ಉದ್ದೇಶ ಒಂದೇ; ಅಂತ:ದೃಷ್ಟಿಯ ಶಕ್ತಿಯ ಪ್ರಭೆಯಿಂದ ಆರೋಗ್ಯ ಸ್ವಾಸ್ಥ್ಯ ಹಾಗೂ ಶಾಂತಿ ಸಮಾಧಾನದಿಂದ ಪರಮ ಪದವಿಯ ಪ್ರಾಪ್ತವಾಗಿಸಿಕೊಳ್ಳುವುದು. ಪತಂಜಲಿ ಮಹರ್ಷಿ ಇದನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ್ದರಿಂದ ಯೋಗ ಶಾಸ್ತ್ರವೆನಿಸಿದೆ.

ಯೋಗ ಸಾಧನೆಯ ಶಿಖರ ತಲುಪಲು ಎಂಟು ಮೆಟ್ಟಿಲುಗಳುಂಟು. ಅವುಗಳಲ್ಲಿ ಈ ಲೇಖನವು ಪ್ರತ್ಯಾಹಾರವೆಂಬ ಭಾಗವನ್ನು ಮಾತ್ರ ವಿಶ್ಲೇಷಿಸುತ್ತದೆ. ವಿಕಾರಗೊಂಡ ಮನಸ್ಸು ಸರಿಪಡಿಸಿ, ಚಿತ್ತಭೂಮಿಯನ್ನು ಹದವಾಗಿಸಬೇಕು. ರಜೋಗುಣದ ಪ್ರಭಾವದಿಂದ, ತಮೋಗುಣದ ಶಕ್ತಿಯಿಂದ ಚಿತ್ತದ ಐದು ಭೂಮಿಗಳು ದಾರಿತಪ್ಪಿರುತ್ತವೆ. ಅವುಗಳಲ್ಲಿ ಸ್ಥಿರತೆ ತಂದು ಏಕಾಗ್ರಗೊಳಿಸುವುದು ಸರಳವಲ್ಲ. ಜೀವಾತ್ಮನ ಸ್ವಾಭಾವಿಕವಾದ ಚೈತನ್ಯರೂಪ ನಾನಾವಿಧದ ಶಾರೀರಿಕ ಗುಣಗಳಿಂದ, ತನ್ನ ವಾಸ್ತವ ಗುಣವನ್ನು ಮರೆಮಾಚಿಕೊಂಡಿರುತ್ತದೆ. ಇದೆಲ್ಲಕ್ಕೂ ನಾವು ಬಯಸುವ ವ್ಯಕ್ತಿಗಳೇ ಕಾರಣ. ಅವುಗಳನ್ನು ಸಂಸ್ಕಾರ ಗೊಳಿಸಿದಾಗ ಯೋಗದ ಗುರಿಯನ್ನು ತಲುಪಲು ಸಾಧ್ಯ. ಇಲ್ಲಿ ಇಂದ್ರಿಯಗಳ ಪಾತ್ರ ಬಹುಮುಖ್ಯ. ಅವುಗಳು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ಅನಾಸಕ್ತಿಗೊಳಿಸಬೇಕೆಂಬುದನ್ನು ನಿರ್ದೇಶನ ನೀಡಬೇಕಾದುದು ಜೀವಾತ್ಮನಿಗೆ ಬಿಟ್ಟ ವಿಷಯ. ಜೀವಾತ್ಮನಿಗೆ ಸರಿಯಾದ ತರಬೇತಿ ಅವಶ್ಯ. ಜೀವಾತ್ಮನಲ್ಲಿ ಪ್ರತ್ಯಾಹಾರ ಸಿದ್ಧವಾದರೇ ಜಯವನ್ನು ಸಾಧಿಸಿದಂತೆ, ಅದರಿಂದ ಅವನು ಮುಂದಿನ ಹಂತಕ್ಕೇರಲು ಸಾಧ್ಯ. ಅದೆಲ್ಲವನ್ನು ಈ ಪ್ರಬಂಧದಲ್ಲಿ ಚರ್ಚಿಸಿ, ವಿಶ್ಲೇಷಿಸಲಾಗಿದೆ.

ಪೀಠಿಕೆ: ಯೋಗ ಶಬ್ದವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯಲ್ಲಿದೆ. ಪ್ರಾಚೀನ ಭಾರತದಲ್ಲಿ ಸಾಕಷ್ಟು ಯೋಗಿಗಳಿದ್ದರು. ನಮ್ಮವರಿಗೆ ಆಧ್ಯಾತ್ಮದ ವಿದ್ಯೆ ಯಾವಾಗ ಬಂತೋ ಅಂದೇ ಯೋಗದ ಬಳಕೆ ಪ್ರಚಲಿತವಾಗಿದೆ. ಬೇರೆಬೇರೆ ಕಾಲದಲ್ಲಿ ತಮ್ಮದೇ ಆದ ಅರ್ಥವನ್ನು ಬಳಸಿದರೂ ಅಂತಿಮವಾಗಿ ಯೋಗದ ಅರ್ಥ ಹಾಗೂ ಉದ್ದೇಶ ಒಂದೆಯಾಗಿದೆ. ಬೇರೆಬೇರೆ ಭಾಗದಿಂದ ಜನಿಸಿ, ಸಂಚರಿಸಿ ಕೊನೆಗೆ ಸಾಗರವನ್ನೇ ಸೇರುವ ನದಿಯಂತೆ, ಯೋಗವು ಬೇರೆಬೇರೆ ಪ್ರದೇಶದಲ್ಲಿ ವಿವೇಚನೆಯಿಂದ ವಿಶ್ಲೇಷಿಸಿದರು ಅದರ ಮೌಲ್ಯ ಒಂದೇ. ನಮ್ಮಲ್ಲಿಯ ಚೇತನ(ಖಿಙಡುಣ)ದ ತಿಳುವಳಿಕೆಯನ್ನು ನೀಡುವುದೇ ಯೋಗ. ಪ್ರತಿಯೊಬ್ಬರಲ್ಲಿಯೂ ಈ ಶಕ್ತಿ ಕೇಂದ್ರವನ್ನು ವಿಕಸಿಸುವುದು.

ಪ್ರತಿಯೊಬ್ಬರ(ದೇಹದ)ಲ್ಲಿಯ ಷಟ್ ಚಕ್ರಗಳು ಬಹುಮಹತ್ವದ್ದು. ಅದರಲ್ಲಿ ಯಾವುದಾದರೂ ಒಂದು ಕಾರ್ಯ ನಿರ್ವಹಿಸದಿದ್ದರೆ ಕಥೆ ಮುಗಿದಂತೆ. ಅವುಗಳು ಸದಾ ಪ್ರಜ್ವಲಿಸುತ್ತಿರಬೇಕು. ಈ ಕಾರ್ಯಕ್ಕೆ ಯೋಗದ ಫಲ ಮಹತ್ವ ಪಡೆದಿದೆ. ಯೋಗವು ಒಂದು ವಿಶೇಷ ಶಕ್ತಿಯನ್ನು ಪ್ರತಿಯೊಬ್ಬರಲ್ಲಿ ತಂದುಕೊಡಬಲ್ಲದು. ಅದರ ಮಹತ್ವವನ್ನು ಬಲ್ಲವನೇ ಬಲ್ಲ. 'ನಿನ್ನ ನೀನು ತಿಳಿ' ಎಂಬ ಸಾಕ್ರೆಟಿಸ್‌ನ ಮಾತಾಗಲಿ, 'ತನ್ನಲ್ಲಿರುವ ಮಹಾ ಘನವ ಅರಿಯದೆ ಅಗಸ ನೀರರೊಳಗಿದ್ದು ಬಾಯಾರಿ ಸತ್ತಂತೆ' ಎಂಬ ಶರಣರ ನುಡಿಯಂತೆ ನಮ್ಮಲ್ಲಿರುವ ಮಹಾ ಘನವ ವಿಕಾಸ ಮಾಡುವ ಸತ್ಪಥವೇ ಯೋಗ. ಇದನ್ನು ಪಡೆಯಲು ಸಾಧ್ಯವೆಂದು ಯತಿಗಳು–ಸಾಧಕರು ಹೇಳಿದ್ದಾರೆ. ಅದನ್ನು ನಾವು ನಮ್ಮ ಶರೀರದ ಮೇಲೆ ಪ್ರಯೋಗಿಸಿಕೊಳ್ಳಬೇಕು. ಯೋಗ ಸಾಧನೆಗೆ ದೇಹವೆಂಬುದು ಪ್ರಯೋಗಾಲಯದಂತೆ. ಆದರೆ, ಮನುಷ್ಯನ ಚಿಕಿತ್ಸಕ ಬುದ್ಧಿ ಪ್ರಶ್ನಿಸುತ್ತದೆ ಹೊರತು, ಅದನ್ನು ಸಾಧಿಸಬೇಕೆಂಬುವಲ್ಲಿ ಕೆಲವೊಮ್ಮೆ ಹಿಂದೇಟು ಹಾಕುತ್ತದೆ.

ಯೌಗಿಕ ಸಾಮರ್ಥ್ಯವನ್ನು ವೃದ್ಧಿಸುವ ಕಾರ್ಯ ಒಂದರ್ಥದಲ್ಲಿ ನಿವೃತ್ತಿಯ ಮಾರ್ಗ. ಭವವೆಂಬ ದೋಣಿಯನ್ನು ಇಲ್ಲಿಯೇ ವಿರಮಿಸಲು ಬಿಟ್ಟು ಅತ್ಯಾನಂದವನ್ನು ಗಳಿಸುವ ಮಹಾಕಾರ್ಯ. ಯೋಗವು ಒಂದು ದರ್ಶನವಾಗಿ ಭಾರತೀಯ ದರ್ಶನದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ದರ್ಶನವೆನಿಸಿಕೊಳ್ಳುವ ಅರ್ಹತೆಯನ್ನು ಪಡೆದಕೊಂಡಿದೆ. ಸಪ್ರಮಾಣಯುಕ್ತವಾಗಿ ತಮ್ಮ ಸತ್ಯ ಸಂದೇಶದ ಸಮರ್ಥನೆಗಳನ್ನು ದಾರ್ಶನಿಕ (ವೈಜ್ಞಾನಿಕ) ಹಿನ್ನೆಲೆಯಲ್ಲಿ ನೀಡಿದ್ದಾರೆ. ಈಗ ನಮಗೆ ಮಾಹಿತಿ ಇದ್ದಂತೆ, ಪತಂಜಲಿ ಮಹರ್ಷಿಗಳು ಯೋಗ ದರ್ಶನದ ಪ್ರವರ್ತಕರೆಂಬುದರಲ್ಲಿ ಯಾವ ಸಂಶಯವು ಇಲ್ಲ. ಪತಂಜಲಿಗಳು ಮಹಾಯೋಗಿಗಳು. ಅದರ ಉದ್ದೇಶ ಯೋಗದ ಮಹತ್ವವನ್ನು ಎಲ್ಲರೂ ಪಡೆಯಬೇಕೆಂಬುದೇ ಆಗಿದೆ. ಎಲ್ಲರೂ ಶಾಂತಿ–ಸಮಾಧಾನ ಪಡೆದು ಆನಂದದಿಂದರಲೇಂಬುದೇ ಅವರ ಗುರಿ. ಅಂತೆಯೇ ವಿವೇಕದ (ಜ್ಞಾನದ) ಸಿದ್ಧಿಯಾಗಿ ಯೋಗದಲ್ಲಿಯ ಎಂಟು ಸಾಧನಗಳನ್ನು ಹೇಳುತ್ತಾರೆ. ಅವುಗಳನ್ನೇ ಅಷ್ಟಾಂಗ ಯೋಗಗಳೆಂದು ಕರೆಯುತ್ತಾರೆ. ಬೇರೆ ಬೇರೆ ದಾರ್ಶನಿಕರು ಒಂದೋ ಎರಡೋ ಸಾಧನಗಳನ್ನು ಸಮರ್ಥಿಸಿಕೊಂಡಿದ್ದರೆ, ಪತಂಜಲಿಗಳು ಎಂಟು ಸಾಧನಗಳನ್ನು ಸಾಧಕ ಪಾಲಿಸಬೇಕು. ಹಾಗಾದರೆ ಮಾತ್ರ ಶರೀರ ಹಾಗೂ ಮನಸ್ಸಿನ ಮೇಲೆ ಅಧಿಕಾರಿ (ಆತ್ಮ) ಸಂಪೂರ್ಣ ಹಿಡಿತವನ್ನು ಸಾಧಿಸಬಲ್ಲನು. ಹಿಂದೂ ಧರ್ಮದಲ್ಲಿ (ದರ್ಶನಗಳಲ್ಲಿ) ಆತ್ಮನನ್ನು ಅಧಿಕಾರಿ, ಶರೀರದ ಯಜಮಾನ ಎಂತೆಲ್ಲ ಕರೆಯುವುದು ವಾಡಿಕೆ. ಈ ಅಧಿಕಾರಿಯನ್ನು ಜಗತ್ಪಿತನಾದ ಪರಮಾತ್ಮನು (ದೇವರು) ಇಲ್ಲವೋ ಅಗೋಚರ ಶಕ್ತಿಯು ನಿಯಂತ್ರಿಸುವುದೆಂಬ ಭಾವನೆ. ಇದನ್ನು ಪಾಶ್ಚಿಮಾತ್ಯ ಕೆಲ ಚಿಂತಕರು ಸಮರ್ಥಿಸಿಕೊಂಡಿದ್ದಾರೆ. ಉದಾಹರಣೆಗೆ; ಸಾಕ್ರೆಟಸ್, ಅರಿಸ್ಟಾಟಲ್, ಪ್ಲೋಟೋ ಮತ್ತು ಸ್ಪಿನೋಜಾ ಮುಂತಾದವರು.

ದೇಹ ಸಂಪೂರ್ಣವಾಗಿ ಆತ್ಮನ ನಿಯಂತ್ರಣದಲ್ಲಿ ಬರುವುದೇ ಯೋಗ. ದೇಹದ ಭಾವಗಳು ಹಲವು, ಮನಸ್ಸಿನ ಆಶೋತ್ತರಗಳು ಇನ್ನೂ ಹಲವು. ಅವುಗಳ ಮೇಲೆ ನಿಯಂತ್ರಣ ಬೇಕಲ್ಲ? ತನ್ನ ಇಂದ್ರಿಯಗಳ ಮೇಲೆ ನಿಯಂತ್ರಣ ಇಲ್ಲವೇ ವಿಜಯ ಸಾಧಿಸಿದವರು ವಿಶಾಲವಾದ ಜಗತ್ತಿನ ಮೇಲೆ ನಿಯಂತ್ರಣ ಪಡೆಯಬಲ್ಲರು. ತನ್ನ ತಾನರಿದರೆ, ತಾನೇ ಘನವೆಂಬ ಶರಣರ ಸೂಳ್ನುಡಿ ಸತ್ಯವಲ್ಲದೆ ಮತ್ತೇನು? ಇದು ನಿಜವಾದ ಕಲಿತನ. ಭಗವದ್ ಗೀತೆಯಲ್ಲಿ ಸರ್ವರಕ್ಷಕನಾದ ಕೃಷ್ಣನು ಸ್ಥಿತಪ್ರಜ್ಞ ಸ್ಥಿತಿಯನ್ನು ಉಪದೇಶಿಸಿದ್ದಾನೆ. ಈ ಸ್ಥಿತಿಯಲ್ಲಿ ಸಾಧಕ ಶಾಂತನಾಗಿ ನಿಶ್ಚಿಂತನಾಗಿ ಇರುತ್ತಾನೆ. ಇಲ್ಲಿ ಶರೀರ–ಮನ–ಆತ್ಮ ಶುದ್ಧಿಯಾಗಿರಬೇಕು. ಕಲ್ಮಶಗಳೇ ರೋಗಕ್ಕೆ ಕಾರಣ. ಮನುಷ್ಯರಲ್ಲಿ ರೋಗದ ಲಕ್ಷಣಗಳಿದ್ದರೆ ಏನೋ ಕಲ್ಮಶವಿದೆ ಎಂದರ್ಥ. ಆರೋಗ್ಯಪೂರ್ಣ ಮನುಷ್ಯನಲ್ಲಿ ನೋವಿಲ್ಲ. ಬೇಸರ ಇಲ್ಲ, ಬಾಧೆಇಲ್ಲ, ಚಿಂತೆ ಇಲ್ಲ, ದು:ಖವಿಲ್ಲ. ಈ ಶರೀರ ಕಾಯಿಲೆಗಳ ಆಗರ. ಅವುಗಳು ಬರದ ಹಾಗೆ ಎಚ್ಚರ ವಹಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯ. ಸ್ವಸ್ಥ ಮನಸ್ಸು ಉತ್ತಮ ಚಿಂತನೆಗಳನ್ನು ಮಾಡುವುದು. ಉತ್ತಮ ಚಿಂತನೆ ಉತ್ತಮ ವ್ಯವಹಾರವನ್ನು ಮಾಡುವುದು. ಅದರ ಫಲವು ಸರ್ವೋತ್ತಮವಾಗಿರುವುದರಲ್ಲಿ ಎರಡು ಮಾತಿಲ್ಲ. ಅರಿತು ಬಾಳಿದರೆ ಜೀವನ ಸುಗಮ. ಅರಿಯದಿರೆ ಬಾಳು ಹಾಲಾಹಲ.

ಪತಂಜಲಿ ಮುನಿಗಳು, ಸಾಮಾನ್ಯರು ಸಹ ಅಷ್ಟಾಂಗ ಯೋಗಗಳನ್ನು ಸರಳವಾಗಿ ಅರ್ಥೈಸುವ ಹಾಗೆ ಉಪದೇಶಿಸಿದ್ದಾರೆ. ಯೋಗಗಳೆಂದು ಕರೆದರೂ ಇವು ಸಾಧ್ಯ ಮಾರ್ಗಗಳು. ಅವುಗಳೆಂದರೆ ಯಮ (ಸಂಯಮ); ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ (ವಿಷಯಗಳ ಅರ್ಜನ ಮತ್ತು ರಕ್ಷಣಾದಿಗಳ ದೋಷಗಳಿಂದ ಅವುಗಳನ್ನು ಸ್ವೀಕರಿಸದಿರುವುದು). ನಿಯಮ; ಶೌಚ, ಸಂತೋಷ, ತಪ, ಸ್ವಾಧ್ಯಾಯ, ಈಶ್ವರ ಪ್ರಣಿಧಾನ (ಭಕ್ತಿಪೂರ್ವಕವಾಗಿ ಸಮಸ್ತ ಕರ್ಮಗಳನ್ನು ಈಶ್ವರನಲ್ಲಿ ಸಮರ್ಪಿಸುವುದು), ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ.

ಸಾಧನೆಯಲ್ಲಿ ಸೇವಿಸುವ ಆಹಾರ ಪದ್ಧತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಯಮ(ಸಂಯಮ)ವು ಸಾತ್ವಿಕ ಆಹಾರದ ಪದ್ದತಿಯಿಂದ ಸಾಧ್ಯ. ನಮ್ಮ ಅಧ್ಯಯನವು ಮುಖ್ಯವಾಗಿ ಪ್ರತ್ಯಾಹಾರದ ಕುರಿತಾಗಿರುವುದರಿಂದ, ಅದನ್ನೆ ಕೇಂದ್ರಿಕರಿಸೋಣ. ಹಾಗಾದರೆ ಪ್ರತ್ಯಾಹಾರವೆಂದರೇನು? ಎಂಬುದನ್ನು ಚರ್ಚಿಸೋಣ. ಮುನಿ ಪತಂಜಲಿ ಹೇಳುವಂತೆ ಯೋಗದರ್ಶನದಲ್ಲಿಯ ಈ ಶ್ಲೋಕವನ್ನು ಗಮನಿಸೋಣ.

"ಸ್ವವಿಷಯಾ ಸಂಪ್ರಯೋಗೇ ಚಿತ್ತ ಸ್ವರೂಪಾನುಕಾರ ಇವೈಂದ್ರಿಯಾಣಾಂ ಪ್ರತ್ಯಾಹಾರ:"

(ಯೋ.ದ. 2.54)

ಇಂದ್ರಿಯಗಳು ತಮ್ಮತಮ್ಮ ವಿಷಯರೂಪ ರಸಾದಿಗಳ ಸನ್ನಿಕರ್ಷವಾಗದಿರುವುದರಿಂದ ಚಿತ್ತವೃತ್ತಿಗೆ ಅನುರೂಪವಾಗಿಯೇ ಇಂದ್ರಿಯಗಳ ಆಗಿ ಬಿಡುತ್ತವೆಂಬುದೆ ಇದರ ತಾತ್ಪರ್ಯ. ಇನ್ನೂ ಸರಳವಾಗಿ ಹೇಳಬೇಕೆಂದರೆ, ಬೇರೆಬೇರೆ ಇಂದ್ರಿಯಗಳು ತಮ್ಮ ಬಾಹ್ಯ ವಿಷಯಗಳಿಂದ, ಚಿತ್ತದಂತೆ ನಿರುದ್ಧವಾದಾಗ ಪ್ರತ್ಯಾಹಾರವೆನಿಸುವುದು. [ಇದು ಇಂದ್ರಿಯಗಳಿಗೆ ಸಂಬಂಧಿಸಿದ್ದು] ಪ್ರತಿ=ಪ್ರತಿಕೂಲ. ಆಹಾರ=ವೃತ್ತಿ. ಅಂದರೆ, ಬಹಿರ್ಮುಖ ವೃತ್ತಿಯುಳ್ಳ ಇಂದ್ರಿಯಗಳು, ಬಾಹ್ಯ ವಿಷಯಗಳನ್ನು ಬಿಟ್ಟು ಅಂತರ್ಮುಖಿಯಾಗುತ್ತವೆ. ಆಗ ಅವುಗಳಲ್ಲಿ ಪ್ರತ್ಯಾಹಾರ ಉಂಟಾಗುವುದು ಎಂದು ಹೇಳಿದ್ದಾರೆ. ಇದೇನು ಐಂದ್ರಜಾಲಿಕ ವಿದ್ಯೆಯಲ್ಲ, ಸಾಧನೆಯಿಂದ ಸಾಧ್ಯವಾಗುವ, ಪ್ರತಿಯೊಬ್ಬರು ಅನುಭವಿಸಬಲ್ಲ ಜ್ಞಾನ. ಸತ್ಯವಾದುದು. ಅರ್ಥಾತ್ ಇಂದ್ರಿಯಗಳು ಸಂಪೂರ್ಣವಾಗುವ ಹಂತವಿದು. ಅಪೂರ್ಣವಾಗಿ ತುಂಬಿದ ಕೊಡವು ಶಬ್ದವನ್ನು ಹೆಚ್ಚು ಮಾಡುವಂತೆ, ಅಪೂರ್ಣ ಸಾಧಕ ಮಾತನಾಡುವುದೇ ಹೆಚ್ಚು. ನಿತ್ಯಸಾಧಕನಾದ ಯೋಗಿಯೂ ಆನಂದದಿಂದ ಮಾತನಾಡದೆ ಸುಖಿಯಾಗಿರುತ್ತಾನೆ. ಇದು ಪಾರಮಾರ್ಥಿಕ ಸುಖವೆಂಬುದು ಮರೆಯಬಾರದು. ವೀರ–ಧೀರನೆಂದರೆ; ಜೀತೇಂದ್ರಿಯನು. ಅವನೇ ವೀರ. ಸಾವಿರಾರು ಜನರನ್ನು ಕೊಲ್ಲುವವನಲ್ಲ. ತನ್ನಲ್ಲಿರುವ ವಿಷಯವೆಂಬ ಸುಖದ ಇಲ್ಲವೇ ತನ್ನಲ್ಲಿರುವ ವೈರಿಗಳ ವಿಜಯಿ ಎಂದರ್ಥ. ಮನುಷ್ಯನು ಯಾವುದನ್ನು ನಿಯಂತ್ರಿಸದಿದ್ದರೆ, ಸ್ವೇಚ್ಛಾಚಾರಿಯಾಗಿ ವರ್ತಿಸಿದರೆ, ಆಗುವ ಅನಾಹುತಗಳೇನು ಎಷ್ಟು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ರೀಲಿನ ಜೀವನಕ್ಕೂ ನಿಜ ಜೀವನಕ್ಕೂ ಬಹು ವ್ಯತ್ಯಾಸವಿದೆ. ಸಾಮಾನ್ಯ ಅವಸ್ಥೆಯಲ್ಲಿ ಇಂದ್ರಿಯಗಳಿಗೆ ಲಘಾಮು ಇರದಿದ್ದರೆ, ಮನಸ್ಸು ಎಲ್ಲಾಕಡೆ ಓಡಾಡಿ ಪಡಬಾರದ ಕಷ್ಟವನ್ನು ಪಡುವುದು. ಮನಸ್ಸು ಓಡಿದಂತೆ, ಈ ಶರೀರ ಹಿಂಬಾಲಿಸಬೇಕಲ್ಲ? ಧಣಿದ ಮನಸ್ಸಿಗೂ ಹಾಗೂ ಶರೀರಕ್ಕೂ ಒಂದಿನಿತು ಶಾಂತಿ ಬೇಕಲ್ಲವೇ? ಅಂತೆಯೇ ಮಹಾಜ್ಞಾನಿಗಳು ಪ್ರತ್ಯಾಹಾರವನ್ನು ಅಭ್ಯಾಸ ಮಾಡುವುದರಿಂದ ಇಂದ್ರಿಯಗಳು ಮನಸ್ಸಿನ ವಶವಾಗುತ್ತವೆ, ಆಗ ಮನಸ್ಸು ಅಪೇಕ್ಷಿಸಿದಂತೆ ಅವುಗಳು ಕೆಲಸ ಮಾಡುತ್ತವೆ ಎಂದು ಹೇಳಿದ್ದಾರೆ.

ಈ ಮೇಲಿನ ಯಮ, ನಿಯಮ, ಆಸನ, ಪ್ರಾಣಾಯಾಮ ಮತ್ತು ಇದು ಸೇರಿ ಐದು ಅಂಗಗಳು ಬಹಿರಂಗ ಸಾಧನಗಳು. ಅಂತೆಯೇ ಸಾಧಕರು ವಿವೇಕದಿಂದ ಕಾರ್ಯಪ್ರವೃತ್ತರಾಗಬೇಕು. ವೈರಾಗ್ಯವೆಂದು ಕರೆದರೆ ಆಧ್ಯಾತ್ಮಕ್ಕೆ ಸೀಮಿತವಾಗುವುದು. ಸಂಸಾರಸ್ಥರು ವಿವೇಕದಿಂದ ಹೆಜ್ಜೆ ಹಾಕಬೇಕಲ್ಲವೆ. ತನ್ನ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಿದಾಗ ಮಾತ್ರ ವಿಜಯ ಅವನದು. ಮನಸ್ಸನ್ನು ಇಂದ್ರಿಯಗಳ ಚಾಲಕನೆಂದು ಕರೆಯುತ್ತಾರೆ. ಚಾಲಕ ಜಾಗೃತನಾಗಿರಬೇಕು. ಎಚ್ಚರಿಕೆಯಿಂದ ವಾಹನ ಚಲಾಯಿಸಿದಂತೆ ಶರೀರವೆಂಬ ವಾಹನವನ್ನು ಬಹು ಸೂಕ್ಷ್ಮದಿಂದ ನಡೆಸಬೇಕೆಂಬ ಕಾರಣಕ್ಕೆ ಈ ಸಾಧನಗಳ ಅವಶ್ಯಕತೆ. ಇವುಗಳನ್ನು ತನಗೆ ತಿಳಿದಂತೆ ನಡೆಸಿದರೆ ಅಪಘಾತ ಕಟ್ಟಿಟ್ಟ ಬುತ್ತಿ. ಮನೋಜಯ ಅಥವಾ ವಿಷಯಗಳಿಂದ ವಿಮುಖರಾಗಿ ಮನಸ್ಸನ್ನು ಒಳಮುಖಿ (ಅಂತರ್ಮುಖಿ)ಯಾಗಿಸುವುದೇ ಪ್ರತ್ಯಾಹಾರ. ಅದನ್ನು ಊರ್ಧ್ವಮುಖಿ ಎಂದರು ತಪ್ಪಾಗದು. ಅಧೋಮುಖಿ ಜೀವನ ನಮ್ಮನ್ನು ಅಜ್ಞಾನಕ್ಕೆ ತಳ್ಳುವುದು. ಸದಾ ಸಂಚಾರಿಯಾಗಿರುವಂತೆ ನೋಡಿಕೊಳ್ಳುವುದು. ಯೋಗಿಗಳು ಸದಾ ಆನಂದವನ್ನು ಬಯಸುವವರೋ ವಿನ: ಸಂಚಾರವನ್ನಲ್ಲ. ಅವರ ಉದ್ದೇಶ ಸದಾ ಶಾಂತಿ–ನೆಮ್ಮದಿ ಆನಂದಮಯವಾದ ಬದುಕು ಅದುವೇ ಮೇಲೇರುವ ಹಂತ. ಪತಂಜಲಿ ಮಹರ್ಷಿಗಳು ಪ್ರತ್ಯಾಹಾರದ ಫಲವನ್ನು ಹೀಗೆ ಹೇಳಿದ್ದಾರೆ.

ತತ: ಪರಮಾವಶ್ಯತೇಂದ್ರಿಯಾಣಾಂ॥ (ಯೋ.ದ.2.55)

ಈ ಸಾಧನದ ಮೂಲಕ ಸಾಧಕನಿಗೆ ಇಂದ್ರಿಯಗಳ ಮೇಲೆ ಪೂರ್ಣ ಅಧಿಕಾರ ಉಂಟಾಗುತ್ತದೆ. ಶಬ್ದ, ಸ್ಪರ್ಶ, ರೂಪ, ರಸ ಗಂಧಾದಿಗಳ ಆಸಕ್ತಿಯು ವ್ಯಕ್ತಿಯನ್ನು ಆತ್ಮಕಲ್ಯಾಣದ ದಾರಿಯಿಂದ ದೂರ ಸರಿಸುತ್ತವೆ. ಇಂದ್ರಿಯಗಳ ಆಸಕ್ತಿಗಳ ಎಷ್ಟು ಪ್ರಬಲವೆಂದರೆ, ಮನಸ್ಸನ್ನು ವಿಚಲಿತಗೊಳಿಸುತ್ತದೆ. ಇವುಗಳು ಪ್ರತಿಯೊಂದು ಇಂದ್ರಿಯಗಳ ಬಾಗಿಲುಗಳ ಮೂಲಕ ಪ್ರವೇಶಮಾಡಿ ಮನಸ್ಸಿಗೆ ಲೌಕಿಕದ ಆಸೆಗಳನ್ನು ಹೊತ್ತಿಸುವವು. ಆದರೆ ಅವುಗಳನ್ನು ನಿಯಂತ್ರಿಸಬೇಕೆಂಬುದು ಪ್ರಮುಖವಾದ ಕರ್ತವ್ಯ. ಆಸಕ್ತಿಗಳನ್ನು ಅನಾಸಕ್ತಿಗಳನ್ನಾಗಿ ಪರಿವರ್ತಿಸಬೇಕು. ಇಂದ್ರಿಯಗಳ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದುವ ವ್ಯಕ್ತಿಯ ಪ್ರೀತಿಯು ಭೋಗಗಳಲ್ಲಿ ನೆಲೆಗೊಳ್ಳುತ್ತದೆ. ಇದರಿಂದ ಭವ ಬಂಧನಗಳಲ್ಲಿ ತೊಳಲಾಡಲು ಜೀವನು ಪ್ರಾರಂಭಿಸುವನು. ದು:ಖವನ್ನು ನಿವೃತ್ತಿಸಬೇಕೆಂಬ ಯೋಗಿಯ ಪ್ರಯತ್ನಕ್ಕೆ ಇವು ಅಡ್ಡಿ ಮಾಡುತ್ತವೆಂಬ ಕಾರಣಕ್ಕೆ

ಪತಂಜಲಿ ಪ್ರತ್ಯಾಹಾರವನ್ನು ಸಾಧಿಸಲು ತಿಳಿಸಿದ್ದು. ಭಗವಂತನನ್ನು ದೂರ ಮಾಡಿಕೊಳ್ಳಬಾರದು. ದೂರಾಗಿದ್ದರಿಂದಲೇ ದು:ಖ ಹೆಚ್ಚಾಗಿದೆ. ಒಂದಾಗಬೇಕೆಂಬ ಪ್ರಕ್ರಿಯೆಯೇ ಯೋಗ. ಯೋಗದ ವಿರುದ್ದ ಪದವೇ ವಿಯೋಗ. ಅದುವೇ ನಮ್ಮೆಲ್ಲ ಕಷ್ಟಗಳಿಗೆ ಕಾರಣ. ದೇವರ ಹತ್ತಿರಕ್ಕೆ ಹೋಗಿ ಸಾರೂಪ್ಯವನ್ನು ಹೊಂದಿ ಸಾಯುಜ್ಯಕ್ಕೆ ಒಳಗಾಗಬೇಕೆಂಬುದೆ ಯೋಗಿಯ ನಿಜವಾದ ಬಯಕೆ. ಅಂತೆಯೇ, ಪ್ರತ್ಯಾಹಾರ ಸಾಧಿಸಿದರೆ, ಇಂದ್ರಿಯಗಳ ವಿಜಯವು ಆಗುವುದು. ಇಂತಹ ಸ್ಥಿತಿಯಲ್ಲಿ ಅವನಿಗೆ ಒಂದೇ ಅನುಭವವಾಗುವುದು ಅದುವೇ ಈಶ್ವರನಲ್ಲಿಯ ಪ್ರೀತಿ. ಪರಮಸುಖವಾಗಿ ಆನಂದಗೊಳ್ಳುವುದು.

ನಾವು ಜನ್ಮವನ್ನು ಪಡೆದದ್ದು ಯಾವ ಕಾರಣಕ್ಕಾಗಿ, ಪೂರ್ವಜನ್ಮದ ಕರ್ಮಗಳಿಗನುಸಾರವಾಗಿ ಅವುಗಳೇ ಸಂಚಿತ ಕರ್ಮಗಳ ಫಲವಾಗಿ ಹಿಂದಿನ ಜನ್ಮದ ಕರ್ಮಗಳ ಪಾಕ. ನಾವು ಅದನ್ನು ಇಂದು ಅನುಭವಿಸುತ್ತಿದ್ದೇವೆ. ಇದು ನಾನು ಮಾಡಿಲ್ಲ ಎನ್ನುವಂತಿಲ್ಲ. ನಮಗೆ ತಿಳಿಯದಿರಬಹುದು. ಆದರೆ ಅದು ನಮ್ಮ ಜನ್ಮದ ಕರ್ಮದ ಫಲವೇ ಹೊರತು ಬೇರೇನು ಅಲ್ಲ. ಸುಕೃತ–ದುಷ್ಕೃತ್ಯ ಕರ್ಮಗಳಿದ್ದರು ಅವು ಸಹ ನಮ್ಮನ್ನ ನೆರಳಿನಂತೆ ಹಿಂಬಾಲಿಸುತ್ತವೆ. ಶಬ್ದ, ಸ್ಪರ್ಶ ಮುಂತಾದ ವಿಷಯ ವಾಸನೆಗಳು ವ್ಯಕ್ತಿಗೆ ಅವಿದ್ಯಾವಶವೆಂದೇ ಕರೆಯಲಾಗುತ್ತದೆ. ಇಂದಿನ ನಮ್ಮ ಸಾಂಸರಿಕ ಸುಖವು ಮುಂದೇ ದು:ಖಕ್ಕೆ ಕಾರಣವಾಗುವುದು. ಶಾಶ್ವತವಾದ ಸುಖವೆಂಬುದಿಲ್ಲ. ಇದ್ದರೂ ಅದು ಜನ್ಮ–ಮರಣವನ್ನು ಗೆದ್ದನಂತರೆಂಬ ಸತ್ಯವನ್ನು ಯಾರು ಅಲ್ಲಗಳೆಯುವಂತಿಲ್ಲ. ಭೌತಿಕ ಭೋಗಭಾಗ್ಯಗಳು ದು:ಖವನ್ನು ತರಬಲ್ಲವೆಂಬುದು ಸತ್ಯವಾದುದು. ಅಂತೆಯೇ ಯೋಗಿಯಾದವನು ಅದರ ಪರಿಣಾಮಗಳನ್ನು ಅರಿತು ಉತ್ತಮ ಸಂಸ್ಕಾರಗಳ ನೀಡಬಲ್ಲನು. ಸಾಮಾನ್ಯರು ತಿಳಿದ ಸುಖವೆಂಬ ಕೆಲಸಗಳನ್ನು ಯೋಗಿಯಾದವನು ಅಲ್ಲಗಳೆಯುವನು. ಆದ್ದರಿಂದ ಸಾಧನಕನು ದು:ಖದ ಅತ್ಯಂತ ನಿವೃತ್ತಿಗಾಗಿ ಈಶ್ವರ ಪ್ರಾಪ್ತಿಗಾಗಿ ಪೂರ್ಣ ಸಾಧನೆಗಳನ್ನು ಮಾಡಲೇಬೇಕು. ಸತತ ಅಭ್ಯಾಸದ ಬಲ ಬೇಕಾಗುತ್ತದೆ. ಕರ್ಮವಿಪಾಕ ಒಂದೇ ದಿನದಲ್ಲಿ ಸಾಧ್ಯವಿಲ್ಲ. ಅಷ್ಟೇಅಲ್ಲ ಕೆಲವೊಮ್ಮೆ ಒಂದೇ ಜನ್ಮದಲ್ಲಿಯೂ ಸಾಧ್ಯವಾಗುವುದಿಲ್ಲ. ನಿರಂತರವಾದ ಸಾಧನೆಯ–ಶ್ರಮದ ಬಲದಿಂದ ಲಭ್ಯ. ಯೋಗ ಮಾರ್ಗದ 'ಯಮ' ತತ್ವದ ಅನುಷ್ಠಾನದಿಂದಲೇ ಪ್ರಾರಂಭ. ಅಲ್ಲಿ ಸಾಧನೆಯ ಬೀಜ ಬಿತ್ತಿದರೆ ಮುಂದೆ ಅದು ನಿಯಮ ಮುಂತಾದವುಗಳ ರಕ್ಷಣೆ–ಬೆಳವಣಿಗೆಯಲ್ಲಿ ಬಾಹ್ಯ ಸಾಧನಾ ರಂಗದ ಜೊನೆಯ ಮೆಟ್ಟಿಲಾದ ಪ್ರತ್ಯಾಹಾರದಲ್ಲಿ ಪೂರ್ಣವಾಗುವುದು. ಹೇಗೆ ಹಾಲಿನಲ್ಲಿರುವ ತುಪ್ಪವು ಹಲವು ಸಂಸ್ಕಾರಗಳಿಂದ ಕೊನೆಯ ಪಾಕವಾಗುವುದೋ, ಅದರಂತೆಯೇ ಪ್ರತ್ಯಾಹಾರ ಬಹಿರಂಗದ ಕೊನೆಯ ಪಾಕ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರತ್ಯಾಹಾರ ಇಲ್ಲದ ಸ್ಥಿತಿಯಲ್ಲಿ ಇಂದ್ರಿಯಗಳು ಸ್ವೇಚ್ಚಾಚಾರದಿಂದ ವರ್ತಿಸುತ್ತಿರುತ್ತವೆ. ಇಚ್ಛೆ ಬಂದಡೆ ಮನಸ್ಸನ್ನು ಓಡಿಸುವುದೆಂದರೆ ಹಳ್ಳಕ್ಕೆ ಬಿದ್ದಂತೆ. ನಿಯಂತ್ರಣವಿಲ್ಲದ ಬಂಡಿಯ ಗತಿಯಂತೆ. ಆದರೆ ನಿರಂತರ ಶ್ರಮ–ಸಾಧನೆಯಿಂದ ಮನಸ್ಸಿನ ತ್ಯಾಗದಿಂದ ಪ್ರತ್ಯಾಹಾರದ ಅಭ್ಯಾಸದಿಂದ ಮನಸ್ಸು ವಶವಾಗುವುದು. ಆಗ ಮನಸ್ಸು ಅಪೇಕ್ಷಿಸಿದಂತೆ ಎಲ್ಲ ಇಂದ್ರಿಯಗಳ ಕೆಲಸಮಾಡುತ್ತವೆ. ಇನ್ನೂ ಮುಂದಿನ ಮೂರು ಅಂಗಗಳಿವೆಯಲ್ಲ (ಧ್ಯಾನ, ಧಾರಣ ಮತ್ತು ಸಮಾಧಿ), ಅವುಗಳು ಆಂತರಂಗಿಕ ಸಾಧನೆಗಳು. ಜ್ಞಾನಜ್ಯೋತಿಯ ಉದಯವೇ ಇವುಗಳ ಸಧ್ಯದ ಫಲ. ಇದಕ್ಕೆ ಬಹಿರಂಗದ ಸಾಧನೆಗಳಾದ ಮೇಲಿನ ಐದು ಅವಯವಗಳ ಸಾಧನೆಯ ಫಲ ಬೇಕೆಬೇಕು. ಅವುಗಳ ಪರಸ್ಪರ ಪೂರಕ ಅಂಶಗಳು.

ಸಮಾರೋಪ: ಯೋಗದರ್ಶನವು ಪ್ರಾಚೀನ ಹಾಗೂ ವೈಜ್ಞಾನಿಕ ಸತ್ಯಾಂಶಗಳನ್ನು ಒಳಗೊಂಡ ದರ್ಶನ. ಇಂದು ಅದೊಂದೆ ಆರೋಗ್ಯ ವರ್ಧಕ ವಿಜ್ಞಾನವಾಗಿ ಕಾರ್ಯನಿರ್ವಹಿಸುತ್ತಿದೆ. ಯೋಗವು ಕ್ರಮಬದ್ಧ ಜೀವನವನ್ನು ಕಲಿಸಿಕೊಡುವುದು. ಅದು ಸತ್ಯವು ಕೂಡಾ. ಯಾರೂ ಆರೋಗ್ಯವಾಗಿರಲು ಬಯಸುವವರೋ ಅವರು ಯೋಗ ಸಾಧನಗಳನ್ನು ಪಾಲಿಸಲು ಬಯಸುವರು. ಯೋಗ ಸಾಧನಗಳಲ್ಲಿ ಪ್ರತ್ಯಾಹಾರವು ಮಹತ್ವದ ಸಾಧನವೆಂದರೆ ತಪ್ಪಾಗದು. ಹೇಗೆ ವೈದ್ಯರು ಆರೋಗ್ಯ ಚೆನ್ನಾಗಿರಲು, ರೋಗ ಬರದ ಹಾಗೆ ನೋಡಿಕೊಳ್ಳಲು, ರೋಗ ಉಲ್ಬಣನೆಗೆ ಕಾರಣವಾದ ಆಹಾರದ ಪಥ್ಯೆ ಮಾಡಲು ಹೇಳುವರೋ, ಅದರಂತೆ ಇಂದ್ರಿಯಗಳಿಗೆ (ವಿಷಯ ವಾಸನಾಸಕ್ತವಾಗುವ ಶಬ್ದ, ರೂಪ ಇತ್ಯಾದಿ) ಲಭಿಸುವ ಮಾಹಿತಿಯನ್ನು ನಿಲ್ಲಿಸುವುದು ಸರಳವಾದ ಉಪಾಯ. ಇದರ ಸಹಾಯದಿಂದ ನಾವು ಇಂದ್ರಿಯಗಳನ್ನು ಹೇಗೆ ಬೇಕೋ ಹಾಗೆ ಆಕಾರಗೊಳಿಸಲು ಪ್ರವೃತ್ತರಾಗಲು ಸಾಧ್ಯವಾಗುವುದು. ಇದೊಂದು ಉತ್ತಮ ತರಬೇತಿ ಸಾಧನ – ಸರಳ ವಿಧಾನವಾದರೂ ನಿಯಂತ್ರಿಸುವುದು ಕಷ್ಟದ ಕೆಲಸವೇ, ಅಸಾಧ್ಯವಲ್ಲ.

ಗ್ರಂಥ ಋಣ:

1) ಎ.ಕೆ.ಶಂಕರನಾರಾಯಣ ಭಟ್ : ಹಿಂದು ಧರ್ಮದ ಪರಿಚಯ , ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ ಕೊಡಗು, (1995)

2) ಎಸ್. ರಾಮಚಂದ್ರ ಶಾಸ್ತ್ರೀ(ಭಾಷಾಂತರ) : ಭಾರತೀಯ ದರ್ಶನ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಬಲದೇವ ಉಪಾಧ್ಯಾಯ (ಮೂಲ) ವಿಶ್ವವಿದ್ಯಾಲಯ, ಮೈಸೂರು, (1970)

3) ಬಸವನಾಳ.ಶಿ.ಶಿ.(ಸಂ) : ವೀರಶೈವ ತತ್ತ್ವ ಪ್ರಕಾಶ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ. (1941).

ಬಸವಣ್ಣನವರ ವಚನಗಳಲ್ಲಿ ಸದಾಚಾರ ಮತ್ತು ವೈಜ್ಞಾನಿಕತೆ

ಡಾ. ಡೈಸಿ ಜಾಸ್ಮಿನ್ ಜಾರ್ಜ್
ಮುಖ್ಯಸ್ಥರು, ಕನ್ನಡ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು(ಸ್ವಾ), ಶಿವಮೊಗ್ಗ

ಜಾತಿ, ಮತ, ಕುಲ, ಆಚಾರ–ವಿಚಾರಗಳಲ್ಲಿ ಸ್ವಾತಂತ್ರ್ಯವನ್ನು ಪಡೆದ ಜನತೆ ಚೈತನ್ಯಶೀಲರಾಗಿ, ಸಮಾನತೆಯ ಪರಿಕಲ್ಪನೆಲ್ಲಿ, ವಿಶ್ವಮಾನವ ಪರಿಕಲ್ಪನೆ, ಸ್ತ್ರೀ ಸಮಾನತೆ, ಕಾಯಕ ನಿಷ್ಠೆ . . . . ಮೊದಲಾದ ಜನಪರ ಕಾಳಜಿಗಳು, ಧಾರ್ಮಿಕ ಸ್ವಾತಂತ್ರ್ಯಗಳು, ಸಾಮಾಜಿಕ ಕ್ರಾಂತಿಗೆ ಕಾರಣವಾಗಿದ್ದುದಲ್ಲದೆ, ಮೇಲು ವರ್ಗದವರು ಕೆಳಸ್ತರದವರನ್ನು ಹೀನಾಯವಾಗಿ ಕಾಣುತ್ತಿದ್ದ ಸಂದರ್ಭದಲ್ಲಿ

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ,
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ"–
ಕೂಡಲ ಸಂಗಮ ದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ – (ವಚನ–64)

ಎನ್ನುವ ಬಸವಣ್ಣನವರ ಈ ವಚನ ಇಂದಿನ ವೈಜ್ಞಾನಿಕ ಯುಗಕ್ಕೆ ಒಂದು ಸವಾಲಿನಂತಿದೆ. ಅಂದು ಬಸವಣ್ಣನವರು ಕೂಡಲ ಸಂಗಮ ದೇವನನ್ನು ಕೇಳಿಕೊಂಡ ಈ ವಚನ ಇಂದಿನ ಸಾರ್ವತ್ರಿಕ ಸತ್ಯವನ್ನು ಎತ್ತಿ ತೋರಿಸುವ ವಚನವಾಗಿ ಮಾರ್ಪಾಡಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇಂದಿನ ವೈಜ್ಞಾನಿಕ ಯುಗದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ರಾಷ್ಟ್ರ–ಅಂತರಾಷ್ಟ್ರಗಳನ್ನೂ ಮೀರಿ ನಿಲ್ಲುವ ವಚನ ಇದಾಗಿದೆಯೆಂದರೆ ತಪ್ಪಾಗಲಾರದು. ಏಕೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ, ಕರಿಜನ, ಬಿಳಿಜನ, ಕೆಂಪುಜನ, ಕಂದುಬಣ್ಣ, ಹಳದಿಬಣ್ಣ (ವಾಂಗೋಲಾಯಿಡ್) ಇತ್ಯಾದಿ ಎಲ್ಲರನ್ನೂ ಒಂದುಗೂಡಿಸುವ ವಚನವಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಗಳ ಬೆಳವಣಿಗೆಯ ಬರಾಟೆಯಲ್ಲಿ ರಕ್ತದಾನ, ಅಕ್ಷಿದಾನ, ಹೃದಯ ಜೋಡಣೆ, ಮೂತ್ರಪಿಂಡದ ಜೋಡಣೆ . . . ಇತ್ಯಾದಿ ಮಾನವನ ಅಂಗಾಂಗಗಳ ಜೋಡಣೆಗೆ ಯಾವುದೇ ವ್ಯಕ್ತಿಗೆ ಯಾರ ಅಂಗಗಳನ್ನು ಬೇಕಾದರೂ ಜೋಡಿಸಬಹುದು. ಇದಕ್ಕೆ ಜಾತಿ, ಹೊಲೆ, ನೆಲೆಗಳಾವುದೂ ಅಡ್ಡಿ ಬರುವುದಿಲ್ಲ. ಹಾಗೆ ದಾನವನ್ನು ಪಡೆದುಕೊಂಡ ಒಬ್ಬ ಮಡಿವಂತ ತನಗೆ ದಾನ ಮಾಡಿದ ಹೊಲೆವಂತನನ್ನು ನನ್ನವನೆಂದು ಕರೆಯಲೇ ಬೇಕಾಗುತ್ತದೆ. ಕರೆಯದಿರಲಾರ ಏಕೆಂದರೆ ಅವನ ಉಳಿವಿಗೆ ಇವನು ಕಾರಣನಾಗಿರುತ್ತಾನೆ. ಇದನ್ನು ಇಂದಿನ ವೈದ್ಯಕೀಯ ವಿಜ್ಞಾನ ಇಡೀ ಜಗತ್ತಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದೆ.

ಪ್ರಾಚೀನ ಕಾಲದಲ್ಲಿದ್ದ ಸಾಹಿತ್ಯದ ಪರಂಪರೆ0ಯನ್ನೂ. (ಅಂದರೆ ರಾಜಾಶ್ರ0ಯ) ಬದುಕಿನ ಚಹರೆ0ಯನ್ನೂ (ಅವಿಭಕ್ತ ಕುಟುಂಬ ಪದ್ಧತಿ) ಸಂಸ್ಕಾರದ ಕಟ್ಟುಪಾಡುಗಳನ್ನೂ (ಜಾತಿ ಪದ್ಧತಿ) ಸಂಪೂರ್ಣವಾಗಿ ಬದಲಿಸಿ, ಸಾಮಾಜಿಕವಾಗಿ ಒಂದು ದೊಡ್ಡ ಅಂದೋಲನವನ್ನೇ ಉಂಟು ಮಾಡಿ ಸೃಷ್ಟಿ0ಯಾದ ಸಾಹಿತ್ಯವೇ ವಚನ ಸಾಹಿತ್ಯ ಪರಂಪರೆ. ಇದು ಅನುಭವದ ಮೂಸೆಯಿಂದ ಹೊರಹೊಮ್ಮಿ ಬಂದ ಒಂದು ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿದೆ. ವಚನ ಸಾಹಿತ್ಯದ ಉಗಮವು 12·ನೇ ಶತಮಾನಕ್ಕಿಂತಲೂ ಹಿಂದಿನದಾದರೂ ಅದರ ಸಮೃದ್ಧವಾದ ಬೆಳವಣಿಗೆ0ಯು 12ನೇ ಶತಮಾನದ ಮದ್ಯ ಭಾಗದಿಂದ ಪ್ರಾರಂಭವಾಯಿತು. ಈ ಶತಮಾನದ ಶರಣರ ಅನುಭವಗಳು ವಚನಗಳ ಮೂಲಕ ಹೊರಹೊಮ್ಮಿ ಸಾಹಿತ್ಯ ಲೋಕದಲ್ಲಿ ಅದೊಂದು ಅನುಭವ ಪೂರಿತ ಸಂಪದ್ಭರಿತ ಸಾಹಿತ್ಯವಾಗಿ ನೆಲೆ ನಿಂತಿದೆ. ಈ ಸಾಹಿತ್ಯುಅವು ಕಾಲ್ಪನಿಕ ಪ್ರಪಂಚದಿಂದ ದೂರವಿದ್ದು ವ್ಯಕ್ತಿ0ಯ ಮನದಾಳದ ಭಾವನೆಗಳನ್ನೂ, ಪ್ರತಿ0ಯೊಬ್ಬ ವ್ಯಕ್ತಿ0ಯ ಮನಸ್ಸನ್ನಲ್ಲದೇ ನರ–ನಾಡಿಗಳನ್ನೂ ಬಲಪಡಿಸುವ ಶಕ್ತಿ0ಯನೊಳಗೊಂಡಿದೆ.ಈ ವಚನಗಳು ಪ್ರತಿಭೆ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಕೊಡದೆ ಮಾನವನ ಮನದ ತುಡಿತದಿಂದ ಹೊರಬಂದ ನುಡಿಮುತ್ತುಗಳಾಗಿವೆ. ಸಮಾಜದೊಳಗಿನ ವರ್ಗಬೇಧ, ಮರ್ಣಭೇದ ಧಾರ್ಮಿಕ ಅಸಮಾನತೆ, ಅವ್ಯವಸ್ಥೆಗಳಂತಹ ಕೊಳೆ0ಯನ್ನು ಹೋಗಲಾಡಿಸುವ ಕ್ರಾಂತಿಕಾರಿ ಮನೋಭಾವವನ್ನಿಟ್ಟುಕೊಂಡಿರುವ ಸಾಹಿತ್ಯ ಪ್ರಕಾರವಾಗಿದೆ.

ವಚನ ಸಾಹಿತ್ಯ ಅನುಕರಣೆಗೆ, ಅಂಧಶ್ರದ್ಧೆಗೆ ಅವಕಾಶ ಕೊಡದೆ ಸ್ವತಂತ್ರವಾದ ಅನುಭಾವದ ಅಡಿಪಾ0ಯದ ಮೇಲೆ ಉದಯಿಸಿ ಬಂದಿರುವುದರಿಂದ ಇಲ್ಲಿ ಲಿಂಗ ತಾರತಮ್ಯ, ಜಾತಿ–ಭೇದ ಮಡಿ–ಮೈಲಿಗೆ, ವರ್ಣ–ವರ್ಗ ಬೇಧಗಳಿಗೆ ಅವಕಾಶವಿಲ್ಲ. ಈ 21ನೇ ಶತಮಾನದ ಭಾರತೀ0ಯ 0ಯುವ ಮನಸ್ಸೂ ಕೂಡಾ 0ಯೋಚನೆ ಮಾಡುತ್ತಿರುವುದೂ ಕೂಡ ಈ ಹಿನ್ನಲೆ0ಯಲ್ಲಿ0ಯೇ ಆಗಿದೆ. ಸಮಾಜದ ಪ್ರತಿ0ಯೊಂದು ರಂಗಗಳಲ್ಲಿ0ಯೂ (ಸಾಮಾಜಿಕ, ರಾಜಕೀ0ಯ., ಆರ್ಥಿಕ, ಶೈಕ್ಷಣಿಕ, ಕೌಟಂಬಿಕ... ಇತ್ಯಾದಿ) ಶೋಷಣೆ0ಯ ಹೆಚ್ಚಾಗಿ ಜೀವನದ ಮೊಲ್ಯಗಳು ಗಾಳೀ0ಯಲ್ಲಿ ತೂರಲ್ಪಟ್ಟ ಪರಿಸ್ಥಿತಿ0ಯಲ್ಲಿ ಸ್ವಯಿತದ ಜೊತೆಗೆ ಸಾಮಾಜಿಕ ಹಿತವನ್ನು ಕಾಪಾಡುವಂತಹ ಮೌಲ್ಯಭರಿತ ವಚನಗಳನ್ನು ನೀಡಿದ ವಚನಕಾರರ ಬದುಕೂ ಕೂಡಾ ಮೌಲ್ಯಭರಿತವಾದುದೇ ಆಗಿದೆ. ಅಸ್ಪೃಶ್ಯತೆ0ಯನ್ನು ತೊಡೆದು ಶರಣತತ್ವದಡಿಗೆ ಬಂದ ಎಲ್ಲರನ್ನೂ ಸಮಾನರೆಂದು ಸಾರಿದ ಬಸವಣ್ಣನವರು ಶರಣ ಚಳುವಳಿ0ಯ ನೇತಾರರಾಗಿದ್ದು, ಅವರ ಈ ಸಾಮಾಜಿಕ ಕ್ರಾಂತಿ ಅನುಪಮವಾದುದಾಗಿದೆ. ವಚನಕಾರರೆಲ್ಲರೂ, ಅನುಭವಿಗಳೂ, ಆಧ್ಯಾತ್ಮದ ಅನುಭವವುಳ್ಳವರೂ ಆಗಿದ್ದರೂ ಬಹುಪಾಲು ಸಂಸ್ಕಾರಸ್ಥರೇ ಆಗಿದ್ದರು. ಎಲ್ಲ ವಚನಕಾರರೂ ಮಾನವನ ಮುಕ್ತಿಗಾಗಿ, ಸ್ವಾರ್ಥ ಬಿಟ್ಟು ಶ್ರಮಿಸಿದರಾದರೂ, ಬಸವಣ್ಣನ ವಚನಗಳು ಮಾನವನ ಸರ್ವತೋಮುಖ ಬೆಳವಣಿಗೆ0ಯ ಕಡೆಗೆ ಒತ್ತು ಕೊಟ್ಟವುಗಳಾಗಿವೆ. ಇಲ್ಲಿ ಆತ್ಮ–ಪರಮಾತ್ಮರ ಸಂಬಂಧ, ಸಾಮಾನ್ಯಜ್ಞಾನ, ಅನುಭವ, ಲೋಕನೀತಿ.. ಮೊದಲಾದವುಗಳಿಂದ ಕೂಡಿದ್ದು ಪ್ರತಿ0ಯೊಬ್ಬ ಮಾನವನೂ ತನ್ನನ್ನು ತಾನೇ ಶೋಧಿಸಿಕೊಳ್ಳಬಹುದಾಗಿದ್ದು, ತಮ್ಮನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳಬಹುದಾದವುಗಳಾಗಿವೆ.

ಉದಾ: ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆ0ುೊಳಗೆ ರಜ ತುಂಬಿ
ಮನೆ0ುೊಳಗೆ ಮನೆ0ುೊಡೆ0ುನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷ0ು ತುಂಬಿ
ಮನೆ0ುೊಳಗೆ ಮನೆ0ುೊಡ0ುನಿಲ್ಲಾ . (ವಚನ– 315)

ಇಲ್ಲಿ ಪಾಳೂ ಬಿದ್ದಿರುವ ಮನೆ0ುಲ್ಲಿ ಮನೆ 0ುಜಮಾನನಿಲ್ಲದಿರುವಂತೆ, ಹೊಲಸು ತುಂಬಿ ಪಾಳು ಬಿದ್ದಿರುವ ಆತ್ಮದಲ್ಲಿ ಪರಮಾತ್ಮನಿರುವುದಿಲ್ಲ. ಹಾಗೆ0ುೇ–

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳೀ – (ವಚನ–352)

ಸಾಮಾನ್ಯ ಜ್ಞಾನ ಸಂಬಂಧಿಸಿದಂತೆ –

ಏನಿ ಬಂದಿರಿ, ಹದುಳವಿದ್ದಿರೆ ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದರೆ ನೆಲ ಕುಳಿ ಬಿದ್ದು ಹೋಹುದೇ?
ಒಡನೆ ನುಡಿದರೆ ಶಿರ ಹೊಟ್ಟೆ ಹೊಡೆದು ಹೋಹುದೇ (ವಜನ–112)

ಇತರರು ಮನೆಗೆ ಬಂದಾಗ ಅವರೊಂದಿಗೆ ಹೇಗೆ ನಡೆದುಕೊಳ್ಳಬೇಕು. 0ುಾರನ್ನು ತಾತ್ಸಾರ ಮಾಡಬಾರದು. ಮಾನವರೆಲ್ಲರೂ ಸಮಾನರು ಸಮಾಜದಲ್ಲಿ ಅನ್ಯಾಕ್ಕಿರಲಿ, ಮಾನಸಿಕವಾಗಿ0ುಾಗಲೀ 0ುಾರನ್ನೂ ನೋಯಿಸಬಾರದು. ಅಂತರಂಗ ಶುದ್ದಿ – ಬಹಿರಂಗ ಶುದ್ಧಿಗಳು ಸ್ವಕ್ರಿ0ುೆಗಳಿಂದ ಮಾತ್ರ ಸಾಧ್ಯ ಅದನ್ನು ಮತ್ತೊಬ್ಬರು ಹೇಳಿಸಿ ಮಾಡಿಸುವುದಲ್ಲ. ತಾನೇ ರೂಢಿಸಿಕೊಳ್ಳಬೇಕು. ಅದನ್ನೇ ಬಸವಣ್ಣನರು–

ಕಳಬೇಡ, ಕೊಲಬೇಡ, ಹುಸಿ0ು ನುಡಿ0ುಲು ಬೇಡ,
ಮುನಿ0ುಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳೀ0ುಲು ಬೇಡ,
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ (ವಚನ–150)

ಅಂದರೆ ಬಾಹ್ಯಚರಣೆಗಳಿಂದ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ. ಹಾಗೆ0ುೇ ಇಂತಹ ಗುಣಗಳನ್ನು ಮನುಷ್ಯರು ತಮ್ಮ ಹೃದ0ುದಲ್ಲಿ, ಕ್ರಿ0ುೆಗಳಲ್ಲಿ ಅಳವಡಿಸಿಕೊಂಡರೆ ಅವರಿಗೆ ಮಾನಸಿಕ ಒತ್ತಡಗಳಾಗಲೀ, ರಕ್ತದೊತ್ತಡಗಳಾಗಲೀ ತತ್ಸಂಬಂಧಿ0ುಾದ ರೋಗಗಳಿಗೊಳಗಾಗುವುದಿಲ್ಲ ಎನ್ನುವುದನ್ನು ಇಂದಿನ ಮನೋ ವೈದ್ಯಶಾಸ್ತ್ರವು ತೋರಿಸಿಕೊಟ್ಟಿದೆ. ಇವು ಆಂತ0ುರ್ದಲ್ಲಿ ಆರೋಗ್ಯವನ್ನುಂಟು ಮಾಡುವಂತಹವುಗಳಾಗಿದ್ದು ಮಾನವರ ಸೌಹಾರ್ದ0ುುತವಾದ, ಸಂತೋಷಭರಿತವಾದ ಬದುಕಿಗೆ ಎಡೆಮಾಡಿಕೊಡುತ್ತದೆ.

ಜಾತಿ, ಮತ, ಕುಲ, ಆಚಾರ– ವಿಚಾರಗಳಲ್ಲಿ ಸ್ವಾತಂತ್ರ್ಯವನ್ನು ಪಡೆದ ಜನತೆ ಚೈತನ್ಯಶೀಲರಾಗಿ, ಸಮಾನತೆ0ು ಪರಿಕಲ್ಪನೆಲ್ಲಿ, ವಿಶ್ವಮಾನವ ಪರಿಕಲ್ಪನೆ, ಸ್ತ್ರೀ ಸಮಾನತೆ, ಕಾ0ುಕ ನಿಷ್ಠೆ .. ಮೊದಲಾದ ಜನಪರ ಕಾಳಜಿಗಳು, ಧಾರ್ಮಿಕ ಸ್ವಾತಂತ್ರ್ಯಗಳು, ಸಾಮಾಜಿಕ ಕ್ರಾಂತಿಗೆ ಕಾರಣವಾಗಿದ್ದುದಲ್ಲದೆ, ಮೇಲು ವರ್ಗದವರು ಕೆಳಸ್ತರದವರನ್ನು ಹೀನಾ0ುವಾಗಿ ಕಾಣುತ್ತಿದ್ದ ಸಂದರ್ಭದಲ್ಲಿ

"ಇವನಾರವ, ಇವನಾರವ, ಇವನಾರವನೆಂದೆನಿಸದಿರ0ುು,
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸ0ುಾ"–
ಕೂಡಲ ಸಂಗಮ ದೇವಾ ನಿಮ್ಮ ಮನೆ0ು ಮಗನೆಂದೆನಿಸ0ುು – (ವಚನ– 64)

ಎನ್ನುವ ಬಸವಣ್ಣನವರ ಈ ವಚನ ಇಂದಿನ ವೈಜ್ಞಾನಿಕ 0ುುಗಕ್ಕೆ ಒಂದು ಸವಾಲಿನಂತಿದೆ. ಅಂದು ಬಸವಣ್ಣನವರು ಕೂಡಲ ಸಂಗಮ ದೇವನನ್ನು ಕೇಳಿಕೊಂಡ ಈ ವಚನ ಇಂದಿನ ಸಾರ್ವತ್ರಿಕ ಸತ್ಯವನ್ನು ಎತ್ತಿ ತೋರಿಸುವ ವಚನವಾಗಿ ಮಾರ್ಪಾಡಾಗಿದೆ0ುೆಂದರೆ

ಅತಿಶಯೋಕ್ತಿಯಾಗಲಾರದು, ಇಂದಿನ ವೈಜ್ಞಾನಿಕ ಯುಗದಲ್ಲಿ ಜಾಗತೀಕರಣದ ಹಿನ್ನಲೆಯಲ್ಲಿ ರಾಷ್ಟ್ರ-ಅಂತರಾಷ್ಟ್ರಗಳನ್ನೂ ಮೀರಿ ನಿಲ್ಲುವ ವಚನ ಇದಾಗಿದೆಯೆಂದರೆ ತಪ್ಪಾಗಲಾರದು. ಏಕೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ, ಕರಿಜನ, ಬಿಳಿಜನ, ಕೆಂಪುಜನ, ಕಂದುಬಣ್ಣ, ಹಳದಿಬಣ್ಣ (ವಾಂಗೋಲಾಯಿಡ್) ಇತ್ಯಾದಿ ಎಲ್ಲರನ್ನೂ ಒಂದುಗೂಡಿಸುವ ವಚನವಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಗಳ ಬೆಳವಣಿಗೆಯ ಬರಾಟೆಯಲ್ಲಿ ರಕ್ತದಾನ, ಅಕ್ಷಿದಾನ, ಹೃದಯ ಜೋಡಣೆ, ಮೂತ್ರಪಿಂಡದ ಜೋಡಣೆ .. ಇತ್ಯಾದಿ ಮಾನವನ ಅಂಗಾಂಗಗಳ ಜೋಡಣೆಗೆ ಯಾವುದೇ ವ್ಯಕ್ತಿಗೆ ಯಾರ ಅಂಗಗಳನ್ನು ಬೇಕಾದರೂ ಜೋಡಿಸಬಹುದು. ಇದಕ್ಕೆ ಜಾತಿ, ಹೊಲೆ, ನೆಲೆಗಳಾವುದೂ ಅಡ್ಡಿ ಬರುವುದಿಲ್ಲ. ಹಾಗೆ ದಾನವನ್ನು ಪಡೆದುಕೊಂಡ ಒಬ್ಬ ಮಡಿವಂತ ತನಗೆ ದಾನ ಮಾಡಿದ ಹೊಲೆವಂತನನ್ನು ನನ್ನವನೆಂದು ಕರೆಯಲೇ ಬೇಕಾಗುತ್ತದೆ. ಕರೆಯದಿರಲಾರ ಏಕೆಂದರೆ ಅವನ ಉಳಿವಿಗೆ ಇವನು ಕಾರಣನಾಗಿರುತ್ತಾನೆ. ಇದನ್ನು ಇಂದಿನ ವೈದ್ಯಕೀಯ ವಿಜ್ಞಾನ ಇಡೀ ಜಗತ್ತಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದೆ.

ಹೀಗೆ 21ನೇ ಶತಮಾನದಲ್ಲಿ ಬದುಕಿದ್ದ ವಚನಕಾರ ಬಸವಣ್ಣನವರು ಆಧ್ಯಾತ್ಮದ, ಅನುಭಾವದ ಔನತ್ಯದಲ್ಲಿ ಅಂತಃಕರಣ ತುಂಬಿ ಹಾಡಿದ ವಚನ ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರಾಯೋಗಿಕವಾಗಿ ಪ್ರಪಂಚಕ್ಕೆ ಅನಾವರಣಗೊಂಡಿರುವುದು ಆಶ್ಚರ್ಯವೇ ಸರಿ.

(ಈ ವಚನದಲ್ಲಿ ಬಳಸಲಾಗಿರುವ ವಚನಗಳು ಎಂ. ಎಂ. ಕುಲಬುರ್ಗಿಯವರು ಸಂಪಾದಿಸಿರುವ 'ವಚನ' - ಗ್ರಂಥದಿಂದಾಗಿದೆ.)

ಅನುಬಂಧ:

ಪರಾಮರ್ಶನ ಗ್ರಂಥಗಳು:-

1. ಶರಣ ತತ್ವ ಚಿಂತನ - ಡಾ ಎ. ಎಲ್. ಶಿವರುದ್ರಪ್ಪ
2. ಭಾರತೀಯ ಭಕ್ತಿ ಚಳುವಳಿಗಳು - ಷಣ್ಮುಖ ಅಕ್ಕೂರಮಠ
3. ವಚನ ವಿನ್ಯಾಸ - ಗಿರಡ್ಡಿ ಗೋವಿಂದರಾಜು
4. ವಚನ ಬೆಳಗು - ಡಾ. ಎಂ. ನಾಗರಾಜು
5. ಶರಣರು ಹಾಗೂ ಸಂತರ ಸಾಮಾಜಿಕ ಕಾಳಜಿ - ಡಾ. ಕಾಶೀನಾಥ ಅಂಬಲಗೆ
6. ವಚನ - ಡಾ. ಎಂ. ಎಂ. ಕಲಬುರ್ಗಿ
7. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ - ಡಾ. ಎಂ. ಎಂ. ಕಲಬುರ್ಗಿ
8. ಕಾವ್ಯಾನುಸಂಧಾನ - ಚನ್ನವೀರ ಕಣವಿ
9. ವಚನ ಸಾಹಿತ್ಯ - ಎಂ. ಚಿದಾನಂದ ಮೂರ್ತಿ
10. ವಚನ ಸಾಹಿತ್ಯ: ವೈಚಾರಿಕ ಅಧ್ಯಯನ - ತಿಪ್ಪೇರುದ್ರಸ್ವಾಮಿ. ಹೆಚ್.

ಪಂಚಕೋಶ ಮತ್ತು ಮಾನ ಕಲ್ಯಾಣ

* ಅಕ್ಷತ ಜಿ. ಕುಲಕರ್ಣಿ , ** ಡಾ. ಎಚ್. ಎಸ್. ಆಶೋಕ್
*ಸಂಶೋಧನಾ ವಿದ್ಯಾರ್ಥಿನಿ, ** ಪ್ರಾಧ್ಯಾಪಕರು, ಮನಃಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಆಧುನಿಕ ಮನೋವಿಜ್ಞಾನವು ಕೇವಲ ಎರಡು ಶತಮಾನಗಳಷ್ಟು ಇತಿಹಾಸವನ್ನು ಮಾತ್ರ ಹೊಂದಿದ್ದು, ತತ್ವಶಾಸ್ತ್ರದಿಂದ ಹೊರಬಂದ ಸಂದರ್ಭದಲ್ಲಿ ಮಾನವ ವರ್ತನೆಯನ್ನು ಆರ್ಥೈಸುವ, ವಿವರಿಸುವ, ಮೂನ್ಸೂಚಿಸುವ ಮತ್ತು ನಿಯಂತ್ರಿಸುವ ಧ್ಯೇಯಗಳನ್ನು ಹೊಂದಿದ್ದು, ವೈಜ್ಞಾನಿಕ ದೃಷ್ಟಿಕೋನದಿಂದ ಈ ಧ್ಯೇಯಗಳನ್ನು ಸಂಪೂರ್ಣಗೊಳಿಸುವ ಪ್ರಯತ್ನಗಳಾದವು. ವೈಜ್ಞಾನಿಕ ದೃಷ್ಟಿಕೋನವು ವಸ್ತುನಿಷ್ಠವಾಗಿದ್ದು. ಮಾನವ ಸಮಷ್ಟಿಗೆ ಅನ್ವಯಿಸುವಂತೆ ಹಲವಾರು ಸಿದ್ಧಾಂತಗಳ ರಚನೆಯಾಯಿತು. ಮನೋವಿಜ್ಞಾನಿಗಳ ಹಿನ್ನೆಲೆಗಳು ಭಿನ್ನವಾದ್ದರಿಂದ ವರ್ತನೆಯನ್ನು ಅರ್ಥಮಾಡಿಕೊಳ್ಳಲು ವಿವಿಧ ದೃಷ್ಟಿಕೋನಗಳನ್ನು ಅನುಸರಿಸಿದ್ದರಿಂದ ಹಲವಾರು ಶಾಖೆಗಳು ಉಗಮಗೊಂಡವು. ಪ್ರತಿಯೊಂದು ಶಾಖೆಯೂ ಮನೋವಿಜ್ಞಾನದ ನಾಲ್ಕೂ ಉದ್ದೇಶಗಳನ್ನು ಹೊಂದಿದ್ದರೂ, ಪರಿಪೂರ್ಣವಾಗಿ ಈ ಎಲ್ಲ ಧ್ಯೇಯಗಳನ್ನು ಸಮಂಜಸವಾಗಿ ಈಡೇರಿಸಲು ವಿಫಲವಾದವು. ಶಾಸ್ತ್ರೀಯವಾಗಿ ರಚಿಸಿರುವ ಮನೋವಿಜ್ಞಾನದ ಸಿದ್ಧಾಂತಗಳು ಪ್ರಾಣಿವರ್ಗ ಅಥವಾ ಮನುಷ್ಯರ ಮೇಲೆ ಅಧಾರಿತವಾಗಿದ್ದು, ಸಾರ್ವತ್ರಿಕರಣವಾಗಿ ನಿಯಮಗಳನ್ನು ರಚಿಸಲು ವಿಫಲವಾಗಿರುವುದು ಕಂಡುಬಂದಿದೆ.

ಮಾನವನ ಪ್ರತಿಯೊಂದು ನಡೆಯೂ ಉದ್ದೇಶಪೂರ್ವಕವಾಗಿರುತ್ತದೆ. ಯಾವುದೇ ಸಮಯದಲ್ಲಿ, ಯಾವುದೇ ಕ್ರಿಯೆಯಲ್ಲಿ ಒಬ್ಬ ವ್ಯಕ್ತಿಯು ತೊಡಗಿಕೊಳ್ಳುವುದರ ಹಿಂದೆ, ಆತನ ಉದ್ದೇಶ ಆತನ ಅಭಿಪ್ರೇರಣೆಯ ಆಧಾರದ ಮೇಲೆ ನಿಂತಿರುತ್ತದೆ.

ಮಾನವ ಮತ್ತು ಮನುಷ್ಯ ವರ್ತನೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅಭಿಪ್ರೇರಣೆಯ ಪಾತ್ರ ಬಹು ಮುಖ್ಯವಾದದ್ದು, ಮನೋವಿಜ್ಞಾನದಲ್ಲಿ ಹಲವಾರು ಅಭಿಪ್ರೇರಣೆಯ ಸಿದ್ಧಾಂತಗಳಿವೆ. ಇವು ಪ್ರಮುಖವಾಗಿ ಎರಡು ದೃಷ್ಟಿಕೋನಗಳದ್ದಾಗಿದ್ದು. ನಿಗದಿತ ಅಭಿಪ್ರೇರಣೆಯು ಒಬ್ಬ ವ್ಯಕ್ತಿಯಲ್ಲಿ ಇಲ್ಲದಿದ್ದಲ್ಲಿ ಹೇಗೆ ಅವನ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ಎಂಬುದು ಒಂದು ದೃಷ್ಟಿಕೋನವಾಗಿದ್ದು. ಮತ್ತೊಂದು ವರ್ತನೆಯನ್ನು ಅಭಿಪ್ರೇರಣೆಯೊಂದಿಗೆ ಇತರೆ ಪರಿವರ್ತ್ಯಗಳ ಪ್ರತಿಕ್ರಿಯೆಯಿಂದ ಅವಲಂಬಿತವಾಗಿದೆ. ಎಂಬ ದೃಷ್ಟಿಕೋನವನ್ನು ಹೊಂದಿರುತ್ತದೆ. ಅಭಿಪ್ರೇರಣೆಯನ್ನು ಕುರಿತ ಸಿದ್ಧಾಂತಗಳಲ್ಲಿ ಮಾಸ್ಲೊವ್ ರವರ ಸಿದ್ಧಾಂತವನ್ನು ಆಧರಿಸಿ ಅನೇಕ ಅನ್ವಯಿಕ ಸಂಶೋಧನೆಗಳು ನಡೆದಿವೆ. ಮಾಸ್ಲೊವ್, ರೋಜರ್ಸ್ ಮತ್ತು ಇತರ ಮಾನವತಾವಾದಿ ಮನೋವಿಜ್ಞಾನಿಗಳು ಪ್ರತಿಪಾದಿಗಳಾಗಿ ಮಾನವ ಕಲ್ಯಾಣವನ್ನು ವೈಯಕ್ತಿಕವಾಗಿ ಹಾಗೂ ಸಾರ್ವತ್ರಿಕವಾಗಿ ಹೇಗೆ ಪಡೆಯಬಹುದೆಂದು ತಮ್ಮ ಸಿದ್ಧಾಂತಗಳ ಮೂಲಕ ಪ್ರತಿಪಾದಿಸಿದ್ದಾರೆ. ಮಾಸ್ಲೊವ್ ರವರ ಅಭಿಪ್ರೇರಣೆಯ ಶ್ರೇಣಿ ಸಿದ್ಧಾಂತವು ಪ್ರಮುಖವಾಗಿ ಹೊಂದಲು ಐದು ಅಭಿಪ್ರೇರಣೆಗಳನ್ನು ಗುರುತಿಸುತ್ತದೆ. ಅವುಗಳೆಂದರೆ. ಶಾರೀರಿಕ ಅಭಿಪ್ರೇರಣೆ, ಭದ್ರತೆ ಅಭಿಪ್ರೇರಣೆ, ಪ್ರೀತಿ-ವಿಶ್ವಾಸ ಅಭಿಪ್ರೇರಣೆ, ಸ್ವ-ಪ್ರತಿಷ್ಠೆ ಅಭಿಪ್ರೇರಣೆ, ಸ್ವಯಂ ವಾಸ್ತವೀಕರಣ / ಆತ್ಮ ಸಾಕ್ಷಾತ್ಕಾರ ಅಭಿಪ್ರೇರಣೆ. ಈ ಐದು ಅಭಿಪ್ರೇರಣಾ ವರ್ಗಗಳನ್ನು ಅಭಾವ ಮತ್ತು ವಿಕಾಸ ಕೇಂದ್ರಿತ ಅಗತ್ಯತೆಗಳೆಂದು ವಿಂಗಡಿಸಬಹುದು.

ವೈಯಕ್ತಿಕವಾಗಿ ಹಾಗೂ ಸಾರ್ವತ್ರಿಕವಾಗಿ ಮಾನವ ಕಲ್ಯಾಣವನ್ನು ಹೊಂದುವುದು ವಿಕಾಸೀಯ ಅಭಿಪ್ರೇರಣೆಯ ಚೋದನಾ ಬಲದ ಮೇಲೆ ಅವಲಂಬಿತವಾಗಿರುತ್ತದೆ.

ವಿಶೇಷವಾಗಿ ವಿಕಾಸೀಯ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಮಾಸ್ಲೋವಿಯನ್ ಸಿದ್ಧಾಂತದ ಅನ್ವಯಿಕತೆಯನ್ನು ವಿಮರ್ಶಿಸಿದಾಗ, ವೈಯಕ್ತಿಕ ಹಾಗೂ ಸಾರ್ವತ್ರಿಕವಾಗಿ ಅಪೇಕ್ಷಿತ ಮಟ್ಟದ ಕಲ್ಯಾಣವನ್ನು ಹೊಂದುವುದರಲ್ಲಿ ವಿಫಲವಾಗಿದೆ. ಇದರ ವೈಫಲ್ಯ ಪಾಶ್ಚಿಮಾತ್ಯ ಮನೋವಿಜ್ಞಾನಿಗಳು ಇತರ ಸಾಂಸ್ಕೃತಿಕ ದೃಷ್ಟಿಕೋನದಿಂದ ಪರ್ಯಾಯ ವಿಧಾನಗಳನ್ನು ನೋಡಲು ಕಾರಣವಾಯಿತು.

ಭಾರತೀಯ ಸಂಸ್ಕೃತಿಯು ಪ್ರಾಚೀನವಾಗಿದ್ದು, ಮಾನವನ ಕಲ್ಯಾಣವನ್ನು ಕುರಿತಂತೆ ಹಲವಾರು ಪದ್ಧತಿಗಳು, ತಂತ್ರಗಳು, ಸಿದ್ಧಾಂತಗಳನ್ನು ಒಳಗೊಂಡಿದೆ. ಮಾನವ ಕಲ್ಯಾಣವನ್ನು ಕುರಿತ ಪಾಶ್ಚಾತ್ಯ ಸಂಸ್ಕೃತಿಯ ದೃಷ್ಟಿಕೋನದಲ್ಲಿ ವ್ಯಕ್ತಿಯ ಸಂತೋಷ ಮತ್ತು ಸಂತೃಪ್ತಿಯ ಮಟ್ಟವನ್ನು ಆಧರಿಸಿ ಕಲ್ಯಾಣವನ್ನು ಮಾಪನ ಮಾಡಲಾಗುತ್ತದೆ. ಆದರೆ, ಇತ್ತೀಚಿನ ಸಂಶೋಧನೆಗಳ ಪ್ರಕಾರ ವ್ಯಕ್ತಿಯ ಕಲ್ಯಾಣ ಸ್ಥಿತಿಯು / ಮಾನವ ಕಲ್ಯಾಣವು ಜೀವನದಿಂದ ಅರ್ಥವನ್ನು ಪಡೆಯುವುದು ಮತ್ತು ಅರ್ಥಪೂರ್ಣ ಜೀವನ ನಡೆಸುವುದಾಗಿದೆ. ಭಾರತೀಯ ಪದ್ಧತಿಯಲ್ಲಿ ಹಿಂದಿನಿಂದಲೂ ಪ್ರಚಲಿತವಾಗಿರುವ ಯೋಗ, ಪ್ರಾಣಾಯಾಮ, ಮುಂತಾದ ತಂತ್ರಗಳಿಂದ ಕಲ್ಯಾಣವನ್ನು ಪಡೆಯಬಹುದೇ ಎಂದು ಪಾಶ್ಚಾತ್ಯ ಮನೋವಿಜ್ಞಾನಿಗಳು ಹೆಚ್ಚಾಗಿ ಪರೀಕ್ಷಿಸುತ್ತಿದ್ದಾರೆ. ಆದರೆ, ಭಾರತೀಯ ಪದ್ಧತಿಯಲ್ಲಿ ಯೋಗವು ಕೇವಲ ಒಂದು ತಂತ್ರವಾಗಿರದೇ, ಜೀವನ ಶೈಲಿಯಾಗಿರಬೇಕೆಂದು ಪ್ರತಿಬಿಂಬಿತವಾಗಿದೆ. ಭಾರತೀಯ ಪದ್ಧತಿಗಳಿಂದಲೂ ಕಲ್ಯಾಣಾವಸ್ಥೆಯನ್ನು ಹೊಂದಲು ವ್ಯಕ್ತಿಯಲ್ಲಿರುವ ಅಭಿಪ್ರೇರಣೆ ಮತ್ತು ಅಭಿಪ್ರೇರಣೆಯ ಚೋದನಾ ಬಲದ ಮೇಲೆ ಅವಲಂಬಿತವಾಗಿರುತ್ತದೆ.

ಈ ಲೇಖನದಲ್ಲಿ ತೈತ್ತಿರೀಯ ಉಪನಿಷತ್ತಿನಲ್ಲಿ ಉಲ್ಲೇಖಿತವಾದ ಪಂಚಕೋಶ ಪ್ರತ್ಯಯಗಳಿಗೆ ಮಾಸ್ಲೊವ್‌ರವರ ಅಭಿಪ್ರೇರಣಾ ಶ್ರೇಣಿಯನು ಸಮಾನಾಂತರವಾಗಿ ಹೋಲಿಸಲಾಗಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಪಂಚಕೋಶಗಳನ್ನು ಶ್ರೇಣಿ ರೂಪದಲ್ಲಿ ಅರ್ಥೈಸುತ್ತದೆ. ಕಲ್ಯಾಣಾವಸ್ಥೆಯ ಅನುಭವಗಳ ಕುರಿತಂತೆ ವ್ಯಕ್ತಿಗಳ ನಡುವಿನ ವ್ಯತ್ಯಾಸವನ್ನು ಆಯಾ ವ್ಯಕ್ತಿಗಳ ಹಿಂದಿನ ಕೋಶಾಧಾರಿತ ಚೋದನಾ ಬಲದ ಮೇಲೆ ಅವಲಂಬಿತವಾಗಿರುತ್ತದೆ. ಎನ್ನಬಹುದು. ಉದಾಹರಣೆಗೆ, ಅನ್ನಮಯ ಕೋಶದಿಂದ ಉತ್ತೇಜಿತನಾದ ವ್ಯಕ್ತಿಯು, ಶಾರೀರಿಕ / ದೈಹಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದರಿಂದ ಸಂತೋಷವನ್ನು ಪಡೆಯುತ್ತಾನೆ. ಪ್ರಾಣಯಾಮ ಕೋಶದಿಂದ ಉತ್ತೇಜಿತನಾದ ವ್ಯಕ್ತಿಯು ವಸ್ತು ಲಾಭಗಳನ್ನು ಪಡೆಯುವುದರ ಮೂಲಕ ಹಾಗೂ ಹಣ ಸಂಪಾದಿಸುವ ಮೂಲಕ ಸಂತೋಷವನ್ನು ಪಡೆಯುತ್ತಾನೆ. ಮನೋಮಯ ಕೋಶದಿಂದ ಉತ್ತೇಜಿತವಾದ ವ್ಯಕ್ತಿಗಳು, ತಾವು ಕೈಗೊಂಡ ಕಾರ್ಯಗಳಿಂದಾಗಿ ಬಹುಮಾನವನ್ನು ಪಡೆದುಕೊಳ್ಳುವುದರಿಂದ, ಅವರ ಸಾಧನೆಗಳನ್ನು ಹೊಗಳಿದಾಗ ಸಂತೋಷವನ್ನು ಪಡೆಯುತ್ತಾರೆ. ಅಂತೆಯೇ.. ಕೋಶದಿಂದ ಪ್ರೇರೇಪಿತಗೊಂಡ ವ್ಯಕ್ತಿಗಳು ನಾಯಕತ್ವ ವಹಿಸುವುದರಲ್ಲಿ, ಸಾಮಾಜಿಕ ಅಗತ್ಯತೆಗಳಿಗೆ ಪ್ರತಿಕ್ರಿಯಿಸುವುದರಲ್ಲಿ ಜ್ಞಾನಕ್ಕಾಗಿ ಅನ್ವೇಷಣೆ ನಡೆಸುವುದರಲ್ಲಿ ಸಂತೋಷವನ್ನು ಪಡೆಯುತ್ತಾರೆ. ಮತ್ತು ಆನಂದಮಯ ಕೋಶದಿಂದ ಉತ್ತೇಜಿತವಾದ ವ್ಯಕ್ತಿಗಳು ಸಹಾನುಭೂತಿ, ವಿನಮ್ರತೆಯಿಂದ ನಡೆದುಕೊಳ್ಳುವುದರಲ್ಲಿ ಸಂತೋಷವನ್ನು ಪಡೆಯುತ್ತಾರೆ.

ಯಾವುದೇ ಒಂದು ಸಂದರ್ಭದಲ್ಲಿ ವ್ಯಕ್ತಿ ಅನುಭವಿಸುತ್ತಿರುವ ತೃಪ್ತಿ / ಕಲ್ಯಾಣಾವಸ್ಥೆಯು ಈ ಐದು ಕೋಶಗಳ ಚೋದನಾ ಬಲದ ಮೇಲೆ ನಿರ್ಧರಿತವಾಗುತ್ತದೆ. ಮೇಲೆ ತಿಳಿಸಿದಂತೆ, ಮಾಸ್ಲೊವ್ ರವರ ಅಭಿಪ್ರೇರಣಾ ಶ್ರೇಣಿಯ ಅಭಾವ ಮತ್ತು ವಿಕಾಸೀಯ ಅವಶ್ಯಕತೆಗಳನ್ನು ಸಮಾನವಾಗಿ ಪಂಚಕೋಶದ ಐದು ಶ್ರೇಣಿಗಳಲ್ಲಿ ಅನ್ನ ಮತ್ತು ಪ್ರಾಣವನ್ನು ಅಭಾವ ಅಭಿಪ್ರೇರಣೆಗ ಸಮಾನವಾಗಿ ಮತ್ತು ಇನ್ನುಳಿದ ಮೂರನ್ನು ವಿಕಾಶೀಯ ಅಭಿಪ್ರೇರಣೆಗಳಾದ ಮನೋಮಯ, ಬಿಜ್ಞಾನಮಯ, ಮತ್ತು ಆನಂದಮಯ ಕೋಶಗಳಿಗೆ ಸಮಾನ್ಯವಾಗಿ ಹೋಲಿಸಲಾಗಿದೆ. ಭಾರತೀಯ ಪದ್ಧತಿಯಲ್ಲಿ ಆನಂದಮಯಕೋಶದಿಂದ ಪ್ರೇರೇಪಿತನಾದ ವ್ಯಕ್ತಿಯು ಹೆಚ್ಚಿನ ಮಟ್ಟದ ಕಲ್ಯಾಣ ಪಡೆಯಲು

ಸಾಧ್ಯ ಎಂಬುದು ನಿರೂಪಿತವಾಗಿದೆ. ಜಾಗತಿಕವಾಗಿ ಆರ್ಥಿಕ-ಸಾಮಾಜಿಕ ಮಟ್ಟದಲ್ಲಿ ಪ್ರಗತಿಯನ್ನು ಹೊಂದಿದ ಕಾರಣ, ಮಾನವ ಕಲ್ಯಾಣವನ್ನು ಹೊಂದುವತ್ತ ವಿಕಾಸೀಯ ಅಭಿಪ್ರೇರಣೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ವ್ಯಕ್ತಿಗಳ ಕಲ್ಯಾಣಾವಸ್ಥೆಯ ಅರ್ಥ ಮತ್ತು ಮಟ್ಟವು ಆ ವರ್ತನೆಯ ಹಿಂದಿನ ಚೋದನಾ ಬಲ (ಪಂಚಕೋಶ) - ತ್ರಿಗುಣಗಳ ನಡುವಿನ ಸಮತ್ವ, ಮತ್ತು ವೈಯಕ್ತಿಕವಾಗಿ ಅವರುಗಳೇ ನಿರ್ಧರಿಸುವ ಪುರುಷಾರ್ಥಗಳಿಂದ ನಿರ್ಧರಿಸಲ್ಪಡುತ್ತವೆ. ಅಂದರೆ, ವಿವಿಧ ಪಂಚಕೋಶಗಳಿಂದ ಪಡೆಯುವ ಚೋದನಾ ಬಲದ ಆಧಾರದ ಮೇಲೆ ವ್ಯಕ್ತಿಗಳ ನಡುವೆ ಕಂಡುಬರುವ ಕಲ್ಯಾಣಾವಸ್ಥೆಯ ಮಟ್ಟವು ಆ ವ್ಯಕ್ತಿಗಳಲ್ಲಿ ಇರುವ ತ್ರಿಗುಣಗಳ ನಡುವಿನ ಸಮತ್ವ - ಅಸಮತ್ವ, ಹಾಗೂ ಅವರೇ ನಿರ್ಧರಿಸುವ ಪುರಷಾರ್ಥಗಳ ಮೇಲೆ ನಿರ್ಧಾರಿತವಾಗಿರುತ್ತದೆ. (ಖಣಟಚಿಟ & ಥಿಠಿಇ, 2014)

ಪ್ರಸ್ತುತ ಸೈದ್ಧಾಂತಿಕ ಮಾದರಿಯನ್ನು ಊರ್ಜಿತಗೊಳಿಸುವುದರಿಂದ ವ್ಯಕ್ತಿಗಳ ನಡುವಿನ ವ್ಯತ್ಯಾಸಗಳು ಮತ್ತು ಕಲ್ಯಾಣವಸ್ಥೆಗೆ ಕಾರಣವಾಗುವ ಅಂಶಗಳನ್ನು ವೈಯಕ್ತಿಕ ಹಾಗೂ ಸಾರ್ವತ್ರಿಕ ಮಟ್ಟದಲ್ಲಿ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

ಉಲ್ಲೇಖಗಳು:

1. Ssatri. M (1903). Vedic Religion: The Taittiriya Upanishad. GTA Printing Works,Mysore

2. N. Suman and H. S. Ashok (2014). Personality values and Vocations a Comparative Study of Western and Indian Perspective Among Human Service and Business Professionals. Bangalore University.

3. Values: The Key to a Meaningful Life. 1996. Ramakrishna Math, Chennai.

4. Awakening Indians to India (2003). Central Chinmaya Mission Trust. Retrieved from http://books.google.com/books?isbn=8175974346 as on 09th December, 2016

5. K. Ramakrishna Rao, A. C. Paranjpe & Ajit K. Dalal (eds.) (2008) Handbook of Indian Psychology. Cambridge University Press India Pvt. Ltd., New Delhi.

ಮೋಕ್ಷದ ಮಾರ್ಗವಾಗಿ ಶವಸಂಸ್ಕಾರ ಪದ್ಧತಿಗಳು

ಶಿವನಾಗಯ್ಯ. ಎಂ. ಹಿರೇಮಠ
ಅಧ್ಯಕ್ಷರು, ಓಂ ಅಗ್ರಸ್ತಾ ಶ್ರಮ, ಗೆಜ್ಜೆಹಳ್ಳಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ E-mail" shivanagayyahiremath9@gmail.com

ಭಾರತವು ವೈವಿಧ್ಯಮಯದಲ್ಲಿ ಏಕತೆಯಲ್ಲಿ ಪ್ರತಿಪಾದಿಸಿದ ರಾಷ್ಟ್ರ. ಈ ರಾಷ್ಟ್ರದಲ್ಲಿ ಪಾಪ - ಪುಣ್ಯ ದೋಷ ಪರಿಹಾರ ಈ ಎಲ್ಲ ವಿಚಾರ-ಆಚಾರಗಳೀಗೆ ಸಿಮಿತವಾಗಿ ಜನ ಬದುಕುವದು ಒಂದು ವಿಶೇಷ. ಈ ಆಚಾರ ವಿಚಾರ ದೋಷ ಪರಿಹಾರ ಹಲವು ಕರ್ಮಗಳಿಗೆ ಹಲವು ಸಂಸ್ಕಾರಗಳಿರುವಂತೆ ಮನುಷ್ಯ ಸತ್ತಾಗ ಮಾಡುವ ಕ್ರಿಯೆಗಳಿಗೆ ಶವ ಸಂಸ್ಕಾರ ಎಂದು ಕರೆಯಲಾಗಿದೆ. ಇದರಲ್ಲಿ ಹಲವು ಬಗೆಯ ಆಚಾರಗಳು ಇದ್ದು. ಉದ್ದೇಶ ಮಾತ್ರ ಒಂದೇ ಮುಕ್ತಿ ಎಂಬುದು ಭಾವ. ವ್ಯಕ್ತಿ ಸತ್ತನಂತರ ಆ ಶವವನ್ನು ಒಂದು ವಿಶಿಷ್ಠ ಬಗೆಯ ಆಚರಣೆಯಲ್ಲಿ ಪ್ರಾಕೃತಿಯಲ್ಲಿ ವಿಲೀನ ಮಾಡುವ ಕ್ರಿಯೆ ಆಗಿದೆ. ಇದರ ಜೊತೆಯಲ್ಲಿ ಪುಣ್ಯ ಮುಕ್ತಿಯ ದಾರಿಗೆ ಸರಳ ಪಾಪ ಜೀವಿಯ ವಿನಾಶ ಅಥವಾ ಮುಕ್ತಿ ಹೀನ ಸ್ಥಿತಿಯನ್ನು ಸೃಷ್ಟಿ ಮಾಡುತ್ತದೆ. ಇದೇ ನಂಬಿಕೆಯು ನಮ್ಮ ವೈಧಿಕ ಹಾಗೂ ಹಿರಿಯ ಜ್ಞಾನಿಗಳ ಸಿದ್ಧಾಂತವಾಗಿತ್ತು.

ಅಧ್ಯಯನದ ಮಹತ್ವ:- ಶರೀರವು ಹಲವು ಗುಣ ಹಾಗೂ ರೂಪದಲ್ಲಿ ನಿರ್ಮಾಣವಾದ ಚೈತನ್ಯ ಬಿಂದು ಶರೀರವನ್ನು ಸುಡಲು ಅಥವಾ ಹುಗಿಯಲು ಹಲವು ರೀತಿಯ ವೈಧಿಕ ಆಗಮೋಕ್ತ ಕ್ರಿಯೆಗಳನ್ನು ತಿಳಿಸಲಾಗಿದೆ. ಸೌರ ಮಂಡಲದಲ್ಲಿ ಸೂರ್ಯ, ಚಂದ್ರ, ನವಗ್ರಹ ಪರಿಯಂತರವಾಗಿ ಲಕ್ಷಾಂತರ ಧೂಮಕೇತು ಹಾಗೂ ಆಕಾಶ ಕಾಯಗಳು ಇದ್ದ ಪ್ರತಿಯೊಂದು ವಿಶಿಷ್ಟವಾದ ಗುಣದಿಂದ ಕೂಡಿದೆ. ಹಾಗೇನೆ ಗ್ರಹಗಳು, ರಾಶಿ ಮತ್ತು ನಕ್ಷತ್ರಗಳು ಎಂಬ ಅಂಶವನ್ನೇ ಈ ಕ್ರಿಯೆಯಲ್ಲಿ ಸಮ್ಮಿಳಿಸಲಾಗಿದೆ.

ಜನನ ಕಾಲಕ್ಕೆ ಉದಯವಾಗುವ ಲಗ್ನ. ಆ ಹನ್ನೆರಡು ರಾಶಿಗಳಲ್ಲಿ ಗ್ರಹಗಳುನಿಂತಿರುವ ಜಾಗ (ಆತ್ಮದಿಂದ ಇದ್ದ) ದೂರ ಅವುಗಳಲ್ಲಿನ ಗುಣ ರೂಪ ನೋಡಿ ಯಾವ ಗ್ರಹದಲ್ಲಿನ ಹೋಲಿಕೆ ಜನನ ಕಾಲದಲ್ಲಿ ಹೆಚ್ಚಾಗಿದೆಯೋ ಅಲೋಕಕ್ಕೆ ಆತ್ಮ ಪರ್ಯಟನೆಯಾಗುವಂತೆ ಅದೇ ಲೋಕದಿಂದ ಆತ್ಮ ಬಂದಿದೆ ಎನ್ನುವ ಲೆಕ್ಕಾಚಾರ ಕಾಣಬಹುದು.

ವಸಂಸ್ಕಾರದ ಪರಿಕಲ್ಪನ:- ಒಂದು ಮಾನವ ದೇಹ ರಚನೆಯಲ್ಲಿ ಪ್ರಕೃತಿ ಕೊಟ್ಟ ಚೈತನ್ಯ ಶಕ್ತಿಯೇ ಕಾರಣವಾಗಿತ್ತು. ಅದರಂತೆಯೇ

ಆತ್ಮ ಎಂಬ ಉಪಗ್ರಹವನ್ನು ನಿರ್ದಿಷ್ಟ ಕಕ್ಷೆ ಮೀರಿ ಹೋಗುವಂತೆ ಕುಲಾಚಾರ ಅಥವಾ ಅರಾಧ್ಯ ದೇವದ ಜೀವನ ಲೋಕ (ಕಕ್ಷೆ) ಸೇರುವಂತೆ ಮಾಡುವ 0ಯೋಗ್ಯ ವ್ಯವಸ್ಥೆ0ಯೆ ಶವ ಸಂಸ್ಕಾರ ಎಂದು ರೂಡಿ0ಯಲ್ಲಿ ಬಂದು ಸಂಪ್ರದಾ0ಯವಾಗಿ ಹೊರಹೊಮ್ಮಿತ್ತು. ಈ ಶವ ಸಂಸ್ಕಾರ ಕ್ರಿ0ಯೆ ಹಾಗೂ ಅದರ ನಂತರ ಕಾಲಘಟ್ಟದಲ್ಲಿ ನಡೆಸುವ ಕ್ರಿ0ಯೆಗಳು ಎಲ್ಲವೂ ವೈಜ್ಞಾನಿಕವಾಗಿ ರೂಪಗೊಂಡಿದೆ. ಮಾನವ ದೇಹದಲಿ ಇಡೀ ಬ್ರಹ್ಮಾಂಡ ಶಕ್ತಿ0ಯೇ ಇರುವದರಿಂದ ಆಗೋಚರ ಎಂಬ ಆತ್ಮ ಸೇರಿ ನಂತರ ಅದರ ಜೊತೆ ಒಂದಾಗುವ ಮಾಂಸ, ರಕ್ತ, ಚರ್ಮ ಕೇಶ ಹಾಗೂ ಉಗುರು ಎಂಬ ಆಂಶಗಳು ಹಂತ ಹಂತವಾಗಿ ನಿರ್ಮಾಣವಾಗುತ್ತದೆ. ವಿನಾಶ ಕಾಲಕ್ಕೆ ಪದರ ಪದರಾಗಿ ವಸರ್ಜನೆ0ಯಾಗುತ್ತದೆ. ನಂತರ ಕಕ್ಷೆ ತಪ್ಪಿ ಬಂದು ಆತ್ಮವು ವಿಸರ್ಜನೆ0ಯಾಗುತ್ತದೆ. ಆತ್ಮವು ಗರ್ಭ ಸೇರಿದಾಗ ಉತ್ಪತ್ತಿ0ಯಾದ ಜೀವ ಕೋಶಗಳು ಆತ್ಮ ವಿಸರ್ಜನೆ0ಯಾದ ಮೇಲೆ ನಸಿಸುತ್ತದೆ. ಹಾಗೇನೆ ಆತ್ಮ ದೇಹದಲ್ಲಿ ನಿಸ್ತೇಜನಾಗಿ ನಿಂತಾಗ ಶರೀರ ಸಾವು ಎಂಬ ವಿನಾಶಕ್ಕೆ ಸೇರುತ್ತದೆ. ನಂತರ ಅದು 0ಯಾವ ಲೋಕದಿಂದ ಬಂದಿದೆನೋ ಅರ್ಥಾರ್ಥ 0ಯಾವ ಕಕ್ಷೆಯಿಂದ ಬಂದಿದೆನೋ ಅದೇ ಕಕ್ಷೆಗೆ ಸೇರಿಸೌ ನಡೆಸುವ ಕ್ರಿ0ಯೆ0ಯೇ ಮನುಷ್ಯ ಶರೀರದಲ್ಲಿ ಶೇಖರಣೆ0ಯಾದ ಎಲ್ಲ ವಿಧವಾದ ಚೈತನ್ಯ ಶಕ್ತಿ, ಗ್ರಹ ಉಡಾವಣೆ ಕಾಲದಂತೆ ಉಪಗ್ರಹವಾಗಿ ಮಾರ್ಪಾಡು ಹೊಂದುತ್ತದೆ. ದೇಹವೇ ಉಪಗ್ರಹದ ಇಂಧನ, ಅದರಲ್ಲಿನ ಆತ್ಮ ಎನ್ನುವ ಅವಿನಾಶ ಶಕ್ತಿ0ಯ ಉಪಗ್ರಹ. ಆ ಶರೀರವನ್ನು ವಿಸರ್ಜಿಸುವ ಕ್ರಿ0ಯೆ ಉಡಾವಣೆ. ಈ ಉಡಾವಣಾ ಕೇಂದ್ರವೇ ಸ್ಮಶಾನ. ಆತ್ಮ ಕಕ್ಷೆ ಸೇರಲು ಬೇಕಾದ ಅಂಶವೇ ಪುಣ್ಯ ಇಂದನ. ಪಾಪ ಇಂದನ ಕಕ್ಷೆಗೂ ಮೊದಲೇ ಮಾರಕವಾಗಿ ಪರಿವರ್ತನೆ ಹಾಗೂ ತೀವ್ರತೆ0ಯನ್ನು ಹೊಂದುವುದರ ಜೊತೆ ನಿರ್ದಿಷ್ಟ ಕಕ್ಷೆ0ಯನ್ನು ಸೇರದೇ ದೇಹವಿಲ್ಲದ ಆತ್ಮ. ಭೂಮಿ0ಯ ಗುರುತ್ವಾಕರ್ಷಣೆಗೆ ಒಳಪಟ್ಟ ಮುಕ್ತಿ ಇಲ್ಲದ ಆತ್ಮವಾಗುತ್ತದೆ. (ಪ್ರೇತಾತ್ಮ)

ಅಧ್ಯ0ಯನ ಉದ್ದೇಶ:–

* ಶವ ಸಂಸ್ಕಾರ ಪದ್ಧತಿಗಳ ಮಹತ್ವವನ್ನು ವಿಶ್ಲೇಷಿಸುವದು. ವಿವಿಧ ಪದ್ಧತಿಗಳು ಹೇಗೆ ಪ್ರಕೃತಿಗೆ ಪ್ರ0ಯೋಜನಕಾರಿ0ಯಾಗಿವೆ ಎಂಬುದನ್ನು ಕಂಡುಕೊಳ್ಳುವದು.

* ಶವ ಸಂಸ್ಕಾರವು ಹೇಗೆ ಕಾರಣವಾಗಿದೆ ಎಂಬುದನ್ನು ವಿಶ್ಲೇಷಿಸುವದು ಅಧ್ಯ0ಯನದ ಅಗತ್ಯ.

* ಶವ ಸಂಸ್ಕಾರ ಪದ್ಧತಿಗಳು ಕೇವಲ ಮೂಢ ಎಂಬ ಭಾವನೆ ಇದೆ. ಆದರೆ ಅದು ಅತ್ಯಂತ ವೈಜ್ಞಾನಿಕವಾದದ್ದು.

* ಪ್ರತಿ0ಯೊಂದು ಶವ ಸಂಸ್ಕಾರ ಪದ್ಧತಿ0ಯಲ್ಲಿ ಇರುವ ಮೂಲಾಂಶಗಳನ್ನು ಪರಿಚಯಿಸುವದು.

ಸಂಶೋಧನಾ ವಿಧಾನ:–

* ಪ್ರಸ್ತುತ ಅಧ್ಯ0ಯನದಲಿ ಭಾವನಾತ್ಮಕ ಅಸಮತೋಲನ ಹಾಗೂ 0ಯೋಗದ ಸೈದ್ಧಾಂತಿಕ ವಿಚಾರಗಳನ್ನು ಮಂಡಿಸಲು ವಿವರಣಾತ್ಮಕ, ವಿಶ್ಲೇಷಣಾತ್ಮಕ ಹಾಗೂ ವಿಧಾನಗಳನ್ನು ಬಳಸಲಾಗಿದೆ.

* ಪ್ರಾ0ಯೋಗಿಕ ಅಧ್ಯ0ಯನಕ್ಕೆ **"ಮೊದಲು ಮತ್ತು ನಂತರದ ನಮೂನೆ"** 0ಯನ್ನು ಬಳಸಲಾಗಿದ್ದು ವರ್ಣನಾತ್ಮಕ ಸಂಖ್ಯಾಶಾಸ್ತ್ರದ ವಿಧಾನಗಳಾದ ಸರಾಸರಿ. ಸ್ಟ್ಯಾಂಡರ್ಡ್ ಡಿವೀ0ಯೇಷನ್, ಟಿ–ಟೆಸ್ಟ್‌ಗಳನ್ನು ಬಳಸಲಾಗಿದೆ. ಫಲಿತಾಂಶಗಳನ್ನು ತೋರಿಸಲು ಸ್ತಂಭಲೇಖನಗಳನ್ನು ತುಲನಾತ್ಮಕವಾಗಿ ನಿರೂಪಿಸಲಾಗಿದೆ.

ಶವ ಸಂಸ್ಕಾರದ ಪದ್ಧತಿಗಳು:

ಸಮಾಧಿ0ಯ ಹಲವು ರೂಪದಲಿದ್ದು ಅವುಗಳ ವಿನ್ಯಾಸ ರಚನೆ ವಿಭಿನ್ನವಾಗಿದೆ.

1. ಜ್ಞಾನ ರೂಫ ಸಮಾಧಿ (ವಿಶೇಷ ಸಮಾಧಿ)

ನಿರ್ಮಾಣ ಸಮಾಧಿ

ಸಚ್ಚಿದಾನಂದ ಸಮಾಧಿ

ನಿರಮ0ಯ ಸಮಾಧಿ

ನಿಜ ಶಿವ ಸಮಾಧಿ

2. ಕ್ರಿ0ಯಾ ಸಮಾಧಿ (ಮಧ್ಯಮ ಸಮಾಧಿ)

ಸತ್ ಕ್ರಿ0ಯಾ ಸಮಾಧಿ

ಗೋಮುಖ ಸಮಾಧಿ

ಗೋಳಕ ಶಿಖರ ಸಮಾಧಿ

ಬ0ಯಲು ಸಮಾಧಿ

3. ಸಾಮಾನ್ಯ ಸಮಾಧಿ

ಧೂಳು ಸಮಾಧಿ

ಜಲ ಸಮಾಧಿ

ಅಗ್ನಿ ಸಮಾಧಿ, ಒಟ್ಟು 11 ವಿಧವಾದ ಸಮಾಧಿಗಳು.

ಶವ ಸಂಸ್ಕಾರದ ಮಹತ್ವ:– ಜೀವ್ (ಮನುಷ್ಯ) ಸುಟ್ಟಾತ / ಹುಗಿದಾಗ ಉತ್ಪತ್ತಿ0ಯಾಗುವ ಚೈತನ್ಯ, ಸುಟ್ಟಾಗ ದೇಹದಲ್ಲಿ ಇರುವ ಎಲ್ಲ ಜೀವಕೋಶಗಳು ಒಂದು ಸುಟ್ಟು ಉತ್ಪತ್ತಿ0ಯಾಗುವ ಚೈತನ್ಯವಿವೇ ಉಡಾವಣೆ ರೂಪವಾಗಿದೆ. 4 ರಿಂದ 8 ಕೆ. ಜಿ. ತೂಕದ ವಸ್ತುವನ್ನು ಕಕ್ಷೆ ಸೇರಿಸಲು ಬಳಕೆ0ಯಾಗುವ ಇಂಧನ ಲಕ್ಷ ಲಕ್ಷ ಲೀಟರ ಹಾಗೇನೆ ಶರೀರದಲ್ಲಿನ ಮಾಂಸ, ರಕ್ತ, ಎಲುಬು ಸುಟ್ಟಾಗ ಪ್ರತಿ0ಯೊಂದು ಒಮ್ಮೆಲೆ ಸುಡದೇ ಹಂತ ಹಂತವಾಗಿ ಮೇಲೇರುತ್ತಾ ಕಕ್ಷೆ0ಯನ್ನು ಮುಟ್ಟುತ್ತದೆ. ಅಣುವಿನ ರೂಪದ ಆತ್ಮ ಕಕ್ಷೆಗೆ ಸೇರಲು ಬೇಕಾಗುವಷ್ಟು ಇಂಧನ ಶರೀರ ಎಂಬ ಅಂಗ ಒದಗಿಸುತ್ತದೆ. ಆದರೆ ಇಲ್ಲಿ 0ಯಾವುದೇ ತೂಕಕ್ಕೆ ಸಿಗದ ಆತ್ಮವು ಒಂದು ರೂಪ ಚೈತನ್ಯವಾಗಿದ್ದು ರಾಕೆಟ್ ಹಾರುತ್ತಾ ತನ್ನಲ್ಲಿನ ಬಾರ ಒಂದೊಂದು ಕಕ್ಷೆದಿಂದಾಗಲೂ ಒದಗಿಸುತ್ತದೆ. ಬಾರದ ತೀವ್ರತೆ ಕಡಿಮೆ ಮಾಡಿಕೊಳ್ಳುತ್ತಾ ವೇಗವನ್ನು ಹೆಚ್ಚುತ್ತಾ ಸಾಗುತ್ತದೆ. ನಂತರ ಅದರಲ್ಲಿನ ಮೂಲ ವಸ್ತು ಉಪಗ್ರಹವನ್ನು ಕಕ್ಷೆಗೆ ಸೇರಿಸುತ್ತದೆ. ಹಾಗೇನೆ ಜೀವಿ0ಯ ಸುತ್ತ ದೇಹವು ಅದರಲ್ಲಿನ ಒಂದೊಂದು ಪದರು ಕಳಚಲ್ಪಟ್ಟಾಗ ಒಂದೊಂದು ವಲ0ಯವನ್ನು ಆತ್ಮ ಸಾಗುತ್ತಾ ತನ್ನ ವೇಗ ತೀವ್ರ ಮಾಡಿಕೊಳ್ಳುತ್ತಾ ಗಾತ್ರವನ್ನು ಕಡಿಮೆ ಮಾಡಿಕೊಳ್ಳುತ್ತದೆ.

ಸಮಸ್ತ ವಿಷ0ಯವು ಸಿದ್ದಿಸಿ ಜನನ / ಮರಣ ಚಕ್ರದಿಂದ ಶಾಶ್ವತ ಮುಕ್ತಿ ಪಡೆ0ಯುವನು. ಭೋಗಿ0ಯ ಇದನ್ನು ದೈಹಿಕವಾಗಿ ಅನುಭವಿಗೆ ಅಮೃತವೇ ಆದ ವೀ0ರ್ಯ, ಧಾತು, ಶರೀರದ ರಸವನ್ನು ಕಳೆದುಕೊಂಡು ಕ್ಷಣಿಕ ತೃಪ್ತಿಹೊಂದಿ ಪಾಪಿ0ಯಾಗುವನು. ಈ ಮೂರು ಚಕ್ರಗಳನ್ನು ಭೇಧಿಸಿದ ಮೇಲೆ ಜೀವವನ್ನು ಹಾಗೂ ಜಗನ್ಮಾತೆ0ಯ ದೇಹದ ಸರ್ವ ಚಕ್ರಗಳನ್ನು ಆಸ್ತಿತ್ವ ಹೊಂದುವಳು.

6 ಚಕ್ರಗಳೇ ಅರಿಷಡ್ವರ್ಗ ವಲ0ಯ ಇದೇ ನಾವು ನೋಡುವ ಕಾಮ, ಕ್ರೋಧ, ಲೋಭ, ಮೋಹ, ಮಧ, ಮಾತ್ಸ0ರ್ಯ ಎಂಬ ವಿವರಣೆ ನೀಡುವದು. ಈ ಎಲ್ಲ ಕ್ರಿ0ಯೆ ಮೀರಿ ನಿಲ್ಲುವ ಶಕ್ತಿ ಜೀವಿಗೆ ಬರುತ್ತದೆ. ಭೋಗಿ0ಯಾದವನಿಗೆ ಈ 0ಯಾವುದನ್ನು ಗೆಲ್ಲಲ್ಲು ಸಾಧ್ಯವಾಗದೆ. ಸಾವು ನಿಶ್ಚಿತವಾಗುತ್ತದೆ. ಸತ್ತ ಮೇಲೆ ಜೀವಿ0ಯ 0ಯಾವ ಮೂಲ ರೂಪದಿಂದ ಪರಿವರ್ತನೆ ಹೊಂದಿ ಮಾನವನಾಗಿದ್ದನು ಅದೇ ತೆರನಾದ ಪರಿವರ್ತನಾ ರೂಪದಲ್ಲಿ ಪ್ರಕೃತಿ0ಯಲ್ಲಿ ವಿಲೀನವಾಗುತ್ತದೆ. ಆತ್ಮ ಎನ್ನುವ ಅಂಶ ಮಾತ್ರ ಸೂಕ್ಷ್ಮವಾಗಿ ಪರಮಾತ್ಮನ ಸಾನಿಧ್ಯವಹಿಸುತ್ತದೆ.

ಸಹಜವಾಗಿ ಜೀವಿ0ಯ ಹುಟ್ಟು ಸಣ್ಣದಾದ ಒಂದು ರೂಪದಿಂದ ಪ್ರಾರಂಭವಾಗುತ್ತದೆ. ನಂತರ ಅದು ಗರ್ಭದಲ್ಲಿದ್ದಾಗ ಬೆಳೆ0ಯಲು ಅವಶ್ಯವಿರುವ ಪಂಚಭೂತಗಳನ್ನು ಅಣು ಅಣು ರೂಪದಲ್ಲಿ ಸ್ವೀಕರಿಸಿಕೊಂಡು ಬೃಹದಾಗಿ ಮಾರ್ಪಾಡು ಹೊಂದುತ್ತದೆ. ಬದುಕಿನ ಕೊನೆ ಕ್ಷಣದ ವರೆಗೂ ದೇಹದ ಕಲ್ಪಗತೆ0ಯನ್ನು ಹೊರಗಡೆ ಹಾಕಿ ಶುದ್ಧತೆ0ಯನ್ನು ಮಾತ್ರ ಇಟ್ಟುಕೊಂಡು ಜೀವಿಸುತ್ತದೆ.

ಹೋಮ ಮಾಡುವಾಗ ನಾವು ಬಳಸುವ ಪದಾರ್ಥಗಳು ಎಲ್ಲವೂ ಪ್ರಾಕೃತಿಕವಾಗಿದ್ದು ಮಂತ್ರ ಎಂಬ ದ್ವನಿಯಿಂದ ಒಂದು ವಿಶಿಷ್ಟ ತರಂಗ ಸೃಷ್ಟಿಸಿ ಸೂ0ರ್ಯ ಮಂಡಲದಲ್ಲಿನ ಚೈತನ್ಯ ಶಕ್ತಿ ಚಂದ್ರ ಮಂಡಲದಲ್ಲಿನ ಅಮೃತದ ಪುಷ್ಟಿ ಶಕ್ತಿ0ಯನ್ನು ಸಮೀಕರಿಸುವ ಕ್ರಿ0ಯೆ0ಯಾಗಿ ನಿರ್ಮಾಣವಾದ ವಿಧಿ0ಯಾಗಿದೆ. ಅದೇ ರೀತಿ ಶವಸಂಸ್ಕಾರ ಕೂಡ ಇಂಥ ಶಕ್ತಿ ಸಮೀಕರಣ ಕಾ0ರ್ಯವೇ ಆಗಿದೆ.

ಸಮಾಧಿ0ಯ 0ಯೋಗ್ಯ ಸ್ಥಳಗಳ ವಿವರಣೆ

ಪುಣ್ಯದೇಶೀ ನದೀಲೀರೇ ಬಹು ವೃಕ್ಷವನೇಷಿಮ

ಗಿರಿವಾ ರಾಮ ಭೋಗಭಾಗೇ ಬಿಲ್ವಮೂಲೇ ಮಠ ಪಿವಾ

ಶಿವಾಲ0ಯೋ ಪಕಂಠೇವಾ ಜೀರ್ಣ ಗೋಷ್ಟೀ ಚತುಷ್ಪಿದೇ

ಸುಕರಂ ಲಭ್ಯತೇ0ಯತ್ರ ಚುಶ್ರಮೇ ವಾ ತಪಸ್ವಿನಃ

ಪುಷ್ಪ ವಾಚ್ಯಾಂ ಗ್ರಾಮ ಮಧ್ಯೇ ಚಾರಣ್ಣೆ ಪರ್ವತಾಶ್ರ ಮೇ (0ಯೇ)

ಎತಷ್ವೇಕತ್ರ ವಾ ಕು0ರ್ಯಾತ್ಸವಾಧಿ ರಚನಾಧಿಕಮ್

ತಾತ್ಪ0ರ್ಯ: ಪವಿತ್ರ ಸ್ಥಳ ಹೊಳೆ ಹಳ್ಳಗಳ ತೀರ, ಬಹಳ ಗಿಡಗಳು ಇರುವ ಸ್ಥಳ, ಪರ್ವತ, ಗುಡ್ಡ ವಿಶ್ರಾಂತ ಸ್ಥಳ ಬಿಲ್ವ, ಬನ್ನಿಗಿಡ ಬುಡದಲ್ಲಿ

ಮಠ ದೇವಾಲ0ಯ ಸಮೀಪ ಸ್ಥಳದಲ್ಲಿ ನಾಲ್ಕು ಮಾರ್ಗಗಳು ಕೂಡುವ ಸ್ಥಳ ತಪಸ್ವಿಗಳ ಅಥವಾ ಪೂಜ್ಯರ ಆಶ್ರಮ ತೋಟ ಹೂದೋಟ ಗ್ರಮಾ ಮಧ್ಯದಲ್ಲಿ ಅರಣ್ಯ ಇವುಗಳಲ್ಲಿ 0ಯಾವುದಾದರೂ ಒಂದು ಸ್ಥಳದಲ್ಲಿ ಮರಣ ಹೊಂದಿದ ವ್ಯಕ್ತಿ0ಯ ಹಿನ್ನಲೆ0ಯನ್ನು ಪರಿಗ್ರಹಿಸುವುದು ತುಂಬಾ ಅವಶ್ಯಕವಾಗಿರುತ್ತದೆ.

ಇದೇ ರೀತಿ0ಯಾಗಿ ನಭೋ ಮಂಡಲದ (ಸೂ0ರ್ಯ ಮಂಡಲದ) ಗ್ರಹಗಳ ವರ್ಣಗುಣ ಸ್ವರೂಪ ಚೈತನ್ಯ ಜೊತೆಗೆ ಅವುಗಳಿಂದ ಶುಭ ಫಲ ಪಡೆ0ಯಲು ವಸ್ತು ಸ್ಥಿತಿ ಜ್ಯೋತಿಷ್ಯದಲ್ಲಿ ಕಾಣ ಸಿಗುತ್ತದೆ.

ಶರೀರ 0ಯಾವ ಗ್ರಹದ ಬಲ ಪ್ರಭಾವದಿಂದ ಕೂಡಿದಿ0ಯೋ ಅದೇ ಕಕ್ಷೆ0ಯನ್ನು ಆತ್ಮ ಸೇರುತ್ತದೆ. ಅದು ಶುಭ ಗ್ರಹವಾದರೆ ಮುಕ್ತಿ ರೂಪ ಸ್ವರ್ಗ ಎನ್ನುವ ಕಕ್ಷೆ ಆಶುಭ ಗ್ರಹವಾದ ಮಿಥ್ಯ ಎನ್ನುವ ನರಕ ಪಾಪ ಮತ್ತು ಶುಭಗ್ರಹಗಳ ಬಲಾಬಲ ಕುಸಿತವಾದರೆ ಪ್ರಾಚತ್ವ ಪ್ರಾಪ್ತವಾಗುತ್ತದೆ. ಮಾನವನ ದೇಹದಲ್ಲಿ ಸರ್ವ ವಸ್ತುವಿಗೂ ಅಂತರಿಕ್ಷದ ಗ್ರಹಗಳ ಸ್ವರೂಪಕ್ಕೆ ಇರುವ ಹೊಂದಾಣಿಕೆ ಹಾಗೂ ಜೀವಿ0ಯ ಜನನಕ್ಕೆ ಗ್ರಹಗಳು ನೀಡುವ ಫಲ:

ಧಾತ್ವದಿ ಕಾರಕತ್ವ:

1. ಸ್ನಾ0ಯು – ಶನಿ
2. ಎಲುಬು – ರವಿ
3. ರಕ್ತಕ್ಕೆ – ಚಂದ್ರ
4. ಚರ್ಮ – ಬುಧ
5. ಶುಕ್ಲ / ಬಿಳಿರಕ್ತ – ಶುಕ್ರ
6. ವಸಂ – ಗುರು
7. ಮಜ್ಜಾ – ಕುಜ

ಎಲುಬಿನ ಮಧ್ಯದ ರಸಕ್ಕೆ ಕುಜ ಅಧಿಪತಿ ಅದುವೇ ಮಜ್ಜಾ ಮಾಂಸದಲ್ಲಿನ ಕೊಬ್ಬಿಗೆ ನಿಜ ಎನ್ನಲಾಗುತ್ತದೆ. ಅದರ ಅಧಿಪತಿ ಗುರು ಒಂದು ಎಲುಬು ಹಾಗೂ ನರಗಳನ್ನು ಸೇರಿಸುವ ಜಾಗವೇ ಸ್ನಾ0ಯು ಇದರ ಅಧಿಪತಿ ಒಂದು ಎಲುಬು ಹಾಗೂ ನರಗಳನ್ನು ಸೇರಿಸಿರುವ ಜಾಗವೇ ಸ್ನಾ0ಯು ಇದರ ಅಧಿಪತಿ ಶನಿ.

ಕುಂಡಲಿನಿ 0ಯೋಗದ ಪ್ರಕಾರ ಅಂತ್ಯಸಂಸ್ಕಾರದ ವಿಧಿ ವಿಧಾನ: ಕುಂಡಲಿನಿ 0ಯೋಗದ ಪ್ರಕಾರ ಮನುಷ್ಯ ದೇಹದಲ್ಲಿ 3 ಪ್ರದಾನ ನಾಡಿ 6 ಸ್ಥಾಲ ಚಕ್ರಗಳಿದ್ದು ಅವುಗಳನ್ನು ಕಾಮ, ಕ್ರೋದ, ಮೋಹ, ಮಧ, ಮತ್ಸ0ರ್ಯ ಎಂದು ಉಲ್ಲೇಖಿಸಲಾಗಿದೆ. ಹಾಗೇನೆ ಪ್ರತಿ ಚಕ್ರವನ್ನು ಸರ್ಪರೂಪಿ ಕುಂಡಲಿನಿ ಜಾಗೃತಿಯಿಂದ ದೇಹದಲ್ಲಿನ ಉಷ್ಣಾಂಶ ಮಾ0ಯವಾಗಿ ಎಲ್ಲಾ ಚಕ್ರಗಳ ಅಂಶ ಕಿರಣಗಳು ಜಾಗೃತವಾಗಿ ಚೂತನ್ಯ ರೂಪದಲ್ಲಿ ಇದ್ದಾಗ ಶರೀರ0ಯಾಗಿ 0ಯಾವ ಕಕ್ಷೆ0ಯ ವಲ0ಯಕ್ಕಾದರೂ ಆ 0ಯೋಗಿ0ಯ ಹೋಗಿ ಬರುವನು. ಈ ತೆರೆನಾದ ಸಾಧನೆ ಮಾಡಿ ಸಿದ್ದಿ ಪಡೆದ ವ್ಯಕ್ತಿ0ಯ ಕಾರಣ ಪ್ರಪಂಚದಿಂದ ಕಾರಣ ಶರೀರವನ್ನು ಪ್ರಕೃತಿ ರೂಪದಲ್ಲಿ ಐಕ್ಯವಾಗುವದೇ ಜೀವಂತ ಸಮಾಧಿ ಎಂದು ಜ್ಞಾನ ರೂಪ ಸಮಾಧಿ0ಯಲ್ಲಿನ 4 ವಿಧ ಸಮಾಧಿ0ಯಾಗುತ್ತದೆ.

ಸೂ0ರ್ಯಸು ಪ್ರಕೃತಿ0ಯನ್ನು ನಿರ್ವಹಿಸಲು ಚಲ್ಲುವ ಕಿರಣಗಳು 106

ಚಂದ್ರನಿಂದ ಪ್ರಕೃತಿ0ಯನ್ನು ನಿರ್ವಹಿಸಲು ಚಲ್ಲುವ ಕಿರಣಗಳೂ 136

ಅಗ್ನಿಯಿಂದ ಪ್ರಕೃತಿ0ಯನ್ನು ನಿರ್ವಹಿಸಲು ಚಲ್ಲುವ ಕಿರಣ್ಗಳು 118 ಒಟ್ಟು 360

6 ಚಕ್ರಗಳಲ್ಲಿ ಉದ0ಯವಾಗುವ ಕಿರಣಗಳ ಸಂಖ್ಯೆ

ಮೂಲಾಧಾರ – 56 – ಆಗ್ನಿ

ಸ್ವಾಧಿಷ್ಠಾನ – 62

ಮಣಿಪೂರ – 52 – ಸೂ0ರ್ಯ

ಅನಾಹತ – 54

ವಿಶುದ್ಧ – 72 – ಚಂದ್ರ

ಆಜ್ಞಾ – 64

ವ್ಯಕ್ತಿ೦ಯು ಜೀವವಿದ್ದಾಗ ೦ಯೋಗ ಶಾಸ್ತ್ರದ ಅನ್ವ೦ಯ ಕುಂಡಲಿನಿ ಸಾಧನೆ ಮಾಡಿಕೊಂಡಿದ್ದರೆ ಅವನು ಜೀವಂತ ಸಮಾಧಿ ಹೋಗಲು ಶಕ್ತನಾಗುತ್ತಾನೆ.

ಹೀಗೆ ಹತ್ತು ಹಲವಾರು ರೂಪದಲ್ಲಿ ೦ಯೋಗಿ೦ಯು ಸಶರೀರದಿಂದ ನಿರ್ದಿಷ್ಟ ಕಕ್ಷೆ೦ಯನ್ನು ಸೇರಿ ಮನುಕುಲದ ಒಳಿತಿಗೆ ಅನುಗ್ರಹ ನೀಡುವ ಶಕ್ತಿ ರೂಪನಾಗುತ್ತಾನೆ. ಸಾವಿರಾರು ಸಂಖ್ಯೆ೦ಯಲ್ಲಿ ಇವತ್ತಿಗೂ ಜೀವಂತ ಸಮಾಧಿ೦ಯಲ್ಲಿ ೦ಯೋಗಿಗಳು ಇರುವುದರ ಉಲ್ಲೇಖ ಮತ್ತು ದಾಖಲೆ ಸಹಿತ ನೋಡಬಹುದು.

ಉದಾ: ಮಂತ್ರಾಲ೦ಯದ ರಾಘವೇಂದ್ರ ಸ್ವಾಮಿಗಳ ಜೀವಂತ ಸಮಾಧಿ ಜ್ಞಾನ ರೂಪ ಸಮಾಧಿ೦ಯಾಗಿದೆ. ಶಿರಡಿ ಸಾಯಿಬಾಬ ಹಾಗೂ ವೀರಶೈವ ಸಮುದಾ೦ಯದ ಸಾವಿರಾರು ಶಿವ೦ಯೋಗಿಗಳು ಈ ರೀತಿ೦ಯ ಸಮಾಧಿಯಿಂದ ಮನುಕುಲದ ರಕ್ಷಕರಾಗಿ ಶಿವನ ಅನು೦ಯಾಯಿಗಳ ಜೀವನ ಪಾಲನೆ ಮಾಡುವ ಕಾಮಧೇನು ಅಂಶದವರಾಗಿದ್ದಾರೆ.

ಸಮಾಧಿಗಳಲ್ಲಿ 4 ವಿಧವಾದ ರೂಪಗೊಂಡ ಸಮಾಧಿಗಳು ನಿರ್ಮಾಣ ಸಮಾಧಿ. ಸಚ್ಚಿದಾನಂದ ಸಮಾಧಿ ನಿರಮ೦ಯ ಸಮಾಧಿ, ನಿಜ ಶಿವ ಸಮಾಧಿ ಎಂಬುವ ಸಮಾಧಿಗಳು ಬಾವನಾತ್ಮಕವಾಗಿದ್ದು, ಶಿವ೦ಯೋಗಿಗಳು, ಶರಣರು, ಶಿವಸಾಕ್ಷಾತ್ಕಾರ ಹೊಂದುವ ಆದ್ಯಾತ್ಮ ಸಾಧನೆಗೆ ಅನುಗುಣವಾಗಿ ವ್ಯವಸ್ಥೆ ಎಂದು ವಿವರಿಸಲಾಗಿದೆ.

ಇದರ ಉದ್ದೇಶ ಮನುಕುಲದ ಉದ್ದಾರವೇ ದಿವ್ಯ ಆದ್ಯಾತ್ಮ ಎಂದು ವೇದ-ಉಪನಿಷತ್ತಿನ ವಾಕ್ಯಗಳು ತಿಳಿಸುತ್ತದೆ. ಮಲಮ೦ಯ ಶರೀರದಲ್ಲಿನ ಆತ್ಮ ಸಾಕ್ಷಾತ್ಕಾರವಾದರೂ ದಿವ್ಯ ರೂಪವಾದ ಚೈತನ್ಯರೂಪ ಆತ್ಮ ಶರೀರದಿಂದ ವಿಸರ್ಜಿತವಾಗಲೇಬೇಕು. ಅಂದಾಗ ಮಾತ್ರ ಅದು ಒಂದು ನಿರ್ದಿಷ್ಟ ಕಕ್ಷೆ೦ಯಲ್ಲಿ ಪರಿಭ್ರಮಣ ಮಾಡಲು ಸಾಧ್ಯ. ಆದರಂತೆ ಉಚ್ಚ ವರ್ಗದ ಸಮಾಧಿ೦ಯಲ್ಲಿ ಇರುವ ವಿಶೇಷ ಎಂದರೆ ಜೀವಿಗಳ ಲಾಲನೆ-ಪಾಲನೆ ಮಾಡಿ ಅವರನ್ನು ಧರ್ಮ ಎಂಬ ದಾರಿಗೆ ಸಮೀಕರಿಸಲು ೦ಯೋಗಿ೦ಯಾದವನು ಹೊರಬೇಕಾದ ಜವಾಬ್ದಾರಿ ಹಾಗೂ ಜೀವಿಗಳ ಕರ್ಮರೂಪ ಪಾಪವನ್ನು ಸ್ವೀಕರಿಸಬೇಕಾಗುತ್ತದೆ. ಅದರಿಂದ ಇಹದಲಿ ನಿಜಾನಂದ ರೂಪದಲ್ಲಿ ಸಾಧನೆ ಮಾಡಿದ ಸಾಧಕನಿಗೆ ಮಾತ್ರ ಜ್ಞಾನ ರೂಪ ಸಮಾಧಿ ಮೂಲಕ ಹೊರಡಲು ಹಾಗೂ ಮುಕ್ತಿ ಪಥವನ್ನು ಸೇರಲು ಸಾಧ್ಯ.

ನಾಮ ಮಾತ್ರ ಸ್ವಾಮಿ / ಕಾವಿಧಾರಿ ಹಾಗೂ ಸನ್ಯಾಸಿ ಎಂಬುವನು ಈ ಮೂಲಕ ಗತಿ ಪರಿಭಮಣ ಮಾಡಿದರೂ ಅದು ೦ಯೋಗ್ಯವಾದ ಸ್ಥಳಕ್ಕೆ ಸೇರಲು ಸಾಧ್ಯವಿಲ್ಲ.

ಶಿಖರ ಸಮಾಧಿ:– 5 ಪಾದ ಉದ್ದ 5 ಪಾದ ಅಗಲ 9 ಪಾದ ಆಳ ಅಗೆದು ಸಮಾಧಿ೦ಯ ದಕ್ಷಿಣ ಗೋಡೆ೦ಯ ಆಳದಲ್ಲಿ 3 ಪಾದ ಉದ್ದ 3 ಪಾದ ಅಗಲ 3 ಪಾದ ಎತ್ತರ ಇರುವ ತ್ರಿಕೋನವು ಆ ತ್ರಿಕೋನಕ್ಕೆ ಎರಡು ಕಡೆ 11/2 ಪಾದ ಎತ್ತರದ ಶಿಖರವನ್ನು ಹಿಡಿದು ತುದಿ೦ಯನ್ನು ಕೂಡಿಸಬೇಕು. ತ್ರಿಕೋನದ ಮೇಲ್ಭಾಗದಲ್ಲಿ ಎಡಬಲಕ್ಕೆ 2 ಗೂಡು ಇರಬೇಕು ಆ ಗೂಡುಗಳು 1 ಪಾದ ಉದ್ದ 1 ಪಾದ ಅಗಲ, 1 ಪಾದ ಎತ್ತರ ಇದ್ದು, ಅದು ಪಾದ ಶಿಖರ ಅಳತೆ ಹಿಡಿದು ಕೂಡಿಸಿ ಗೂಡು ತ೦ಯಾರಿಸಬೇಕು.

ಸಮಾಧಿ೦ಯ ತಳದಲ್ಲಿ 3 ಪಾದ (ಪೂರ್ವ-ಪಶ್ಚಿಮ) ಉದ್ದ 2 ಪಾದ (ದಕ್ಷಿಣೋತ್ತರ) ಅಗಲ 1 ಪಾದ ಎತ್ತರ ಇರುವ ವೇದಿಕೆ (ಕಟ್ಟೆ) ೦ಯನ್ನು ರಚಿಸಬೇಕು.

1. ಸೋಪನ 3 ಪಾದ ಉದ್ದ * 3 ಪಾದ ಅಗಲ * 1 ಪಾದ ಎತ್ತರ
2. ಸೋಪಾನ 3 ಪಾದ ಉದ್ದ * 2 ಪಾದ ಅಗಲ * 1 ಪಾದ ಎತ್ತರ
3. ಸೋಪಾನ 3 ಪಾದ ಉದ್ದ * 3 ಪಾದ ಅಗಲ * 1 ಪಾದ ಎತ್ತರ

ಸಮಾಧಿ೦ಯ ಮೇಲೆ ಸುತ್ತಲೂ 1 ಪಾದ ಅಗಲ, 1 ಪಾದ ಎತ್ತರದ ಕಟ್ಟೆ೦ಯನ್ನು ನಿರ್ಮಿಸಬೇಕು ಪೂರ್ವದಿಂದ ಪಶ್ಚಿಮ ವಾ೦ಯುವ್ಯದ ವರೆಗೆ ಮಾತ್ರ ನಿರ್ಮಿಸಬೇಕು.

ಬ೦ಯಲು ಸಮಾಧಿ೦ಯು ಗೋಮುಖ ಸಮಾಧಿ೦ಯ ಅಳತೆ೦ಯಲ್ಲಿನೇ ರಚಿಸಬೇಕು.

ಧೂಳು ಸಮಾಧಿ 5 ಪಾದ ಉದ್ದ * 5 ಪಾದ ಅಗಲ * 9 ಪಾದ ಆಳ

ಉತ್ತರ ದಿಕ್ಕಿಗೆ 3 ಸೋಪಾನ ರಚಿಸುವ ಅಗತ್ಯ ಇಲ್ಲ. ಆದರೆ 3ಪಾದ ಉದ್ದ * 3 ಪಾದ ಅಗಲ ಎತ್ತರವಾದ ತ್ರಿಕೋಣೆ೦ಯನ್ನು ಮಾತ್ರ ಮಾಡಬೇಕು.

ಕ್ರಿ0ಯಾ ಸಮಾಧಿ:–

ಮಾತೃ ದೇಹ ಪ್ರಮಾಣೇನ ಗರ್ತಗಂಧಂ ವಿಧಿ0ಯತೇ

ನವವಾಂ ಸಪ್ತಪಾದಂ ವಾ ಗರ್ತ ಪ್ರಾಣಸ್ಯ ದೇಹಿನ

ತನೋನ್ಯ ಮದಿಕಂವಾಚೇ ತ್ನರ್ತುರಾ0ಯಷ್ತ್ರ ಸಂಕ್ಷ0ಯಃ

ಪಂಚಪಾದ ಪ್ರಮಾಣೇನ ವಿಸ್ತಾರಖ ಚತುರಶ್ರಕಂ

ತನ್ಮದ್ಯೇವೇದಿಕಾಂಕೃತ್ವಾ ತ್ರಿಪಾದಂ ಚತುರಶ್ರಕಂ

ಪ್ರಥಮಸ್ವಾ0ಯತಂ ದೀರ್ಘ ಸ್ತೋಪನ ಸ್ವೆಕಪಾದಕಂ

ಕು0ರ್ಯಾಧೀರ್ಘಂ ದ್ವಿತೀ0ಯಸ್ಯ ದ್ವಿಪಾದಂ ಚಾ0ಯತಂತಥಾ

ತೃತೀ0ಯಸ್ಯಾ0ಯತಂ ದೀರ್ಘಂ ತ್ರಿಪದ ಮುಷಿಕಲ್ಪ0ಯೋತ್

ಭತ್ತಾ ತೃಕೋಣ ಸಂ0ಯುಕ್ತ ದೀಪಮಾಲಾ ಸಮನ್ವಿತಂ

ನವಷಾತಂ ತ್ರಿಕೋಂಚ ವ್ಯಾ0ಯಾಮಂಚತ್ರ ಪಾರಕಂ

ಎವಮೇವಾವಚಘ ಕೃತ್ವಾ ದೇಹ ತತ್ರವ್ನಿಕ್ಷಿಪೇತ್

ಪರಮೇಶ್ವರಾಗಮನದಲ್ಲಿ ತಿಳಿಸಿದಂತೆ ಕ್ರಿ0ಯಾ ಸಮಾಧಿ0ಯ ನಿರ್ಮಾಣ 5 ಪಾದ ಉದ್ದ 5 ಪಾದ ಅಗಲ 5 ಚಚಾಕ 5 ಪಾದ, 9 ಪಾದ ಅಳ (ಗುಂಡಿ / ದುದ್ದು) ಅದರ ತಳದಲ್ಲಿ 3 ಪಾದ ಉದ್ದ 3 ಪಾದ ಅಗಲ ಅಂದರೆ ಚಚೌಕ 3 ಪಾದ, 1 ಪಾದ ಉ0ಯದ್ದ 1 ಪಾದ ಅಗಲ 1 ಪಾದ ಎತ್ತರ ಇರುವ 1 ನೇ ಸೋಪಾನ

3 ಪಾದ ಉದ್ದ 3 ಪಾದ ಅಗಲ 3 ಪಾದ ಎತ್ತರದ 3ನೇ ಸೋಪಾನ 3 ಸಾಲು ಸೋಪಾನದ ನಂತರ ಅಂತ್ಯಸಂಸ್ಕಾರ ವಿಧಾನ – ಪುಟ – 29

ಕಿರು ಕುಣಿ0ಯ ಆ ಶಿಖರಕ್ಕೆ ಕಿರುಕುಣಿ0ಯ ತಳದ ಮಧ್ಯದಿಂದ 41/2 ಪಾದ ಎತ್ತರ ಹಿಡುದು ಮೇಲಿನ ಎರಡು ತುದಿಗಳನ್ನು ಕೂಡಿಸಲು ತ್ರಿಕೋನವಾಗುವದು. ಸಮಾಧಿ0ಯು 8 ಪಾದ 8 ಪಾದ ತಗ್ಗಾದ ಕೂಡಲೇ ಕಿರುಕುಳಿ ತೆಗೆ0ಯುವದನ್ನು ಆರಂಭಿಸಬೇಕು. ಮತ್ತು ಕುರುಕುಣಿ0ಯ ಸುತ್ತಲೂ 1 ಪಾದ ಅಳತೆ0ಯ ತಗ್ಗು ಇರಬೇಕು. ಕಿರುಕುಣಿ0ಯ ಮೇಲೆ ಎಡ– ಬಲ ಭಾಗಕ್ಕೆ ಎರಡು ಗೂಡು ಮಾಡಬೇಕು. 1 ಪಾದ ಉದ್ದ 1 ಪಾದ ಅಗಲ 1 ಪಾದ ಎತ್ತರ ಮತ್ತು ಅದು ಪಾದ ಶಿಖರ ಇರುವಂತೆ ದೀಪ ಇಡಲು ಎರಡು ಗೂಡುಗಳನ್ನು ನಿರ್ಮಿಸಬೇಕು.

2. ಕಿ0ರ್ಯಾ ಸಮಾಧಿ0ಯ ಉದ್ದ * ಅಗಳ * ಎತ್ತರ ವಿವರಣೆ:

5 ಪಾದ ಉದ್ದ 5 ಪಾದ ಅಗಲ 9 ಪಾದ ತಗ್ಗು (ಆಳ) ತೆಗೆದು ಸಮಾಧಿ0ಯ ತಳದ ಮಧ್ಯದಲ್ಲಿ 3 ಪಾದ ಉದ್ದ ಅಗಲ 3 ಪಾದ ಉದ್ದ 1 ಪಾದ ಎತ್ತರ ಇರುವ ವೇದಿಕೆ0ಯನ್ನು ಮಾಡಬೇಕು. ಸಮಾಧಿ0ಯ ದಕ್ಷಿಣ ಗೋಡೆ0ಯ ತಳದಲ್ಲಿ 3 ಪಾದ ಉದ್ದ 3 ಪಾದ ಅಗಲ 3 ಪಾದ ಎತ್ತರ ಇರುವ ತ್ರಿಕೋಣ ರಚಿಸಬೇಕು.

ತ್ರಿಕೋನದ ಶಿಖರವನ್ನು ಪಶ್ಚಿಮದ ಕಡೆಯಿಂದ 1 1/2 ಪಾದ ಪೂರ್ವದ ಕಡೆಯಿಂದ 1 1/2 ಪಾದ ಎತ್ತರ ಹಿಡಿದು ಅವುಗಳ ತುದಿಗಳನ್ನು ಕೂಡಿಸಬೇಕು. ತ್ರಿಕೋನದ ಮೇಲ್ಭಾಗದಲ್ಲಿ ಎಡಕ್ಕಡ ಒಂದು ಬಲಕ್ಕೆ ಒಂದು ಹೀಗೆ ಎರಡು ಗೂಡುಗಳಿರಬೇಕು. ಅವು 1 ಪಾದ ಎತ್ತರ 1 ಪಾದ ಉದ್ದ 1 ಪಾದ ಉದ್ದವಾಗಿರಬೇಕು. ಶಿಖರ ಅರ್ದ ಪಾದ ಅಳತೆ ಹಿಡಿದು ಕೂಡಿಸಬೇಕು. ಇದರ ಅಳತೆ ಕ್ರಿ0ಯಾ ಸಮಾಧಿ0ಯಂತಿದ್ದು. ಸೋಪಾನಗಳು ಮಾತ್ರ ಕೆಳಗಿನಂತಿವೆ.

1. 3 ಪಾದ ಅಗಲ 1 ಪಾದ ಉದ್ದ 1 ಎತ್ತರ
2. 3 ಪಾದ ಅಗಲ 2 ಪಾದ ಉದ್ದ 2 ಪಾದ ಎತ್ತರ
3. 3 ಪಾದ ಅಗಲ 3 ಪಾದ ಉದ್ದ 3 ಪಾದ ಎತ್ತರ

ಸಮಾಧಿ0ಯ ಸುತ್ತಲು 1 ಪಾದ ಅಗಲ 1 ಪಾದ ಎತ್ತರ ಇರುವ ಕಟ್ಟೆ0ಯನ್ನು ಪೂರ್ವದಿಂದ ಪಶ್ಚಿಮದವರೆಗೆ ಮಾತ್ರ ಮಾಡತಕ್ಕದ್ದು.

ಉಪಸಂಹಾರ:– ಹುಗಿದಾಗ (ಧಪನ) ಆಗುವ ಕ್ರಿ0ಯೆ ದೇಹದಲ್ಲಿ ಪ್ರತಿ0ಯೊಂದು ವಸ್ತು ಅಥವಾ ಅಂಗ, ಪ್ರತ್ಯಂತ – ಉಪಾಂಗಗಳು ಭೂಮಿ0ಯಲ್ಲಿನ ಉಷ್ಣಾಂಶ ಹಾಗೂ ಭೂಮಿ0ಯ ಮೇಲೆ ಬೀಳುವ ಸೂ0ರ್ಯ ಕಿರಣದ ಪ್ರಭಾವದಿಂದ ಕೊಳೆತು ಅದರಿಂದ ಸೂಕ್ತ ಜೀವಿ0ಯ

ಉತ್ಪತ್ತಿ ಹಾಗೂ ಕೀಟಗಳು ಉತ್ಪತ್ತಿ0ಯಾಗಿ ಬೇರೆ ಜಿವಿಗಳ ಆಹಾರಕ್ಕೆ ಅನುಕೂಲವಾಗುತ್ತದೆ. ಮರ ಗಿಡ ಬಳ್ಳಿಗಳು ಅದನ್ನು ಬಳಸಿಕೊಂಡು ಉತ್ತಮವಾದ ಗಾಳಿ ನೀಡುತ್ತದೆ. ಹಾಗೇನೆ ಭೂಮಿ0ಯ ಒಳಗಡೆ ಕೊಳೆ0ಯುವಿಕೆಯಿಂದಾಗಿ ಉಂಟಾದ ದ್ರವ ರೂಪಿ ಚೈತನ್ಯವನ್ನು ಸೂ0ರ್ಯ ಕಿರಣದ ಮೂಲಕ ಕಕ್ಷೆ0ಯನ್ನು ಮುಟ್ಟಿ ಹೀರುವ ಕ್ರಿ0ಯೆ ಉತ್ತಮ ಸ್ಥಿತಿಗೆ ರೂಪಾಂತರವಾದಾಗ ಸೂ0ರ್ಯ ಮತ್ತು ಭೂಮಿ0ಯ ಮಧ್ಯ ತರಂಗಗಳ ರೂಪದಲ್ಲಿ ಸಂಬಂಧ ಏರ್ಪಟ್ಟಾಗ ಆತ್ಮವು ಚಲನೆಹೊಂದಿ ಕಕ್ಷೆ ಸೇರುತ್ತದೆ ಆತ್ಮವು ತರಗ ಮಾಧ್ಯಮದಲ್ಲಿ ಚಲಿಸುತ್ತದೆ ಒಂದು ವಿಧವಾದ ಸಿದ್ಧಾಂತವಾಗಿದೆ.

ಅದು ಹೇಗೆ ಎಂದರೆ, ನಿರ್ದಿಷ್ಟ ಕಕ್ಷೆ0ಯಲ್ಲಿ ಸುತ್ತುವ ಉಪಗ್ರಹ ತನ್ನ ತರಂಗಗಳನ್ನು ಮಾನವ ನಿರ್ಮಿತ ಒಂದು ತರಂಗ ನಿರ್ವಾಹಕ ಕಂಬಿಗೆ ರವಾನಿಸಿ ಅದರ ಮೂಲಕ ಪ್ರಕೃತಿ ಸೇರಿ ಸಂಬಂಧಪಟ್ಟ ತರಂಗಗಳು ಸ್ವೀಕರಿಸುವ ಮಾಧ್ಯಮ ಚಾಲಿತ ದೇಹದಲ್ಲಿನ ಆಸ್ತಿ, ಎಲುಬು, ಮಜ್ಜೆ, ಮಾಂಸ, ರಕ್ತ ಚರ್ಮ, ಬಿಳಿರಕ್ತ ಮತ್ತು ವಸಾ ಎಂಬ ಅಂಶಗಳು ದ್ರವರೂಪದ ಶಕ್ತಿ0ಯಾಗಿ ಮಾರ್ಪಾಡು ಹೊಂದಿದಾಗ ಪ್ರಾಕೃತಿಕ ಸಹಜ ಕ್ರಿ0ಯೆ0ಯಂತೆ ದ್ರವ ರೂಪ ಅಂಶವನ್ನು ಅಂತರಿಕ್ಷದ ಸಮಾಧಿ ಸರ್ವ ಆಕಾಶ ಕಾ0ಯಗಳು ಹೀರುವಂತೆ ಅದರ ತರಂಗ ಮಾಧ್ಯಮದಲ್ಲಿ ಒಂದಾಗಿ ಕಕ್ಷೆ0ಯನ್ನು ಆತ್ಮ ಸೇರುತ್ತದೆ.

ಭಾರತೀಯಮ್

ಸಮಾಜಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ಮತ್ತು ನಾಟ್ಯಶಾಸ್ತ್ರ ವಿಜ್ಞಾನಗಳು

BHARATEEYAM

Sociocultural Sciences, Arts, Music & Natyasastra

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಜನಪದ ಮಹಾಭಾರತ ಮತ್ತು ಕುಮಾರವ್ಯಾಸ ಭಾರತದಲ್ಲಿ ದ್ರೌಪದಿ : ತೌಲನಿಕ ಅವಲೋಕನ	ಪುಷ್ಪ ಪಿ	63 – 66
2.	ಪಂಪ ಭಾರತ : ದ್ರೌಪದಿಯ ಪಂಚವಲ್ಲಭತ್ವ	ಪುಷ್ಪ ಪಿ	66 – 68

ಜನಪದ ಮಹಾಭಾರತ ಮತ್ತು ಕುಮಾರವ್ಯಾಸ ಭಾರತದಲ್ಲಿ ದ್ರೌಪದಿ : ತೌಲನಿಕ ಅವಲೋಕನ

ಪುಷ್ಪ ಪಿ.
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ

ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ರೂಪಿಸುವಲ್ಲಿ ರಾಮಾಯಣ ಹಾಗೂ ಮಹಾಭಾರತಗಳು ವಹಿಸಿದ ಪಾತ್ರ ಅನನ್ಯವಾದುದು. ಅವರಲ್ಲಿಯೂ ಮಹಾಭಾರತ ಕೃತಿ ಸಾಹಿತ್ಯ ಪರಂಪರೆಯ ವಿಶಿಷ್ಟ ರಚನೆಯಾಗಿದ್ದು, ಮೌಖಿಕ ಕಾಲಘಟ್ಟದ ಜನಪದ ಹಂತದಿಂದ ಹಿಡಿದು ವಿವಿಧ ಕಾಲಗಳಲ್ಲಿ ಮತ್ತು ವಿವಿಧ ಸ್ತರಗಳಲ್ಲಿ ಬೆಳೆಯುತ್ತಾ ಶಿಷ್ಟ ಸಾಹಿತ್ಯದ ರಚನೆಯವರೆಗೂ ಹರಡಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಲೇಖನವು ಮೌಖಿಕ ಹಿನ್ನೆಲೆಯ ಜನಪದ ಮಹಾಭಾರತ ಹಾಗೂ ಶಿಷ್ಟ ಪರಂಪರೆಯ ಕುಮಾರವ್ಯಾಸ ಭಾರತ ಕೃತಿಯನ್ನು ಆಧರಿಸಿದ್ದು 'ದ್ರೌಪದಿ' ಪಾತ್ರವನ್ನು ವಿವಿಧ ಸನ್ನಿವೇಶ ಹಾಗೂ ಸಂದರ್ಭಗಳನ್ನು ಪರಿಗಣಿಸಿ ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಅಲ್ಲದೆ ದ್ರೌಪದಿಯನ್ನು ಕಾವ್ಯದುದ್ದಕ್ಕೂ ಮೆರೆಸುವ ಜನಪದರ ಸ್ತ್ರೀಪರ ಕಾಳಜಿಯನ್ನು ಹಾಗೂ ಸ್ತ್ರೀ ಸಂವೇದನೆಯ ಧ್ವನಿಯಾಗಿ ದ್ರೌಪದಿಯನ್ನು ಪ್ರತಿಬಿಂಬಿಸಿರುವ ಕುಮಾರವ್ಯಾಸ ಭಾರತ, ಈ ಎರಡೂ ರಚನೆಗಳ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಅವಲೋಕಿಸುವ ಪ್ರಯತ್ನ ಈ ಲೇಖನದ್ದಾಗಿದೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಮಹಾಭಾರತ ಪ್ರಮುಖವಾದ ಪಾತ್ರವನ್ನು ವಹಿಸಿರುವುದಷ್ಟೇ ಅಲ್ಲದೇ ಜನ ಸಾಮಾನ್ಯರಲ್ಲಿ ಬೆರೆತು ಹೋಗಿರುವಷ್ಟರ ಮಟ್ಟಿಗೆ ಸಮಾಜದಲ್ಲಿ ಬೆರೆತುಹೋಗಿದೆ. ಸಾಹಿತಿಕ ರಚನೆಯಲ್ಲಿ ಮೇರು ಕೃತಿಯೆಂದೇ ಪರಿಗಣಿಸಲ್ಪಟ್ಟಿರುವ ಕೃತಿ ಮಹಾಭಾರತ ಎಂಬುದು ವ್ಯಾಸ ಭಾರತವನ್ನು ಆಧರಿಸಿ ರಚಿತವಾದಂತಹ ಕುಮಾರವ್ಯಾಸ ಭಾರತದಂತಹ ಕೃತಿಗಳು ಇದಕ್ಕೆ ಮುಖ್ಯ ಸಾಕ್ಷಿಯಾಗಿ ನಿಲ್ಲುತ್ತವೆ. ಮೌಖಿಕ ಪರಂಪರೆಯ ಹಿನ್ನಲೆಯಿಂದ ತಲೆಮಾರಿನಿಂದ ತಲೆಮಾರಿಗೆ ಗತಿಸಿದ ಘಟನೆಗಳನ್ನು ವರ್ಗಾಯಿಸುತ್ತಾ ಬಂದ ಜನಪದ ಸಾಹಿತ್ಯವೂ ಸಹ ಮಹಾಭಾರತ ಕಥೆಯನ್ನು ತನ್ನಲ್ಲಿ ಸೆರೆ ಹಿಡಿಯುತ್ತಾ ಹೋಯಿತು. ಕಥೆಯ ರೂಪದಲ್ಲೋ, ಹಾಡಿನ ರೂಪದಲ್ಲೋ ಜನಪದ ಸಾಹಿತ್ಯ ಶಿಷ್ಟ ಭಾರತ ಪರಂಪರೆಗಿಂತ ಭಿನ್ನವಾದಂತಹ ನೈಜ ವಾಸ್ತವ ಅಂಶಗಳನ್ನು ವಸ್ತುನಿಷ್ಟವಾಗಿ ಪ್ರತಿನಿಧಿಸುವಲ್ಲಿ ಸಫಲವಾಯಿತು. ಶಿಷ್ಟ ಸಾಹಿತ್ಯದ ರಚನಾಕಾರ ತನ್ನ ಆಶ್ರಯದಾತನನ್ನು ಮೆಚ್ಚಿಸುವ ಸಲುವಾಗಿ ಮತ್ತು ತಾನು ಕೃತಿ ರಚನೆ ಮಾಡುತ್ತಿರುವ ಕಾಲದ ಒತ್ತಡ, ಧರ್ಮ ಹಾಗೂ ಸಾಮಾಜಿಕ ಬಂಧನಗಳಿಗೆ ಒಳಗಾಗಿ ಸಾಹಿತ್ಯ ರಚನೆ ಮಾಡಿರುವ ಅಂಶಗಳು ಗೋಚರವಾಗುತ್ತವೆ. ಪ್ರಸ್ತುತ ವಿಷಯ ಮೌಖಿಕ ಪರಂಪರೆಯಿಂದ ಸಂಗ್ರಹಿತವಾದ ಜನಪದ ಮಹಾಭಾರತ ಹಾಗೂ ಶಿಷ್ಟ ಪರಂಪರೆಯ ಕುಮಾರವ್ಯಾಸ ಭಾರತದಲ್ಲಿನ ಪ್ರಮುಖ 'ಸ್ತ್ರೀ' ಪಾತ್ರವಾದ 'ದ್ರೌಪದಿ' ಪಾತ್ರವನ್ನು ಆಧರಿಸಿದೆ. ದ್ರೌಪದಿಯನ್ನು ಕಾವ್ಯದುದ್ದಕ್ಕೂ ಮೆರೆಸುವ ಜನಪದರ ಸ್ತ್ರೀಪರ ಕಾಳಜಿಯನ್ನು ಹಾಗೂ ಸ್ತ್ರೀ ಸಂವೇದನೆಯ ಧ್ವನಿಯಾಗಿ ದ್ರೌಪದಿಯನ್ನು ಪ್ರತಿಬಿಂಬಿಸಿರುವ ಕುಮಾರವ್ಯಾಸ ಭಾರತ, ಈ ಎರಡೂ ರಚನೆಗಳ ಸಾಮ್ಯತೆ ಮತ್ತು ಭಿನ್ನತೆಯನ್ನು ಕುರಿತಂತೆ ಅವಲೋಕಿಸಿ ವಿವರಿಸುವ ಪ್ರಯತ್ನವಾಗಿದೆ.

ಮಹಾಕಾವ್ಯವಾದ ಮಹಾಭಾರತ ಕೃತಿಯಲ್ಲಿನ ದ್ರೌಪದಿ ಪಾತ್ರವನ್ನು ಜನಪದ ರಚನೆ ಅಂದರೆ, ಮೌಖಿಕ ಪರಂಪರೆಯ ಅಡಿಯಲ್ಲಿ ಅವಲೋಕಿಸುವ ಉದ್ದೇಶದಿಂದ ಪೂರಕವಾಗಿ ಡಾ.ಪಿ.ಕೆ. ರಾಜಶೇಖರ್‌ರವರು ಬೆಟ್ಟದ ಬೀಡು ಸಿದ್ಧಶೆಟ್ಟಿ ಅವರಿಂದ ಮೌಖಿಕವಾಗಿ ಹಾಡಿಸಿ ಪ್ರಕಟಿಸಿರುವ ' ಜನಪದ ಮಹಾಭಾರತ' ಹಾಗೂ ಶಿಷ್ಟ ಸಾಹಿತ್ಯದ ಅಡಿಯಲ್ಲಿ ರಚನೆಯಾದ ಕುಮಾರವ್ಯಾಸ ಭಾರತ ಇಲ್ಲಿ ಮುಖ್ಯ ವಿಷಯವಾಗಿದೆ. ಶಿಷ್ಟ ಸಾಹಿತ್ಯದ ರಚನೆಗೆ ನಿರ್ದಿಷ್ಟ ಕೃತಿಕಾರನಿರುವಂತೆ ಜನಪದ ರಚನೆ ನಿಖರವಾಗಿ ಈತನಿಂದಲೇ ರಚನೆಯಾಯಿತು ಎಂದು ಹೇಳಲು ಸಾಧ್ಯವಿಲ್ಲ. ಬಾಯಿಂದ ಬಾಯಿಗೆ ಹಬ್ಬಿ ಹರಡಿದ ಮಹಾಭಾರತದ ಕಥಾನಕಗಳನ್ನು ಬರವಣಿಗೆಯಲ್ಲಿ ಹಿಡಿದಿಡುವ ಪ್ರಯತ್ನ ಜನಪದ ಮಹಾಭಾರತದ ರಚನಾಕಾರನದ್ದಾಗಿದೆ. ಇನ್ನು ಶಿಷ್ಟ ಸಾಹಿತ್ಯದ ಕುಮಾರವ್ಯಾಸ ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ 15ನೇ ಶತಮಾನದಲ್ಲಿ ಬಾಳಿ ಬದುಕಿದ ಈತ ವೈಷ್ಣವ ಭಕ್ತಿರೂಪದಲ್ಲಿ ಪುನರುತ್ಥಾನವಾದ ರಸಸ್ಪೂರ್ತಿ. ಕುಮಾರವ್ಯಾಸ ಬಿರುದಿನ ಗದುಗಿನ ನಾರಾಣಪ್ಪನ 'ಕುಮಾರವ್ಯಾಸ ಭಾರತ' ವ್ಯಾಸರನ್ನೇ ಹಿಂಬಾಲಿಸಿಕೊಂಡು ಹೊರಟಂತಿದ್ದರೂ ಕೆಲವು ಪರ್ವಗಳಲ್ಲಿ ತನ್ನ ದಾರಿಯನ್ನು ತಾನು ಹಿಡಿದುಕೊಂಡು ಹೋಗುತ್ತಾನೆ. ಅಲ್ಲದೇ ತಾನು ವ್ಯಾಸನ ಕುಮಾರ ಎಂಬ ನಿಕಟ ಸಂಬಂಧವನ್ನು ಹೊಂದುತ್ತಾನೆ. ಈತನ ಕವಿತಾ ಶಕ್ತಿಗೆ ಆಧಾರವಾಗಿ ಕುಮಾರವ್ಯಾಸ ಭಾರತದ ಪಾತ್ರಗಳಲ್ಲಿ ಅದ್ಭುತ ಶಕ್ತಿಯ ಸಂಚಾರವನ್ನು ಕಾಣಬಹುದು. ಇಂತಹ ಪ್ರಮುಖ ಪಾತ್ರಗಳಲ್ಲಿ 'ದ್ರೌಪದಿ'ಯ ಪಾತ್ರ ಇಂದಿನ ಚರ್ಚೆಯ ಮುಖ್ಯ ವಿಷಯ ವಸ್ತುವಾಗಿದೆ.

ದ್ರೌಪದಿಯ ಜನನ :– ಮಹಾಭಾರತದ ಸ್ತ್ರೀ ಎಂದಾಕ್ಷಣ ನೆನಪಾಗುವವಳು ದ್ರೌಪದಿ. ಕುಮಾರವ್ಯಾಸನಲ್ಲಿ ಮೂಡಿದ ಅವಳ ಚಿತ್ರ ವೀರಕ್ಕೂ, ಕರುಣಕ್ಕೂ, ಶೃಂಗಾರಕ್ಕೂ ಬರೆದ ವ್ಯಾಖ್ಯಾನವಾಗಿದೆ. ದ್ರೌಪದಿ ಪಾಂಚಾಲ ರಾಜ ದ್ರುಪದನ ಪುತ್ರಿ ದ್ರುಪದನು ಮಾಡಿದ ಪುತ್ರಕಾಮೇಷ್ಠಿಯಾಗದ ಯಜ್ಞಕುಂಡದಿಂದ ಜನಿಸಿದವಳೇ ದ್ರೌಪದಿ. ಶಿಷ್ಯರ ಮೂಲಕ ತನ್ನನ್ನು ಭಂಗಿಸಿದ ದ್ರೋಣನನ್ನು ಆತನ ಶಿಷ್ಯನಿಂದಲೇ ಭಂಗಿಸಿ ಅರ್ಜುನನನ್ನು ಅಳಿಯನ್ನನ್ನಾಗಿ ಮಾಡಿಕೊಳ್ಳುವುದು ದ್ರುಪದನ ಉದ್ದೇಶವಾಗಿರುವಂತೆ ತೋರುತ್ತದೆ. 'ಪಾರ್ಥಂಗೆ ರಾಣಿಯೀ ಮಗಳು' ಎಂಬ ನಿರ್ಧಾರವನ್ನು ಮಾಡುತ್ತಾನೆ. ಈಕೆಯ ಹುಟ್ಟಿನ ಹಾಗೂ ಬದುಕಿನ ದಾರಿಯನ್ನು ತಂದೆಯಾದ ದ್ರುಪದನೇ ನಿರ್ಧರಿಸುವುದನ್ನು ಕಾಣಬಹುದು. ಆದ್ದರಿಂದ ದ್ರೌಪದಿಯ ಹುಟ್ಟೂ ಕೂಡ ಒಂದು ರೀತಿಯಲ್ಲಿ ಮಾತ್ಸರ್ಯ ಮೂಲವಾದುದು, ಪಾಂಡವರು ಮತ್ತು ಕೌರವರ ದಾಯಾದಿ ಮಾತ್ಸರ್ಯದ ನಡುವೆ ದ್ರೌಪದಿಯ ಪ್ರವೇಶವಾಗುತ್ತದೆ, ಅಂದರೆ ತನ್ನ ಹುಟ್ಟಿನೊಡನೆ ಮಾತ್ಸರ್ಯ ಮೂಲವಾದ

ಉದ್ದೇಶವೊಂದು ಅವಳಿಗೆ ಕಟ್ಟುಬಿದ್ದಿರುವಂತೆ ತೋರುತ್ತದೆ. ಹೀಗೆ ದ್ರೌಪದಿಯ ಜನನಕ್ಕೆ ಕಾರಣವೇನೆಂಬುದ್ದನ್ನು ಕುಮಾರವ್ಯಾಸ ಬಹು ಮನೋಜ್ಞವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾನೆ. ಆದರೆ ಜನಪದರ ಪ್ರಕಾರ, ದ್ರೌಪದಿ ಆದಿಶಕ್ತಿ ಪಾರ್ವತಿಯೇ ಎಂಬುದು ನೈಜ ಅಂಶ. ಇದರ ಪೂರ್ವಕಥೆಯನ್ನು ನೋಡಿದಾಗ ಶಿವನಿಂದ ವರವನ್ನು ಪಡೆದಂತಹ ತಾಮ್ರಕೇಶಿಯು ಶಿವನನ್ನು ಹುಡುಕುತ್ತಾ ಕೈಲಾಸಕ್ಕೆ ಬರುತ್ತಾನೆ. ಕೈಲಾಸದಲ್ಲಿದ್ದ ಪಾರ್ವತಿಯು ಪತಿಯನ್ನು ಕಾಣದೆ ಧ್ಯಾನಾಸಕ್ತಳಾದ ಸಂಧರ್ಭದಲ್ಲಿ ಆಕೆಯ ಸೌಂದರ್ಯಕ್ಕೆ ಮಾರುಹೋಗಿ ತಾಮ್ರಕೇಶಿಯು ಆಕೆಯನ್ನು ತಬ್ಬಿಕೊಂಡಾಗ ಉಗ್ರರೂಪವನ್ನು ತಾಳಿದ ಪಾರ್ವತಿಯು ಕೋಪಾಗ್ನಿಯಿಂದ ತಾಮ್ರಕೇಶಿಯನ್ನು ಸಂಹಾರ ಮಾಡುತ್ತಾಳೆ. ಅಲ್ಲದೇ ಶಿವನು ಪಾರ್ವತಿಯ ಹತ್ತಿರ ಬರಲು ಹೊರಟಾಗ ಪಾರ್ವತಿಯು ಶಿವನನ್ನು ತಡೆದು ತಾಮ್ರಕೇಶಿಯ ಸ್ಪರ್ಶದಿಂದ ತಾನು ಮಲೀನಳಾಗಿರುವುದಾಗಿ ಅಗ್ನಿಯನ್ನು ಪ್ರವೇಶಿಸಿ ಶುದ್ಧಳಾಗಿ ಬರುತ್ತೇನೆಂದು ಹೇಳುತ್ತಾಳೆ. ಮುಂದೆ ಪಾರ್ವತಿಯು ದ್ರುಪದನ ಮಗಳಾಗಿ ಅಗ್ನಿಯಿಂದ ಜನಿಸುತ್ತಾಳೆ. ಇಲ್ಲಿ ಜನಪದರು ದ್ರೌಪದಿಯ ಜನನಕ್ಕೆ ನೀಡಿದ ಕಾರಣ ಸ್ವಾರಸ್ಯಕರವಾಗಿದ್ದು, ಆಕೆ ಸಾಕ್ಷಾತ್ ದೈವ ಸ್ವರೂಪಿ ಎಂಬುದನ್ನು ಒತ್ತಿ ಹೇಳುತ್ತದೆ.

ದ್ರೌಪದಿಯ ಬಹುಪತಿತ್ವ :– ಎಲ್ಲರಿಗೂ ತಿಳಿದಿರುವಂತೆ ದ್ರೌಪದಿ ಪಂಚವಲ್ಲಭೆ. ಪಂಚ ಪಾಂಡವರಾದ ಧರ್ಮರಾಯ, ಭೀಮ, ಅರ್ಜುನ, ನಕುಲ–ಸಹದೇವರ ಪತ್ನಿ. ದ್ರೌಪದಿಯು ಅರ್ಜುನನ ಸತಿಯಾಗಬೇಕೆಂದು ದ್ರುಪದ ಬಯಸುತ್ತಾನೆ. ಸ್ವಯಂವರದಲ್ಲಿ ಪಂದ್ಯವನ್ನು ಗೆದ್ದವನು ಅರ್ಜನ. ಆದರೆ ಕುಂತಿಯ ಮಾತಿಗೆ ಕಟ್ಟುಬಿದ್ದು ಮುಂದೆ ದ್ರೌಪದಿ ಪಂಚಪಾಂಡವರ ಸತಿಯಾಗುತ್ತಾಳೆ. ಬಹುಪತಿತ್ವ ವ್ಯವಸ್ಥೆಯೊಂದು ಮೊಟ್ಟಮೊದಲು ಆಚರಣೆಗೆ ಬಂದ ಸಂಧರ್ಭವದು. ರೂಢಿಯಲ್ಲಿದ್ದ ನಿಯಮಗಳನ್ನು ಉಲ್ಲಂಘಿಸಿ ಹೊಸದಾಗಿ ನಿಯಮಗಳನ್ನು ನಿರ್ಮಿಸಿಕೊಳ್ಳಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ದ್ರೌಪದಿ ಒಪ್ಪಿಕೊಂಡದ್ದು ಸೋದರ ಬಹುಪತಿತ್ವ. ಒಂದು ರೀತಿಯಲ್ಲಿ ಇದು ದ್ರುಪದನ ಅಪೇಕ್ಷೆಗೆ ಮೀರಿದ, ದ್ರೌಪದಿಗೆ ಅನಿರೀಕ್ಷಿತವಾಗಿ ಬಂದೊದಗಿದ ಸಂಗತಿ. ಇದು ಅಪೇಕ್ಷಣೀಯವೋ ಅಥವಾ ಅನಪೇಕ್ಷಣೀಯವೋ ತನಗೆ ಪ್ರಾಪ್ತವಾದ ಈ ಪರಿಸ್ಥಿತಿಯನ್ನು ಜೀವನದುದ್ದಕ್ಕೂ ಸಮರ್ಥವಾಗಿ ನಿರ್ವಹಿಸುವುದನ್ನು ಕಾಣಬಹುದು. ದ್ರೌಪದಿಯು ಪಂಚಪತಿತ್ವದ ತೊಡಕನ್ನು ಕುಮಾರವ್ಯಾಸ ಒಂದು ಪುನರ್ಜನ್ಮದ ಕಥೆಯ ಮೂಲಕ ಪರಿಹರಿಸಿಕೊಂಡಿದ್ದಾನೆ. ದ್ರೌಪದಿ ಹಿಂದಿನ ಜನ್ಮದಲ್ಲಿ ಕುಷ್ಟರೋಗ ಪೀಡಿತನಾದ ಮುನಿಯ ಪತ್ನಿಯಾಗಿದ್ದು ಆಕೆಯ ಪತಿಭಕ್ತಿಗೆ ಮೆಚ್ಚಿ ಆಕೆಗೆ ಬೇಕಾದ ವರವನ್ನು ಕೇಳುವಂತೆ ಮುನಿ ಹೇಳಿದಾಗ ಅವಳು ದಿವ್ಯರೂಪವನ್ನು ಧರಿಸಿ ತನ್ನನ್ನು ಕೂಡುವಂತೆ ಕೇಳುತ್ತಾಳೆ. ಅದರಂತೆ ಮುನಿ ಅವಳೊಂದಿಗೆ ಬೆರೆಯುತ್ತಾನೆ. ಇದರಿಂದ ತಣಿಯದ ಪತ್ನಿ ಪುನಃ ಪತಿಯ ಸೆರಗು ಹಿಡಿದಾಗ ಮುನಿ ನೀನು ಮರುಜನ್ಮದಲ್ಲಿ ಕ್ಷತ್ರಿಯ ಹೆಣ್ಣಾಗಿ ಹುಟ್ಟು ಎಂದು ಶಪಿಸುತ್ತಾನೆ. ನಂತರ ಆಕೆ ಶಿವನನ್ನು ಕುರಿತು ಘೋರ ತಪಸ್ಸು ಮಾಡಿ ಐದು ಬಾರಿ ಪತಿ ಬೇಕೆಂದು ಬೇಡುತ್ತಾಳೆ. ಈ ಕಾರಣದಿಂದಾಗಿ ಮುಂದೆ ದ್ರೌಪದಿಯಾಗಿ ಜನಿಸಿ ಐದು ಜನರ ಸತಿಯಾಗುತ್ತಾಳೆ. ಸ್ವತಃ ಶಂಕರನಿಂದ ಅವಳಿಗೆ ಪಂಚಪತಿತ್ವದ ವರ ಸಿದ್ಧಿಸಿದೆ. ಎಂದು ದ್ರುಪದನಿಗೆ ವೇದವ್ಯಾಸರು ಈ ವೃತ್ತಾಂತವನ್ನು ಹೇಳಿ ಅವನನ್ನು ವಿವಾಹಕ್ಕೆ ಒಪ್ಪಿಸುತ್ತಾರೆ.

ಜನಪದ ಮಹಾಭಾರತದಲ್ಲಿ ದ್ರೌಪದಿಯ ' ಪಂಚಪತಿತ್ವ' ಸಮಸ್ಯೆಯಾಗಿ ಕಾಡಿದೆ. ಇದನ್ನು ಬಗೆಹರಿಸಲು ಜನಪದರು ನೀಡುವ ಕಾರಣ ವಿಭಿನ್ನವಾಗಿದೆ. ತಾಮ್ರಕೇಶಿಯಿಂದ ತಪ್ಪಿಸಿಕೊಂಡ ಶಿವನು ಕೈಲಾಸದಲ್ಲಿ ಕಾಣದಿದ್ದಾಗ ಕುಪಿತಳಾದ ಪಾರ್ವತಿಯು ಗೋಳಾಡುತ್ತಿರುವಾಗ ಬ್ರಹ್ಮ, ವಿಷ್ಣು ಪ್ರತ್ಯಕ್ಷರಾಗಿ ಕಾರಣವೇನೆಂದು ಕೇಳಿದಾಗ ಪಾರ್ವತಿಯು 'ಪತಿಭಿಕ್ಷಾಂದೇಹಿ' ಎಂದು ಐದು ಸಾರಿ ಪತಿಭಿಕ್ಷೆ ಬೇಕಂತ ಬೇಡಿಕೊಳ್ಳುತ್ತಾಳೆ. ಆಗ ಬ್ರಹ್ಮ, ವಿಷ್ಣು "ನೀನು ಐದು ಸಲ ಪತಿ ಬೇಕು ಅಂತ ಕೇಳಿದೆ. ಆದ್ದರಿಂದ ನೀನು ಭೂಮೀಲಿ ಅಗ್ಗುನೀಲಿ ಹುಟ್ಟಿ ಶಿವನ ಅಂಶಿಕರಾದ ಐದು ಜನ ಗಂಡಂದಿರ ಪಡೆದು ನಿನ್ನ ಶತ್ರುಗಳ ನಾಶ ಮಾಡಿ ಬಾ ತಂಗಿ" ಎಂದು ಹರಸಿದ್ದರಿಂದ ಮುಂದೆ ದ್ರೌಪದಿಯು ಅಗ್ನಿಯಿಂದ ಜನಿಸಿ, ಪಾಂಡವರ ಅರ್ಧಾಂಗಿಯಾಗುತ್ತಾಳೆ. ಮಾನವ ಶಾಸ್ತ್ರೀಯ ನೆಲೆ ಇರುವ ಇದನ್ನು ದೈವಿಕಗೊಳಿಸುವುದರ ಮೂಲಕ ಪರಿಹಾರ ಕಂಡುಕೊಳ್ಳಲು ಜನಪದರು ಇಲ್ಲಿ ಪ್ರಯತ್ನಿಸಿದ್ದಾರೆ. ಅವರ ಪ್ರಕಾರ ದ್ರೌಪದಿ ಆದಿಪರಾಶಕ್ತಿ, ಪಾಂಡವರು ಮಾನವ ರೂಪದಲ್ಲಿರುವ ಶಿವನ ಅಂಶಗಳು. ಈ ವ್ಯವಸ್ಥೆ ಪಾಪವೂ ಅಲ್ಲ, ಪುಣ್ಯವೂ ಅಲ್ಲ, ವಿಧಿ ಬರಹ, ಜನ್ಮಾಂತರ ಕರ್ಮ ಎಂಬುದು ಜನಪದರ ನಿಲುವಾಗಿದೆ. ಅಲ್ಲದೆ ಪಂಚಪತಿತ್ವ ಸಮಸ್ಯೆಯನ್ನು ಮಾನವ ಕೇಂದ್ರಿತ ನೆಲೆಯಲ್ಲಿಯೇ ವ್ಯಾವಹರಿಕವೆನ್ನಬಹುದಾದ ಒಪ್ಪಂದದ ಮೂಲಕವೆ ಬಗೆಹರಿಸಿಕೊಂಡಿರುವುದನ್ನು ನೋಡುತ್ತೇವೆ.

ದ್ಯೂತ ಪ್ರಸಂಗದಲ್ಲಿ ದ್ರೌಪದಿ :– ದ್ರೌಪದಿಯ ಪಾತ್ರ ಇಡೀ ಮಹಾಭಾರತದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವುದು ಸಭಾ ಪರ್ವದಲ್ಲಿ. ಸಭಾ ಪರ್ವದಲ್ಲಿನ ವಸ್ತ್ರಾಪಹರಣ ಸಂದರ್ಭವನ್ನು ಕುಮಾರವ್ಯಾಸ ಕಣ್ಣಿಗೆ ಕಟ್ಟುವಂತೆ ಬಹು ಮಾರ್ಮಿಕವಾಗಿ ಚಿತ್ರಿಸಿರುವುದನ್ನು ಗಮನಿಸಬಹುದಾಗಿದೆ. ದ್ಯೂತದ ದಾಸಕ್ಕೆ ಒಳಗಾದ ಯುಧಿಷ್ಠಿರ ದ್ರೌಪದಿಯನ್ನು ಸೋತಿದ್ದಾನೆ. ಕೌರವನ ಆದೇಶದಂತೆ ದ್ರೌಪದಿಯ ಅಂತಃಪುರಕ್ಕೆ ನುಗ್ಗಿ ರಾಹು ಚಂದ್ರನನ್ನು ಹಿಡಿಯುವಂತೆ ದುಶ್ಯಾಸನ ಆಕೆಯನ್ನು ಆಕ್ರಮಿಸುತ್ತಾನೆ. ದ್ರೌಪದಿ ನಾನು ಈಗ ಪುಷ್ಪವತಿಯಾಗಿದ್ದೇನೆ. ಇಂತಹ ಸ್ಥಿತಿಯಲ್ಲಿ ರಾಜಸಭೆಗೆ ಬರುವುದು ಉಚಿತವಲ್ಲ ಎಂದಾಗ ದುಶ್ಯಾಸನ 'ನೀ ಪುಷ್ಪವತಿಯಾದಲ್ಲಿ ಫಲವತಿಯಾಗು ನಡೆ' ಎಂದು ಸಭೆಗೆ ಎಳೆದು ತರುತ್ತಾನೆ. ಕರ್ಣ ದ್ರೌಪದಿ ಐದು ಜನ ಪುರುಷರ ಸಂಪರ್ಕದಲ್ಲಿರುವುದರಿಂದ ಅವಳನ್ನು ವೇಶ್ಯೆ ಎಂದು ಕರೆಯುತ್ತಾನೆ. ತನಗೆ ಒಬ್ಬಿಬ್ಬರಲ್ಲ, ಐವರು ಪತಿಗಳಿದ್ದಾಗ್ಯೂ ಈ ಸ್ಥಿತಿ ಎದುರಾಯಿತಲ್ಲಾ ಎಂದು ಮರಗುತ್ತಾಳೆ. ಪತಿಯರು ಅಸಹಾಯಕತೆಯಿಂದ ಕುಳಿತಿದ್ದಾಗ 'ನೀವೇನೂ ಗಂಡರೋ, ಇಲ್ಲ ಷಂಡರೋ' ಎಂದು ರೋಷ ದ್ವೇಷಗಳಿಂದ ಪ್ರಶ್ನಿಸುತ್ತಾಳೆ. ನಪುಂಸಕರಂತೆ ಕುಳಿತಿದ್ದ ಪಾಂಡವರನ್ನು ಕುರಿತು ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು, 'ಹಿರಿಯರಿಲ್ಲದ ಈ ಸಭೆಯಲ್ಲಿ ಹೇಡಿಗಳಂತೆ ಕುಳಿತಿರುವ ಎಲ್ಲರಿಗೂ ಧಿಕ್ಕಾರವಿರಲಿ' ಎಂದು ಸಭೆಯನ್ನುದ್ದೇಶಿಸಿ ಆಡುವ ಮಾತುಗಳು ಒಮ್ಮೆಲೆ ಸಿಡಿಲಿನಂತೆ ಎರಗಿ ಬಂದಂತೆ ಕುಮಾರವ್ಯಾಸ

ಸ್ತ್ರೀ ತನ್ನ ಮಾನಕ್ಕೆ ಹಾನಿಯಾದಾಗ ಪ್ರಶ್ನಿಸದೇ ಇರಲಾರಳು ಹಾಗೂ ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಾಳೆ ಎಂದು ಪರೋಕ್ಷವಾಗಿ ವಿವರಿಸಿದಂತಿದೆ.

ವ್ಯಾಸ ಭಾರತದಲ್ಲಿ ಇರುವಂತೆಯೇ ಜನಪದ ಮಹಾಭಾರತದಲ್ಲಿಯೂ ಸಹ ಎರಡು ಬಾರಿ ಜೂಜಿನ ಪ್ರಸಂಗಗಳು ಬರುತ್ತವೆ. ಎರಡು ಸಾರಿಯೂ ಪಾಂಡವರು ಸೋಲುತ್ತಾರೆ. ದ್ರೌಪದಿ ಜೂಜಾಡುವ ಮೂರನೇ ಪ್ರಸಂಗ ಇಲ್ಲಿನ ವೈಶಿಷ್ಟ್ಯವಾಗಿದೆ. ಧರ್ಮರಾಯ ಜೂಜಿನ ಆಮಿಷಕ್ಕೆ ಒಳಗಾಗಿ ಕೌರವರೊಂದಿಗೆ ಜೂಜಿನಲ್ಲಿ ಸೋಲುತ್ತಾನೆ. ಎಲ್ಲವನ್ನು ಕಳೆದುಕೊಂಡ ಧರ್ಮರಾಯ ಮುಂದೆ ಜೂಜಿಗೆ ಕಟ್ಟಲು ತನ್ನ ಬಳಿ ಏನು ಇಲ್ಲವೆಂದು ಹೇಳುತ್ತಾನೆ. ಆಗ ಶಕುನಿಯು ದ್ರೌಪದಿಯನ್ನು ಪಣವಾಗಿಟ್ಟು ಗೆದ್ದುಕೊಳ್ಳಬಹುದಲ್ಲಾ ಎನ್ನುತ್ತಾನೆ. ಧರ್ಮರಾಯ ದ್ರೌಪದಿಯನ್ನು ಪಣವಾಗಿಟ್ಟು ಸೋಲುತ್ತಾನೆ. ಆಗ ದುರ್ಯೋಧನ ದುಷ್ಟನಾದ ದುಶ್ಯಾಸನನನ್ನು ಕುರಿತು ಪಾಂಡವರು ಹಾಗೂ ದ್ರೌಪದಿ ಕೌರವರ ಸೇವಕರು ಆದ್ದರಿಂದ ಸಭಾ ಭವನಕ್ಕೆ ಕರೆತರುವಂತೆ ಹೇಳುತ್ತಾನೆ. ಹೊರಡಲು ಸಿದ್ಧರಾದ ಪಾಂಡವರು ದ್ರೌಪದಿಯನ್ನು ಕರೆದಾಗ ' ನೀವು ಸೋತ ಮೇಲೆ ನನ್ನನ್ನು ಜೂಜಿಗೆ ಈಡು ಕಟ್ಟಿದ್ದೀರಿ, ಆ ಕಾರಣದಿಂದ ನಾನು ಸ್ವತಂತ್ರಳು. ನಾನು ಮಾತ್ರ ಕೌರವರ ದರ್ಬಾರಿಗೆ ಬರೋಳಲ್ಲ' ಎನ್ನುತ್ತಾಳೆ. ಜನಪದ ಮಹಾಭಾರತದಲ್ಲಿ ದ್ಯೂತ ಪ್ರಸಂಗಕ್ಕೆ ಸಂಬಂಧಿಸಿದಂತೆ ಬಹುಮುಖ್ಯವಾಗಿ ಚರ್ಚಿಸಬೇಕಾದ ವಿಷಯ ದ್ರೌಪದಿ ಹೂಡಿದ ಈ ವಾದವಾಗಿದೆ. ತಾನು ಸ್ವತಂತ್ರಳು ಎಂದು ವಾದಿಸುತ್ತಿದ್ದ ಆಕೆಯನ್ನು ಕುರಿತು ಕೌರವ 'ರಾಜ್ಯವನ್ನು ಕಳಕೊಂಡ, ಪರದೇಸಿಗಳಿಗೆ ಯಾವ ನಾರಿರೂ ಸತಿಯರಲ್ಲ, ಅಂತ ನಾರಿಗೆ ಅವರು ಗಂಡರಲ್ಲ, ರಾಜ್ಯವಾಳುವ ರಾಜನೇ ಗಂಡ' ಎಂದು ಹೇಳುತ್ತಾನೆ. ಜನಪದ ಮಹಾಕಾವ್ಯದಲ್ಲಿ ಸ್ತ್ರೀ ಸ್ವಾತಂತ್ರ್ಯದ ಅಧಿಕೃತ ಪ್ರಸ್ತಾಪ ಇಷ್ಟಕ್ಕೆ ಮುಗಿಯಲಿಲ್ಲ. ಬದಲಾಗಿ ದ್ರೌಪದಿ ಒಂದು ಹೊಸ ಸವಾಲನ್ನು ಎದುರಿಸಬೇಕಾದ ಸಂದರ್ಭ ಬರುತ್ತದೆ. ದ್ರೌಪದಿ ತಾನು ಸ್ವತಂತ್ರಳು, ಅವಳು ಸೋತಿಲ್ಲ ಎನ್ನುವುದಾದರೆ ಅವಳೆ ಪಗಡೆಯಾಡಿ ತನ್ನ ಗಂಡಂದಿರನ್ನು ಗೆದ್ದುಕೊಳ್ಳಲಿ ಎಂಬ ಸವಾಲನ್ನು ಎದುರಿಸಬೇಕಾಗುತ್ತದೆ. ಈ ಪಂದ್ಯದಲ್ಲಿ ದ್ರೌಪದಿ ಪಾಂಡವರನ್ನು ಗೆದ್ದುಕೊಳ್ಳುತ್ತಾಳೆ. ದ್ರೌಪದಿಯ ವಿಜಯ ಸ್ತ್ರೀ ಶಕ್ತಿಯ ವಿಜಯವಾಗಿದೆ. ಧರ್ಮರಾಯ ತಾನು ಸೋತಮೇಲೆ ತನ್ನನ್ನು ಪಣ ಒಡ್ಡಿ ಸೋಲುವುದರಲ್ಲಿ ಅವನಿಗೆ ನೈತಿಕ ಹಕ್ಕಿಲ್ಲ ಎಂಬ ದ್ರೌಪದಿಯ ಪ್ರಶ್ನೆಯು ಮಹಿಳಾ ಪರ ಆಲೋಚನೆಯನ್ನು ಒತ್ತಿ ಹೇಳಿದಂತಿದೆ. ಇಲ್ಲಿ ಜನಪದರು ಸ್ತ್ರೀಗೆ ನೀಡಿದಂತಹ ಸ್ವತಂತ್ರ ಹಾಗೂ ಅವಳ ಪರವಾಗಿ ನಿಂತು ನ್ಯಾಯಸಮ್ಮತವಾದಂತ ತೀರ್ಪನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆಂದು ಜನಪದ ಮಹಾಭಾರತದಲ್ಲಿನ ದ್ರೌಪದಿ ಪಾತ್ರ ಪ್ರತಿನಿಧಿಸುತ್ತದೆ.

ಮಹಾಭಾರತ ಯುದ್ಧದಲ್ಲಿ ದ್ರೌಪದಿ :- ಕುಮಾರವ್ಯಾಸ ಭಾರತದಲ್ಲಿ ದ್ರೌಪದಿ ಮಹಾಭಾರತ ಯುದ್ಧದಲ್ಲಿ ನೇರವಾಗಿ ಭಾಗವಹಿಸದಿದ್ದರೂ ಪರೋಕ್ಷವಾಗಿ ಪಾಂಡವರ ಹಿಂದೆ ನಿಂತು ಕೌರವರ ನಾಶ ಮಾಡುವುದನ್ನು ಗಮನಿಸಬಹುದಾಗಿದೆ. ಮಹಾಭಾರತ ಯುದ್ಧ ಸಂದರ್ಭದಲ್ಲಿ ಸಂಧಾನದಂತಹ ಮಾತುಗಳು ಬಂದಾಗ ಸಾವು ಸಂಭವಿಸಿದರೂ ಸಂಧಾನ ಸರಿಯಲ್ಲ ಎಂದು ಹೇಳುವ ಆಕೆಯ ದಿಟ್ಟತನದ ಉತ್ತರ ನಿಜಕ್ಕೂ ಆತ್ಮಸ್ಥೈರ್ಯವನ್ನು ಹೇಳುವಂತದಾಗಿದೆ. ಕುಮಾರವ್ಯಾಸ ಪರರ ಸತಿಯೊಂದಿಗೆ ಅನುಚಿತವಾಗಿ ವರ್ತಿಸಿದರೆ ವಿನಾಶದ ಹಾದಿಯನ್ನು ತುಳಿಯಬೇಕಾಗುತ್ತದೆ ಎಂಬ ಎಚ್ಚರಿಕೆಯ ಮಾತುಗಳನ್ನು ದ್ರೌಪದಿಯ ಮೂಲಕ ಪುರುಷ ಸಮಾಜಕ್ಕೆ ಹೇಳಿದಂತಿದೆ.

ಮಹಾಭಾರತ ಕುರುಕ್ಷೇತ್ರ ಯುದ್ಧಕ್ಕೆ ದ್ರೌಪದಿ ಮೂಲ ಕಾರಣಳೆಂದು ಬಹುಜನರ ಅಭಿಪ್ರಾಯ. ಆದರೆ ಮಹಾಭಾರತ ಯುದ್ಧದಲ್ಲಿ ಸ್ವತಃ ದ್ರೌಪದಿಯೇ ಆದಿಶಕ್ತಿಯಾಗಿ ಹೋರಾಡಿದಳೆಂಬ ಕಲ್ಪನೆ ಜನಪದರಲ್ಲಿದೆ. ಜನಪದ ಮಹಾಭಾರತದಲ್ಲಿ ಇದರ ಪ್ರಸ್ತಾಪವನ್ನು ಮಾಡಲಾಗಿದ್ದು, ಮಹಾಭಾರತ ಯುದ್ಧದಲ್ಲಿನ ಗೆಲುವಿಗೆ ಮೂಲ ಕಾರಣ ಭೀಮ, ಅರ್ಜುನರೆಂಬ ಪರಿಕಲ್ಪನೆಯನ್ನು ಅಳಿಸಿಹಾಕಿದ್ದು ದ್ರೌಪದಿಯ ಪಾತ್ರ. ಮಹಾಭಾರತ ಯುದ್ಧದಲ್ಲಿ ನಿಜವಾಗಿ ಹೋರಾಡಿದವರು ಯಾರು? ಯಾರಿಂದ ಗೆಲುವು ಸಾಧ್ಯವಾಯಿತು? ಎಂಬುದನ್ನು ತನಿಖೆ ಮಾಡಿ ಅಂತಿಮ ತೀರ್ಪು ನೀಡುವ ಕೆಲಸವನ್ನು ಭದ್ರಬಾಹುವಿಗೆ ವಹಿಸಿಕೊಡಲಾಯಿತು. ಏಕೆಂದರೆ ಈ ಬಿಕ್ಕಟಿನ ಪರಿಹಾರಕ್ಕೆ ಇದ್ದುದು ಭದ್ರಬಾಹುವಿನ ತೀರ್ಮಾನ ಪರ್ಯಾಯವೊಂದೆ. ಆದ್ದರಿಂದ ಇಡೀ ಮಹಾಭಾರತ ಯುದ್ಧವನ್ನು ವೀಕ್ಷಿಸಿದ ಭದ್ರಬಾಹುವನ್ನು ಏಕಸದಸ್ಯ ಆಯೋಗವಾಗಿ ಕೃಷ್ಣ ನೇಮಕ ಮಾಡಿದ. ಭದ್ರಬಾಹು ನೀಡಿದ ವರದಿಯು ಕುರುಕ್ಷೇತ್ರ ಯುದ್ಧದ ದಿಕ್ಕನ್ನೇ ಬದಲಾಯಿಸಿತು. "ಮಹಾಕಾಳಿ ದ್ರೌಪದಿ ದೇವಿಯು ಯುದ್ಧ ಮಾಡುತ್ತಿದ್ದಾಗ ತ್ರಿಮೂರ್ತಿಗಳಾದಿಯಾಗಿ ದೇವತೆಗಳು ಅವಳ ಶರೀರದಲ್ಲಿ ಲಯವಾಗುತ್ತಿದ್ದರು. ಒಂದೊಂದು ದಿನಕ್ಕೆ ಒಂದೊಂದು ಅಕ್ಷೋಹಿಣಿ ಸೈನ್ಯ ಅವಳಿಂದ ನಾಶವಾಗುತ್ತಿತ್ತು. ಪಾಂಡವರು ಯುದ್ಧ ಮಾಡಿದರೂ ಸಹ ಮಾಡಿದಂತಿರಲಿಲ್ಲ. ಕೃಷ್ಣನೂ ಸಹ ಅವಳೆದುರು ಬೊಂಬೆಯಾಗಿ ನಿಂತಿದ್ದ. ಆದಿ ಪರಾಶಕ್ತಿಯಾದ ದ್ರೌಪದಿಯೇ ಯುದ್ಧವನ್ನು ಗೆದ್ದವಳು" ಎಂದು ಭದ್ರಬಾಹು ವಿವರಿಸುತ್ತಾನೆ. ಜನಪದ ಕಲ್ಪನೆಯಲ್ಲಿ ದ್ರೌಪದಿ ಆದಿಶಕ್ತಿ . ದುಷ್ಟಶಕ್ತಿಯ ನಾಶಕ್ಕಾಗಿ ಅವತರಿಸಿದ ಆಕೆ ಆದಿಯಿಂದ ಅಂತ್ಯದವರೆಗೂ 'ದೈವತ್ವ'ದೊಂದಿಗೆ ಪ್ರತಿನಿಧಿಸುತ್ತಾ ಹೋಗಿರುವುದನ್ನು ಕಾಣುತ್ತೇವೆ.

ಒಟ್ಟಾರೆಯಾಗಿ ಕುಮಾರವ್ಯಾಸನಂತಹ ಶಿಷ್ಟ ರಚನಾಕಾರ ಹಾಗೂ ಮೌಖಿಕ ಪರಂಪರೆಯ ಜನಪದ ಮಹಾಭಾರತದಂತಹ ರಚನೆಗಳು ದ್ರೌಪದಿಯ ನೋವು- ನಲಿವು, ತುಡಿತ -ಮಿಡಿತಗಳಿಗೆ ಸ್ಪಂದಿಸಿ ಧ್ವನಿ ಎತ್ತುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ, ಅಲ್ಲದೆ 'ದ್ರೌಪದಿ' ಪಾತ್ರಕ್ಕೆ ನ್ಯಾಯವನ್ನು ಒದಗಿಸುವಂತಹ ಹಾಗೂ ಪುರುಷ ಪ್ರಾಬಲ್ಯದ ಸಂದರ್ಭದಲ್ಲಿ ಅನ್ಯಾಯವನ್ನು ಎದುರಿಸಿ ಪ್ರಶ್ನಿಸುವಂತಹ, ಸ್ವತಂತ್ರಕ್ಕಾಗಿ ಹಂಬಲಿಸುವ ಮನಸ್ಥಿತಿಯನ್ನು, ಆತ್ಮಸ್ಥೈರ್ಯವನ್ನು ಸ್ತ್ರೀಯಲ್ಲಿ ತುಂಬುವ ಕಾರ್ಯವನ್ನು ಮಾಡಿವೆ. ತನ್ನ ಅಸ್ತಿತ್ವ ಪಾವಿತ್ರ್ಯತೆಗೆ ಧಕ್ಕೆ ಉಂಟಾದಾಗ ಆಕೆ ಸಮಾಜ ವ್ಯವಸ್ಥೆ ವಿರುದ್ಧ ಬಡಿದೇಳುವುದಾಗಿ ಜನಪದ ಮಹಾಭಾರತ ಹಾಗೂ ಕುಮಾರವ್ಯಾಸ ಭಾರತ ಕೃತಿಗಳು ಸ್ತ್ರೀಪರ ಕಾಳಜಿಯನ್ನು ನಿದರ್ಶನದ ಮೂಲಕ ತೋರಿಸಿರುವುದನ್ನು ಕಾಣುತ್ತೇವೆ.

ಪರಾಮರ್ಶನ ಗ್ರಂಥಗಳು

1. ಪಿ.ಕೆ.ರಾಜಶೇಖರ, ಜನಪದ ಮಹಾಭಾರತ, ಹೊನ್ನಾರು ಜನಪದ ಗಾಯಕರು, ಮಾನಸ ಗಂಗೋತ್ರಿ, ಮೈಸೂರು, 2004.

2. ಎಸ್.ವಿ. ಪ್ರಭಾವತಿ, ಕನ್ನಡ ಸಾಹಿತ್ಯದಲ್ಲಿ ದ್ರೌಪದಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1992.

3. ಕುವೆಂಪು ಮತ್ತು ಮಾಸ್ತಿ (ಸಂ), ಕರ್ಣಾಟ ಭಾರತ ಕಥಾಮಂಜರಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974.

4. ಹೆಗಡೆ ಎಲ್.ಆರ್., ಕುಮಾರವ್ಯಾಸನ ಪಾತ್ರಸೃಷ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

5. ರಹಮತ್ ತರೀಕೆರೆ, ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ಹಂಪಿ.

6. ವೆಂಕಟೇಶಮೂರ್ತಿ ಹೆಚ್.ಎಸ್., ಕುಮಾರವ್ಯಾಸ ಕಥಾಂತರ (ಆದಿಪರ್ವ– ಸಭಾಪರ್ವ), ಅಭಿನವ ಪಬ್ಲಿಕೇಷನ್ಸ್, ಬೆಂಗಳೂರು, 2013.

ಪಂಪ ಭಾರತ : ದ್ರೌಪದಿಯ ಪಂಚವಲ್ಲಭತ್ವ

ಪುಷ್ಪ ಪಿ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ

ಪಂಪ ಕನ್ನಡ ಸಾಹಿತ್ಯ ಕಂಡಂತಹ ವಿಶಿಷ್ಟ ಸಂಸ್ಕೃತಿಯ ತಿರುಳು, ಅದ್ವಿತೀಯ ಮಹಾಕವಿ. ಕನ್ನಡದ ಆದಿಕವಿ, ನಾಡೋಜ, ವಿಶ್ವ ಮಾನವ ಸಂದೇಶವನ್ನು ಸಾರಿದ ಮಾನವತಾವಾದಿ. 10ನೇ ಶತಮಾನದಲ್ಲಿ ಬಾಳಿ ಬದುಕಿದ ಈತ ಜೈನ ಧರ್ಮೀಯನಾಗಿದ್ದನು. ತನ್ನ ಎರಡು ಪ್ರಮುಖ ಕೃತಿಗಳಾದಂತಹ ಆದಿ ಪುರಾಣ ಹಾಗೂ ಪಂಪ ಭಾರತಗಳ ಮೂಲಕ ಅಲೌಕಿಕ ಹಾಗೂ ಲೌಕಿಕ ಪರಂಪರೆಯ ರಚನೆಗೆ ಬುನಾದಿಯನ್ನು ಹಾಕಿದನು. ಪ್ರಸ್ತುತ ಲೇಖನವು ಪಂಪ ಭಾರತ ಕೃತಿಯಲ್ಲಿ ಚಿತ್ರಿತವಾಗಿರುವ ಪ್ರಮುಖ ಸ್ತ್ರೀ ಪಾತ್ರವಾದಂತಹ ದ್ರೌಪದಿಯ ಪಂಚಪತಿತ್ವವನ್ನು ಕುರಿತದ್ದಾಗಿದೆ. ದ್ರೌಪದಿ ಪಂಚ ಪಾಂಡವರ ಸತಿ ಎಂಬುದು ತಿಳಿದಿರುವ ಅಂಶ. ಆದರೆ ಪಂಪನು ತನ್ನ ಪಂಪ ಭಾರತ ಕೃತಿಯಲ್ಲಿ ದ್ರೌಪದಿಯ ಪಂಚಪತಿತ್ವದ ಪರಿಕಲ್ಪನೆಯನ್ನು ಬದಲಿಸಿ ಮಾಡಿಕೊಂಡಿರುವ ಬದಲಾವಣೆಗಳು ಹಾಗೂ ಅದಕ್ಕೆ ಪೂರಕವಾದಂತಹ ಕಾರಣಗಳನ್ನು ಗುರುತಿಸಿ ವಿವರಿಸುವ ಪ್ರಯತ್ನ ಈ ಲೇಖನದ್ದಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯು ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು, ಅನೇಕ ಜನ ಕವಿ, ಕೃತಿಗಳಿಂದ ಶ್ರೀಮಂತಿಕೆಯನ್ನು ಪಡೆದುಕೊಂಡಿದೆ. ಸಾಹಿತ್ಯ ಕ್ಷೇತ್ರದಲ್ಲಿ 10ನೇ ಶತಮಾನ ಮಹತ್ತರವಾದ ಪರಿವರ್ತನೆಯ ಘಟ್ಟವಾಗಿದೆ. ಏಕೆಂದರೆ ಕನ್ನಡದ ಆದಿಕವಿ ಎಂದೇ ಖ್ಯಾತಿಯನ್ನು ಪಡೆದ ಪಂಪ ಆಗಮಿಕ ಮತ್ತು ಲೌಖಿಕ ಸಾಹಿತ್ಯ ರಚನೆಗೆ ಭದ್ರ ಬುನಾದಿಯನ್ನು ಹಾಕಿ ಕನ್ನಡ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಉತ್ತುಂಗದತ್ತ ಕೊಂಡೊಯ್ದ ಕೀರ್ತಿ ಈತನದು. ಪಂಪ ಕನ್ನಡ ಸಾಹಿತ್ಯ ಕಂಡಂತಹ ವಿಶಿಷ್ಟ ಸಂಸ್ಕೃತಿಯ ತಿರುಳು, ಅದ್ವಿತೀಯ ಮಹಾಕವಿ, ನಾಡೋಜ, ವಿಶ್ವಮಾನವ ಸಂದೇಶವನ್ನು ಸಾರಿದ ಮಾನವತಾವಾದಿ. 10ನೇ ಶತಮಾನದಲ್ಲಿ ಬಾಳಿ ಬದುಕಿದ ಈತ ಜೈನ ಧರ್ಮೀಯನಾಗಿದ್ದನು. ಕವಿರಾಜಮಾರ್ಗ ಕನ್ನಡದ ಮೊದಲನೆಯ ಉಪಲಬ್ಧ ಲಕ್ಷಣ ಗ್ರಂಥವಾದರೆ, ಪಂಪ ರಚಿಸಿದ ಕೃತಿಗಳು ಮೊದಲನೆಯದಾಗಿ ದೊರೆತ ಕಾವ್ಯ ಗ್ರಂಥಗಳು. ಅದಕ್ಕೂ ಹಿಂದೆ ಸಮೃದ್ಧವಾಗಿ ಕಾವ್ಯ ನಿರ್ಮಾಣವಾಗಿರಬೇಕು. ಅವು ನಮ್ಮ ಕಣ್ಣಮುಂದಿಲ್ಲದ ಕಾರಣ, ಪಂಪನೇ ಆದಿಮಹಾಕವಿ ಎಂದು ಬಿರುದು ಪಡೆದಿದ್ದಾನೆ. ಕವಿರಾಜಮಾರ್ಗದ ತರುವಾಯದ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಹಿರಿದಾದ ಇತಿಹಾಸ ಕಾವ್ಯವನ್ನು ರಚಿಸಿ ಪಂಪ ಆದಿಕವಿಯಾದನು. ಪಂಪ ತನ್ನೆರಡು ಕೃತಿಗಳಾದ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಇವುಗಳಲ್ಲಿ ಕ್ರಮವಾಗಿ ಆಗಮಿಕ ಅಂದರೆ ಧಾರ್ಮಿಕ ಮತ್ತು ಲೌಖಿಕ ಎಂಬ ಎರಡು ಪ್ರಕಾರಗಳನ್ನು ಉದ್ದೇಶ ಪೂರ್ವಕವಾಗಿ ಅನುಸರಿಸಿದನು. ಎರಡು ಕೃತಿಗಳು ಪ್ರೌಢ ಚಂಪೂ ಗ್ರಂಥಗಳಾಗಿದ್ದು ಅವುಗಳ ಕಥಾನಕಕ್ಕೆ ಹಿಂದಿನ ಆಕರಗಳನ್ನು ಉಪಯೋಗಿಸಿಕೊಂಡನು. ಹೀಗೆ ಪೂರ್ವ ಸಾಮಾಗ್ರಿಯನ್ನು ಬಳಸಿಯೂ ಅಭಿವ್ಯಕ್ತಿಯಲ್ಲಿ ಅಪೂರ್ವವಾದ ಕಾವ್ಯಗಳನ್ನು ನಿರ್ಮಾಣ ಮಾಡಿದನು. ಅವನ ಉಜ್ವಲ ಪ್ರತಿಭೆ, ಪಾಂಡಿತ್ಯಗಳೊಡನೆ ಸಮಗ್ರವಾದ ಜೀವನಾನುಭವ, ವಿಶಾಲದೃಷ್ಟಿ, ಸಮನ್ವಯಬುದ್ಧಿ, ಇವು ಬೆರೆತುಕೊಂಡು ಕನ್ನಡ ಮಾರ್ಗ ಕಾವ್ಯಕ್ಕೆ ಉನ್ನತ ಶಿಖರಗಳಾದ ಎರಡು ಕೃತಿಗಳನ್ನು ನೀಡಿದವು. ಅವುಗಳ ಎತ್ತರವು ರಸಿಕರ ಬೆರಗನ್ನು ಬರಮಾಡಿತು. ಮುಂದಿನ ಕವಿಗಳಿಗೆ ಅವು ಮೇಲ್ಪಂಕ್ತಿಯಾಗಿ ಅವರ ಸಾಹಸವನ್ನು ಕೆರಳಿಸಿದವು. 'ಆನೆ ನಡೆದುದೆ ಬೀದಿಯಲ್ಲವೇ' ಎಂಬಂತೆ ಪಂಪನ ಮಾರ್ಗವೊಂದು ಪಂಪನ ಯುಗದಲ್ಲಿ ರೂಢವಾಯಿತು. ಪ್ರಸ್ತುತ ವಿಷಯ ಚರ್ಚೆ ಪಂಪನ ಲೌಖಿಕ ಕೃತಿಯಾದಂತಹ ಪಂಪಭಾರತ ಕೃತಿಯಲ್ಲಿನ ಸ್ತ್ರೀ ಪಾತ್ರವಾದಂತಹ ದ್ರೌಪದಿಯನ್ನು ಕುರಿತದ್ದಾಗಿದೆ. ಅದರಲ್ಲೂ ಆಕೆಯ 'ಪಂಚಪತಿತ್ವ'ದ ಪರಿಕಲ್ಪನೆಯನ್ನು ಕುರಿತಂತೆ ಪಂಪನು ಮಾಡಿಕೊಂಡಿರುವ ಬದಲಾವಣೆಗಳು ಹಾಗೂ ಅದಕ್ಕೆ ಪೂರಕವಾದಂತಹ ಕಾರಣಗಳನ್ನು ವಿವರಿಸುವ ಪ್ರಯತ್ನವಾಗಿದೆ.

ಪಂಪನಿಂದ ರಚಿತವಾದಂತಹ ಲೌಖಿಕ ಕಾವ್ಯಕ್ಕೆ ಪಂಪಭಾರತ, ವಿಕ್ರಮಾರ್ಜುನ ವಿಜಯ ಎಂಬ ಹೆಸರು ಚಾಲ್ತಿಯಲ್ಲಿದೆ. 'ಪಂಪಭಾರತ'

ಎನ್ನುವುದು ಕಾವ್ಯಸ್ಥವೂ ಅಲ್ಲ, ಕವಿ ಹೇಳಿಕೊಂಡ ಹೆಸರೂ ಅಲ್ಲ. ಮಹಾಕವಿಯೊಬ್ಬನ ಹೆಸರಿನ ಜೊತೆಗೆ ಅಂಟಿಕೊಂಡ ಸಮಸ್ತ ಪದವೊಂದು ರೂಪುಗೊಂಡ ಮಾದರಿಯಲ್ಲಿ ಮುಂದಿನವರ ನಾಲಗೆಯಲ್ಲಿ ನೆಲೆಯೂರಿ ಬೆಳೆದು ಬಂದಿರಬೇಕು. ಪಂಪನು ವ್ಯಾಸಭಾರತವನ್ನು ವಿಕ್ರಮಾರ್ಜುನ ವಿಜಯವಾಗುವಂತೆ ಕನ್ನಡಿಸಿದ್ದಾನೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗೆಡಲೀಯದೆ ಮುಂ ಸಮಸ್ತ ಭಾರತ ಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ' ಎಂಬಲ್ಲಿ ಸೂಚಿಸಿದಂತೆ ಭಾರತ ಕಥೆಯ ಮುಖ್ಯಭಾಗಗಳಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸಿ ಸಂಕ್ಷಿಪ್ತ ಭಾರತವನ್ನು ಹೇಳುವುದು ಪಂಪನ ಉದ್ದೇಶವಾಗಿದೆ. ಭಾರತ ಕಥೆಯ ಜೊತೆಗೆ ತನ್ನ ದೊರೆಯ ಚರಿತ್ರೆಯನ್ನು ಕೂಡಿಸುವುದು ಇನ್ನೊಂದು ಉದ್ದೇಶವಾಗಿತ್ತು. ಕವಿಯು ಕಥಾನಾಯಕ ಅರ್ಜುನನ್ನನ್ನು ವಿಕ್ರಮಾರ್ಜುನನ್ನಾಗಿಸುವಲ್ಲಿ ತನ್ನ ಆಶ್ರಯದಾತ ಚಾಲುಕ್ಯ ಇಮ್ಮಡಿ ಅರಿಕೇಸರಿಯ ಪರಾಕ್ರಮ ಹಾಗೂ ಔದಾರ್ಯಗಳು ಅವನ ಕಣ್ಣುಗಳಲ್ಲಿ ತುಂಬಿ ಬಂದಿರಬೇಕು. ಅರಿಕೇಸರಿಯ ಸ್ನೇಹಕ್ಕೆ ತನ್ನನ್ನು ಮಾರುಗೊಂಡ ಪಂಪ ವ್ಯಾಸಭಾರತವನ್ನು ಕನ್ನಡದಲ್ಲಿ ನಿರೂಪಿಸುವ ಪ್ರಯತ್ನವನ್ನು ಮಾಡಿದ. 'ವ್ಯಾಸಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆ ಕವಿವ್ಯಾಸನೆಂಬ ಗರ್ವ ಎನಗಿಲ್ಲ' ಎಂಬ ಪಂಪನ ಮಾತು ವ್ಯಾಸನ ಬಗೆಗೆ ಇದ್ದಂತಹ ಗುರು ವಿಧೇಯತೆಯನ್ನು ಎತ್ತಿ ತೋರಿಸುತ್ತದೆ. ಪಂಪನು ವ್ಯಾಸಭಾರತವನ್ನು ಬಲುಮಟ್ಟಿಗೆ ಅನುಸರಿಸಿರುವುದು ನಿಜ. ಆದರೆ ಪಂಪಭಾರತ ವ್ಯಾಸಭಾರತದ ಯಥಾವತ್ತಾದ ಚಿತ್ರಣವಲ್ಲ, ಬದಲಿಗೆ ಪುನರ್ ನಿರೂಪಣೆಯಾಗಿದೆ. ಈ ರೂಪ ಪರಿವರ್ತನೆಯ ಕಾರ್ಯನಿರ್ವಹಣೆಯಲ್ಲಿ ಪಂಪನಿಗೆ ಕೆಲವೊಂದು ಸ್ವನಿರ್ಮಿತ ತೊಡಕುಗಳಿದ್ದವು. ಪಂಪನು ವ್ಯಾಸ ಭಾರತವನ್ನು ಸಂಗ್ರಹಿಸುವಾಗ ತನ್ನ ಉದ್ದೇಶಕ್ಕೆ ಸರಿಹೋಗುವಂತೆ ಎಷ್ಟೋ ಭಾಗಗಳನ್ನು ಕೈಬಿಟ್ಟಿದ್ದಾನೆ. ಕೆಲವನ್ನು ಕಿರಿದುಗೊಳಿಸಿದ್ದಾನೆ. ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಇದರಿಂದ ಗುಣದೋಷಗಳು ತಲೆದೋರಿವೆ. ತನ್ನ ದೊರೆಯಾದ ಅರಿಕೇಸರಿಯ ಸ್ತುತಿ ಅವನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತೆಂಬುದನ್ನು ಅವನೇ ಹೇಳಿದ್ದಾನೆ. 'ವಿಕ್ರಮಾರ್ಜುನ ವಿಜಯ' ಎಂದರೇ ಅರಿಕೇಸರಿಯ ವಿಜಯವೇ, ಅರಿಕೇಸರಿಯ ಬಿರುದುಗಳೆಲ್ಲ ಅರ್ಜುನನ ಬಿರುದುಗಳಾಗಿವೆ. ಅರ್ಜುನನೂ ಅರಿಕೇಸರಿಯಂತೆ ಸಾಮಂತ ಚೂಡಮಣಿಯಾಗಿದ್ದಾನೆ. ಹೀಗೆ ಭಾರತದ ಇತಿಹಾಸ ಕಾವ್ಯವು ಪಂಪನ ಕೈವಾಡದಿಂದ ತತ್ಕಾಲೀನ ಇತಿಹಾಸ ಗರ್ಭಿತವಾದ ಕಾವ್ಯವೂ ಆಗಿದೆ. ಈ ರಾಜಕೀಯ ಧ್ವನಿ ಸ್ವಾರಸ್ಯಕರವಾಗಿ ಬಂದಿರುವುದಾದರೂ ಹಲವು ಕಡೆಗಳಲ್ಲಿ ಔಚಿತ್ಯ ಭಂಗದಿಂದ ರಾಜಭಕ್ತಿಯ ಅತೀರೇಖದಿಂದ ಹದಗೆಟ್ಟಿದೆ. ಅರಿಕೇಸರಿ-ಅರ್ಜುನರ ಅಭೇದದಿಂದಲೂ, ಕಥಾನಾಯಕನ ವ್ಯತ್ಯಾಸದಿಂದಲೂ ಅಭಾಸಗಳೂ, ಅನೌಚಿತ್ಯಗಳು ಉಂಟಾಗಿವೆ. ಹೀಗೆ ನಡೆದಿರುವ ಅನೌಚಿತ್ಯಗಳಲ್ಲಿ ಬಹುಮುಖ್ಯವಾದದ್ದು ದ್ರೌಪದಿಯ ಪಂಚಪತಿತ್ವ ಪರಿಕಲ್ಪನೆಯಾಗಿದೆ.

ಎಲ್ಲರಿಗೂ ತಿಳಿದಿರುವಂತೆ ದ್ರೌಪದಿ ಪಂಚಪಾಂಡವರ ಸತಿ. ಆದರೆ ಪಂಪಭಾರತದಲ್ಲಿ ದ್ರೌಪದಿ ಪಂಚವಲ್ಲಭೆಯಾಗದೇ ಕೇವಲ ಅರ್ಜುನನೊಬ್ಬನ ಸತಿಯಾಗುತ್ತಾಳೆ. ಪಂಪನು ತನ್ನ ಭಾರತದಲ್ಲಿ ಮಾಡಿಕೊಂಡ ಮುಖ್ಯ ವ್ಯತ್ಯಾಸಗಳಲ್ಲಿ ಅರ್ಜುನನ ನಾಯಕತ್ವದೊಡನೆ ಸುಭದ್ರೆಗೆ ದೊರೆತ ಪ್ರಾಶಸ್ತ್ಯವೂ ಒಂದು. ಇದು ಸ್ವಾಭಾವಿಕವಾದರೂ ಇದರ ಪರಿಣಾಮವಾಗಿ ದ್ರೌಪದಿಯ ಸ್ಥಾನವೂ ಸಂದಿಗ್ಧವಾಯಿತು. ವ್ಯಾಸ ಭಾರತದಲ್ಲಿ ಅವಳಿಗೆ ಪತಿಗಳು ಐವರು. ಆದರೆ ಪಂಪನು ಇದು ಸರಿಯಲ್ಲವೆಂದು ಅರ್ಜುನನೊಬ್ಬನಿಗೆ ಪಾಣಿಗ್ರಹಣ ಮಾಡಿಸಿದ್ದಾನೆ. ಹತ್ತನೇ ಶತಮಾನದಲ್ಲಿದ್ದ ಪಂಪನು ತನ್ನ ಸುತ್ತಮುತ್ತಲಿನ ಸಾಮಾಜಿಕ ಪದ್ಧತಿಗೆ ಬಹುಪತಿತ್ವವು ಕಳಂಕ ಪ್ರಾಯವಾಗಿ ಕಂಡದ್ದರಿಂದ ಹಾಗೂ ಜೈನ ಭಾರತದ ವರ್ಚಸ್ಸಿನಿಂದ ಈ ಮಾರ್ಪಾಡು ಆಗಿರಬಹುದು. ಆದರೆ ಇಬ್ಬರು ಹೆಂಡದಿರ ನಡುವೆ ಸಿಕ್ಕು ಗೊಂದಲಗೊಂಡ ಗಂಡನಂತೆ ಅರ್ಜುನ ಮತ್ತು ಪಂಪ ಇವರ ಸ್ಥಿತಿಯಾಗಿದೆ. ದ್ಯೂತ ಪ್ರಸಂಗದಲ್ಲಿ ಅವಮಾನ ಹೊಂದಿ ಮಹಾಭಾರತ ಯುದ್ಧಕ್ಕೆ ಕಾರಣಳಾದವಳು ದ್ರೌಪದಿ. ಅದೇ ದ್ರೌಪದಿ ಪಾಂಡವರೊಡನೆ ಎಲ್ಲ ಕಷ್ಟಗಳನ್ನು ಅನುಭವಿಸಿ ಯುದ್ಧದಲ್ಲಿ ಗೆದ್ದ ಮೇಲೆ ಪಟ್ಟ ಮಹಿಷಿ ಆಗುವವಳು ದ್ರೌಪದಿಯಲ್ಲ, ಸುಭದ್ರೆ. ಕೌರವರಿಂದ ಮಾನಭಂಗ ಹೊಂದಿದ ದ್ರೌಪದಿಯ ಪ್ರತಿಜ್ಞೆಗೆ ದನಿಗೂಡಿಸಿದವನು, ಕೊನೆಗೆ ಅದನ್ನು ಪೂರ್ತಿಗೊಳಿಸಿದವನು ಭೀಮನು, ಅರ್ಜುನನಲ್ಲ. ಆದರೆ ತಮ್ಮನ ಹೆಂಡತಿಗೋಸ್ಕರ ಅಷ್ಟು ಮಟ್ಟಿಗೆ ಭೀಮನು ಕ್ರೋಧಾವಿಷ್ಟನಾಗುವುದೆಂದರೆ ಸಹಜತೆಗೆ ಕೊರತೆ ಉಂಟಾಗುತ್ತದೆ. ಅದರಲ್ಲಿಯೂ ವಿಸಂಗತಿ ಎಂದರೆ 'ತನ್ನ ತಳೋದರಿ'ಯೆಂದು ಬೇರೆ ಭೀಮನು ಅವಳನ್ನು ನಡೆಸಿಕೊಳ್ಳುತ್ತಾನೆ. ಇದೆಲ್ಲವನ್ನು ಕಣ್ಣಿಟ್ಟು ನೋಡಿದರೆ ವ್ಯಾಸ ಭಾರತದ ಪ್ರಧಾನ ವಸ್ತುವಿನಲ್ಲಿ ಅನುಷಂಗಿಕವಾದ ವ್ಯತ್ಯಾಸಗಳನ್ನು ಮಾಡದೇ ಅರ್ಜುನನ ನಾಯಕತ್ವ ಮತ್ತು ದ್ರೌಪದಿಯ ಏಕಪತಿತ್ವ ಈ ಬದಲಾವಣೆಗಳನ್ನು ಮಾತ್ರ ಮಾಡಿ ಪಂಪನು ತೊಂದರೆಗೆ ಒಳಗಾದನು. ಪಂಪನು ತನ್ನ ಕಾವ್ಯದ ಅರ್ಜುನನನ್ನು ಅರಿಕೇಸರಿಯೊಂದಿಗೆ ಸಮೀಕರಿಸಿದ್ದರಿಂದ ಆತನ ಹೆಂಡತಿ ಲೋಕಾಂಬಿಕೆಯೇ ಸುಭದ್ರೆಯಾಗಿ ಪ್ರತಿನಿಧಿಸುವುದರಿಂದ ಆತನಿಗೆ ಅದು ಸರಿ ಎನಿಸಿರಬೇಕು. ಪಂಪನ ಇಚ್ಛೆ ಅಥವಾ ರಾಜಕೀಯ ಪ್ರಜ್ಞೆ ಏನೆಯಿದ್ದರೂ ಮೂಲ ಭಾರತದ ಅನೇಕ ಅಂಶಗಳನ್ನು ಕೈಬಿಡುವುದರ ಜೊತೆಗೆ ದ್ರೌಪದಿಯ ಪಾತ್ರಕ್ಕೆ ಅನ್ಯಾಯವಾದಂತಾಯಿತು.

ಒಟ್ಟಾರೆಯಾಗಿ ಪಂಪ ಮಹಾಭಾರತ ಕಥೆಯನ್ನು ವಿಶಿಷ್ಟ ದಿಕ್ಕಿನೆಡೆಗೆ ಕೊಂಡೊಯ್ಯಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಅಂದಿನ ಕಾಲದ ಅಧಿಕಾರ ಕೇಂದ್ರದ ರಾಜತ್ವದೊಂದಿಗೆ ಹೇಗೆ ಮುಖಾಮುಖಿಯಾಗಬೇಕು? ಹಾಗೂ ಧರ್ಮದ ಅಧೀನದೊಳಗೆ ಹೇಗೆ ಕೃತಿ ರಚಿಸಬೇಕು? ಎಂಬುದು ಪಂಪನ ಮುಂದೆ ಇದ್ದಂತಹ ಎರಡು ಸವಾಲುಗಳು ಎಂಬುದು ಪಂಪಭಾರತ ಅಧ್ಯಯನದಿಂದ ತಿಳಿದು ಬರುತ್ತದೆ.

ಪರಾಮರ್ಶನ ಗ್ರಂಥಗಳು

1. ಮುಳಿಯ ತಿಮ್ಮಪ್ಪಯ್ಯ, ನಾಡೋಜ ಪಂಪ, ಎಂ. ಕೇಶವಭಟ್ಟ (ಸಂ.), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

2. ಕೆ.ಈ. ರಾಧಾಕೃಷ್ಣ (ಸಂ.), ಪಂಪಾಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.

3. ಎಸ್.ವಿ. ಪ್ರಭಾವತಿ, ಕನ್ನಡ ಸಾಹಿತ್ಯದಲ್ಲಿ ದ್ರೌಪದಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1992.

4. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ (ಕಿರಿಯ ಆವೃತ್ತಿ), ಸಮಾಜ ಪುಸ್ತಕಾಲಯ, ಧಾರವಾಡ.

ಕೌಟಿಲೀಯಮ್

ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ

KAUTILYEEYAM

Economics, Political Sciences & Arthasastra

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಮೂಢನಂಬಿಕೆ ಮತ್ತು ಅವೈಜ್ಞಾನಿಕ ನಂಬಿಕೆಗಳು ಹಾಗು ಅವು ಸಮಾಜದ ಮೇಲೆ ಬೀರಿರುವ ಪ್ರಭಾವಗಳು	ಕನ್ಯಾಕುಮಾರಿ	71 – 76
2.	ಅರ್ಥಶಾಸ್ತ್ರಮ್	ಡಾ॥ ಶೋಭಾ ಎಲ್	76 – 79
3.	ಭಾರತದಆರ್ಥಿಕತೆಯಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದ ಪ್ರಗತಿ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಅದರ ಪ್ರಭಾವ–ಒಂದುಅಧ್ಯಯನ	ಡಾ.ಪದ್ಮಿನಿ ಎಸ್.ವಿ	79 – 82

ಮೂಢನಂಬಿಕೆ ಮತ್ತು ಅವೈಜ್ಞಾನಿಕ ನಂಬಿಕೆಗಳು ಹಾಗು ಅವು ಸಮಾಜದ ಮೇಲೆ ಬೀರಿರುವ ಪ್ರಭಾವಗಳು

ಕನ್ಯಾಕುಮಾರಿ
ಉಪನ್ಯಾಸಕರು, ರಾಮಯ್ಯ ತಾಂತ್ರಿಕಮಹಾವಿದ್ಯಾಲಯ. ಬೆಂಗಳೂರು

ಮೂಢನಂಬಿಕೆ ಮತ್ತು ಅವೈಜ್ಞಾನಿಕ ನಂಬಿಕೆಗಳ ಹುಟ್ಟು ಮತ್ತು ಬೆಳವಣಿಗೆ:

ಮಾನವ ಪ್ರಂಪಚದ ಬಗ್ಗೆ ಅಥವಾ ವ್ಯಕ್ತಿ ಜೀವನದ ಬಗ್ಗೆ ವಸ್ತು ವಿಷಯವನ್ನು ಕುರಿತು ಹೊಂದಿರುವ ನಂಬಿಕೆಗಳು ಹಾಗು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡದಂತಹ ಕಾಲ್ಪನಿಕ ನಂಬಿಕೆಗಳು ಮೂಢನಂಬಿಕೆಗಳೆನಿಸಿವೆ. ಅಲ್ಲದೆ ಜನರನ್ನು ಸಾಮಾಜಿಕ ಚಿಂತನೆ ಮತ್ತು ಬೆಳವಣಿಗೆಯಿಂದ ಹಿಂದೆಸರಿಸುವನಂಬಿಕೆಗಳನ್ನು ಸಮಕಾಲೀನವಾಗಿ ಮೂಢನಂಬಿಕೆಗಳೆಂದು ಪರಿಗಣಿಸಲಾಗಿದೆ.

** ಪ್ರಾಯೋಗಿಕ ವಿಧಾನಗಳ ಮೂಲಕ ವಸ್ತುಸ್ಥಿತಿಗಳ ವಿವರಣೆ ನೀಡುವುದು ವಿಜ್ಞಾನ. ವಿಜ್ಞಾನವು ಪ್ರತ್ಯಕ್ಷ ಮತ್ತು ಪ್ರಾಮಾಣಿಕ ಪ್ರಯೋಗಗಳುಹಾಗು ಸಂಶೋಧನೆಗಳನ್ನಾಧರಿಸಿರುತ್ತದೆ. ವಿಜ್ಞಾನವನ್ನಾಧರಿಸಿದ ಯಾವುದೇ ವಸ್ತು ವಿಷಯಗಳು ಕಾರಣ ಮತ್ತು ಪರಿಣಾಮವನ್ನು ಕುರಿತು ಸೂಕ್ತ ಮಾಹಿತಿ ಆಧಾರಗಳನ್ನೊಳಗೊಂಡಿರುತ್ತವೆ. ಆದರೆ ಅವೈಜ್ಞಾನಿಕ ಸ್ವರೂಪದ ನಂಬಿಕೆಗಳಿಗೆ ತಾತ್ವಿಕ ತಳಹದಿ ಹಾಗೂ ಸಾಕ್ಷ್ಯಾಧಾರಗಳಿರುವುದಿಲ್ಲ.*

** ಕಾರ್ಯ-ಕಾರಣಸಂಬಂಧವಿಲ್ಲದೆಆಚರಣೆಯಲ್ಲಿರುವನಂಬಿಕೆಗಳು ಮೂಢನಂಬಿಕೆಗಳಾಗಿರುವುದು ಸಹಜ, ಬಹುತೇಕವಾಗಿ ಇಂತಹ ನಂಬಿಕೆಗಳುಅವೈಜ್ಞಾನಿಕ ಹಾಗು ವೈಚಾರಿಕತೆಗೆ ವಿರುದ್ಧವಾಗಿದ್ದು, ಅಪ್ರಸ್ತುತ ಎನಿಸುತ್ತವೆ.*

ಇಂದಿನ ಮೂಢ ನಂಬಿಕೆಗಳು ಅಂದಿನ ನಮ್ಮ ಪೂರ್ವಜರು ತಮ್ಮ ಸುತ್ತಮುತ್ತಲಿನ ಆಗು-ಹೋಗು, ಪ್ರಾಕೃತಿಕ ಕ್ರಿಯೆ ಮೊದಲಾದವುಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ನಿಯಂತ್ರಿಸಲು ನಡೆಸಿದ ಪ್ರಯತ್ನಗಳಾಗಿದ್ದು, ಆ ಕಾಲದ ಮಿತಿಯಲ್ಲಿ ಅವು ವೈಜ್ಞಾನಿಕ ತಿಳುವಳಿಕೆಗಳೇ ಆಗಿದ್ದಿರಲೂಬಹುದು ಅಥವಾ ಉತ್ತಮ ಸೂಚನೆಗಳಾಗಿ ಅಂಗೀಕರಿಸಿದ್ದಿರಲೂಬಹುದು. ಆದರೆ ವಿಜ್ಞಾನದಲ್ಲಿ ಪ್ರಗತಿಯಾದಂತೆ ಜನರಲ್ಲಿ ತಿಳುವಳಿಕೆ ಹೆಚ್ಚಿದಂತೆ ಬದಲಾವಣೆಗಳಿಗೆ ಸ್ಪಂದಿಸದ ನಂಬಿಕೆ, ಆಚರಣೆಗಳು ಅವೈಜ್ಞಾನಿಕ ಹಾಗೂ ತಪ್ಪು ತಿಳುವಳಿಕೆಗಳೆಂದು ಪರಿಗಣಿಸಲ್ಪಟ್ಟು ಅಂಧಶ್ರದ್ಧೆಗಳಾಗಿವೆ.

ವ್ಯಕ್ತಿಯ ಮಾನಸಿಕಸ್ಥಿತಿಯನ್ನಾಧರಿಸಿ ಮೂಢನಂಬಿಕೆಗಳು ಸೃಷ್ಠಿಯಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಯಾವುದೇ ಒಂದು ವಿಷಯವನ್ನು ಕುರಿತಾದ ಪರಿಮಿತವಾದ ತಿಳುವಳಿಕೆ, ಸಾವಿನ ಭಯ ಮತ್ತು ಭವಿಷ್ಯದ ಆತಂಕಗಳು ಒಂದು ರೀತಿಯಲ್ಲಿ ಮೂಢನಂಬಿಕೆಗಳನ್ನು ಹುಟ್ಟು ಹಾಕುತ್ತವೆ. ಆದ್ದರಿಂದ ಇಂದಿನ

ಆಧುನಿಕಯುಗದಲ್ಲಿ ಅಜ್ಞಾನಪೂರಿತ ಪ್ರತಿನಿಯಮಗಳು ಮತ್ತು ವಿಚಾರಗಳ ವಿರುದ್ಧ ವಿಜ್ಞಾನ ಮತ್ತು ಸಾಹಿತ್ಯಗಳು ಜನರನ್ನು ಮನೋಜ್ಞರನ್ನಾಗಿಸತೊಡಗಿವೆ

ಸಮಾಜ ಪರಿವರ್ತನೆಯ ಚಿಂತನೆಗಳು: ಆದಿ ಮಾನವನನಿಂದ ಆಧುನಿಕ ಮಾನವನವರೆಗೆ, ವೇದಗಳ ಕಾಲದಿಂದ ವಿಜ್ಞಾನದ ಕಾಲದವರೆಗೆ ವೈಚಾರಿಕೆಚಿಂತನೆಗಳು, ಮತ್ತು ವೈಜ್ಞಾನಿಕ ತಿಳುವಳಿಕೆ ಮುಖ್ಯಪಾತ್ರ ನಿರ್ವಹಿಸುತ್ತಿವೆ. ವೈಚಾರಿಕತೆ ಬೆಳೆದಂತೆ ಪ್ರಜ್ಞಾವಂತ ಸಮಾಜ ನಿರ್ಮಾಣವಾಗುತ್ತದೆ ಮೌಢ್ಯತೆಗಳು ಅಳಿದು ಹೋಗುತ್ತವೆ.

ವೈಜ್ಞಾನಿಕ ದೃಷ್ಟಿಕೋನಗಳಿಂದ ಮೂಢನಂಬಿಕೆಗಳ ಪರಿಣಾಮದ ಬಗ್ಗೆ ಚಿಂತನೆ ನಡೆಸುವುದರಿಂದ, ವಿಚಾರ ಸಂಕೀರಣಗಳು ಮತ್ತು ವಿಚಾರ ವೇದಿಕೆಗಳಲ್ಲಿ ಚರ್ಚೆಮಾಡುವುದರಿಂದ ಮೌಢ್ಯಗಳನ್ನು ವಿರೋಧಿಸುವ ತಿಳುವಳಿಕೆಯುಂಟಾಗುತ್ತದೆ.

ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ವೈಚಾರಿಕ ಪ್ರಜ್ಞೆ ಬೆಳೆಯತೊಡಗಿದರು ಸಹ ನಮ್ಮ ದೇಶದಲ್ಲಿ ಅಂಧಶ್ರದ್ಧೆ, ಅಂಧಾಚರಣೆಗಳು ಸಮಾಜದಲ್ಲಿ ಸಂಪೂರ್ಣವಾಗಿ ಅಳಿದು ಹೋಗದೆ ನೆಲೆನಿಂತಿವೆ.

ಆಧುನಿಕತೆಯಿಂದಾಗಿ – ಸಮಾಜದಲ್ಲಿ ಪರಿವರ್ತನೆ ಹಾಗೂ ವ್ಯಕ್ತಿಯ ಚಿಂತನೆಗಳಲ್ಲಿ ಬದಲಾವಣೆಗಳಾಗುತ್ತಿದ್ದರು ಸಹ ಅಂಧಶ್ರದ್ಧೆ, ಮೂಢಾಚರಣೆಗಳಲ್ಲಿ ಮಗ್ನರಾಗಿರುವವರ ಸಂಖ್ಯೆಯೇನು ಕಡಿಮೆಯಿಲ್ಲ. ಇತ್ತೀಚಿನ ವರದಿಯಂತೆ ಸುಮಾರು 60%ಕ್ಕಿಂತಲೂ ಹೆಚ್ಚು ಜನ ಮೌಢ್ಯತೆ, ಅಂಧಶ್ರದ್ಧೆಗೊಳಗಾಗಿರಬಹುದೆಂದು ಅಂದಾಜಿಸಲಾಗಿದೆ. ಇಂಥಹ ಪರಿಸ್ಥಿತಿಯಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸುವುದು ಕಷ್ಟಕರವಾದರೂ ಅಗತ್ಯ, 'ವೈಜ್ಞಾನಿಕ' ಮತ್ತು 'ವೈಚಾರಿಕ' ಬರಹಗಳಿಂದ ಹಾಗು ಜನ ಜಾಗೃತಿಯನ್ನುಂಟು ಮಾಡುವುದರಿಂದ ಸಾಮಾಜಿಕಪ್ರಜ್ಞೆ ಹೆಚ್ಚಳವಾಗಿ ಮೌಢ್ಯಗಳನ್ನು ಪ್ರತಿರೋಧಿಸುವ ಭಾವನೆಯುಂಟಾಗಲು ಸಾಧ್ಯವಾಗುತ್ತದೆ.

ವ್ಯಕ್ತಿ ವಿಕಾಸ ಹಾಗು ಸಮಾಜದ ಬೆಳವಣಿಗೆ: ವ್ಯಕ್ತಿ ವಿಕಾಸನಕ್ಕೆ ಕಟ್ಟು ಪಾಡುಗಳು ಅಡ್ಡಿಯಾದಾಗಲೆಲ್ಲಾ ಬಂಡಾಯವೇಳುವ ಮನೋವೃತ್ತಿಯ ನಿದರ್ಶನಗಳನ್ನು ಸಾಹಿತ್ಯದಲ್ಲಿ ಗುರುತಿಸಬಹುದು. ಈ ನಿಟ್ಟಿನಲ್ಲಿ ದಾರ್ಶನಿಕರು, ತತ್ವಜ್ಞಾನಿಗಳು ಹಾಗೂ ವಿಚಾರವಾದಿಗಳು ನಿರಂತರವಾದ

ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಶರಣರ ವಚನಗಳು-ದಾಸರ ಪದಗಳು ಸಮಾಜದಲ್ಲಿ ವ್ಯಕ್ತಿ ವಿಕಾಸನಕ್ಕೆ ಅವಶ್ಯಕವಾದ ಮಹತ್ವದ ವಿಚಾರಗಳನ್ನು ಕುರಿತ ಸಾಹಿತ್ಯಗಳಾಗಿವೆ.

ಮೂಢನಂಬಿಕೆಗಳಿಗೆ ದಾಸರಾಗಿದ್ದವರನ್ನು, ತಮ್ಮ ನೆರಳಿಗೇ ತಾವು ಹೆದರುತ್ತಿದ್ದಂತಹ ಜನರನ್ನು ಕಂಡು ಬಸವಣ್ಣನವರು ಮೂಢನಂಬಿಕೆಗಳು ಅರ್ಥಹೀನವೆಂದು ವೈಚಾರಿಕತೆ ಬೆಳೆಸಿಕೊಳ್ಳುವಂತಹ ಮತ್ತು ವೈಜ್ಞಾನಿಕವಾಗಿ ವಿಚಾರ ಮಾಡುವಂತಹ ಚಿಕಿತ್ಸಕ ಬುದ್ದಿಯನ್ನು ವಚನಗಳ ಮೂಲಕ ಜನರಲ್ಲಿ ಪ್ರೇರೆಪಿಸಿದರು.

ನೈಜ ಜ್ಞಾನವಿಲ್ಲದೆ ಅವಾಸ್ತವಿಕ ಆಚರಣೆಗಳು ಮೌಢ್ಯದ ಪ್ರತೀಕವೆಂದು ದಾಸರ ಪದಗಳಲ್ಲಿ ಖಂಡಿಸಿ, ನೈಜತೆಯೆಡೆಗೆ ಸಮಾಜವನ್ನು ಕೊಂಡೊಯ್ಯುವ ಪ್ರಯತ್ನವನ್ನು ಮಾಡಿ, 'ತಾತ್ವಿಕತೆ'ಗೆ ಬುನಾದಿಯನ್ನು ಹಾಕಿದ್ದಾರೆ.

ವ್ಯಕ್ತಿ ವಿಕಾಸ ಹಾಗು ಸಮಾಜದ ಬೆಳವಣಿಗೆ ವಿವಿಧ ಹಂತಗಳಲ್ಲಿ ನಡೆದಿದೆ ಎಂದು ಸಮಾಜಶಾಸ್ತ್ರಜ್ಞರು ಆಭಿಪ್ರಾಯಪಡುತ್ತಾರೆ.

ಸಮಾಜ ಶಾಸ್ತ್ರದ ಪಿತಾಮಹ ಆಗಸ್ಟ ಕಾಮ್ಟೆ (ವಿವರಿಸಿರುವಂತೆ) ಗುರುತಿಸಿರುವಂತೆ ಮಾನವನ ವಿಕಾಸವು 3 ಹಂತಗಳಲ್ಲಿ ನೆಡೆದಿದ್ದು,

1. ಮಾನವ ವಿಕಾಸದ ಮೊದಲನೆ ಹಂತವಾದ 'ಧರ್ಮಶಾಸ್ತ್ರಿಯ' ಹಂತದಲ್ಲಿ 'ಧರ್ಮ ಮಾನವನನ್ನು ಉದ್ಧರಿಸುವ ಶಕ್ತಿಯಾಗಿದ್ದಿತ್ತು.

ಈ ಹಂತದಲ್ಲಿ ಧರ್ಮ ಮತ್ತು ಧಾರ್ಮಿಕ ಆಚರಣೆಗಳು ಸಮಾಜದ ಮುಖ್ಯಭಾಗವಾಗಿದ್ಧವು . ಭಾರತೀಯ ಸಂಸ್ಕೃತಿಯಲ್ಲಿ ವೇದ-ಪುರಾಣಗಳ ಪಾತ್ರ ಅತಿಮುಖ್ಯವಾಗಿದ್ದಿತ್ತು. ಆದ್ದರಿಂದಲೇ

"ವೇದಗಳು ವಿಜ್ಞಾನ ಪೂರ್ವದ ವಿಜ್ಞಾನಗಳೆಂದು ಹೇಳಲಾಗಿದೆ"

2. ಆದರ ಮುಂದಿನ 'ಅತಿಭೌತಿಕ' ಹಂತ, ಈ ಹಂತದಲ್ಲಿ ಅಮೂಲ್ಯಕಲ್ಪನೆ ಭಾವನೆ ಹಾಗೂ ಕಲ್ಪನಾ ಶಕ್ತಿಗಳು "ಮೂಢತೆ' ಗಳನ್ನು ಅಳಿದು ತತ್ವಜ್ಞಾನವು ಸಮಾಜವನ್ನು ಅಲಂಕರಿಸಿತು.

ಧರ್ಮ ಮತ್ತು ಸಮಾಜಗಳೆರೆಡರಲ್ಲೂ ಸಮತೋಲನವನ್ನು ಕಾಯ್ದುಕೊಂಡು ಸಾಮಾಜಿಕ ದ್ವಂದ್ವತೆಗಳನ್ನು ತೊಡೆದುಹಾಕಲು ಒಂದು ಹೊಸ ರೀತಿಯನ್ನುಈ ಹಂತ ಸೂಚಿಸುತ್ತದೆ

'ವೈಚಾರಿಕತೆ'ಯ ತಳಹದಿಯ ಮೇಲೆ ಪ್ರಶ್ನಿಸುವ 'ತಾತ್ವಿಕ' ದೋರಣೆ ಹಾಗು ವಿಚಾರವಾದವನ್ನು ಪರ್ಯಾಯವಾಗಿ ಬಳಸಿ ಮೌಢ್ಯತೆಗಳನ್ನು ವಿಡಂಬಿಸುತ್ತಾ, 'ತಾತ್ವಿಕತೆ' ಮತ್ತು ವಿಚಾರಶೀಲತೆ, ಮೂಲಕ ವ್ಯಕ್ತಿ ವಿಕಾಸನಕ್ಕೆ ಈ ಹಂತದಲ್ಲಿ ಹಾದಿ ಮಾಡಿಕೊಡಲಾಯಿತು. ಜನತೆಯಲ್ಲಿದ್ದ 'ಮೂಢತೆ'ಯನ್ನು ದೂರಿಕರಿಸಲು ದಾರ್ಶನಿಕರು, ತತ್ವಜ್ಞಾನಿಗಳು ಹಾಗೂ ವಿಚಾರವಾದಿಗಳು ನಿರಂತರವಾದ ಪ್ರಯತ್ನ ಮಾಡಿದರು. ಸಮಾಜದ ಕಣ್ತೆರೆಸಲು ಮಾಸ್ತಿವೆಂಕಟೇಶ ಅಯ್ಯಂಗಾರರು. ಶಂ.ಭಾ.ಜೋಶಿ. ಹಾಗು ಕೆ.ವಿಪುಟ್ಟಪ್ಪನವರೇ ಮೊದಲಾದವರು ವೈಚಾರಿಕ ಸಾಹಿತ್ಯವನ್ನು ಪ್ರಚೋದನಕಾರಿಯಾಗಿ ಬರೆದರು.

3."ಮಾನವ ವಿಕಾಸದ ಮೂರನೇ ಹಂತ 'ವೈಜ್ಞಾನಿಕ' ಹಂತ, ಈ ಹಂತದಲ್ಲಿ ಪ್ರತ್ಯಕ್ಷ ಪ್ರಮಾಣಗಳ ಸಹಾಯದಿಂದ ಜಗತ್ತನ್ನು ಅರ್ಥಮಾಡಿಕೊಳ್ಳಲಾರಂಭಿಸುತ್ತಾನೆ ಮಾನವ. ಈಹಂತ ಕಾರ್ಯಚಾರಣೆ ಸಂಬಂಧಗಳನ್ನು ಆಧರಿಸಿ, ಪರಿಶೋಧಿಸಿ ವೈಜ್ಞಾನಿಕವಾಗಿ ವಿಚಾರ ಮಾಡುವುದಾಗಿರುತ್ತದೆ.

ವಸ್ತು ಹಾಗೂ ವಿಚಾರಗಳನ್ನು ಅವಲೋಕಿಸಿ, ವೀಕ್ಷಿಸಿ, ಸಂಗ್ರಹಿಸಿ, ವರ್ಗೀಕರಿಸಿ ಪುನರ್ ಪರಿಶೀಲಸಿ ನಿರ್ಣಯಕ್ಕೆ ಬರುತ್ತಾನೆ.ಮಾನವ, ಈ ಹಂತದಲ್ಲಿ ಯಾವುದೇ ನಂಬಿಕೆ, ಮೂಢನಂಬಿಕೆಗಳಿಗೆ ಅವಕಾಶ ವಿರುವುದಿಲ್ಲ"

ವೈಜ್ಞಾನಿಕ ಸತ್ಯಗಳು: ನಾಗರೀಕತೆ ಬೆಳೆದು ವಿಜ್ಞಾನ, ವೈದ್ಯಕೀಯ ಶಾಸ್ತ್ರಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರು ವೈಜ್ಞಾನಿಕ ಸತ್ಯಗಳನ್ನು ಅರಿತುಕೊಳ್ಳದೆ ಮೌಢ್ಯಾಚಾರಗಳು ಪ್ರೋತ್ಸಾಹಿಸಲಾಗುತ್ತಿದೆ. ವ್ಯಕ್ತಿಯ ದೈನಂದಿನ ಸಮಸ್ಯೆಗಳಿಂದ ಹಿಡಿದು ಜೀವಕ್ಕೆ ಕುತ್ತಾಗುವಂತಹ ಮಾರಕ ರೋಗಗಳವರೆಗು ವೈಜ್ಞಾನಿಕ ಹಿನ್ನೆಲೆಯಲ್ಲಿ ಕಾರಣ ಪರಿಹಾರ, ಸಲಹೆಗಳು ಇವೆ. ಇಂತಹ ಸತ್ಯಗಳು ಜನಮನ ಮುಟ್ಟಬೇಕಾಗಿದೆ. ಆದರೆ ಕೆಲವೊಂದು ಪಟ್ಟಭದ್ರಹಿತಾಸಕ್ತಿಗಳು ಲಾಭಗಳಿಸಿಕೊಳ್ಳುವ ಉದ್ದೇಶದಿಂದ ಹಾಗು ಸ್ವ-ಹಿತಾಸಕ್ತಿಗಾಗಿ ವೈಜ್ಞಾನಿಕ ಸತ್ಯಗಳನ್ನು ಮರೆಮಾಚಿ ದುರುಪಯೋಗ ಮಾಡಿಕೊಳ್ಳುತ್ತಿವೆ.

ಭೌತ-ರಾಸಾಯನ-ಜೈವಿಕವಿಜ್ಞಾನ ಹಾಗು ಖಗೋಳವಿಜ್ಞಾನಗಳನ್ನು ಕೌತುಕವಿದ್ಯೆಗಳ ಪ್ರದರ್ಶನದಲ್ಲಿ ಮಂತ್ರ-ತಂತ್ರಗಳಲ್ಲಿ ಹಾಗು ಫಲಿತ ಜ್ಯೋತಿಷ್ಯಗಳಲ್ಲಿ ಉಪಯೋಗಿಸಿಕೊಳ್ಳುತ್ತಿರುವ ಸತ್ಯಗಳು;

* **ಉದಾಹರಣೆಗೆ : ಪವಾಡಗಳು –** ಮಾಂತ್ರಿಕಶಕ್ತಿಗಳೆಂದು ಜನರನ್ನು ನಂಬಿಸುವ ಕಲೆಗಳ ಹಿಂದೆ ಇರುವ ಭೌತ ರಾಸಯನ ವಿಜ್ಞಾನಗಳ ಶಕ್ತಿ.

ಪವಾಡಗಳನ್ನು ಸೃಷ್ಟಿಸುವಂತಹ ಡೋಂಗಿಗಳು ಕೌತುಕ ವಿದ್ಯೆಗಳನ್ನು ಪ್ರದರ್ಶಿಸುವ ಮಾಂತ್ರಿಕರು. ಶೂನ್ಯದಲ್ಲಿ ವಿಭೂತಿಯನ್ನು, ನಿಂಬೆಹಣ್ಣಿನ್ಲಲಿ ರಕ್ತಬರಿಸುವಂತಹ, ಬೆಂಕಿಯ ಕೆಂಡವನ್ನು ಹಾಯುವುದು,ಬೆಂಕಿಯ ಉಂಡೆಯನ್ನು ಅಗಿಯುವ ಮತ್ತು ಗಾಜಿನ ಚೂರುಗಳನ್ನು ನುಂಗುವಂತಹ ವಿದ್ಯೆಗಳನ್ನು ಪ್ರದರ್ಶಿಸಿ ಜನರನ್ನು ಕೌತುಕಗೊಳಿಸುತ್ತಾರೆ. ಆದರೆ ಈ ಕೌತುಕ ವಿದ್ಯೆಗಳ ಹಿಂದೆ ಭೌತಿಕ ವಿಜ್ಞಾನವಿದೆಯೆಂಬ ಸತ್ಯವನ್ನು ಮರೆಮಾಚಿ ವೈಜ್ಞಾನಿಕ ಸ್ವರೂಪದ ಈ ಕಲೆಗಳಿಗೆ ಮೌಢ್ಯದ ಹೊದಿಕೆಯನ್ನು ಹೊದೆಸಿ, ವ್ಯವಹಾರಿಕ ಅರ್ಥ ಕಲ್ಪಿಸುವ, ಹಣಮಾಡಿಕೊಳ್ಳುವ ಇಂತಹವುಗಳ ವಿರುದ್ಧ ವೈಜ್ಞಾನಿಕ ಹಾಗು ವೈಚಾರಿಕತೆಯ ದೃಷ್ಠಿಯಿಂದ ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಇಂತಹ ಎಷ್ಟೋ ಸತ್ಯಗಳನ್ನು ಅರಿಯಲು ಹಾಗೂ ಇವುಗಳ ಬಗ್ಗೆ ತಿಳುವಳಿಕೆ ಮೂಡಿಸಲು ಸಹಾಯಕವಾಗುತ್ತದೆ.

*** ಹಾಗೂ ರಸತಂತ್ರ ವಿದ್ಯೆಗಳಲ್ಲಿ ರಾಸಾಯನ ವಿಜ್ಞಾನವಿದೆಯೆಂಬ ಸತ್ಯ.**

ಉದಾಹರಣೆಗೆ– ವಿಗ್ರಹಗಳು (ಹಾಲನ್ನು) ದ್ರವವನ್ನು ಹೀರುವುದು, ನಿಂಬೆಹಣ್ಣಿನಲ್ಲಿ ರಕ್ತ ಸುರಿಸುವುದು, ವಿಗ್ರಹದ ಕಣ್ಣಲ್ಲಿ ರಕ್ತ ಬರುವುದು, ಇವುಗಳು ರಾಸಾಯನಿಕ ಕ್ರಿಯೆಗಳಿಂದಾಗಿ ಜರುಗುತ್ತವೆ. ಆದರೆ ಇವನ್ನು ಪವಾಡದಂತೆ ವಿವರಿಸುವುದು ವಂಚಿಸುವ ಕಲೆಯಷ್ಟೆ.

1995 ಸೆಪ್ಟಂಬರ್ 21 ರಂದು ಭಾರತದಲ್ಲಿ ದೆಹಲಿ ಮತ್ತು ಅನೇಕ ಭಾಗಗಳಲ್ಲಿ ಹಬ್ಬಿದ ಸುದ್ಧಿ ಗಣೇಶನ ಮೂರ್ತಿ ನೈವೇದ್ಯಕ್ಕಿಟ್ಟ ಹಾಲು ಕುಡಿಯಿತೆಂಬುದು ಈನಂಬಿಕೆ ಹೊರದೇಶದಲ್ಲೂ ಹರಡಿತು.

(ಎನ್,ಸಿ,ಎಸ್,ಟಿ,ಸಿ) ನ್ಯಾಷನಲ್ ಕೌನ್ಸಿಲ್ ಫಾರ್ ಸೈನ್ಸ ಅಂಡ್ ಟೆಕ್ನಾಲಜಿ ಕಮ್ಯೂನಿಕೇಷನ್‌ನ ವಿಜ್ಞಾನಿಗಳು ಈಸುದ್ಧಿಯ ಕುರಿತು ಪ್ರಯೋಗನೆಡಸಿ, ಈಘಟನೆ ಒಂದು ಭ್ರಮಣೆ ಎಂದು ಈ ಚಮತ್ಕಾರಕ್ಕೆ ಕಾರಣ ಹಾಲಿನಲ್ಲಿ ಕೆಂಪುದ್ರವಣ ಮಿಶ್ರಣವಾಗಿದ್ದರ ಹಿನ್ನೆಲೆಯಲ್ಲಿ ನಡೆದಿರುವ ರಾಸಾಯನಿಕ ಕ್ರಿಯೆ ಎಂಬ ವಿವರಣೆ ನೀಡಿದರು.

*** ಮಾಟ–ಮಂತ್ರಗಳಲ್ಲಿ ಮನೋವೈಜ್ಞಾನ \ವೈದ್ಯಕೀಯ ಶಾಸ್ತ್ರಗಳಡಗಿರುವ ಸತ್ಯ.**

ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರಯೋಗ ಚಮತ್ಕಾರಗಳಿಂದ ಒಬ್ಬ ವ್ಯಕ್ತಿಯ ಅಂಗಾಂಗಗಳನ್ನು ಮತ್ತೊಬ್ಬವ್ಯಕ್ತಿಗೆ ಜೋಡಣೆ ಮಾಡುವಂತಹ ಅವಕಾಶಗಳು ವಿಜ್ಞಾನಪ್ರಪಂಚದಲ್ಲಿ ಉಪಲಬ್ಧವಾಗುತ್ತಿದ್ದು, ಹೃದಯದ ಕಸಿ ಮಾಡಿ ಒಬ್ಬ ವ್ಯಕ್ತಿಯ ಹೃದಯ ಮತ್ತೊಬ್ಬ ವ್ಯಕ್ತಿಗೆ ನೀಡಿ ಬದುಕಿಸಲು ಸಾಧ್ಯವಾಗು ತ್ತಿರುವಂತಹ ಈ ಆಧುನಿಕ ಯಗದ ಸಂದರ್ಭದಲ್ಲಿ ಯಾವುದೂ ಅಸಾಧ್ಯವಿಲ್ಲ, ಆದರೆ ಇಂತಹ ಪ್ರಸ್ತುತ ಸಂದರ್ಭಗಳಲೂ ಕೆಲವು ಮೂಢಾತ್ಮರು, ಅತಿ ಮೂಢತೆಯಿಂದ ವರ್ತಿಸಿ ಅಮಾಯಕ–ಮುಗ್ಧಜೀವಗಳ ಹಂತ್ಯಕ್ಕೆ ಕಾರಣರಾಗಿರುವಂತಹ ಉದಾಹರಣೆಗಳು ಇವೆ.

ಮೌಢ್ಯತೆಯಿಂದಾಗಿ ಮುಗ್ಧ ಮಗುವೊಂದು ದೇವಸ್ವರೂಪ ಪಡೆದದ್ದು ಇತ್ತೀಚಿನ ಘಟನೆ.

‘ಇತ್ತೀಚೆಗೆ ದೆಹಲಿ ಸಮೀಪದ ಸುರ್‌ಪುರ್ ಎಂಬ ಗ್ರಾಮದಲ್ಲಿ ಹುಟ್ಟಿದ್ದ ಮಗುವೊಂದು ಅಧಿಕ ಅಂಗಾಂಗಗಳನ್ನು ಶರೀರದಲ್ಲಿ ಹೊಂದಿದ್ದ (ಕನ್‌ಜಾಯೀನ್ ಟ್ವಿನ್)ಕಾರಣ ದೇವರ ಅವತಾರವೆಂದು ನಂಬಿ ಪೂಜೆ ಮಾಡಿ, ಹಣ ಸುರಿದು ಪ್ರದರ್ಶನ ಮಾಡಿದಂತ ಘಟನೆ ಮೌಢ್ಯತೆ ಯಿಂದಾಗಿ ಒಂದು ಜೀವಂತ ಮಗುವನ್ನು ಪ್ರದರ್ಶನಕ್ಕಿಟ್ಟಂತಹ ದೃಶ್ಯವದಾಗಿತ್ತು’ ‘ ‘ಲಾಲಿ’ ಎಂಬ ಈ ಮಗು ವೈಜ್ಞಾನಿಕ ಕ್ಷೇತ್ರದಲ್ಲಿ ಪರಿಹಾರವಿದ್ದರು ಸಹ ವೈದ್ಯಕೀಯ ಚಿಕಿತ್ಸೆ ಕಾಣದೆ ಆ ಮಗುವಿನ ಜೀವಾಂತ್ಯವಾಯಿತು.

ಇದೇ ರೀತಿಯ ಸಮಸ್ಯೆಯನ್ನೊಳಗೊಂಡಿದ್ದ ಮತ್ತೊಂದು ಮಗು ಬಿಹಾರ್ ಮೂಲದ ಲಕ್ಷ್ಮಿ, ಆ ಮಗುವಿಗೆ ಸಂಬಂಧಿಸಿದ ವಿಷಯದಲ್ಲಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯ ವೈದ್ಯರತಂಡ ವೈದ್ಯಕೀಯ ಶಸ್ತ್ರಚಿಕಿತ್ಸೆಯ ಮೂಲಕ ಅಧಿಕ ಅಂಗಾಂಗಗಳನ್ನು ಪ್ರತ್ಯೇಕಿಸಿ, ಆ ಮಗುವನ್ನು ಸಾಧಾರಣ ಸ್ಥಿತಿಗೆ ತರುವಂತಹ ಸಾಧನೆಯನ್ನು ಕೈಗೊಂಡಿತು. ಈರೀತಿ ಚಮತ್ಕಾರವನ್ನು ವೈದ್ಯಕೀಯ ಪ್ರಪಂಚದಲ್ಲಿ ಮಾಡಿತೋರಿಸಲಾಯಿತು. ಇಂತಹ ಪ್ರಯತ್ನಗಳು ಜನರನ್ನು “ಮೂಢತೆಯಿಂದ ಹೊರತರುವಲ್ಲಿ ಮಹತ್ವದ ಪರಿಣಾಮಉಂಟು ಮಾಡುತ್ತವೆ

*** ಫಲಿತಜ್ಯೋತಿಷ್ಯದ ಹಿಂದೆ ಖಗೋಳ ವಿಜ್ಞಾನಗಳಡಗಿರುವ ಸತ್ಯ ಮನವರಿಕೆಯಾಗಬೇಕು.**

17ನೇ ಶತಮಾನದಲ್ಲಿಯೇ ‘ಗೆಲಿಲಿಯೋ ಟೆಲಿಸ್ಕೋಪನ್ನು ಉಪಯೋಗಿಸಿ ಗ್ರಹ–ನಕ್ಷತ್ರಗಳ ಸ್ಥಾನ ಭೂಮಿ ಮತ್ತು ಸೌರಮಂಡಲದ ಸಂಬಂಧಗಳನ್ನು ತಿಳಿಯಪಡಿಸಿದ್ದಾನೆ, ವೈಜ್ಞಾನಿಕ ಆಧಾರದ ಮೇಲೆ ವಿಜ್ಞಾನಿಗಳು ಗುರುತ್ವಾಕರ್ಷಣೆ ನಿಯಮವನ್ನು ಪ್ರಚಾರಗೊಳಿಸಿದ್ದಾರೆ, ಆದರು ಸಹ ಭೂಮಿ ಮತ್ತು ಸೌರಮಂಡಲದ ಬಗ್ಗೆ ಇರುವ ಮೂಢನಂಬಿಕೆಗಳು ಕಡಿಮೆಯಾಗಿಲ್ಲ. ಹಾಗು ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳಿಗೆ ಸಂಬಂಧಿಸಿದಂತೆ ಇದು ನೈಸರ್ಗಿಕ ಕ್ರಿಯೆ ಎಂದು ವಿಜ್ಞಾನ ಹೇಳಿದೆ, “ಸೂರ್ಯ ಹಾಗೂ ಚಂದ್ರನ ನಡುವೆ ಒಂದೇ ಸರಳ ರೇಖೆಯಲ್ಲಿ ಭೂಮಿ ಬಂದಾಗ ಚಂದ್ರಗ್ರಹಣವಾಗುತ್ತದೆ. ಸೂರ್ಯ ಹಾಗೂ ಭೂಮಿಯ ನಡುವೆ ಚಂದ್ರ ಬಂದಾಗ ಸೂರ್ಯ ಗ್ರಹಣವಾಗುತ್ತದೆ. ಭೂಮಿ ತನ್ನ ಅಕ್ಷದ ಮೇಲೆ ತಿರುಗುತ್ತಿರುತ್ತದೆ ಎಂಬುದು ಆರ್ಯಭಟನು ಮಾಡಿದ ಒಂದು ಸಿದ್ದಾಂತ.” ಹೀಗೆ ಐದನೆಯ ಶತಮಾನದಲ್ಲಿಯೇ ಗ್ರಹಣಗಳು ಆಗುವುದು ಭೌತಿಕ ಕಾರಣಗಳಿಂದ ಎಂದು ಶಾಸ್ತ್ರೀಯವಾಗಿ ನಿರ್ಧರಿಸಿದ್ದರೂ ಸೌರಮಂಡಲದಲ್ಲಿ ಉಂಟಾಗುವ ಸೂರ್ಯ ಚಂದ್ರ ಗ್ರಹಣಗಳಿಗೆ ದುರ್ಘಟನೆ ಸಂಭವಿಸುತ್ತದೆಂಬ ನಂಬಿಕೆಯನ್ನು ಸೃಷ್ಟಿಸಲಾಗಿದೆ.

ಉದಾಹರಣೆಗೆ ಪ್ರಪಂಚದ ಭವಿಷ್ಯದ ಬಗ್ಗೆ ಹಾಗೇ ಜಗತ್ತಿನ ಪ್ರಳಯದ ಬಗ್ಗೆ ಸುದ್ದಿ ಸೃಷ್ಟಿ ಮಾಡಿದ್ದನ್ನು ಇಲ್ಲಿ ಗಮನಿಸಬಹುದು. ಇಂತಹ ನಂಬಿಕೆಗಳಿಗೆ ಜ್ಯೊತಿಷ್ಯ ಹಾಗೂ ಮಾಧ್ಯಮಗಳು ಸಾಕಷ್ಟು ಪ್ರಚಾರ ನೀಡಿದ್ದವು, ಮೂಢನಂಬಿಕಸ್ಥ ಜನರು ವಿಶ್ವವೇ ನಾಶವಾಗುತ್ತದೆ ಎಂದು ಒಪ್ಪಿಕೊಂಡಿದ್ದ ಹಲವು ಉದಾಹರಣೆಗಳಲ್ಲಿ ಒಂದಾದ 1997ರಲ್ಲಿ ಆಕಾಶದಲ್ಲಿ ಧೂಮಕೇತು ಕಾಣಿಸಿಕೊಂಡಿದ್ದು, ಆಗ ಜಗತ್ತಿನ ಅಂತ್ಯ ಸನ್ನಿಹಿತವೆಂದು ಕೆಲವರು ತಮ್ಮ ಪ್ರಾಣ ಕಳೆದುಕೊಂಡದ್ದು ಮಹಾನ್ ಸುದ್ದಿಯಾಗಿದ್ದರೆ, ಮತ್ತೊಂದು ಅಂತಹದ್ದೆ ಸುದ್ದಿ ಎಬ್ಬಿಸಿದ್ದ ಕಾಲಜ್ಞಾನ ವಾಣಿಯು 2004ರಲ್ಲಿ ಮಹಾಪ್ರಳಯವೆಂದು ಇಂತಹ ಗೊಂದಲದ ನಂಬಿಕೆಯನ್ನು ಸೃಷ್ಠಿಸಿತ್ತು. ಅದರಂತೆಯೇ ಮಾಯಾನ್ ಕ್ಯಾಲೆಂಡರ್ ವಿಶ್ವದಾದ್ಯಂತ ಸುದ್ದಿ ಹಬ್ಬಿಸಿತ್ತು. 2010 ಡಿಸೆಂಬರ್ ಕ್ಯಾಲೆಂಡರ್‌ನ ಅವಧಿ ಮುಗಿದು ವಿಶ್ವದ ಅಂತ್ಯವಾಗುತ್ತದೆಂದು ಭವಿಷ್ಯವನ್ನು ನೀಡಿದ್ದವು. ಆದರೆ ಇಂಥ ಯಾವ ಘಟನೆಗಳು ಸಂಭವಿಸದೆ, ನಿರಾಧಾರವೆಂದು ಸಾಬೀತು ಪಡಿಸಲಾಯಿತು

"ಪ್ರಾಕೃತಿಕ ನಿಯಮಗಳಿಗನುಸಾರವಾಗಿ ನಡೆಯುವ ಪ್ರಾಕೃತಿಕ ಕ್ರಿಯೆಗಳನ್ನು ಪವಾಡಗಳಂತೆ ಪರಿವರ್ತಿಸಿ ತೋರಿಸುವುದು ಪ್ರಕೃತಿಯ ನಿಯಮಗಳ ಅರಿವಿಲ್ಲದ ಮನಸ್ಸಿಗೆ ಅಂತಹ ಘಟನೆಗಳು ಪವಾಡಗಳಂತೆ ಕಾಣುತ್ತದೆ. ಇದು ಕೇವಲ ಮನಸ್ಸಿನ ಭ್ರಮೆ." ಪ್ರಾಕೃತಿಕ, ವೈಜ್ಞಾನಿಕ ನಿಯಮಗಳನ್ನು ಮೀರಿದ ಘಟನೆಗಳು ನಡೆಯಬೇಕು ಎಂಬ ಬಯಕೆಯ ಫಲವಾಗಿ ಕೆಲವು ಪವಾಡಗಳು ನಡೆಯುತ್ತವೆ. ಈ ಪವಾಡಗಳು ವಾಸ್ತವದಲ್ಲಿ ನಡೆಯುವುದಿಲ್ಲ. ಆದರೆ ಭ್ರಮಾಧೀನ ಮನಸ್ಸಿಗೆ ನಡೆದಂತೆ ಭಾಸವಾಗುತ್ತದೆ. ಪ್ರಜ್ಞಾಪೂರ್ವಕವಾಗಿ ಇಂತಹ ಪವಾಡಗಳು ಜರುಗುತ್ತವೆ.

ಕೆಲವೊಂದು ನಂಬಿಕೆಗಳೊಂದಿಗೆ ವೈಜ್ಞಾನಿಕ ಸತ್ಯಗಳು ಸೇರಿಕೊಂಡಿವೆ ಎಂಬುದು ಸಾಮಾನ್ಯವಾಗಿರುವಂತಹ ಅಭಿಪ್ರಾಯಗಳಾಗಿವೆ.

ಉದಾಹರಣೆಗೆ –ವೃಕ್ಷಪೂಜೆ, ಅರಳಿಮರವನ್ನು ಪೂಜನೀಯ (ಅಶ್ವತ–ವೃಕ್ಷ) ಎನ್ನಲಾಗಿರುವುದಕ್ಕೆ ಬಹುಷ್ಯಃ ಅದಕ್ಕಿರುವ ಆಮ್ಲಜನಕ ತಯಾರಿಸುವ ಶಕ್ತಿಯಾಗಿರಲೂಬಹುದು ರಾತ್ರಿಯವೇಳೆಯಲ್ಲಿಯೂ ಸಹ ಅಮ್ಲಜನಕ ತಯಾರಿಸುವ ಒಂದು ವೃಕ್ಷವೆಂದರೆ ಅರಳಿಮರ ಎಂದು ವಿಜ್ಞಾನದಲ್ಲಿ ಹೇಳಲಾಗಿದೆ.

ತುಳಸಿಗಿಡ, ಪೂಜನೀಯ– ಶ್ರೇಷ್ಠವೆಂಬ ನಂಬಿಕೆಗೆ ಅದರಲ್ಲಿ ವೈದ್ಯಕೀಯ ಗುಣಗಳ ಯಥೇಚ್ಚವಾಗಿರುವದಾಗಿರಲೂಬಹುದು ಅಲ್ಲದೆ ತುಳಸಿ ಗಿಡದ ಶ್ರೇಷ್ಠತೆಯನ್ನು ಆಯುರ್ವೇದದಲ್ಲೂ ಹೇಳಲಾಗಿದೆ.

ಬೆಳಿಗ್ಗೆ ಏಳುವಾಗ ಬಲಮಗ್ಗುಲಲ್ಲಿ ಹೇಳುವುದು ಮೆದುಳಿಗೆ ರಕ್ತಸಂಚಾರ (ಬಲಮೆದುಳು ಬುದ್ದಿಶಕ್ತಿ ಹೆಚ್ಚಿಸುವುದು) ಕ್ಕೆ ಅನುಕೂಲವಾಗುತ್ತದೆಂಬುದು.

ತಾಮ್ರದ ನಾಣ್ಯಗಳನ್ನು ತುಂಬಿದ ಕೊಳ, ತುಂಬಿದ ನೀರಿನ ಬಿಂದಿಗೆ ನೀರು ಸಂಗ್ರಹಕಗಳಲ್ಲಿ ಹಾಕುವುಂತಹ ನಂಬಿಕೆಯ ಹಿಂದಿರುವ ಉದ್ದೇಶ ಲೋಹಗಳಿಗಿರುವ ರೋಗ ನಿರೋಧಕ ಗುಣಗಳಾಗಿರಬಹುದು, ಆವು ನೀರಿನಲ್ಲಿಸೇರಿಕೊಳ್ಳುತ್ತದೆಂಬುದು ಅಲ್ಲದೆ ನೀರಿನ್ನು ಶುದ್ಧೀಕರಣಗೊಳಿಸಿದಂತಾಗುತ್ತದೆಂಬುದು, ಇತ್ಯಾದಿ ನಂಬಿಕೆಗಳೊಂದಿಗೆ ವೈಜ್ಞಾನಿಕ ಸತ್ಯಗಳು ಸೇರಿಕೊಂಡಿವೆ.

ಆದರೆ ಮೂಢನಂಬಿಕೆಗಳೆಲ್ಲಾ ವೈಜ್ಞಾನಿಕ ವಿವರಣೆ ಅಥವಾ ಆಧಾರಗಳನ್ನು ಒಳಗೊಂಡಿರುವುದಿಲ್ಲ. ನಂಬಿಕೆಗಳು/ಮೂಢನಂಬಿಕಗಳು ಅತಿಯಾದಾಗ ಅನರ್ಥಗಳಾಗುವ ಸಂಭವಗಳು ಇವೆ.

ಸಮಾಜದ ಮೇಲೆ ಅವೈಜ್ಞಾನಿಕ ಮತ್ತು ಮೂಢನಂಬಿಕೆಗಳ ಪರಿಣಾಮ:

* ಮೂಢನಂಬಿಕೆಗಳು ಸಮಾಜ ಮತ್ತು ವ್ಯಕ್ತಿಯ ಮೇಲೆ ಸಾಕಷ್ಟು ಪರಿಣಾಮ ಉಂಟು ಮಾಡುತ್ತವೆಂಬುದಂತು ಸತ್ಯ ಸಂಗತಿ. ಅಂಧಶ್ರದ್ಧೆ ಕಂದಾಚಾರಗಳು ಮನುಷ್ಯರನ್ನು ದುರ್ಬಲ ಗೊಳಿಸುವುದಲ್ಲದೆ ಬೇಜವಾಬ್ದಾರರನ್ನಾಗಿ ಮಾಡುತ್ತವೆ ಹಾಗೂ ಆತಂಕ ಒತ್ತಡಗಳನ್ನು ಹೆಚ್ಚಿಸುತ್ತವೆ.

ಮನುಷ್ಯ ಮೌಢ್ಯಗಳಿಗೊಳಗಾದರೆ ಚಿಂತೆ ಮತ್ತು ಅತಾಷೆಗಳು ಕಾಡುತ್ತವೆ. ಅತಾಷೆಗೊಳಗಾದವರು ಸೋಲಿಗೆ ಕಾರಣಗಳನ್ನು ಹುಡುಕುತ್ತಾರೆ, ಭವಿಷ್ಯದ ಚಿಂತನೆಯಿಂದ ಹಿಂದೆ ಸರಿಯುತ್ತಾರೆ. ಅದೃಷ್ಠ, ನತಾದೃಷ್ಠ ಎಂಬ ಗೊಂದಲಗಳು ಸೃಷ್ಠಿಯಾಗುತ್ತವೆ. ಸತ್ಯಾ–ನಿತ್ಯತೆಯನ್ನು ವಿವೇಚಿಸುವ. ಚಿಂತನೆಯಿಲ್ಲದಾಗುತ್ತದೆ

ವೈಜ್ಞಾನಿಕಪರಿಹಾರಗಳು ಮತ್ತು ಸಲಹೆಗಳು;

* ಮಾನಸಿಕ ದೌರ್ಬಲ್ಯಗಳಿಗೆ ಸಂಬಂಧಿಸಿದಂತಹ ಅನೇಕ ತೊಂದರೆಗಳಿಗೆ ವೈದ್ಯಕೀಯವಿಜ್ಞಾನವು ಪರಿಹಾರವನ್ನು ಸೂಚಿಸುತ್ತದೆ ಆದರೆ ಅವೈಜ್ಞಾನಿಕನಂಬಿಕೆ ಹಾಗು ಮೌಢ್ಯದಿಂದಾಗಿ ಸನ್ನಿಹಿಡಿದಿದೆ ಎಂದು ಇಲ್ಲವೆ ದೆವ್ವ ಮೆಟ್ಟಿದೆಯೆಂದು ಅದಕ್ಕೆ ನೀಡುವ ಉಪಚಾರಗಳು ಅಂತಹವರ ಮಾನಸಿಕ ಸ್ಥಿತಿಯನ್ನು ಮತ್ತಷ್ಟು ದುರ್ಭಲಗೊಳಿಸುವ ಸಾಧ್ಯತೆಗಳಿರುತ್ತವೆ.

ಮನೋವಿಜ್ಞಾನಿಗಳು ಈ ವಿಕಲ್ಪಗಳಿಗೆ ಕಾರಣವನ್ನು 'ವಸ್ತು ಹಾಗು ಸಂಗತಿಗಳ ಬಗ್ಗೆ ಇರುವ ಅವ್ಯಕ್ತ ಭಯ,' ಎಂದು ಹಾಗು ಅವ್ಯಕ್ತ

ಅಘೋಚರ ವಸ್ತು ಸಂಗತಿಗಳ ಬಗ್ಗೆ ಗಾಢವಾಗಿ ಚಿಂತಿಸಿದಾಗ ಅಂತಹ ಚಿಂತನೆಗಳಿಗೆ ಮನಸ್ಸಿನಲ್ಲಿ ಒಂದು ರೂಪದ ಕಲ್ಪನೆಯಾಗುತ್ತದೆ ಈರೀತಿಯ ಭಾವನಾತ್ಮಕ ಸ್ಥಿತಿ ಕಣ್ಣಿಗೆ ಕಾಣದ್ದನ್ನು ಒಪ್ಪಿ ಕೊಳ್ಳುತ್ತದೆ, ದೇವರು-ದೆವ್ವ-ಭೂತ-ಪಿಶಾಚಿಗಳು ಕಣ್ಣಿಗೆ ಕಾಣದಿದ್ದರು ಮನಸ್ಸು ಒಪ್ಪಿಕೊಳ್ಳುತ್ತದೆ ಎಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಸೂಕ್ತ ಸಲಹೆ, ವೈದ್ಯಕೀಯ ಪರಿಹಾರ ಅಗತ್ಯ, ವೈದ್ಯಕೀಯವಿಜ್ಞಾನವು ಈ ರೀತಿಯ ತೊಂದರೆ ದೌರ್ಬಲ್ಯಗಳಿಗೆ ಸರಿಯಾದ ಪರಿಹಾರವನ್ನು ಸೂಚಿಸುತ್ತದೆ. ಆದರೆ ವೈದ್ಯಕೀಯ ಉಪಚಾರಗಳಿಗೆ ಬದಲಾಗಿ ಮೌಢ್ಯತೆಗಳಿಂದಾಗಿಸಂಕಷ್ಟ-ಹಾನಿಗಳಿಗೊಳಗಾಗಿರುವ ಸಂಭವಗಳು ಇವೆ.

ಉದಾಹರಣೆಗೆ ಬಾಲ್ಯದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದಾಗಿ ಮಾನಸಿಕ-ದೈಹಿಕ ವೈಕಲ್ಯಗಳಿಗೊಳಗಾದರೆ ಮೂಢತೆಯಿಂದಾಗಿ ಅದನ್ನು ಬಾಲಗ್ರಹವೆಂದು ಗುರುತಿಸುವುದು ಅಲ್ಲದೆ ಇವುಗಳಿಗೆ ಪರಿಹಾರವಾಗಿ ಮಾಟ ಮಂತ್ರ-ದೆವ್ವ ಬಿಡಿಸುವ ಸೊಂಕು ತೆಗೆಸುವಂತಹ ತಂತ್ರುಗಳ ಮೊರೆ ಹೋಗವಂತಹ ಸಾಕಷ್ಟು ನಿದರ್ಶನಗಳಿವೆ.

ಆದರೆ ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನಕ್ಕೆ ಸವಾಲಾಗುವಂತಹ ಎಷ್ಟೇ ಕಠಿಣಕರವಾದಂತಹ ವಿಷಯವಾಗಿದ್ದರು ಸಹ ಪ್ರಯೋಗಗಳನ್ನು ನಡೆಸಿ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಅಲ್ಲದೆ

* ಸರಕಾರದ ಔಷಧೀಯ ವಸ್ತುಗಳ ಜಾಹಿರಾತು ಕಾಯಿದೆಯು ಮಂತ್ರ-ತಂತ್ರಗಳ ಸಲಹೆಗಳ ಬಗ್ಗೆ ಉತ್ತೇಜನಕಾರಿ ಪ್ರಚಾರ ನೀಡುವುದನ್ನು ನಿಷೇಧಿಸುತ್ತದೆ. ಮತ್ತು ಮಾಟ-ಮದ್ದುಗಳ ಸೇವನೆ, ಮಾರಾಟ ಮತ್ತು ಉಪಲಬ್ಧತೆಯ ಬಗ್ಗೆ ಸುದ್ಧಿ ಹಬ್ಬಿಸುವುದನ್ನು ನಿಬಂಧಿಸುತ್ತದೆ.

* .ಮೌಢ್ಯಗಳಿಂದ ಜನರನ್ನು ಹೊರತರುವ ನಿಟ್ಟಿನಲ್ಲಿ ವೈಜ್ಞಾನಿಕ ಸತ್ಯಗಳನ್ನು ತಿಳಿಸಿ ಕೊಡುವ ಸಾಕಷ್ಟು ಪ್ರಯತ್ನಗಳು ನೆಡೆಯುತ್ತಿವೆ.

1. **ಪವಾಡಗಳು** – ಮಾಂತ್ರಿಕಶಕ್ತಿಗಳೆಂದು ಜನರನ್ನು ನಂಬಿಸುವ ಕಲೆಗಳ ಹಿಂದೆ ಇರುವ ವಿಜ್ಞಾನಗಳ ಶಕ್ತಿಯನ್ನು ಬಯಲಿಗೆಳೆಯುವ ಅಂತಹವುಗಳನ್ನು ಜನರ ಮುಂದೆ ಸಾಭೀತು ಪಡಿಸುವಂತ ಪ್ರಯತ್ನಗಳಾಗುತ್ತಿರುವುದು ಶ್ಲಾಘನೀಯ.(ಉದಾಹರಣೆಗೆ ಕರ್ನಾಟಕದಲ್ಲಿ ಹುಲಿಕಲ್‌ನಟರಾಜ್ ವಿದೇಶಗಳಲ್ಲಿ ರ್‍ಯಾಂಡಿ,ಜಾಕ್ಸನ್ ಮದಲಾದವರು)

ಅವತಾರ ಪುರುಷರು, ದೇವಮಾನವರೆಂದು ಹೇಳಿಕೊಂಡು ಪವಾಡಧಾರಿಗಳು ಜಗತ್ತಿನಾದ್ಯಂತ ಆಗಾಗ್ಗೆ ಗೋಚರಿಸುತ್ತಲೇ ಇರುತ್ತಾರೆ. ವಂಚನೆಯ ಜಾಲದ ಪವಾಡಗಳನ್ನು ಬಯಲಿಗೆಳೆಯುವ ವಿಚಾರವಾದಿಗಳು ಜಾಗೃತಿಯನ್ನುಂಟು ಮಾಡುತ್ತಿದ್ದಾಗ್ಯೂ, ಪವಾಡಗಳನ್ನು ಸೃಷ್ಟಿಸುವ ಹಾಗು ವಂಚಿಸುವ ಜಾಲಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಅಂತಹ ಉದಾಹರಣೆಗಳು ಸಾಕಷ್ಟಿವೆ.

ಇತ್ತೀಚೆಗೆ ಹೆಚ್ಚಾಗುತ್ತಿರುವ ಡೋಂಗಿಗಳು, ಲೋಕಕಲ್ಯಾಣಕ್ಕಾಗಿ ಜೀವಂತ ಸಮಾಧಿಯಾಗುವ ಹಾಗೂ ಮಕ್ಕಳನ್ನು ಜೀವಂತ ಸಮಾಧಿ ಮಾಡುವ ಪವಾಡಪುರುಷರು, ಭಕ್ತರಿಗೆ ಮಾನಸಿಕ ಶಾಂತಿಯನ್ನು ದೊರಕಿಸಿಕೊಡುತ್ತೇವೆಂದು ಹೇಳುವ ಕಪಟಗುರುಗಳು ಹಾಗು ಮೋಡಿ ವಿದ್ಯೆಗಳಿಂದ ಜನರನ್ನು ವಂಚಿಸುವಂತ ಕಪಟಬಾಬಗಳು. ಅಲ್ಲದೆ ಸಂಪತ್ತಿನದಾಹ ಹಣದ ಆಸೆ, ಹಾಗೂ ಐಶಾರಾಮ ಜೀವನದ ಮೋಹಕ್ಕೊಳಗಾಗಿ ಲಂಪಟತನದಿಂದ ಜನರನ್ನು, ಸಮಾಜವನ್ನು ದೋಚುವಂತಹವರನ್ನು ಆಧುನಿಕ ಸ್ವಾಮಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣುತ್ತಿದ್ದೇವೆ. ಇಂತಹ ಡೊಂಗಿಗಳ ಅಸಲೀಯತೆಯನ್ನು ಜನರಿಗೆ ತಿಳಿಸಲು ಅನೇಕ ವಿಚಾರವಂತರು ಇಂತಹ ಕಪಟ ಪವಾಡಗಳನ್ನು ಬಯಲಿಗೆಳೆದು ಜನರ ಮನೋಸ್ಥಿತಿ ಬದಲಾಯಿಸುವ ಯತ್ನಗಳನ್ನು ಮಾಡುತ್ತಿದ್ದಾರೆ.

"ಸ್ವಾಮಿಗಳು ಎಂದು ಹೇಳಿಕೊಂಡು ಮಠಗಳನ್ನು ಸ್ಥಾಪಿಸಿಕೊಂಡು ಪ್ರವಚನ ನಡೆಸುತ್ತಾ ಸಾವಿರಾರು ಭಕ್ತರನ್ನು ದೇಶದಲ್ಲಿ ಹಾಗು ಪರದೇಶದಲ್ಲೂ ಹೊಂದಿದ್ದು, ಕೊಟ್ಯಾಂತರ ರೂಪಾಯಿ ಆಸ್ತಿಗಳಿಸಿ ಯಾರಿಗೂ ಕಾಣದಂತೆ ಅನಾಚಾರ, ಅನೈತಿಕತೆಗಳಲ್ಲಿ ತೊಡಗಿಯಾವುದೋ ಒಂದು ಸಂಗತಿ ಹೊರಬಿದ್ದು ಆ ಮೂಲಕ ಜೈಲು ಸೇರಿರುವ ಘಟನೆಗಳು ಸಂಭವಿಸಿದ್ದು, ಅವರನ್ನು ನಂಬಿ ಘಾಸಿಮಾಡಿಕೊಂಡವರು ಲಕ್ಷಾಂತರ ಮಂದಿ, ಇವರಿಗೆ ಮೋಸ ಹೊದವರು ಅವಿಧ್ಯಾವಂತ, ಮೂಢರಲ್ಲ, ಹಾಗೇ ಮೋಸಕ್ಕೆ ಬಲಿಯಾದವರೂ ತೀರಾ ವಿದ್ಯಾವಂತರು ಸಮೂಹ ಸನ್ನಿಗೊಳಿಗಾದವರು ಶ್ರೀಮಂತರು ಆಗಿದ್ದರು.: ಪವಾಡಗಳನ್ನು ಸೃಷ್ಟಿಸುವುದು ಮೋಡಿ-ಮಾಡುವುದು ಒಂದು ರೀತಿಯಲ್ಲಿ ವ್ಯವಹಾರಿಕ ಪ್ರಕ್ರಿಯೆಗಳಾಗಿದ್ದು, ಅಮಾಯಕ ಹಾಗು ಮತಿಭ್ರಮಣೆಗೊಳಗಾದ ಅಜ್ಞಾನಿ (ಮೂರ್ಖ) ಮನಸ್ಸುಗಳನ್ನು ವಂಚಿಸುವ ಜಾಲಗಳಂತೆ ಗೋಚರಿಸುತ್ತವೆ.

ಉತ್ತರ ಪ್ರದೇಶದ ಪ್ರಾಂತ್ಯ ಒಂದರಲ್ಲಿ ನಿರ್ಮಲಬಾಬು ಎಂಬ ಸಾಧು-ತನ್ನಷ್ಟಕ್ಕೆ ತಾನೇ ದೇವಮಾನವನೆಂದು ಆಧ್ಯಾತ್ಮಿಕ ಗುರು ಎಂದು ಹೇಳಿಕೊಂಡು ಜನರನ್ನು ವಂಚಿಸುತ್ತಿದ್ದ ಘಟನೆ ಅತಿರೇಕಕ್ಕೇರಿದಾಗ ವಂಚನೆಯ ಜಾಲವನ್ನು ಬಯಲಿಗೆಳೆಯಲಾಗಿತ್ತು, ಅದೇರೀತಿ ಇತ್ತೀಚೆಗೆ ಮತ್ತೊಬ್ಬ ಹರಿಯಾಣದ ಡೇರಾಸಚ್ಚಾ ಸೌಧದ ಗುರುಮಿತ್ ಸಿಂಗ್ ರಾಮ್ ರಹೀಂ (ಬಾಬ) ದೇವಮಾನವನೆಂದು ಜನರನ್ನು ವಂಚಿಸುತ್ತಿದ್ದ ಘಟನೆ,

ಹೀಗೆ ಹಲವಾರು ಘಟನೆಗಳು ನಡೆಯುತ್ತಲೇಇರುತ್ತವೆ, ಇಂತಹ ಸಮಾಜವನ್ನು ದೋಚುವಂತಹವರನ್ನು ಆಧುನಿಕ ಸ್ವಾಮಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣುತ್ತಿದ್ದೇವೆ.ಇಂತಹ ಡೊಂಗಿಗಳ ಅಸಲೀಯತೆಯನ್ನು ಜನರಿಗೆ ತಿಳಿಸಲು ಅನೇಕ ವಿಚಾರವಂತರು ಇಂತಹ

ಕಪಟ ಪವಾಡಗಳನ್ನು ಬಯಲಿಗೆಳೆದು ಜನರ ಮನೋಸ್ಥಿತಿ ಬದಲಾಯಿಸುವ ಯತ್ನಗಳನ್ನು ಮಾಡುತ್ತಿದ್ದಾರೆ (ಉದಾಹರಣೆಗೆ ಹುಲಿಕಲ್‌ನಟರಾಜ್(ಕರ್ನಾಟಕದಲ್ಲಿ) ವಿದೇಶಗಳಲ್ಲಿ ರ್‍ಯಾಂಡಿ,ಜಾಕ್ಸನ್ ಮದಲಾದವರು) ಅಲ್ಲದೆ ಸುದ್ದಿ–ಮಾಧ್ಯಮಗಳು ಸಹ ಸಾಕಷ್ಟು ಪ್ರಯತ್ನ ಮಾಡುತ್ತಿವೆ.

ಮತ್ತೊಂದೆಡೆ :– ಆಧುನಿಕ ಸಂದರ್ಭದಲ್ಲೂ ಜನರನ್ನು ವಿಧ್ಯಾವಂತರು ಹಾಗು ವಿಚಾರವಂತರನ್ನಾಗಿಸಲು ಶಿಕ್ಷಣವನ್ನು ಸಬಲೀಕರಿಸಿ, ಸಾಮಾಜಿಕ ಆದರ್ಶಗಳನ್ನು, ಸಮಾಜ ಸುಧಾರಣೆಯ ಮೌಲ್ಯಗಳನ್ನು ಹೊಂದಿರುವಂತಹ ನೂರಾರು ಶರಣರು ಹಲವಾರು ಮಠಗಳ ಶ್ರೀಗಳು, ಧರ್ಮಾಧಿಕಾರಿಗಳು, ನೀತಿ ಮಾರ್ಗದರ್ಶನಗಳನ್ನು ನೀಡುತ್ತಾ ಜನರನ್ನು ಮೌಢ್ಯದಿಂದ ಹೊರತರಲು ಇಂದಿಗು ಗಣನೀಯ ಪ್ರಭಾವ ಬೀರುತ್ತಿದ್ದಾರೆ . ಇಂತಹ ಕಾರ್ಯಗಳು ಸಮಾಜಕ್ಕೆ ಅತ್ಯಮೂಲ್ಯವಾದ ಕೊಡುಗೆಗಳಾಗಿವೆ.

ಓಟ್ಟಾರೆಯಾಗಿ ಹೇಳುವುದಾದರೆ ಆರೋಗ್ಯಕರ ಹಾಗು ಪ್ರಗತಿಪರ ಸಮಾಜಕ್ಕಾಗಿ, ನಂಬಿಕೆಗಳನ್ನು ಮೂಢನಂಬಿಕೆಗಳನ್ನಾಗಿಸಿ ಸ್ವಾರ್ಥ ಸಾಧನೆಗಾಗಿ ಉಪಯೋಗಿಸಿಕೊಳ್ಳುವ ಸಮಾಜ ಘಾತುಕ ಶಕ್ತಿಗಳ ವಿರುದ್ಧ ಮತ್ತು ಅವುಗಳನ್ನು ನಿಗ್ರಹಿಸುವಲ್ಲಿ ಸರಕಾರ ಸಮಾಜ ಸಂಘ–ಸಂಸ್ಥೆಗಳು ಮತ್ತು ಪ್ರತಿಯೊಬ್ಬರ ಪಾತ್ರವು ಅತಿಮುಖ್ಯವಾಗಿದ್ದು, ಈನಿಟ್ಟಿನಲ್ಲಿ ವ್ಯಕ್ತಿ ಸ್ವಯಂ ಜಾಗೃತನಾಗುವಂತಹ ಕಾರ್ಯಗಳು, ಬರಹಗಳು, ವಿಚಾರ ಸಂಕೀರಣಗಳು ಅವಶ್ಯಕವಾಗಿವೆ, ಅಲ್ಲದೆ ಇಂತಹ ಬರವಣಿಗೆ– ಚರ್ಚೆಗಳ ಮೂಲಕ ಜನರನ್ನು ಮೌಢ್ಯಗಳಿಂದ ಹೊರತರಲು ಸಹಾಯಕವಾಗುತ್ತವೆಂಬ ಆಶಯ ಮತ್ತು ಉದ್ದೇಶದಿಂದ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅರ್ಥಶಾಸ್ತ್ರಮ್

ಡಾ॥ ಶೋಭಾ ಎಲ್.
ಹಸ ಪ್ರಾಧ್ಯಪಕಿ, ಹಿಂದಿ ವಿಭಾಗ, ರಾಮಯ್ಯ ವಿಜ್ಞಾನ ಕಲಾ, ವಾಣಿಜ್ಯ ಪದವಿ ವಿದ್ಯಾಲಯ, ಬೆಂಗಳೂರು–560 054
shobhamsrcac@gmail.com

ಅರ್ಥಶಾಸ್ತ್ರವು ಎಲ್ಲಾ "ಸಾಮಾಜಿಕ ವಿಜ್ಞಾನಗಳ ರಾಣಿ" ಎಂದು ಪರಿಗಣಿಸಲಾಗಿದೆ. ಅಥಶಾಸ್ತ್ರವು ಬುದ್ಧಿವಂತ ಮೌಲ್ಯ ಹೊಂದಿದ ಒಂದು ಪ್ರಾಯೋಗಿಕ ವಿಜ್ಞಾನವಾಗಿದೆ, ಹಸಿವು, ಬಡತನ, ದಾರಿದ್ರ್ಯ, ನಿರುದ್ಯೋಗ, ಯುದ್ಧವಂತಹ ಅನೇಕ ಜಟಿಲ ಸಮಸ್ಯೆಗಳನ್ನು ಎದುರಿಸುತ್ತಿರುವ ಆಧುನಿಕ ಜಗತ್ತಿನಲ್ಲಿ ಅರ್ಥಶಾಸ್ತ್ರದ ಅಧ್ಯಯನ ಅನಿವಾರ್ಯವಾಗಿದೆ. ದಕ್ಷತೆಯ ಪಾಠ ಹೇಳುವ, ತರ್ಕಬದ್ಧ ನಿರ್ಣಯದ ವಿಧಾನ ತಿಳಿಸುವ ವಿಚಾರಪೂರ್ವಕ ಆಯ್ಕೆಯ ಮಾರ್ಗ ತೋರಿಸುವ ಅರಿವು ಎಲ್ಲರಿಗೂ ಅಗತ್ಯವಿದೆ.

ಅರ್ಥಶಾಸತ್ರದ ವ್ಯಾಖ್ಯೆಗಳು Definitions of economics : - ಅರ್ಥಶಾಸ್ತ್ರಜ್ಞರಲ್ಲಿರುವ ಭಿನ್ನಾಭಿಪ್ರಾಯಗಳ ಕಾರಣ ಇದರ ವ್ಯಾಖ್ಯೆ ಅರ್ಥೈಸಲು ಸಾಧ್ಯವಿಲ್ಲ. ಶ್ರೀಮತಿ ಬಾರ್ಬರಾ ವೂಟನ್ ಎಂಬ ಅರ್ಥಶಾಸ್ತ್ರಜ್ಞೆ "ಆರು ಜನ ಅರ್ಥಶಾಸ್ತ್ರಜ್ಞರು ಒಂದು ಕಡೆ ಕೂಡಿದರೆ ಏಳು ಅಭಿಪ್ರಾಯಗಳು ಹೊರಹೋಮ್ಮುತ್ತವೆ" ಎಂದು ಹೇಳಿದ್ದಾರೆ. ಆದರೂ ಇರದ ವ್ಯಾಖ್ಯಾನವನ್ನು ನಾಲ್ಕು ಮುಖ್ಯ ವಿಭಾಗಗಳಾಗಿ ವರ್ಗೀಕರಿಸಬಹುದು.

1. ಸಂಪತ್ತಿನ ವ್ಯಾಖ್ಯೆ (wealth definition)

2 ಯೋಗಕ್ಷೇಮ ವ್ಯಾಖ್ಯೆ (well fare definition)

3. ಅಭಿವೃದ್ಧಿಪರ ವ್ಯಾಖ್ಯೆ (development definition)

1. ಸಂಪತ್ತಿನ ವ್ಯಾಖ್ಯೆ (wealth definition) :– ಈ ವ್ಯಾಖ್ಯಾನ್ಯವು ಅರ್ಥಶಾಸ್ತ್ರದ ಮೊಟ್ಟಮೊದಲ ವ್ಯಾಖ್ಯಾನವಾಗಿದೆ. ಇದನ್ನು ಸಂಪ್ರದಾಯ ವ್ಯಾಖ್ಯಾನ (Classical definition) ಎಂದು ಕರೆಯಲಾಗಿದೆ. ಅರ್ಥಶಾಸ್ತ್ರದ ಪಿತಾಮಹ "ಆಡಮ್ ಸ್ಮಿತ್ ಮತ್ತು ಆತನ ಅನುಯಾಯಿಗಳು ಇದರ ವ್ಯಾಖ್ಯಾನವನ್ನು ನೀಡಿದರು. ಇದು ?Wealth of Nation? ಮತ್ತು "An enquiry into the nature and causes of wealth of Nation? (ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಪರಿಶೀಲನೆ) ಎಂಬ ಗ್ರಂಥದಲ್ಲಿ ಉಲ್ಲೇಖನೀಯವಾಗಿದೆ.

ಮಾನವನು ಸಂಪತ್ತನ್ನು ಹೇಗೆ ಗಳಿಸುತ್ತಾನೆ ಮತ್ತು ಅದನ್ನು ಹೇಗೆ ಅನುಭೋಗಿಸುತ್ತಾನೆ" ಎಂಬುದನ್ನು ಅಭ್ಯಸಿಸುವುದೇ ಅರ್ಥಶಾಸ್ತ್ರದ ಗುರಿ ಎಂದು ಸ್ಮಿತ್ ಅಭಿಪ್ರಾಯಪಡುತ್ತಾನೆ.

1932 ರಲ್ಲಿ ಪ್ರಕಟಗೊಂಡ ಪ್ರೊ. ಲಿಯೋನೆಲ್ ರಾಬಿನ್ಸ್ ರ ಕೃತಿ 'The nature and significance of economic science? ಅರ್ಥಶಾಸ್ತ್ರದ

ದಿಕ್ಕನ್ನೇ ಬದಲಿಸಿತು.

1. ಸಂಕುಚಿತ ಮತ್ತು ಅವೈಜ್ಞಾನಿಕ (Narrow and unscientific)

2. ವರ್ಗೀಯವಾದುದು (Classificatory)

3. ಎಲ್ಲಾ ಭೌತಿಕ ಸರಕುಗಳು ಮಾನವನ ಕಲ್ಯಾಣ ಹೇಚ್ಚಿಸುವುದಿಲ್ಲ (All material goods can not promote well fare)

4. ಮೂಲ ಸಮಸ್ಯೆಗಳ ನಿರ್ಲಕ್ಷ್ಯ (Neglect of basic problems)

ಅರ್ಥಶಾಸ್ತ್ರ ಒಂದು ವಿಜ್ಞಾನ ಅದು ಮಾನವನ ಗುರಿಗಳ ಮತ್ತು ವಿವಿಧ ಉಪಯೋಗಗಳನ್ನು ಹೊಂದಿರುವ ಕೊರತೆಯ ಸಾಧನಗಳಿಗೂ ಇರುವ ಸಂಬಂಧವನ್ನು ಕುರಿತು ಮಾನವನ ವರ್ತನೆಯನ್ನು ಅಧ್ಯಯನ ಮಾಡುತ್ತದೆ.

1. ಅಪರಿಮಿತ ಬಯಕೆಗಳು (Unlimited wants or ends)

2 ಮಿತವಾದ ಸಾಧನಗಳು (Scarce means)

3. ಆಯ್ಕೆಯ ಸಮಸ್ಯೆ (Problem of choice)

4. ಮಾನವೀಯ ಅಂಶದ ನಿರ್ಲಕ್ಷ್ಯೆ (Lacks human touch)

5. ಸಂಕುಚಿತ ವ್ಯಾಪ್ತಿ (Narrow scope)

6. ಆರ್ಥಿಕ ಸಮಸ್ಯೆಗಳ ನಿರ್ಲಕ್ಷ್ಯ (Economic problems ignored)

7. ಅಭಿವೃದ್ಧಿ ಅಂಶಗಳ ಅವಗಣನೆ (Ignore growth problem)

ಹೀಗೆ ರಾಬಿನ್ಸ್ ವ್ಯಾಖ್ಯಾನ ಹೆಚ್ಚು ವಿಶಾಲಾತ್ಮಕ ಮತ್ತು ವಿಶ್ಲೇಷಣಾತ್ಮಕ ಆಗಿದ್ದು ಹಿಂದಿನ ಎಲ್ಲಾ ವ್ಯಾಖ್ಯೆಗಳಿಗಿಂತ ಶ್ರೇಷ್ಠವಾಗಿದೆ ಎಂಬುದು ಸತ್ಯ.

ಬಯಕೆಗಳು ಮತ್ತು ಸಂಪನ್ಮೂಲ(Wants and resources)

ಮಾನವ ಇಷ್ಟಪಡುವ, ಬೇಕೆಂದು ಅಪೇಕ್ಷಿಸುವ ಎಲ್ಲಾ ಅಂಶಗಳನ್ನು ಬಯಕೆಗಳು ಅಥವಾ ಆಸೆಗಳೆಂದು ಕರೆಯಬಹುದು.

ಒಂದು ರೀತಿಯಲ್ಲಿ ಅರ್ಥಶಾಸ್ತ್ರದ ಅಧ್ಯಯನವೇ ಮಾನವನ ಬಯಕೆಗಳ ಅಧ್ಯಯನವಾಗಿದೆ. ಆಧುನಿಕ ಜಗತ್ತಿನಲ್ಲಿ ಬಯಕೆಗಳಿಗೆ ಇತಿ ಮಿತಿಯೇ ಇಲ್ಲದಂತಾಗಿದೆ. ಪ್ರಾಚೀನ ಕಾಲದಲ್ಲಿ ಮಾನವ ತುಂಬಾ ಸರಳವಾದ ಜೀವನ ನಡೆಸುತ್ತಿದ್ದ ಅವನ ಬಯಕೆಗಳು ಮಿತವಾಗಿದ್ದವು. ಈ ಮಾತು ವ್ಯಕ್ತಿಗಷ್ಟೇ ಅಲ್ಲದೆ ಪೂರ್ಣ ಸಮಾಜಕ್ಕೂ ಅನ್ವಯಿಸುತ್ತಿತ್ತು. ಭೂಮಿ, ಶ್ರಮ ಬಲ, ಕಚ್ಚಾ ವಸ್ತು, ಬಂಡವಾಳ, ತಂತ್ರಜ್ಞಾನ ಮುಂತಾದ ಸಂಪನ್ಮೂಲಗಳು ಮಿತವಾಗಿದ್ದು ಅಸಂಖ್ಯಾತ ಬಯಕೆಗಳು ಈಡೇರಿಸಲು ಅಸಾಧ್ಯವಾಗಿತ್ತು.

ಅರ್ಥವ್ಯವಸ್ಥೆಗೆ ಮಾರ್ಗದರ್ಶನ (Guiding the economy) ಬೆಲೆ ಯಂತ್ರವು ಇದಕ್ಕೆ ಸೂಕ್ತಮಾರ್ಗದರ್ಶನ ಒದಗಿಸುತ್ತದೆ.

1. ಅನುಭೌಗ ನಿಯಂತ್ರಣ (Regulating consumption)

2 ಉತ್ಪಾದನೆಗೆ ಮಾರ್ಗದರ್ಶನ (Guiding production)

3. ಹೂಡಿಕೆಗೆ ಮಾರ್ಗದರ್ಶನ (Guiding investment)

4. ಸಂಪನ್ಮೂಲಗಳ ಹಂಚಿಕೆ (Allocation of resources)

5. ಸಮನ್ವಯ (Coordination)

6. ಆದಾಯ ವಿತರಣೆ (Distribution of income)

7. ಉತ್ಪಾದನಾ ನಮ್ಯತೆಗೆ ಅವಕಾಶ (Scope for production flexibility)

ಬೆಲೆ ಯಂತ್ರದ ಗುಣಗಳು Merits of price mechanism

1. ಸಂಪನ್ಮೂಲಗಳ ದಕ್ಷ ಹಂಚಿಕೆ (Efficient allocation of resources)

2. ಗರಿಷ್ಟ ಸಾಮಾಜಿಕ ಹಿತ (Maximum social advantage)

3 ಆರ್ಥಿಕ ಸ್ವಾತಂತ್ರ್ಯ (Economic liberty)

4. ಆರ್ಥಿಕ ಚಟುವಟಿಕೆಗಳಿಗೆ ಮಾರ್ಗದರ್ಶನ (Guidance to economic activities)

ಮಿಶ್ರ ಆರ್ಥಿಕತೆಯಲ್ಲಿ ಬೆಲೆ ಯಂತ್ರದ ಪಾತ್ರ (Role of prise mechanism in a mixed economy) ಮಿಶ್ರ ಆರ್ಥಿಕತೆಯೆಂಬುದು ಬಂಡವಾಳಶಾಹಿ ಆರ್ಥಿಕತೆ ಮತ್ತು ಸಮಾಜವಾದಿ ಆರ್ಥಿಕತೆಯ ಒಳ್ಳೆಯ ಲಕ್ಷಣಗಳ ಸಂಮಿಶ್ರಣವಾಗಿದೆ. ಇದರಲ್ಲಿ ಸರ್ಕಾರೀ ಹತೋಟಿ ಮತ್ತು ನಿಯಂತ್ರಣದ ಮಿತಿಯಲ್ಲಿ ಬೆಲೆಯಂತ್ರ ವ್ಯವಸ್ಥೆ ಕಾರ್ಯನಿರ್ವಹಿಸುತ್ತದೆ.

ಅಭಿವೃದ್ಧಿ ಆಧಾರದ ಮೇಲಿನ ವಿಂಗಡಣೆ

ವಿವಿಧ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ ಸಾಧನೆಯ ಆಧಾರದಲ್ಲಿಯೇ ವಿಂಗಡಿಸಲಾದ ಆರ್ಥಿಕವ್ಯವಸ್ಥೆಗಳ ವಿವರಣೆ ಕೆಳಕಂಡಂತಿದೆ.

1 ಮುಂದುವರೆದ ದೇಶಗಳು (Developed contries)

ಗಣನೀಯ ಪ್ರಮಾಣದಲ್ಲಿ ಆರ್ಥಿಕ ಪ್ರಗತಿ ಸಾಧಿಸಿರುವ ಹಾಗೂ ಅಧಿಕ ತಲಾದಾಯ ಹೋಂದಿರುವ ರಾಷ್ಟ್ರಗಳನ್ನು ಮುಂದುವರೆದ ಅಥವಾ ಅಭಿವೃದ್ಧಿ ಹೊಂದಿದ ಅಥವಾ ಶ್ರೀಮಂತ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ. ಮುಂದುವರೆದ ರಾಷ್ಟ್ರಗಳು ಜಪಾನ್, ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಕೆನಡಾ, ಜರ್ಮನಿ, ಸ್ವೀಡನ್, ಸ್ವಿಡ್ಜರ್ ಲ್ಯಾಂಡ್, ನಾರ್ವೆ, ಡೆನ್ಮಾರ್ಕ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಬೆಲ್ಜಿಯಂ, ನೆದರ್ಲ್ಯಾಂಡ್, ಕುವೈತ್.

ಮುಂದುವರೆದ ದೇಶಗಳ ಲಕ್ಷಣಗಳು

1. ಅತ್ಯಧಿಕ ರಾಷ್ಟ್ರೀಯ ಮತ್ತು ತಲಾವರಮಾನ

2. ಬೃಹತ್ ಪ್ರಮಾಣದ ಬಂಡವಾಳ ಸಂಚಯನ

3. ಬೃಹತ್ ಪ್ರಮಾಣದ ಕೈಗಾರಿಕೀಕರಣ

4. ಉನ್ನತ ಜೀವನ ಮಟ್ಟ

5. ಅತ್ಯಾಧಿನುಕ ತಂತ್ರಜ್ಞಾನ ಮತ್ತು ಯಂತ್ರಗಳ ಬಳಕೆ

6. ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ವ್ಯಾಪಕ ಅಭಿವೃದ್ಧಿ

7. ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಪೂರ್ಣ ಸದುಪಯೋಗ

8. ಶ್ರಮವಿಭಜನೆಯ ವ್ಯಾಪಕ ಅಳವಡಿಕೆ

9. ಬೃಹತ್ ಪ್ರಮಾಣದ ಉತ್ಪಾದನೆ ಮತ್ತು ಅನುಭೋಗ

10. ಪೂರ್ಣ ಉದ್ಯೋಗ ಸಾಧನೆ

11. ಕಡಿಮೆ ಮಟ್ಟದ ಜನನ ಮತ್ತು ಮರಣ ಪ್ರಮಾಣಗಳು

2 ಹಿಂದುಳಿದ ದೇಶಗಳು

ಪ್ರೊ ರಾಗ್ನಾರ್ ನರ್ಕ್ಸ್ ಅವರ ಮೇರೆಗೆ "ಮುಂದುವರೆದ ರಾಷ್ಟ್ರಗಳೊಡನೆ ಹೋಲಿಸಿ ನೋಡಿದಾಗ ಯಾವ ದೇಶದಲ್ಲಿ ಜನಸಂಖ್ಯೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪ್ರಮಾಣಗಳಿಗೆ ಅನುಗುಣವಾಗಿ ಬಂಡವಾಳ ಲಭ್ಯವಿರುವುದಿಲ್ಲವೋ ಅದೇ ಹಿಂದುಳಿದ ರಾಷ್ಟ್ರ.?

ಉಪಸಂಹಾರ :– ಭಾರತ ಬಡಜನರಿಂದ ಕೂಡಿರುವ ಶ್ರೀಮಂತ ರಾಷ್ಟ್ರ ಎಂದು ಬಣ್ಣಿಸಲಾಗಿದೆ. ಜಗತ್ತಿನ ಅತ್ಯಂತ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತ ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ. ಅನೇಕ ಜೀವನದಿಗಳು, ಖನಿಜ, ಪರ್ವತಶ್ರೇಣಿಗಳು, ಉತ್ತಮ ಹವಾಮಾನ ಮತ್ತು ಪರಿಸರವನ್ನು ಹೋಂದಿರುವ ಭಾರತ ನೈಸರ್ಗಿಕವಾಗಿ ಒಂದು ಸಿರಿವಂತ ದೇಶವಾಗಿದೆ. ಅಂತಾರಾಷ್ಟ್ರೀಯ ಬೇಡಿಕೆಗಳಲ್ಲಿ ಪ್ರಮುಖ ಸ್ಥಾನ ಹೊಂದಿರುವ ಸಹಸ್ರಾರು ಸಮಸ್ಯೆಗಳಿಂದ ಕೂಡಿರುವ, ಅನೇಕ ವ್ಯಾಧಿಕಳಿಂದ ನರಳುತ್ತಿರುವ ಬಡಜನರಿಂದ ತುಂಬಿರುವ ಭಾರತ ಸಂಪದ್ಭರಿತ ದೇಶ.

ಭಾರತದಆರ್ಥಿಕತೆಯಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದ ಪ್ರಗತಿ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಅದರ ಪ್ರಭಾವ-ಒಂದುಅಧ್ಯಯನ

ಡಾ.ಪದ್ಮಿನಿ ಎಸ್.ವಿ,
ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಏಷ್ಯಾದಲ್ಲಿ ಸಂಶೋಧನೆ ಮತ್ತುಅಭಿವೃದ್ಧಿ ಮೇಲಿನ ಒಟ್ಟು ವೆಚ್ಚದಲ್ಲಿ 10% ರಷ್ಟು ಭಾರತದ ಪಾಲಿದೆ.ಭಾರತವು 2002-03 ರಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದ ವಿಷಯದಲ್ಲಿಇತರೆಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತಾ ಹಿಂದುಳಿದಿದೆ.ಭಾರತದಆರ್ಥಿಕತೆಯು 2002-03 ರಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದ ವಲಯದಲ್ಲಿ 3.7 ಬಿಲಿಯನ್ಅಮೇರಿಕನ್ ಡಾಲರಗಳಷ್ಟು ಹೂಡಿಕೆಯನ್ನು ಮಾಡಿದೆ.ಭಾರತದಇಂಜಿನಿಯರಿಂಗ್ ಮತ್ತುತಂತ್ರಜ್ಞಾನ ವಿಶ್ವವಿದ್ಯಾನಿಲಯಗಳಲ್ಲಿ ಮುಂಬಯಿಯ ಭಾರತೀಯತಂತ್ರಜ್ಞಾನ ಸಂಸ್ಥೆಯು 16ನೇ ರ್‍ಯಾಂಕಿಂಗ್ಅನ್ನು ಪಡೆದಿದೆ.

ಈ ಸಂಶೋಧನಾ ಲೇಖನದ ಪ್ರಮುಖಉದ್ದೇಶ: ಭಾರತದಆರ್ಥಿಕತೆಯಲ್ಲಿ ವಿಜ್ಞಾನ ಮತ್ತುತಂತ್ರಜ್ಞಾನದಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಅದರ ಪ್ರಭಾವವನ್ನು ವಿಶ್ಲೇಷಣೆ ಮಾಡುವುದಾಗಿದೆ.

ಈ ಸಂಶೋಧನಾ ಲೇಖನವನ್ನು ದ್ವಿತೀಯ ದತ್ತಾಂಶಗಳ ಸಹಾಯದಿಂದ ವಿಶ್ಲೇಷಿಸಲಾಗಿದೆ.

ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಯನ್ನುಉತ್ತೇಜಿಸುವುದರ ಸಲುವಾಗಿ ಹಲವು ಪ್ರಕಾರದ ಆವಿಷ್ಕಾರಗಳನ್ನು ಕೈಗೊಳ್ಳಲಾಯಿತು. ತತ್ಪರಿಣಾಮವಾಗಿಅತ್ಯಾಧುನಿಕಸಂಶೋಧನೆಮತ್ತುಅಭಿವೃದ್ಧಿಫಲಕಗಳನ್ನು ಸ್ಥಾಪಿಸಲಾಯಿತು. ಕ್ಷಿಪಣಿತಂತ್ರಜ್ಞಾನದಲ್ಲಿ, ಅಂತರಿಕ್ಷಸಂಶೋಧನೆಯಲ್ಲಿ ಭಾರತಅಗ್ರಗಣ್ಯರಾಷ್ಟ್ರ ಎನಿಸಿದ್ದು, ಈ ಪ್ರಕಾರದ ವಿಜ್ಞಾನ ಮತ್ತುತಂತ್ರಜ್ಞಾನದ ಪ್ರಗತಿಅವಶ್ಯವಾಗಿ ಭಾರತದಆರ್ಥಿಕತೆಯನ್ನು ಸುಸ್ಥಿರ ಅಭಿವೃದ್ಧಿಯಕಡೆಗೆಕೊಂಡೊಯ್ಯುವುದು.

ಪ್ರಮುಖ ಪದಗಳು:ಅಂತರಿಕ್ಷ ಸಂಶೋಧನೆ, ಕ್ಷಿಪಣಿತಂತ್ರಜ್ಞಾನ, ಇಸ್ರೋ, ಕೂಡನ್ ಕುಲನ್ ಅಣುಶಕ್ತಿ ಪ್ರಾಜೆಕ್ಟ್ ಘಟಕ-1, ಎರಡನೇ ಲೂನಾರ್ ಮಿಷನ್ಚಂದ್ರಯಾನ-2, ಡೇನಿಷ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್.

ಪರಿಚಯ:– ಜವಾಹರ್‌ಲಾಲ್ ನೆಹರೂ, ಭಾರತದ ಪ್ರಥಮ ಪ್ರಧಾನ ಮಂತ್ರಿಗಳು ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗಿನ ಸುಧಾರಣೆಗಳನ್ನು ಉತ್ತೇಜಿಸಿದರು.ಭಾರತೀಯ ತಂತ್ರಜ್ಞಾನ ಸಂಸ್ಥೆಗಳು 1950 ರ ಕೊನೆಯ ಭಾಗದಲ್ಲಿ ಮತ್ತು 1960 ರ ಆರಂಭದಲ್ಲಿ ಕರಣ್ ಪುರ್, ಮುಂಬಯಿ, ಮದ್ರಾಸ್ (ಚೆನ್ನೈ), ಕಾನ್ ಪುರ್ ಮತ್ತು ದೆಹಲಿಯಲ್ಲಿ ಸ್ಥಾಪಿತವಾದವು.ಭಾರತವು ಸೋವಿಯತ್ ಯೂನಿಯನ್ ಜೊತೆಗೆ ಒಪ್ಪಂದದೊಂದಿಗೆ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯು ಭಾರತದಲಿ ಆಂತರಿಕ್ಷ ಸಂಶೋಧನಾ ಬಗೆಗೆ ಸಂಶೋಧನೆಗಳನ್ನು ತೀವ್ರ ಸ್ವರೂಪದಲ್ಲಿ ನಡೆಸಿತು.

ಏಷ್ಯಾದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲಿನ ಒಟ್ಟು ವೆಚ್ಚದಲ್ಲಿ 10% ದಷ್ಟು ಭಾರತದ ಪಾಲಿದೆ.ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಸಚಿವರಾದ ಶ್ರೀಯುತ ಕಪಿಲ್ ಸಿಬಲ್‌ರ ಪ್ರಕಾರ ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯದಲ್ಲಿ ಭಾರತವು ಇತರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತಾ ಹಿಂದೆ ಇದೆ.ಭಾರತವು 2002-03 ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವಲಯದಲ್ಲಿ 3.7 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ಹೂಡಿಕೆಯನ್ನು ಮಾಡಿದೆ.ಚೈನಾವು ಭಾರತಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿ ಹೂಡಿಕೆಯನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ವಲಯದಲ್ಲಿ ಮಾಡಿದೆ.ಅಮೇರಿಕಾವು ಭಾರತಕ್ಕಿಂತ 75 ಪಟ್ಟು ಹೆಚ್ಚಿಗೆ ಹೂಡಿಕೆಯನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ವಲಯದಲ್ಲಿ ಮಾಡಿದೆ. ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ, ಇಂಜಿನಿಯರಿಂಗ್ ವಿಶ್ವವಿದ್ಯಾನಿಲಯಗಳಲ್ಲಿ ಮುಂಬಯಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಯು 16ನೇ ರ್‍ಯಾಂಕಿಂಗ್ ಅನ್ನು ಪಡೆದಿದೆ.

ಸಾಹಿತ್ಯಾವಲೋಕನ:

1. ರಾಜಾ ರಾಜೇಂದ್ರನ್ (2006),"ನ್ಯೂಕ್ಲಿಯರ್ ವೆಪನ್ಸ್ ಟೆಸ್ಟಿಂಗ್ ಎಂಡ್ ಡೆವಲಪ್ ಮೆಂಟ್" ಎನ್ ಸೈಕ್ಲೋಪೀಡಿಯಾ ಆಫ್ ಇಂಡಿಯಾ (3ನೇಆವೃತ್ತಿ),

2. ಶಂಕರ್.ಯು (2007), "ದಿ ಎಕನಾಮಿಕ್ಸ್ ಆಫ್ ಇಂಡಿಯನ್ ಸ್ಪೇಸ್-ಪ್ರೋಗ್ರಾಮ್" ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ.

3. ಶರ್ಮಾ, ಶಾಲೇಂದ್ರ ಡಿ (2006), "ಬಯೋಟೆಕ್ನಾಲಜಿ ರೆವಲ್ಯೂಷನ್" ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯಾ (1ನೇ ಆವೃತ್ತಿ).

4. ವ್ರಾಟ್ ಪ್ರೇಮ್ (2006), 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ', ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯಾ (2ನೇ ಆವೃತ್ತಿ).

ಸಂಶೋಧನಾ ವಿಧಾನ:–

ಲೇಖನದ ಉದ್ದೇಶಗಳು:–

1. ಭಾರತದ ಆರ್ಥಿಕತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಅದರ ಪ್ರಭಾವವನ್ನು ವಿಶ್ಲೇಷಿಸುವ ಸಲುವಾಗಿ.

ಅಂಕಿ ಅಂಶಗಳ ಸ್ವರೂಪ:– ಈ ಸಂಶೋಧನಾ ಲೇಖನದಲ್ಲಿ ದ್ವಿತೀಯ ದತ್ತಾಂಶಗಳನ್ನು ಬಳಕೆ ಮಾಡಿಕೊಂಡು ಭಾರತದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಅದರ ಪ್ರಭಾವವನ್ನು ವಿಶ್ಲೇಷಿಸಲಾಗಿದೆ.ಈ ದ್ವಿತೀಯ ದತ್ತಾಂಶಗಳನ್ನು ಆರ್ಥಿಕ ಸಮೀಕ್ಷಾ ವರದಿಗಳು, ರಾಷ್ಟ್ರೀಯ ಮಾದರಿ ಸಮೀಕ್ಷೆ, ಜನಗಣತಿ ವರದಿಗಳು, ಜರ್ನಲ್‌ಗಳು, ರಾಷ್ಟ್ರೀಯ ಮತ್ತು ರಾಜ್ಯ ದಿನಪತ್ರಿಕೆಗಳಿಂದ ಸಂಗ್ರಹಿಸಲಾಯಿತು.

ಸಂಶೋಧನಾ ಫಲಿತಾಂಶಗಳ ವಿಶ್ಲೇಷಣೆ:

ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ:–

* 2016 ರಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲೆ ಭಾರತದ ಪಾಲು 3.67% ಆಗಿದ್ದಿತು. ಇದು 2017 ರಲ್ಲಿ 3.75% ಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ.

* ಭಾರತದಲ್ಲಿ ವಿಶ್ವದ ತಂತ್ರಜ್ಞಾನದ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ 3ನೇ ರ್‍ಯಾಂಕಿಂಗ್ ಪಡೆದಿದೆ.

* ಆಧುನಿಕ ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಆರ್ಥಿಕ ಬೆಳವಣಿಗೆಯ ಅತ್ಯಂತ ಪ್ರಮುಖವಾದ ವಿಚಾರವಾಗಿ ಪರಿಗಣಿಸಿದೆ.

* ಅಂತರಿಕ್ಷ ಸಂಶೋಧನಾ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ವದಲ್ಲಿ ಭಾರತವು 5ನೇ ಸ್ಥಾನವನ್ನು ಪಡೆದಿದೆ.

* ಭಾರತವು ಅತ್ಯಾಧುನಿಕ ಉನ್ನತ ಮಟ್ಟದ ವೈಜ್ಞಾನಿಕ ಸಂಶೋಧನೆಯಲ್ಲಿ ಎರಡನೇ ರ್‍ಯಾಂಕಿಂಗ್ ಪಡೆದುಕೊಂಡಿದೆ.

ವಿಜ್ಞಾನದ ವಿಷಯಗಳ ಸಂಶೋಧನಾ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಭಾರತವು ವಿಶ್ವದ ಅತ್ಯುತ್ತಮ 10 ರಾಷ್ಟ್ರಗಳ ಪಟ್ಟಿಯಲ್ಲಿದೆ. ಮತ್ತು ಪೇಟೆಂಟ್ಸ್ (ಸ್ವಾಮ್ಯಸನ್ನದು)ಗಳನ್ನು ಪಡೆದುಕೊಂಡಿರುವುದರಲ್ಲಿ 12ನೇ ರ್‍ಯಾಂಕಿಂಗ್ ಪಡೆದುಕೊಂಡಿದೆ.

* ಭಾರತವು ಮಾಹಿತಿ ಮತ್ತು ತಂತ್ರಜ್ಞಾನದ ಪ್ರಮುಖ ರಫ್ತುಗಾರ ರಾಷ್ಟ್ರ ಎನಿಸಿದೆ.

* ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್‌ವೇರ್ ಎಂಡ್ ಸರ್ವಿಸಸ್ ಕಂಪೆನೀಸ್ ಪ್ರಕಾರ ಭಾರತದ ಎನಾಲಿಟೆಕ್ಸ್ ಕೈಗಾರಿಕೆ ಈಗ ಪ್ರಸ್ತುತ ಇರುವ 2 ಬಿಲಿಯನ್ ಅಮೇರಿಕನ್ ಡಾಲರ್‌ಗಳಿಂದ 16 ಬಿಲಿಯನ್ ಅಮೇರಿಕನ್ ಡಾಲರ್ ಗಳಿಗೆ 2025 ರ ವೇಳೆಗೆ ಏರಿಕೆಯಾಗುವುದು.

* ಇತ್ತೀಚೆಗೆ ಕೂಡನ್‌ಕುಲನ್ ಅಣುಶಕ್ತಿ ಪ್ರಾಜೆಕ್ಟ್ ಘಟಕ – 1(ಏಏಓಕಕ 1) 1000 ಮೆಗಾವ್ಯಾಟ್ ಸಾಮರ್ಥ್ಯ ಹೊಂದಿರುವುದನ್ನು ಸ್ಥಾಪಿಸಲಾಗಿದ್ದು, ಕೂಡನ್‌ಕುಲನ್ ಅಣುಶಕ್ತಿ ಪ್ರಾಜೆಕ್ಟ್ ಘಟಕ – 2 (ಏಏಓಕಕ 2), 1000 ಮೆಗಾವ್ಯಾಟ್ ಸಾಮರ್ಥ್ಯ ಇರುವುದನ್ನು ಸ್ಥಾಪಿಸುವ ಪ್ರಯತ್ನ ಸಾಗಿದೆ.

* ವಿಜ್ಞಾನ ಮತ್ತು ತಂತ್ರಜ್ಞಾನದ ವಲಯದಲ್ಲಿನ ಇತ್ತೀಚಿನ ಅಭಿವೃದ್ಧಿಗಳು ಈ ಕೆಳಗಿನಂತಿವೆ.

* ಅಂತರಿಕ್ಷ ಸಂಶೋಧನಾ ಸಂಸ್ಥೆಯ ಸಂಶೋಧನೆಗಳು ಮತ್ತು ಕ್ಷಿಪಣಿ ಉಡಾವಣೆ ಸಾಮರ್ಥ್ಯವು ಅಗಾಧ ಪ್ರಮಾಣದಲ್ಲಿ ಇನ್ನು

ಮುಂದಿನ 5 ವರ್ಷಗಳಲ್ಲಿ ಹೆಚ್ಚಾಗಲಿದೆ.

* ಭಾರತದ ಶಕ್ತಿ ವಲಯದ ಅಗತ್ಯಗಳನ್ನು ಪೂರೈಸುವ ಸಲುವಾಗಿ ಅತ್ಯಾಧುನಿಕ ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತಿವೆ.

* ಇಸ್ರೋವು 2018 ರ ಪ್ರಾರಂಭದಲ್ಲಿ ಎರಡನೇ ಲೂನಾರ್ ಮಿಷನ್ ಚಂದ್ರಯಾನ – 2 ವನ್ನು ಪ್ರಾರಂಭಿಸಲು ಸರ್ವ ಸಿದ್ಧತೆ ನಡೆಸಿದೆ.

* ಇಸ್ರೋವು 104 ಕ್ಷಿಪಣಿಗಳನ್ನು ಶ್ರೀಹರಿಕೋಟಾ, ಆಂದ್ರಪ್ರದೇಶ ಸತೀಶ್ ಧವನ್ ಅಂತರಿಕ್ಷ ಕೇಂದ್ರದಿಂದ ಉಡ್ಡಯನ ಮಾಡಿದೆ. ಇದು ಒಂದು ಅದ್ಭುತವಾದ ದಾಖಲೆ ಎನಿಸಿದೆ.

* ಇಸ್ರೋವು ಕೃಷಿಯ ಅನ್ವಯಿಕತೆಗೆ ಅತೀ ಹೆಚ್ಚು ಅನುಕೂಲದಾಯಕವಾಗಿಸಲು ರಿಮೋಟ್ ಸೆನ್ಸಿಂಗ್ ಕ್ಷಿಪಣಿ ಸೋರ್ಸ್‌ಸ್ಯಾಟ್ – 2 ನ್ನು ಕಕ್ಷೆಯಲ್ಲಿ ಇರಿಸಿತು.

ಹೂಡಿಕೆ ಕ್ಷೇತ್ರದಲ್ಲಿನ ಬೆಳವಣಿಗೆಗಳು:–

ಮಹೀಂದ್ರಾ ಮತ್ತು ಮಹೀಂದ್ರಾ ಲಿಮಿಟೆಡ್ ಹೈ ಎಂಡ್ ಎಲೆಕ್ಟ್ರಿಕ್ ಪವರ್ ಟೇನ್ ಪ್ರಾರಂಭಿಸುವ ಬಗೆಗೆ ಒಂದು ಯೋಜನೆಯನ್ನು ರೂಪಿಸುತ್ತಿದೆ.

* ಇನ್‌ಫೋಸಿಸ್ ಲಿಮಿಟೆಡ್ ಡೇನಿಷ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್–ಸ್ಟಾರ್ಟ್ ಅಪ್ ಯು.ಎನ್.ಎಸ್.ಐ.ಎಲ್.ಓ ಅಭಿವೃದ್ಧಿ ಮಾಡುವ ಸಲುವಾಗಿ ರೂ 14.5 ಕೋಟಿಯನ್ನು ಹೂಡಿಕೆ ಮಾಡಿದೆ.

* ಭಾರತ ಸರ್ಕಾರವು 12ನೇ ಪಂಚವಾರ್ಷಿಕ ಯೋಜನಾ ಅವಧಿ (2013–17) ಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ರಾಷ್ಟ್ರದ ಸಮಗ್ರ ರಾಷ್ಟ್ರೀಯ ಉತ್ಪನ್ನದ 2% ರಷ್ಟು ಹೂಡಿಕೆ ಮಾಡುವ ಗುರಿ ಹೊಂದಿದೆ.

ಮುಕ್ತಾಯ:–

ಭಾರತ ಸರ್ಕಾರವು ವೈಜ್ಞಾನಿಕ ಸಂಶೋಧನೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಹಲವು ಕ್ರಮಗಳನ್ನು ಕೈಗೊಂಡಿದೆ.

* ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು

* 2013 ರಲ್ಲಿ ನೂತನ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳನ್ನು ಪ್ರಾರಂಭಿಸಿತು.

* ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಹೆಚ್ಚಿಸಲು ಸೆಂಟರ್ಸ್ ಆಫ್ ಎಕ್ಸಲೆನ್ಸ್ ಫಾರ್ ರೀಸರ್ಚ್ ಎಂಡ್ ಫಸಿಲಿಟೀಸ್‌ಗಳನ್ನು ಹೊಸದಾಗಿ ಸ್ಥಾಪಿಸಲಾಯಿತು.

* ನೂತನ ಮತ್ತು ಅತ್ಯಾಕರ್ಷಕ ಶಿಷ್ಯವೇತನಗಳನ್ನು ಸ್ಥಾಪಿಸಲಾಯಿತು.

* ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲಾಯಿತು.

* ಸಾರ್ವಜನಿಕ – ಖಾಸಗಿ ಸಂಶೋಧನೆ ಮತ್ತು ಅಭಿವೃದ್ಧಿಯ ಸಹ ಪ್ರಾಯೋಜಕತ್ವವನ್ನು ಉತ್ತೇಜಿಸಲಾಯಿತು.

* ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳನ್ನು ಗುರುತಿಸಲಾಯಿತು.

* ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಕೈಗಾರಿಕಾ ಭಾಗವಹಿಸುವಿಕೆಯನ್ನು ಪೋಷಕ ಕ್ರಮಗಳನ್ನು ಕೈಗೊಳ್ಳಲಾಯಿತು.

* ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನದ ವಿಭಾಗವು 'ವಿಸಿಟಿಂಗ್ ಅಡ್ವಾನ್ಸ್ಡ್ ಜಾಯಿಂಟ್ ರೀಸರ್ಚ್ ಫ್ಯಾಕಲ್ಟಿ' (ವಜ್ರ), ಎಂಬ ನೂತನ ಯೋಜನೆಯನ್ನು ಜಾರಿಗೆ ತಂದಿದ್ದು, ಇದರ ಅಡಿಯಲ್ಲಿ ಭಾರತದ ವಿಜ್ಞಾನಿಗಳು, ವಿದೇಶದಲ್ಲಿ ನೆಲಸಿರುವ ಭಾರತೀಯ ವಿಜ್ಞಾನಿಗಳು ಭಾರತದಲ್ಲಿ ಅವಶ್ಯವಾಗಿ ಒಗ್ಗೂಡಿ ಸಂಶೋಧನೆಯಲ್ಲಿ ನಿರತರಾಗುವ ಸದವಕಾಶ ಕಲ್ಪಿಸಿತು.

ಈ ಪ್ರಕಾರವಾಗಿ ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ ಅಭೂತಪೂರ್ವಕವಾಗಿ ಸಾಗಿದ್ದು ಇದು ಅವಶ್ಯಕವಾಗಿ ಭಾರತದ ಆರ್ಥಿಕತೆಯನ್ನು ಸುಸ್ಥಿರ ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವುದು.

ಗ್ರಂಥಋಣ:–

1. ಬುರ್ಲೆಸನ್ ಡಿ (2008): "ಸ್ಪೇನ್ ಪ್ರೋಗ್ರಾಮ್ಸ್ ಒಔಟ್ ಸೈಡ್ ದಿ ಯುನೈಟೆಡ್ ಸ್ಟೇಟ್ಸ್: ಆಲ್ ಎಕ್ಸ್‌ಪ್ಲೋರೇಷನ್ ಎಂಡ್ ರೀಸರ್ಚ್ ಎಫರ್ಟ್ಸ್, ಕಂಟ್ರಿ ಬೈ ಕಂಟ್ರಿ, ಐ.ಎಸ್.ಬಿ.ಎನ್ 0–7864–1852–4,

2. ದಿ.ಹಿಂದೂ.15, ಆಗಸ್ಟ್, 2015, "ಮನಮೋಹನ್ ಸಿಂಗ್ ಫಾರ್ ಮಲಿ ಅನೋನ್ಸಸ್ ಇಂಡಿಯಾನ್ ಮಾರ್ಸ್ ಮಿಷನ್"

3. ವಾಟ್ಸನ್, ಜಾಕ್, (15 ಆಗಸ್ಟ್, 2012), "ಇಂಡಿಯಾ ಅನೋನ್ಸಸ್–ಮಾರ್ಸ್ ಮಿಷನ್ ಒನ್ ವೀಕ್ ಆಫ್ಟರ್ ಲ್ಯಾಂಡಿಂಗ್".

4. ಬಾಲ್, ಹರ್ ತೋಷ್ ಸಿಂಗ್ (30, ಆಗಸ್ಟ್ 2012) "ಬ್ರಿಕ್ಸ್ ಇನ್ ಸ್ಪೇಸ್: ನ್ಯೂಯರ್ಕ್ ಟೈಮ್ಸ್"

5. ದೇಸಾಯ್ ಅಶೋಕ್ ವಿ(2006), "ಇನ್‌ಫಾರ್‌ಮೇಶನ್ ಎಂಡ್ ಅದರ್ ಟೆಕ್ನಾಲಜಿ ಡೆವಲಪ್‌ಮೆಂಟ್' ಇನ್ ಎನ್ ಸೈಕ್ಲೋಪೀಡಿಯಾ ಆಫ್ ಇಂಡಿಯಾ, (ಸಂಪುಟ 2), ಸಂಕಲನಕಾರರು: ಸ್ಟಾನ್ಲೆ ವೋಲ್‌ಪೇರ್ಟ್ 269–273,ಥಾಮ್ಸನ್ ಗಾಲೆ: ಐ.ಎಸ್.ಬಿ.ಎನ್. 0–684–31351–0.

ಧನ್ವಂತರೀಯಮ್

ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು

DHANVANTAREEYAM

Health, Medical Sciences & Ayurveda

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಬಾಯಿಯ ಕ್ಯಾನ್ಸರ್ – ಒಂದು ನೋಟ "ಬಾಯಿಯ ಕ್ಯಾನ್ಸರ್"	ಡಾ. ಆರ್. ಎಂ. ಲಲಿತ	85 – 86
2.	ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ"ಕೂಷ್ಮಾಂಡಾವಲೇಹದ" ಔಷಧಿ ಗುಣಗಳ ವೈಜ್ಞಾನಿಕ ವಿಶ್ಲೇಷಣೆ	ಡಾ. ದೀಕ್ಷಾ ಸಿ ಅಮಿನ್ ಡಾ.ಶ್ರೀಪತಿ ಆಚಾರ್ಯ	87 – 92
3.	ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಹೇಳಿದ ಮೃತ್ಯುಂಜಯರಸದ ಚಿಕಿತ್ಸಾ ಪ್ರಯೋಗ: ಒಂದು ವೈಜ್ಞಾನಿಕ ವಿಶ್ಲೇಷಣೆ	ಡಾ॥ ಸುಹೈಲಾ ಎಸ್ ಎ ಡಾ॥ ಶ್ರೀಪತಿ ಆಚಾರ್ಯ	93 – 96
4.	ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಹೇಳಿದ "ಪ್ರವಾಳ ಪಂಚಾಮೃತ ರಸ"ದ ಆಮಯಿಕ ಪ್ರಯೋಗ – ವೈಜ್ಞಾನಿಕ ವಿಶ್ಲೇಷಣೆ	ಡಾ.ದೀಪ್ತಿ ಡಾ.ಶ್ರೀಪತಿ ಆಚಾರ್ಯ	96 – 99
5.	ದವಡೆಯ ಕೀಲಿನ ಸಂಧಿಹಿಡಿತ, ಬೇರ್ಪಡಿಸುವ ವಿಧಾನ– ಒಂದು ಪುನರ್ ಅವಲೋಕನ	ಡಾ॥ ಕೃಷ್ಣ ವಿಜಯನ್ ಡಾ॥ ರಜನಿಕಾಂತ್ ಬಿ.ಆರ್ ಡಾ॥ಕವಿತಾ ಪ್ರಸಾದ್	99 – 103

ಬಾಯಿಯ ಕ್ಯಾನ್ಸರ್ – ಒಂದು ನೋಟ "ಬಾಯಿಯ ಕ್ಯಾನ್ಸರ್"

ಡಾ. ಆರ್. ಎಂ. ಲಲಿತ
ಪ್ರೊಫೆಸರ್, ಓರಲ್ ಮತ್ತು ಮ್ಯಾಕ್ಸಿಲ್ಲೊಫೇಶಿಯಲ್ ಸರ್ಜರಿ ಇಲಾಖೆ, ಡೆಂಟಲ್ ಸೈನ್ಸ್ ಫ್ಯಾಕಲ್ಟಿ, ರಾಮಯ್ಯ ಆನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು

ದೇಹದಲ್ಲಿ ಎಲ್ಲಾ ಭಾಗಗಳಲ್ಲೂ ಕ್ಯಾನ್ಸರ್ ಉಂಟಾಗುವ ಹಾಗೆ ಬಾಯಿಯಲ್ಲೂ ಕೂಡ ಕ್ಯಾನ್ಸರ್ ಉಂಟಾಗುತ್ತದೆ. ಇದನ್ನು "ಕಾರ್ಸಿನೋಮಾ" ಎನ್ನುತ್ತಾರೆ. ಇದು ಬಾಯಿಯ ಒಳ ಪದರವಾದ ಮ್ಯೂಕಸ್ ಮೆಂಬ್ರೇನ್‌ನಲ್ಲಿ ಉಂಟಾಗುತ್ತದೆ. ಇದು ಎಲ್ಲಾ ಕ್ಯಾನ್ಸರ್‌ಗಳಲ್ಲಿ ಶೇಕಡ 6% ಉಂಟಾಗುವ ಸಂಭವವಿದೆ. ಬಾಯಿಯ ಕ್ಯಾನ್ಸರನ್ನು ಸುಲಭವಾಗಿ ಗುರುತಿಸಬಹುದು. ಮತ್ತು ಈ ಕ್ಯಾನ್ಸರಿನ ಕಾರಣ ತಿಳಿದಿರುವುದರಿಂದ ತಡೆಗಟ್ಟಬಹುದು. ಆದ್ದರಿಂದ ಈ ಕ್ಯಾನ್ಸರಿನ ಬಗ್ಗೆ ಅರಿವು ಮೂಡಿಸಲು ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಜನರಲ್ಲಿ ತಂಬಾಕು ಸೇವನೆ ಸರ್ವೇಸಾಮಾನ್ಯವಾಗಿದೆ. ತಂಬಾಕು ಎರಡು ರೀತಿಯದು – ಹೊಗೆರಹಿತ ಮತ್ತು ಹೊಗೆಸಹಿತ. ಹೊಗೆರಹಿತವಾದ ಕಡ್ಡಿಪುಡಿ, ತಂಬಾಕನ್ನು ಎಲೆ, ಅಡಿಕೆ, ಸುಣ್ಣದೊಂದಿಗೆ ಬಾಯಿಯಲ್ಲಿ ಇಟ್ಟುಕೊಳ್ಳುವುದರಿಂದ, ಕೆನ್ನೆಯ ಒಳಗಿನ ಕ್ಯಾನ್ಸರಿಗೆ ಕಾರಣವಾಗುತ್ತದೆ. ಬಾಯಿಯ ಕ್ಯಾನ್ಸರಿನ ಮುಖ್ಯ ಚಿಹ್ನೆಗಳು ಹೀಗಿವೆ – ಬಾಯಿಯಲ್ಲಿ ವಾಸಿಯಾಗದೆ ಇರುವ ಹುಣ್ಣು. ಬಾಯಿಯ ಅರೆತೆರೆಯುವಿಕೆ, ನಾಲಿಗೆಯನ್ನು ಹೊರಚಾಚಲು ಆಗದೆ ಇರುವುದು ಹಾಗೂ ಕತ್ತಿನಲ್ಲಿ ಗಂಟುಗಳು. ಬಾಯಿಯ ಕ್ಯಾನ್ಸರಿನ ಚಿಕಿತ್ಸೆ ಹೀಗಿದೆ – ಶಸ್ತ್ರಚಿಕಿತ್ಸೆ, ರೇಡಿಯೋಥೆರಪಿ (ವಿಕಿರಣ ಚಿಕಿತ್ಸೆ) ಕೀಮೋಥೆರಪಿ. ಬಾಯಿಯ ಕ್ಯಾನ್ಸರಗೆ ಕಾರಣ ಗೊತ್ತಿರುವುದರಿಂದ ಅದನ್ನು ಸುಲಭವಾಗಿ ತಡೆಗಟ್ಟಬಹುದು. ತಂಬಾಕಿನ ಸೇವನೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ತಿಳುವಳಿಕೆ ಜನರಲ್ಲಿ ಮೂಡಿಸಬೇಕು. ಜನರಲ್ಲಿ ಬಾಯಿಯ ಕ್ಯಾನ್ಸರ್ ಬಗ್ಗೆ ಸಾಕಷ್ಟು ಅರಿವು ಇಲ್ಲದೆ ಇರುವುದರಿಂದ ಈ ರೋಗಿಗಳು ದಂತವೈದ್ಯರ ಹತ್ತಿರ ಮೊದಲನೆ ಹಂತದಲ್ಲಿ ಬರುವುದಿಲ್ಲ. ಸಾಕಷ್ಟು ಉಲ್ಬಣಗೊಂಡ ಮೇಲೆ ದಂತವೈದ್ಯರ ಹತ್ತಿರ ಬರುತ್ತಾರೆ. ಆಗ ಅದನ್ನು ಸಂಪೂರ್ಣವಾಗಿ ಗುಣಪಡಿಸಲು ಆಗುವುದಿಲ್ಲ. ಶಸ್ತ್ರ ಚಿಕಿತ್ಸೆಯಿಂದ ತಡೆಗಟ್ಟಬಹುದು. ಈ ಕಾಗದದ ಮೂಲಕ ನಿವೇದಿಸುವುದೇನೆಂದರೆ ಬಾಯಿ ಕ್ಯಾನ್ಸರಿನ ಕಾರಣ, ಚಿಹ್ನೆ ಮತ್ತು ಗುಣಪಡಿಸುವ ರೀತಿ, ಹಾಗೂ ಕಂಡುಹಿಡಿಯುವ ವಿಧಾನ, ಮತ್ತು ತಡೆಗಟ್ಟುವ ಕ್ರಮ, ಇವುಗಳ ಬಗ್ಗೆ ಮಾಹಿತಿ ತಿಳಿದುಕೊಂಡು ಕ್ಯಾನ್ಸರ್‌ನ ಚಿಹ್ನೆ ಕಂಡುಬಂದ ಕೂಡಲೆ ದಂತವೈದ್ಯರನ್ನು ಸಂಪರ್ಕಿಸಿ. ಅವರ ಸಲಹೆಯನ್ನು ತಪ್ಪದೆ ಪಾಲಿಸಿ, ಔಷಧಿಗಳನ್ನು ಸೇವಿಸಿ,ಜೀವನ ಸುಗಮವಾಗಿಸಿಕೊಳ್ಳಿ.

ಬಾಯಿಯ ಕ್ಯಾನ್ಸರ್ – ಭಾರತದಲ್ಲಿ ಅತಿ ಸಾಮಾನ್ಯ ಕ್ಯಾನ್ಸರ್. 10 ಕ್ಯಾನ್ಸರ್ ಪ್ರಕರಣಗಳಲ್ಲಿ 4 ಬಾಯಿಯ ಕ್ಯಾನ್ಸರ್ ಆಗಿರುತ್ತದೆ. ವಾರ್ಷಿಕವಾಗಿ ಭಾರತದಲ್ಲಿ 1,30,000 ಮಂದಿ ಬಾಯಿಯ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ. ಅಂದರೆ ಪ್ರತಿ ಗಂಟೆಗೆ 14 ಮಂದಿಯ ಸಾವು. ಹೆಚ್ಚು ವ್ಯಾಪಕತೆಯ ಮೂಲ ಕಾರಣ ಧೂಮರಹಿತ ತಂಬಾಕು ಸೇವನೆ. ಇದಕ್ಕೆ ಹೋಲಿಸಿ ನೋಡಿದರೆ, ಯು.ಎಸ್. ನಲ್ಲಿ ಎಲ್ಲಾ ವಿಧದ ಕ್ಯಾನ್ಸರ್ ಪ್ರಕಾರಗಳಲ್ಲಿ ಬಾಯಿಯ ಕ್ಯಾನ್ಸರ್ ಕೇವಲ 13%, ಅಂದರೆ 30,000 ಹೊಸ ಕೇಸ್‌ಗಳು.

ಪ್ರಪಂಚದಾದ್ಯಂತ ಎಂಟನೆಯ ಅತಿ ಸಾಮಾನ್ಯ ಕ್ಯಾನ್ಸರ್ – ಬಾಯಿಯ ಕ್ಯಾನ್ಸರ್. ಇದು ಘಟಿಸುವ ಸಂಭವ – 2.1%. ಇದರಲ್ಲಿ ಸ್ಕ್ವಾಮಸ್ ಸೆಲ್ ಕಾರ್ಸಿನೋಮ – 90%. ಬಾಯಿಯ ಕ್ಯಾನ್ಸರ್ ಹೆಚ್ಚಾಗಿ ನಾಲಿಗೆಯ ಮೇಲೆ ಅಥವಾ ಬಾಯಿಯ ಒಳಭಾಗದಲ್ಲಿ ಕಂಡುಬರುತ್ತದೆ. ಬಾಯಿಯ ಹೊರ ಪದರದಲ್ಲಿ ಹಾಗೂ ತುಟಿಯ ಮೇಲೆ ಆರಂಭವಾಗುತ್ತದೆ. ಸಕಾಲದಲ್ಲಿ ಚಿಕಿತ್ಸೆ ನೀಡದಿದ್ದಲ್ಲಿ ಕ್ಯಾನ್ಸರ್ ದೇಹದ ಇತರ ಭಾಗಗಳಿಗೆ ಹರಡುವ ಸಂಭವವಿದೆ. ಬಾಯಿಯ ಯಾವುದೇ ಭಾಗದಲ್ಲಿ ಅಂದರೆ ತುಟಿ, ಬಾಯಿಯ ಒಳಭಾಗ, ನಾಲಿಗೆ, ಮೃದು ಮತ್ತು ಕಠಿಣ ಅಂಗುಳ, ಸೈನಸ್ ಹಾಗೂ ಗಂಟಲಿನಲ್ಲಿ ಕ್ಯಾನ್ಸರ್ ಉದ್ಭವಿಸುವ ಸಂಭವವಿದೆ.

ಬಾಯಿಯ ಕ್ಯಾನ್ಸರ್‌ನ ಕಾರಣಗಳು:– ತಂಬಾಕು ಮತ್ತು ಎಲೆ ಅಡಿಕೆ ಜಗಿಯುವುದು – ತಂಬಾಕು ಸುಮಾರು 4,000ಕ್ಕೂ ಹೆಚ್ಚು ರಾಸಾಯನಿಕ ಘಟಕಗಳನ್ನು ಹೊಂದಿರುತ್ತದೆ. ಅದರಲ್ಲಿ 2 ಡಜನ್‌ಗಿಂತ ಹೆಚ್ಚು ಕ್ಯಾನ್ಸರ್ ಜನಕ (ಕ್ಯಾನ್ಸರ್ ಉಂಟುಮಾಡುವ ರಸಾಯನಿಕಗಳು) ಎಂದು ಹೇಳಲಾಗುತ್ತದೆ.

ಮದ್ಯಪಾನ – ಮದ್ಯಪಾನವು ಬಾಯಿಯ ಒಳಪದರ ಮತ್ತು ಒಸಡುಗಳ ಕಿರುಕುಳಕ್ಕೆ ಕಾರಣವಾಗುವುದು. ಮದ್ಯಪಾನದೊಂದಿಗೆ ಧೂಮಪಾನವೂ ಸೇರಿದರೆ ಕಿರಿಕಿರಿ ಇನ್ನೂ ಹೆಚ್ಚಾಗುವುದು.

ಧೂಮಪಾನ – ಸಿಗರೇಟ್, ಬೀಡಿ, ಸಿಗಾರ್ ಇವುಗಳ ಹೊಗೆಯಲ್ಲಿರುವ ಕೆಲವು ರಾಸಾಯನಿಕಗಳು ಕ್ಯಾನ್ಸರ್ ಉಂಟುಮಾಡುತ್ತವೆ. ಈ ರಾಸಾಯನಿಕಗಳು ಬಾಯಿ ಕುಹರದ ಜೀವಕೋಶಗಳಲ್ಲಿನ (ಸೆಲ್ಸ್) ಆನುವಂಶಿಕ ಬದಲಾವಣೆಗಳನ್ನು ಉಂಟುಮಾಡಿ ಬಾಯಿಯ ಕ್ಯಾನ್ಸರ್ ಬೆಳವಣಿಗೆಗೆ ಕಾರಣವಾಗುತ್ತವೆ.

ಪಾನ್ ಮಸಾಲ ಹಾಗೂ ಘುಟ್ಕಾ ಸೇವನೆ – ಪಾನ್ ಮಸಾಲ ಹಾಗೂ ಘುಟ್ಕಾ ಇವುಗಳಲ್ಲಿ ಸುಪಾರಿ, ಸುಣ್ಣ ಮತ್ತು ಇತರ ಸುವಾಸನೆ ನೀಡುವ ವಸ್ತುಗಳು ಇರುತ್ತವೆ. ಅಡಿಕೆ ಅಥವಾ ಸುಪಾರಿ ವ್ಯಸನಕಾರಿ ವಸ್ತು. ಇದರ ದೀರ್ಘಕಾಲಿಕ ಬಳಕೆ ಬಾಯಿಯ ಕ್ಯಾನ್ಸರ್‌ಗೆ ಕಾರಣವಾಗುವುದು.

ಆಹಾರ, ವೈರಸ್‌ಗಳು, ರೋಗನಿರೋಧಕಗಳ ಕೊರತೆ, ಕುಟುಂಬದ ಇತಿಹಾಸ ಮೊದಲಾದವು ಬಾಯಿಯ ಕ್ಯಾನ್ಸರ್‌ನ ಇತರ ಕಾರಣಗಳು.

ಇತ್ತೀಚೆಗೆ ಯುವ ಪೀಳಿಗೆಯಲ್ಲಿ ನಾಲಿಗೆಯ ಕ್ಯಾನ್ಸರ್‌ನ ಪ್ರಕರಣ ಕೆಚ್ಚಾಗಿರುವುದು ಕಂಡುಬಂದಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯ 40%ಗೆ ಹೋಲಿಸಿದರೆ, ಭಾರತದಲ್ಲಿ ಉಲ್ಬಣಾವಸ್ಥೆಯಲ್ಲಿರುವ ರೋಗ ಪೀಡಿತರ ಸಂಖ್ಯೆ 60–80% ಆಗಿರುತ್ತದೆ.

ವೈದ್ಯಕೀಯ ಲಕ್ಷಣಗಳು

ಈ ಕೆಳಕಂಡ ರೋಗ ಲಕ್ಷಣಗಳು ಕ್ಯಾನ್ಸರ್ ರೋಗಿಗಳಲ್ಲಿ ಕಂಡುಬರುತ್ತವೆ –

* ಗುಣವಾಗದ ಹುಣ್ಣು

* ಬಾಯಿಯೊಳಗೆ ಬಿಳಿ ಅಥವಾ ಕೆಂಪು ಮಚ್ಚೆ

* ಕತ್ತಿನಲ್ಲಿ ಊತ

* ಹಲ್ಲುಗಳು ಅಲ್ಲಾಡುವುದು

* ಬಾಯಿ ಸರಿಯಾಗಿ ತೆರೆಯಲು ಆಗದಿರುವುದು

* ನಾಲಿಗೆ ಹೊರ ಚಾಚಲು ಆಗದಿರುವುದು

ಬಾಯಿಯ ಕ್ಯಾನ್ಸರ್ ಕಂಡುಹಿಡಿಯುವ ವಿಧಾನ :– ಬಾಯಿ ಹುಣ್ಣಿನ ಒಂದು ಚೂರು ಮಾಂಸವನ್ನು ತೆಗೆದು ಪರೀಕ್ಷೆಗೆ ಕಳುಹಿಸುವರು. ಇದಕ್ಕೆ ಬಯಾಪ್ಸಿ ಎನ್ನುವರು. ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿ ಕ್ಯಾನ್ಸರ್ ಎಂದು ದಂತವೈದ್ಯರು ಖಚಿತಪಡಿಸುವರು. ತಂಬಾಕು ಸೇವನೆಯ ಚಟದ ಹಿನ್ನೆಲೆ ಇದೆಯೇ ಎಂಬುದು ಕುಖ್ಯವಾಗಿ ತುಳಿದುಕೊಳ್ಳಬೇಕು. ಕೆಲವೊಮ್ಮೆ ಎಕ್ಸ್–ರೇ ಹಾಗೂ ಸ್ಕ್ಯಾನ್ ಮಾಡುವುದರ ಮೂಲಕ ಕ್ಯಾನ್ಸರ್ ಇದೆ ಎಂಬುದು ಖಚಿತವಾಗಿ ತಿಳಿಯುತ್ತದೆ.

ಚಿಕಿತ್ಸಾ ವಿಧಾನ

ಈ ಕೆಳಕಂಡ ಚಿಕಿತ್ಸಾ ವಿಧಾನಗಳನ್ನು ಕ್ಯಾನ್ಸರ್ ಗುಣಪಡಿಸಲು ಬಳಸಲಾಗುವುದು

ಶಸ್ತ್ರಚಿಕಿತ್ಸೆ, ಕೀಮೋಥೆರಪಿ, ರೇಡಿಯೋಥೆರಪಿ.

ತಂಬಾಕು ನಿರೋಧಕ ಕ್ರಮಗಳು :– ತಂಬಾಕು ಸೇವನೆ ತಡೆಗಟ್ಟಲು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು. ಅವೇನೆಂದರೆ

ಮಾನಸಿಕ ಬೆಂಬಲ ನೀಡುವುದು, ದೇಶಾದ್ಯಂತ ತಂಬಾಕು ವಿಮುಕ್ತಿ ಕೇಂದ್ರಗಳನ್ನು ಸ್ಥಾಪಿಸುವುದು, ತಂಬಾಕು ಸೇವನೆಯ ದುರಭ್ಯಾಸವನ್ನು ಬಿಡಿಸಲು ನಿಕೊಟಿನ್‌ಯುಕ್ತ ಚೂಯಿಂಗ್ ಗಮ್ ಅನ್ನು ಬಳಸುವ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.

ಬಾಯಿಯ ಸ್ವಯಂ ಪರೀಕ್ಷೆ;– ರೋಗಿ ತಮ್ಮ ಬಾಯಿಯನ್ನು ತಾವೇ ಹೀಗೆ ಪರೀಕ್ಷಿಸಿಕೊಳ್ಳಬಹುದು

ಕನ್ನಡಿಯ ಮುಂದೆ ನಿಂತು ಬಾಯಿಯನ್ನು ಅಗಲವಾಗಿ ತೆರೆಯಿರಿ. ಬಣ್ಣ, ವಿನ್ಯಾಸ, ಊತ ಅಥವಾ ಇನ್ನಾವುದೇ ರೀತಿಯ ಬದಲಾವಣೆ ಇದೆಯೇ ಗಮನಿಸಿ. ನಾಲಿಗೆಯನ್ನು ಹೊರಚಾಚಲು ಆಗುವುದೇ. ಬಾಯಿ ತೆರೆಯಲು ಕಷ್ಟವಾಗುತ್ತಿದೆಯೇ, ಕತ್ತಿನಲ್ಲಿ ಊತ ಇದೆಯೇ ಗಮನಿಸಿ.

ನಿಮ್ಮೊಂದಿಗೆ ತೆಗೆದುಕೊಂಡು ಹೋಗಬೇಕಾದ ಸಂದೇಶ :– ನಿಮ್ಮ ಬಾಯಿಯ ಕಡೆ ಸೂಕ್ಷ್ಮ ಗಮನವಿರಲಿ. ನಿಮ್ಮ ಬಾಯಿಯ ಸ್ವಯಂ ಪರೀಕ್ಷೆ ಮಾಡಿಕೊಂಡಾಗ ಯಾವುದೇ ವಿಧವಾದ ಬದಲಾವಣೆ / ಕಂಟಕ ಕಂಡುಬಂದಿದೆಯೇ ನೋಡಿ. ಮೌಖಿಕ ನೈರ್ಮಲ್ಯ ಮಾಪಕಗಳನ್ನು ತಪ್ಪದೇ ಪಾಲಿಸಿ. 6 ತಿಂಗಳಿಗೊಮ್ಮೆ ದಂತ ನೈದ್ಯರನ್ನು ಭೇಟಿ ಮಾಡಿ. ತಂಬಾಕು ಮತ್ತು ಇಂತಹ ಇತರ ಪದಾರ್ಥಗಳ ಹಾನಿಕಾರಕ ಪರಿಣಾಮಗಳ ಬಗ್ಗೆ ಅರಿತುಕೊಳ್ಳಿ. ಪ್ರತಿದಿನ ಹಣ್ಣು ಮತ್ತು ತರಕಾರಿ ಸೇವಿಸಿ. ಆದಷ್ಟು ಹೆಚ್ಚಾಗಿ ನೀರು ಕುಡಿಯಿರಿ. ಬಾಯಿಯಲ್ಲಿ ಯಾವುದೇ ವಿಧವಾದ ಹುಣ್ಣು ಕಂಡುಬಂದರೆ, ತಕ್ಷಣ ದಂತ ವೈದ್ಯರನ್ನು ಸಂಪರ್ಕಿಸಿ.

ಬಾಯಿಯ ಕ್ಯಾನ್ಸರನ್ನು ಆರಂಭಿಕ ಅವಸ್ಥೆಯಲ್ಲಿ ಪತ್ತೆ ಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಬಹುದು.

ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ"ಕೂಷ್ಮಾಂಡಾವಲೇಹದ"ಔಷಧಿ ಗುಣಗಳ ವೈಜ್ಞಾನಿಕ ವಿಶ್ಲೇಷಣೆ

ಡಾ. ದೀಕ್ಷಾ ಸಿ ಅಮಿನ್, ಡಾ.ಶ್ರೀಪತಿ ಆಚಾರ್ಯ,
ಇಂಟರ್ನ್, ಕಾಯಚಿಕಿತ್ಸಾ ವಿಭಾಗ, ಮುನಿಯಾಲ್ಆಯುರ್ವೇದಕಾಲೇಜು, ಮಣಿಪಾಲ.

ಕೂಷ್ಮಾಂಡಾವಲೇಹವುಒಂದು ಅವಲೇಹ ಪ್ರಕಾರವಾಗಿದ್ದು, ಮುಖ್ಯವಾಗಿಬೃಂಹಣ ಹಾಗು ಬಲ್ಯ ಗುಣಗಳನ್ನು ಹೊಂದಿರುವಯೌಗಿಕವಾಗಿದೆ.

ಆಯುರ್ವೇದದಲ್ಲಿರೋಗಿಯಅಭಿರುಚಿಯತಕ್ಕಂತೆಔಷಧವನ್ನುತಯಾರಿಸುವ ವಿಧಾನವಿದೆ.ಉದಾಹರಣೆಗಾಗಿ ಗಿಡಮೂಲಿಕೆಗಳು ಹಾಗೂ ಖನಿಜ ದ್ರವ್ಯಗಳನ್ನು ಉಪಯೋಗಿಸಿಕೊಂಡು ವಿಭಿನ್ನರೀತಿಯ ಕಲ್ಪನಗಳಾದ ಸ್ವರಸ, ಕಲ್ಕ, ಕ್ವಾಥ, ಚೂರ್ಣ, ಗುಟಿಕಾ, ರಸ, ಗುಗ್ಗುಲು, ತೈಲ, ಘೃತ ಇತ್ಯಾದಿಗಳನ್ನು ತಯಾರಿಸುತ್ತಾರೆ.ಔಷಧೀಯ ಗುಣಗಳನ್ನು ಹೇಳುವಾಗ "ಬಹುಕಲ್ಪಂ ಬಹುಗುಣಂ ಸಂಪನ್ನಂಯೋಗ್ಯಂಔಷಧಂ"– ಎಂದು ಅಷ್ಟಾಂಗ ಹೃದಯದಲ್ಲಿಉಲ್ಲೇಖವಿದೆ. ವಿಭಿನ್ನ ಗಿಡಮೂಲಿಕೆಗಳನ್ನು ಉಪಯೋಗಿಸಿ ರೋಗಿಯ ಇಷ್ಟಕ್ಕೆ (Palitablity) ತಕ್ಕಂತೆಔಷಧಯೋಗಿಕವನ್ನುತಯಾರಿಸಲಾಗುತ್ತದೆ. ಪ್ರಸಕ್ತವಾಗಿಅವಲೇಹವು ಮಧುರರಸವನ್ನು ಹೊಂದಿದ್ದು ಸೇವಿಸಲು ಹಿತವಾಗಿರುತ್ತದೆ.ಮಕ್ಕಳಿಗೂ ಕೂಡಇದನ್ನು ಸುಲಭವಾಗಿಕೊಡಬಹುದು.

ಕೂಷ್ಮಾಂಡಾವಲೇಹವುಮುಖ್ಯವಾಗಿಕಾರ್ಶ್ಯ, ಅಗ್ನಿಮಾಂದ್ಯ, ರಾಜಯಕ್ಷ್ಮ, ಆಮ್ಲಪಿತ್ತ, ಧಾತುಕ್ಷಯ, ಅರ್ಶಸ್ ಹಾಗು ಪಾಂಡುರೋಗದಲ್ಲಿಉತ್ತಮವಾದರಸಾಯನವಾಗಿದೆ.

ಕೂಷ್ಮಾಂಡಾವಲೇಹದಘಟಕ ದ್ರವ್ಯಗಳು:

1. ಬೂದುಗೂಂಬಳಕಾಯಿ
2. ಶುಂಠಿ
3. ಹಿಪ್ಪಲಿ
4. ಕರಿಮೆಣಸು
5. ಜೀರಿಗೆ
6. ಕೊತ್ತಂಬರಿ
7. ದಾಲ್ಚಿನಿ
8. ಏಲಕ್ಕಿ
9. ತಮಲ ಪತ್ರ
10. ಜೇನುತುಪ್ಪ
11. ತುಪ್ಪ
12. ಕಲ್ಲು ಸಕ್ಕರೆ

ಘಟಕ ದ್ರವ್ಯಗಳ ಗುಣ ಹಾಗೂ ಉಪಯೋಗಗಳು:

1. ಬೂದುಗೂಂಬಳಕಾಯಿ:

ಸಸ್ಯಶಾಸ್ತ್ರೀಯ ಹೆಸರು– ಬ್ನೇನಿನ್ಕಸ ಹಿಸ್ಪಿಡಾ

ರಸ – ಮಧುರ

ಗುಣ – ಲಘು, ಸ್ನಿಗ್ಧ

ವೀರ್ಯ – ಶೀತ

ವಿಪಾಕ – ಮಧುರ

ಕ್ರಿಯೆ– ಮೆಧ್ಯ, ತೃಷ್ಣ ನಿಗ್ರಹ, ಅನುಲೋಮನ, ಹೃದ್ಯ, ರಕ್ತ ಪಿತ್ತ ಶಾಮಕ, ಮೂತ್ರಜನನ, ಶುಕ್ರಲ, ಬೃಂಹ್ಮಣ, ಸಂತಾಪಹರ

ಚಿಕಿತ್ಸಕ ಬಳಕೆ– ವಿರೇಚಕ, ರಕ್ತಸ್ತಂಭಕ

2. ಶುಂಠಿ:

ಸಸ್ಯಶಾಸ್ತ್ರೀಯ ಹೆಸರು – ಜೀನ್ಜಿಬರ್ ಒಫಿಸಿನಾಲೆ

ರಸ – ಕಟು

ಗುಣ – ಲಘು, ಸ್ನಿಗ್ಧ

ವೀರ್ಯ – ಉಷ್ಣ

ವಿಪಾಕ – ಮಧುರ

ಕ್ರಿಯೆ – ವಾತಕಫ಼ ಶಾಮಕ, ದೀಪನ, ಶೂಲಪ್ರಶಮನ, ವಾತಾನುಲೋಮನ, ಹೃದ್ಯ, ಅರ್ಶೋಘ್ನ

ಚಿಕಿತ್ಸಕ ಬಳಕೆ – ಉತ್ತೇಜಕ, ದೀಪನ

ಕುಕ್ಷಿಶೂಲ ಮತ್ತುಅರುಚಿಯಲ್ಲಿಉಪಯುಕ್ತ

ರಸಾಯನಿಕಘಟಕ ದ್ರವ್ಯಗಳು – ಒಲಟೈಲ್ಒಯ್ಲ್, ರೆಸಿನೆಸ್ ಮ್ಯಾಟರ್, ಸ್ಟರ್ಚ, ಮ್ಯುಸಿಲೆಜ್

3. ಹಿಪ್ಪಲಿ:

ಸಸ್ಯಶಾಸ್ತ್ರೀಯ ಹೆಸರು – ಪೈಪರ್ ಲೊಂಗಮ್

ರಸ–ಕಟು

ಗುಣ – ಲಘು, ಸ್ನಿಗ್ಧ, ತೀಕ್ಷ್ಣ

ವೀರ್ಯ–ಅನುಷ್ಣ ಶೀತ

ವಿಪಾಕ – ಮಧುರ

ಕ್ರಿಯೆ – ವಾತಕಫ಼ ಶಾಮಕ, ದೀಪನ, ಮೇದ್ಯ, ಶೂಲಪ್ರಶಮನ, ವಾತಾನುಲೋಮನ, ಯಕೃತ್ಉತ್ತೇಜಕ, ಪ್ಲೀಹ ವೃದ್ಧಿಕರ, ರಕ್ತವರ್ಧಕ,ರಸಾಯನ, ಜ್ವರಘ್ನ, ಮೂತ್ರಲ, ರಕ್ತಶೋಧಕ

ಚಿಕಿತ್ಸಕ ಬಳಕೆ – ಬಲ್ಯ, ಬ್ರೋನ್ಕೈಟಿಸ್, ಕಾಸ, ಪ್ರತಿಷ್ಯಾಯ, ಸರ್ಪ ವಿಷಕ್ಕೆ ಪ್ರತಿವಿಷ.

4. ಕರಿಮೆಣಸು :

ಸಸ್ಯಶಾಸ್ತ್ರೀಯ ಹೆಸರು–ಪೈಫರ್ ನಿಗ್ರಮ್

ರಸ–ಕಟು

ಗುಣ – ಲಘು, ತೀಕ್ಷ್ಣ

ವೀರ್ಯ– ಉಷ್ಣ

ವಿಪಾಕ – ಕಟು

ಕ್ರಿಯೆ – ವಾತ ಪಿತ ಶಾಮಕ, ದೀಪನ, ಪಾಚನ, ಶೋಷನ, ನಾಡಿಬಲ್ಯ.

ಚಿಕಿತ್ಸಕ ಬಳಕೆ – ರುಚಿವರ್ಧಕ, ಶೂಲಹರ, ಪುಪ್ಪುಸ ಬಲದಾಯಕ, ಪ್ರತಿಶ್ಯಾಯ, ಅಸ್ತಮಾ, ಸ್ಥೌಲ್ಯಹರ.

5. ಜೀರಿಗೆ :

ಸಸ್ಯಶಾಸ್ತ್ರೀಯ ಹೆಸರು – ಕ್ಯುಮಿನಮ್ ಸೈಮಿನಮ್

ರಸ – ಕಟು

ಗುಣ – ಲಘು, ರೂಕ್ಷ

ವೀರ್ಯ – ಉಷ್ಣ

ವಿಪಾಕ – ಕಟು

ಕ್ರಿಯೆ – ದೀಪನ, ಶೂಲಪ್ರಶಮನ, ವಾತಾನುಲೋಮನ, ಮೂತ್ರಲ, ಲೇಖನ, ಬಲ್ಯ

ಚಿಕಿತ್ಸಕ ಬಳಕೆ – ದೌರ್ಬಲ್ಯ, ಶೋಥಹರ, ಚರ್ಮರೋಗ, ಕುಷ್ಠ, ಅಸ್ತಮಾ, ಬ್ರೋನ್‌ಕೈಟಿಸ್

6. ಕೊತ್ತಂಬರಿ :

ಸಸ್ಯಶಾಸ್ತ್ರೀಯ ಹೆಸರು–ಕೊರಿಯಾನ್‌ಡ್ರಮ್ ಸಟೈವಂ

ರಸ–ಕಟು, ಕಷಾಯ, ತಿಕ್ತ, ಮಧುರ

ಗುಣ – ಲಘು, ಸ್ನಿಗ್ದ

ವೀರ್ಯ– ಉಷ್ಣ

ವಿಪಾಕ – ಮಧುರ

ದೋಷಕರ್ಮ: ತ್ರಿದೋಷಹರ, ಪಿತ್ತಹರ

ಕ್ರಿಯೆ–ದಾಹಪ್ರಶಮನ, ತ್ರಿಷ್ನನಿಗ್ರಹ, ಮಸ್ತಿಷ್ಕಬಲ್ಯ, ದೀಪನ,ಯಕೃತ್‌ಉತ್ತೇಜಕ, ಹೃದ್ಯ, ಕ್ರಿಮಿಘ್ನ, ಜ್ವರಘ್ನ.

ಚಿಕಿತ್ಸಕ ಬಳಕೆ – ಉತ್ತೇಜಕ, ಸುಂಗಧಯುಕ್ತ, ದೀಪನ, ಮೂತ್ರಲ, ಬಲ್ಯ, ಶುಕ್ರಲ

ಇದರಕಷಾಯವನ್ನು ಹಾಲು ಮತ್ತು ಸಕ್ಕರೆಯೊಂದಿಗೆ ಸೇವಿಸುವುದರಿಂದ ಮೂಲವ್ಯಾಧಿಯ ಉಪಶಮನ ಸಾಧ್ಯ.ಈ ದ್ರವ್ಯವು ಶೀತಲ ಶೊತಹರ ಹಾಗೂ ಪಿತ್ತಹರ ಮತ್ತು ಬಾಹ್ಯಪ್ರಯೋಗದಲ್ಲೂಉಪಯುಕ್ತವಾಗುತ್ತದೆ.

7.ದಾಲ್ಚಿನಿ

ಸಸ್ಯಶಾಸ್ತ್ರೀಯ ಹೆಸರು– ಸಿನಮೊಮಮ್ ಜ್ಹೈಲೆನಿಕಮ್

ರಸ–ಕಟು, ತಿಕ್ತ

ಗುಣ – ಲಘು, ರೂಕ್ಷ, ತೀಕ್ಷ್ಣ

ವೀರ್ಯ– ಉಷ್ಣ

ವಿಪಾಕ – ಕಟು

ಕ್ರಿಯೆ–ದೀಪನ, ಪಾಚನ, ಅನುಲೋಮನ, ಹೃದಯೋತ್ತೆಜಕ, ವೇದನಾಸ್ಥಾಪನ, ಯಕೃತ್‌ಉತ್ತೇಜಕ

ಚಿಕಿತ್ಸಕ ಬಳಕೆ –ಉತ್ತೇಜಕ, ಸುಂಗಧಯುಕ್ತ, ದೀಪನ

8.ಏಲಕ್ಕಿ :

ಸಸ್ಯಶಾಸ್ತ್ರೀಯ ಹೆಸರು–ಎಲಿಕ್ಟೇರಿಯಕಾರ್ಡಮೊಮಮ್

ರಸ–ಕಟು

ಗುಣ – ಲಘು, ಮಧುರ, ರೂಕ್ಷ

ವೀರ್ಯ –ಶೀತ

ವಿಪಾಕ – ಮಧುರ

ದೋಷಕರ್ಮ–ತ್ರಿದೋಷಹರ

ಕ್ರಿಯೆ–ಅನುಲೋಮನ, ದಾಹಪ್ರಶಮನ, ಹೃದ್ಯ, ಬಲ್ಯ

ಚಿಕಿತ್ಸಕ ಬಳಕೆ –ಸುಂಗಧಯುಕ್ತ, ದೀಪನ, ಪಾಚನ, ಬಲ್ಯ, ಹೃದ್ಯ

ಅಸ್ತಮಾ, ದಾಹ, ಪ್ರತಿಶ್ಯಾಯ, ಕಾಸ, ರಾಜಯಕ್ಷ್ಮ, ಅಜೀರ್ಣ, ಮೂತ್ರಕ್ಷಯ ಹಾಗೂ ಮೂಲವ್ಯಾಧಿಯಉಪಶಮನದಲ್ಲಿಇದುಉಪಯುಕ್ತ.

9.ತಮಾಲ ಪತ್ರ :

ಸಸ್ಯಶಾಸ್ತ್ರೀಯ ಹೆಸರು – ಸಿನಮೊಮಮ್ ತಮಲ

ರಸ–ಕಟು, ಮಧುರ

ಗುಣ – ಲಘು, ತೀಕ್ಷ್ಣ

ವೀರ್ಯ– ಉಷ್ಣ

ವಿಪಾಕ –ಕಟು

ಕ್ರಿಯೆ–ದೀಪನ, ಪಾಚನ, ಬಲ್ಯ, ಹೃದ್ಯವಾತಾನುಲೋಮನ, ಲೇಖನ, ಅಮಾಶಯ ಬಲ್ಯ.

ಚಿಕಿತ್ಸಕ ಬಳಕೆ –ಉತ್ತೇಜಕ, ದೀಪನ, ಭೇದಿ, ಶೂಲ

ರಸಾಯನಿಕಘಟಕ ದ್ರವ್ಯಗಳು –ಟಾನಿನ್, ರೆಸಿನ್, ಸಿನಾಮಿಕ್ ಆ್ಯಸಿಡ್, ಸ್ಟಾರ್ಚ್, ಯುಜಿನೊಲ್

7. ಜೇನು :

ರಸ– ಮಧುರ

ಗುಣ – ಲಘು, ರೂಕ್ಷ,

ವೀರ್ಯ– ಉಷ್ಣ

ವಿಪಾಕ – ಮಧುರ

ದೋಷಕರ್ಮ–ತ್ರಿದೋಷಹರ

ಕ್ರಿಯೆ–ದೀಪನ

ಚಿಕಿತ್ಸಕ ಬಳಕೆ – ಅಸ್ತಮಾ,ಮಧುಮೇಹ, ಕಾಸ, ಮಲಬದ್ಧತೆ, ಮೂಲವ್ಯಾಧಿ

8. ತುಪ್ಪ :

ರಸ – ಮಧುರ

ಗುಣ – ಲಘು, ಸ್ನಿಗ್ಧ

ವೀರ್ಯ–ಶೀತ

ವಿಪಾಕ – ಮಧುರ

ಕ್ರಿಯೆ–ದೀಪನ, ಮೇದ್ಯ, ಬಲ್ಯ ಶುಕ್ರಲ, ಬೃಂಹಣ

ಚಿಕಿತ್ಸಕ ಬಳಕೆ –ಬೃಂಹಣ, ಒಜೋವೃದ್ಧಿ.

9. ಕಲ್ಲು ಸಕ್ಕರೆ :

ರಸ–ಮಧುರ

ಗುಣ–ಸ್ನಿಗ್ಧ

ವೀರ್ಯ–ಶೀತ

ವಿಪಾಕ – ಮಧುರ

ಕ್ರಿಯೆ–ಬೃಂಹಣ, ಧಾತುಪೋಷಣ

ಚಿಕಿತ್ಸಕ ಬಳಕೆ – ರಸಾಯನ

ತಯಾರಿಸುವ ವಿಧಾನ:

ಬೇಕಾಗುವ ಸಾಮಾಗ್ರಿಗಳು(ಘಟಕ ದ್ರವ್ಯಗಳು)

ಕ್ರ.ಸಂ	ಘಟಕ ದ್ರವ್ಯಗಳು	ಅಳತೆ (ಗ್ರಾಂ ಗಳಲ್ಲಿ)	ಅಳತೆ (ಪಲಗಳಲ್ಲಿ)
1	ಬೂದುಗೂಂಬಳಕಾಯಿ	4800	100
2	ಶುಂಠಿ	96	2
3	ಹಿಪ್ಪಲ್ಲಿ	96	2
4	ಕರಿಮೆಣಸು	24	1/2
5	ಜೀರಿಗೆ	96	2
6	ಕೊತ್ತಂಬರಿ	24	1/2
7	ದಾಲ್ಚಿನಿ	24	1/2
8	ಏಲಕ್ಕಿ	24	1/2
9	ತಮಲ ಪತ್ರ	24	1/2
10	ಜೇನುತುಪ್ಪ	192	4
11	ತುಪ್ಪ	384	8
12	ಕಲ್ಲು ಸಕ್ಕರೆ	4800	100
13	ನೀರು	9600	200

4800 ಗ್ರಾಂ ಬೂದುಗುಂಬಳ ಫಲವನ್ನು ಮೊದಲಿಗೆ ಹೊರಗಿನ ಸಿಪ್ಪೆಯನ್ನು ಮತ್ತು ಒಳಗಿನ ಬೀಜವನ್ನುತೆಗೆದು ಸ್ವಚ್ಛ ಮಾಡಬೇಕು.ನಂತರಇದನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ ನೀರಿನಲ್ಲಿ ಹಾಕಿ ನೀರುಅರ್ಧಇಂಗುವವರೆಗು ಬೇಯಿಸಬೇಕು. ಇದನ್ನು ಸೋಸಿ ಕಷಾಯವನ್ನು ಬೇರೆ ಪಾತ್ರೆಯಲ್ಲಿಇಡಬೇಕು.ಕುಂಬಳಕಾಯಿಯ ತುಂಡುಗಳನ್ನು ಬಟ್ಟೆಯಲ್ಲಿ ಹರಡಿ ಬಿಸಿಲಿನಲ್ಲಿಒಣಗಿಸಬೇಕು. ಬಿಸಿಲಿನಲ್ಲಿಒಣಗಿದ ಬೂದುಗುಂಬಳಕಾಯಿಯ ತುಂಡುಗಳಿಗೆ ದಪ್ಪ ಸೂಜಿಯಲ್ಲಿಚುಚ್ಚಿ ರಂಧ್ರಗಳನ್ನು ಮಾಡಿಅಂದಾಜು 8 ಪಲ ತುಪ್ಪದೊಂದಿಗೆತಾಮ್ರದ ಪಾತ್ರೆಯಲ್ಲಿ ಬೇಯಿಸಬೇಕು.ಮೋದಲು ತಯಾರಿಸಿದ ಕಷಾಯಕ್ಕೆ 100 ಪಲ ಕಲ್ಲುಸಕ್ಕರೆ ಹಾಕಿ ಪಾಕ ತಯಾರಿಸಿ, ತುಪ್ಪದಲ್ಲಿ ಬೇಯಿಸಿದ ಬೂದುಗುಂಬಳ ತುಂಡುಗಳನ್ನು ಹಾಕಿ ಅವಲೇಹ ಸಿದ್ಧ ಲಕ್ಷಣ ಬರುವವರೆಗೂ ಬೇಯಿಸಬೇಕು.

ನಂತರ ಪಾತ್ರೆಯನ್ನುಒಲೆಯಿಂದತೆಗೆದು ಮೇಲೆ ಹೇಲಿದ ಪ್ರಕ್ಷೇಪ ದ್ರವ್ಯಗಳನ್ನು ಸೂಕ್ಷ್ಮ ಚೂರ್ಣಗಳನ್ನಾಗಿ ಮಾಡಿಇದಕ್ಕೆ ಹಾಕಿ ಮಿಶ್ರಣ ಮಾಡಬೇಕು. ಅವಲೇಹ ತಣ್ಣಗಾದ ನಂತರ 4 ಪಲ ಜೇನುತುಪ್ಪ ಹಾಕಿ ಸರಿಯಾಗಿ ಮಿಶ್ರಣ ಮಾಡಿಗಾಜಿನ ಬಾಟಲಿಯಲ್ಲಿ ಗಾಳಿ ಆಡದಂತೆ ಶೇಖರಿಸಿ ಇಡಬೇಕು.

ಮಾತ್ರಾ– 12 ಗ್ರಾಂ (1 ತೊಲ)

ಉಪಯೋಗ: ರಕ್ತಪಿತ್ತ, ರಾಜಯಕ್ಷ್ಮ, ಜ್ವರ, ಶೋಷ, ತೃಷ್ಣ, ಭ್ರಮ, ವಾಂತಿ, ಶ್ವಾಸ, ಕಾಸ ಇತರೆ ರೋಗಗಳು.

ಈ ಕೂಷ್ಮಾಂಡಾವಲೇಹವು ಅಬಾಲವೃದ್ಧರವರೆಗಿನ ರೋಗಿಗಳಿಗೂ ಹಿತಕರವಾಗಿದೆ.ಇದು ಬಲ್ಯ, ವೃಶ್ಯ, ಬೃಂಹಣ

ಚರ್ಚೆ: ಕೂಷ್ಮಾಂಡಾವಲೇಹವುಒಂದುರಸಾಯನಯೋಗಿಕವಾಗಿದ್ದುಇದರಲ್ಲಿಕೂಷ್ಮಾಂಡವು ಮುಖ್ಯದ್ರವ್ಯವಾಗಿರುತ್ತದೆ.ಕೂಷ್ಮಾಂಡ ಸ್ವರಸವು ಮಧುರರಸಯುಕ್ತ, ಲಘು, ಸ್ನಿಗ್ದ ಗುಣಗಳನ್ನು ಹೊಂದಿದ್ದುಕರ್ಮದಲ್ಲಿ ಮೇದ್ಯ, ಅನುಲೋಮನ, ಹೃದ್ಯ,ರಕ್ತಪಿತ್ತಶಾಮಕ, ಮೂತ್ರಜನನ, ಶುಕ್ರಲ ಮತ್ತುಬೃಂಹಣಗುಣ ಹೊಂದಿದೆ. ಆದುದರಿಂದಇದನ್ನು ಸ್ಮೃತಿಹ್ರಾಸ, ಅಪಸ್ಮಾರ, ಉನ್ಮಾದ, ಬುದ್ಧಿಮಾಂದ್ಯ, ಮಲಬದ್ಧತೆ, ರಕ್ತಪಿತ್ತ, ಮೂತ್ರರೋಗಗಳು ಹಾಗೂ ಅನಪತ್ಯತಾ (Infertility) ರೋಗಗಳಲ್ಲಿ ಸಪಲವಾಗಿ ಪ್ರಯೋಗಿಸಬಹುದಾಗಿದೆ.

ಧಾನ್ಯಕ, ಏಲಕ್ಕಿ, ಜೀರಿಗೆ ಹಾಗೂ ಕಾಳುಮೆಣಸು ಇವು ಕಟುರಸವನ್ನು(Pungent) ಹೊಂದಿದ್ದು ದೀಪನ, ಪಾಚನ, ಶೂಲಹರ,ಕಪ 'ವಾತಹರ,ದಾಹಪ್ರಶಮನ ಗುಣಗಳನ್ನು ಹೊಂದಿದೆ. ಇವು ಉದರಶೂಲ,ಅಗ್ನಿಮಾಂದ್ಯ,ಅಜೀರ್ಣ,ಅರ್ಶಸ್, ಮಲಬದ್ದತೆ, ಯಕೃತ್ ಪ್ಲೀಹರೋಗಗಳು, ಪಾಂಡು, ಜ್ವರ ರೋಗಗಳಲ್ಲಿ ಉಪಯುಕ್ತವಾಗಿದೆ.ತುಪ್ಪವು ದೀಪನ,ಮೇಧ್ಯರಸಾಯನ, ಸ್ನೇಹನ ಗುಣಗಳನ್ನು ಹೊಂದಿದ್ದು ಬುದ್ಧಿಮಾಂದ್ಯ,ಅಪಸ್ಮಾರ, ಕಾರ್ಶ್ಯ, ಮಲಬದ್ಧತೆಯನ್ನು ನಿವಾರಿಸುತ್ತದೆ. ಜೇನುತುಪ್ಪವುಕಪಹರವಾಗಿದ್ದು, ಶ್ವಾಸ ಕಾಸರೋಗಗಳಲ್ಲಿ ಉಪಯುಕ್ತವಾಗಿದೆ.

ಕಲ್ಲುಸಕ್ಕರೆ ಮಧುರರಸವನ್ನು ಹೊಂದಿದ್ದು, ಬೃಂಹಣ,ಧಾತುಪೋಷಣ ಹಾಗೂ ರಸಾಯನಗುಣಗಳನ್ನು ಹೊಂದಿದೆ. ಒಟ್ಟಿನಲ್ಲಿ"ಕೂಷ್ಮಾಂಡಾವಲೇಹ"ವನ್ನು ಅಬಾಲವೃದ್ಧರಲ್ಲಿ ವಿಭಿನ್ನ ರೋಗಗಳಲ್ಲಿ ಸಫಲವಾಗಿ ಪ್ರಯೋಗಿಸಬಹುದಾಗಿದೆ.

ಉಪಸಂಹಾರ

1. ಕೂಷ್ಮಾಂಡಾವಲೇಹವು ಬೃಂಹಣಯೌಗಿಕವಾಗಿದ್ದು ಅಬಾಲವೃದ್ಧರಲ್ಲಿ ವಿವಿಧ ರೋಗಗಳಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸ ಬಹುದಾಗಿದೆ.

2. ಇದನ್ನುಕಾರ್ಶ್ಯ, ಅಗ್ನಿಮಾಂದ್ಯ, ಬುದ್ಧಿಮಾಂದ್ಯ, ಅಪಸ್ಮಾರ, ಅರ್ಶಸ್, ಉನ್ಮಾದ, ರಕ್ತಪ್ರದರ, ಪಾಂಡುರೋಗ, ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯಲ್ಲಿ ಉಪಯುಕ್ತ.

3. ಕೂಷ್ಮಾಂಡವುಃಒಖ (Basic Metabolic Rate)ಯನ್ನು ಹೆಚ್ಚಿಸುವುದರಿಂದಧಾತು ಪೋಷಣಕ್ರಮವುಉತ್ತಮವಾಗಿ ಪ್ರಶಸ್ತ ಧಾತುಗಳ ನಿರ್ಮಾಣದಲ್ಲಿ ಸಹಕಾರಿಯಾಗಿದೆ.

ಆಧಾರ ಗ್ರಂಥಗಳು:

1. ಡಾ.ರಾಮಚಂದ್ರ ಕೆರೆಡ್ಡಿ, ಬೈಷಜ್ಯಕಲ್ಪನ ವಿಜ್ಞಾನಂ, ಚೌಕಾಂಬ ಪ್ರಕಾಶಕರು, 2005, ಪು.ಸಂ. 217.

2. ಡಾ.ಶ್ರೀಪತಿ ಆಚಾರ್ಯ, ರಿಸರ್ಚ್ಇನ್ಆಯುರ್ವೇದ, 2010,ಪು.ಸಂ. 70.

3. ರಸತಂತ್ರ ಸಾರ ವ ಸಿದ್ಧ ಪ್ರಯೋಗ ಸಂಗ್ರಹ, ಕೃಷ್ಣಗೋಪಾಲ ಆಯುರ್ವೇದ ಭವನ, 1938,ಪು.ಸಂ.317

4. ಪಿ.ವಿ ಶರ್ಮ, ದ್ರವ್ಯಗುಣ ವಿಜ್ಞಾನ

5. ಆಚಾರ್ಯ ಸಿದ್ಧಿನಂದನ ಮಿಶ್ರಬೈಷಜ್ಯಕಲ್ಪನ ವಿಜ್ಞಾನಂ, ಚೌಕಾಂಬ ಪ್ರಕಾಶಕರು,2007,ಪು.ಸಂ. 185.

ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಹೇಳಿದ ಮೃತ್ಯುಂಜಯರಸದಚಿಕಿತ್ಸಾ ಪ್ರಯೋಗ: ಒಂದು ವೈಜ್ಞಾನಿಕ ವಿಶ್ಲೇಷಣೆ

ಡಾ॥ ಸುಹೈಲಾ ಎಸ್ ಎ, ಡಾ॥ ಶ್ರೀಪತಿ ಆಚಾರ್ಯ
ಇಂಟರ್ನ್, Email ID: suhailarisha00@gmail.com ಮುನಿಯಾಲುಆಯುರ್ವೇದಕಾಲೇಜು, ಮಣಿಪಾಲ

ಪೀಠಿಕೆ: ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ರಸಶಾಸ್ತ್ರೀಯ ಔಷಧಿಗಳು ಬಹಳ ಪ್ರಾಮುಖ್ಯತೆಯನ್ನು ಹೊಂದಿವೆ. ಇವುಗಳಲ್ಲಿ ಮುಖ್ಯವಾಗಿ ವಾನಸ್ಪತಿಕ, ಖನಿಜ ಹಾಗೂ ಪ್ರಾಣಿಜನ್ಯ ದ್ರವ್ಯಗಳನ್ನು ಉಪಯೋಗಿಸಿ ಔಷಧಿಗಳನ್ನು ತಯಾರಿಸಲಾಗುತ್ತದೆ.

"ಅಲ್ಪಮಾತ್ರೋಪಯೋಗಿತ್ವಾತ್ ಅರುಚೇಃಅಪ್ರಸಂಗತಃ।

ಕ್ಷಿಪ್ರಮಾರೋಗ್ಯದಾಯಿತ್ವಾತ್ ಔಷಧೇಭ್ಯೋಃಅಧಿಕೋರಸಃ॥

ಅಂದರೆ ಔಷಧಿಡಗಳಲ್ಲಿ ರಸೌಷಧಿಗಳು ಮುಖ್ಯವಾದುವು. ಏಕೆಂದರೆ–ಇವುಗಳನ್ನು ಅಲ್ಪ ಪ್ರಮಾಣದಲ್ಲಿ ಪ್ರಯೋಗಿಸಿದರೂ ಕೂಡಾಅರುಚಿಂ–ಯನ್ನುಉಂಟುಮಾಡದೆಕೂಡಲೇ ಪರಿಣಾಮವನ್ನುತೋರಿಸುತ್ತವೆ. ಇವುಗಳಲ್ಲಿ ಮೃತ್ಯುಂಜಯರಸವುಒಂದುಔಷಧಿಯಾಗಿದ್ದು ಶುದ್ಧವತ್ಸನಾಭ, ಶುದ್ಧಹಿಂಗುಲ, ಶುದ್ಧಟಂಕಣ, ಮರಿಚ ಹಾಗೂ ಪಿಪ್ಪಲಿ ಘಟಕದ್ರವ್ಯಗಳನ್ನು ಹೊಂದಿದೆ. ಈ ಯೌಗಿಕವನ್ನು ಮುಖ್ಯವಾಗಿಜ್ವರ, ಕಾಸ, ಶ್ವಾಸ, ಪೀನಸ, ಪ್ರತಿಶ್ಯಾಯ, ಶಿರಃಶೂಲ, ಆಮವಾತ ಮತ್ತುಜ್ವರಾತಿಸಾರದಲ್ಲಿ ಪ್ರಯೋಗಿಸುತ್ತಾರೆ.

ಘಟಕ ದ್ರವ್ಯಗಳು:–

	ಹೆಸರು	ಉಪಯೋಗಿಸುವ ಭಾಗ	ಪ್ರಮಾಣ
1.	ವತ್ಸನಾಭ	ಬೇರು	ಒಂದು ಭಾಗ
2.	ಮರಿಚ	ಫಲ	ಒಂದು ಭಾಗ
3.	ಪಿಪ್ಪಲಿ	ಫಲ	ಒಂದು ಭಾಗ
4.	ಗಂಧಕ	ಶುದ್ಧಗಂಧಕ	ಒಂದು ಭಾಗ
5.	ಟಂಕಣ	ಶುದ್ಧಟಂಕಣ	ಒಂದು ಭಾಗ
6.	ಹಿಂಗುಲ	ಶುದ್ಧ ಹಿಂಗುಲ	ಎರಡು ಭಾಗ

ಘಟಕ ದ್ರವ್ಯಗಳ ಗುಣ ಹಾಗೂ ಉಪಯೋಗಗಳು:–

1. ವತ್ಸನಾಭ:–

ವೈಜ್ಞಾನಿಕ ಹೆಸರು : ಎಕೊನೈಟಂ ಫೆರೋಕ್ಸ್
ರಸ : ಮಧುರ, ತಿಕ್ತ, ಕಟು, ಕಷಾಯ
ಗುಣ : ಲಘು, ತೀಕ್ಷ್ಣ, ವ್ಯವಾಯಿ
ವೀರ್ಯ : ಉಷ್ಣ
ವಿಪಾಕ : ಕಟು
ದೋಷಕರ್ಮ : ತ್ರಿದೋಷಘ್ನ
ಅಗ್ನಿಕರ್ಮ : ದೀಪನ
ರೋಗಕರ್ಮ : ಅಜೀರ್ಣ, ಅರುಚಿ, ಕಾಸ, ಶ್ವಾಸ, ನೇತ್ರರೋಗ, ಶಿರಃಶೂಲ, ಪ್ರತಿಶ್ಯಾಯ, ಜ್ವರ, ಆಮವಾತ
ರಾಸಾಯನಿಕ ಸಂಯೋಜನೆ :ಟೋಕ್ಸಿಕ್ಆಲ್ಕಲೋಯಿಡ್ಸ್, ಸೂಡೋಎಕೋನೈಟಿನ್, ಇಂಡಾಕೋನೈಟಿನ್ಇತ್ಯಾದಿ.

2. ಮರಿಚ :–

ವೈಜ್ಞಾನಿಕ ಹೆಸರು : ಪೈಪರ್ ನೈಗ್ರಮ್
ರಸ : ಕಟು

ಗುಣ : ಲಘು, ತೀಕ್ಷ್ಣ, ಸೂಕ್ಷ್ಮ
ವೀರ್ಯ : ಉಷ್ಣ
ವಿಪಾಕ : ಕಟು
ದೋಷಕರ್ಮ : ಕಫವಾತಹರ
ಅಗ್ನಿಕರ್ಮ : ದೀಪನ
ರೋಗಕರ್ಮ :ಅರುಚಿ, ಕಾಸ, ಶ್ವಾಸ, ಶೂಲ, ಕ್ರಿಮಿ, ಹೃದ್ರೋಗ, ವಿಷಘ್ನ
ವಿಶೇಷ ಕರ್ಮ : ಪ್ರಮಥಿ, ರೋಚನ, ಚಕ್ಷುಶ್ಯ, ರಸಾಯನ
ರಾಸಾಯನಿಕ ಸಂಯೋಜನೆ :ಪೈಪೆರಿನ್, ಪೈಪೆರಿಕ್ ಆಸಿಡ್, ಪೈಪೆರಿಡಿನ್, ಬ್ಯೂಟ್ರಿಕ್ ಆಸಿಡ್ ಇತ್ಯಾದಿ.

3. ಪಿಪ್ಪಲಿ:–

ವೈಜ್ಞಾನಿಕ ಹೆಸರು : ಪೈಪರ್ ಲೋಂಗಮ್
ರಸ : ಕಟು
ಗುಣ : ಲಘು, ತೀಕ್ಷ್ಣ
ವೀರ್ಯ : ಉಷ್ಣ
ವಿಪಾಕ : ಮಧುರ
ದೋಷಕರ್ಮ : ವಾತ ಮತ್ತುಕಫದೋಷವನ್ನು ಸಮಸ್ಥಿತಿಯಲ್ಲಿಡುತ್ತದೆ.
ಅಗ್ನಿಕರ್ಮ : ದೀಪನ
ರೋಗಕರ್ಮ : ಅಜೀರ್ಣ, ಕಾಸ, ಶ್ವಾಸ, ಉದರ, ಕುಷ್ಠ, ಪ್ರಮೇಹ, ಗುಲ್ಮ, ಅರ್ಶಸ್, ಆಮವಾತ
ವಿಶೇಷ ಕರ್ಮ : ರಸಾಯನ, ವೃಷ್ಯ
ರಾಸಾಯನಿಕ ಸಂಯೋಜನೆ :ಪೈಪೆರಿನ್, ಪೈಪರ್ ಲೋಂಗ್ಯುಮಿನ್ಇತ್ಯಾದಿ.

4. ಗಂಧಕ:–

ಹೆಸರು : ಸಲ್ಫರ್
ರಸ : ಕಷಾಯ, ಮಧುರ, ಕಟು, ತಿಕ್ತ
ಗುಣ : ಉಷ್ಣ, ಸ್ನಿಗ್ಧ, ಸರ
ವೀರ್ಯ : ಉಷ್ಣ
ವಿಪಾಕ : ಕಟು
ದೋಷಕರ್ಮ : ವಾತಕಫಹರ
ಅಗ್ನಿಕರ್ಮ : ದೀಪನ
ರೋಗಕರ್ಮ : ಕುಷ್ಠಹರ, ಕ್ರಿಮಿಹರ, ಚಕ್ಷುಶ್ಯ, ಆಮಶೋಥಹರ
ವಿಶೇಷ ಕರ್ಮ : ರಸಾಯನ

5. ಟಂಕಣ:–

ಹೆಸರು : ಸೋಡಿಯಂ ಪೈರೊಬೋರೆಟ್
ರಸ : ಕಟು
ಗುಣ : ರೂಕ್ಷ, ತೀಕ್ಷ್ಣ, ಸರ
ವೀರ್ಯ : ಉಷ್ಣ

ವಿಪಾಕ : ಕಟು

ದೋಷಕರ್ಮ : ವಾತಕಫಘ್ನ

ಅಗ್ನಿಕರ್ಮ : ದೀಪನ

ರೋಗಕರ್ಮ : ಅಶ್ಮರಿ, ಅತಿಸಾರ, ಆಧ್ಮಾನ, ಕಾಸ ಶ್ವಾಸಹರ, ವ್ರಣ ನಾಶಕ, ಆಮನಾಶನ, ವಿಷಹರ

6. ಹಿಂಗುಲ:–

ಹೆಸರು : ಸಿನ್ನೇಬರ್

ರಸ : ತಿಕ್ತ, ಕಷಾಯ, ಕಟು

ದೋಷಕರ್ಮ : ತ್ರಿದೋಷನಾಶಕ

ರೋಗಕರ್ಮ : ನೇತ್ರರೋಗಘ್ನ, ಹೃಲ್ಲಾಸ, ಕುಷ್ಠ, ಜ್ವರ, ಕಾಮಲ

ನಿರ್ಮಾಣ ವಿಧಿ:– ಹಿಂಗುಲವನ್ನು ನಿಂಬೆ ಹಣ್ಣಿನರಸದೊಂದಿಗೆಅರೆದು ಮೊದಲಿಗೆ ಶುದ್ಧ ಮಾಡಬೇಕು. ವತ್ಸನಾಭವನ್ನುಗೋಮೂತ್ರದಲ್ಲಿ ನೆನೆಯಿಸಿ ಬಿಸಿಲಿನಲ್ಲಿ ಒಣಗಿಸಿ ಶುದ್ಧ ಮಾಡಬೇಕು. ನಂತರ ಶುದ್ಧ ವತ್ಸನಾಭ, ಮರೀಚ, ಪಿಪ್ಪಲಿಯನ್ನುಕುಟ್ಟಿ ಸೂಕ್ಷ್ಮಚೂರ್ಣವನ್ನಾಗಿ ಮಾಡಬೇಕು. ಮೇಲೆ ಹೇಳಿದ ಪ್ರಮಾಣದಲ್ಲಿ ಶುದ್ಧ ಹಿಂಗುಲ, ಶುದ್ಧಟಂಕಣ ಮತ್ತು ಶುದ್ಧಗಂಧಕವನ್ನು ಸೂಕ್ಷ್ಮಚೂರ್ಣದೊಂದಿಗೆ ನೀರನ್ನು ಸೇರಿಸಿ ಅರೆದು ಸಣ್ಣ ಸಣ್ಣ ಮಾತ್ರೆಗಳನ್ನಾಗಿ ಮಾಡಿ ನೆರಳಿನಲ್ಲಿ ಒಣಗಿಸಿ ಉಪಯೋಗಿಸಬೇಕು. ಮಾತ್ರೆಗಳನ್ನು ಗಾಜಿನ ಪಾತ್ರೆಯಲ್ಲಿ ಗಾಳಿಯಾಡದಂತೆ ತೆಗೆದಿಡಬೇಕು.

ಚರ್ಚೆ:– ಮೃತ್ಯುಂಜಯರಸವುಖನಿಜ ಹಾಗೂ ವಾನಸ್ಪತಿಕ ದ್ರವ್ಯಗಳನ್ನು ಹೊಂದಿದ್ದು ಮುಖ್ಯವಾಗಿಚಿರಕಾಲೀನ ವ್ಯಾಧಿಗಳಲ್ಲಿ ಪರಿಣಾಮಕಾರಿಯಾಗಿಉಪಯೋಗಿಸಬಹುದಾಗಿದೆ. ಇದನ್ನು ಮುಖ್ಯವಾಗಿಕಫಜಜ್ವರ, ಪ್ರತಿಶ್ಯಾಯ(Rhinorrhoea), ಕಾಸ(Cough), ಶ್ವಾಸ(Breathlessness), ಶಿರಃಶೂಲ(Headache), ಆಮವಾತ (Rheumatoid Arthritis) ಮತ್ತುಜ್ವರಾತಿಸಾರ (Fever & Diarrhoea)ಗಳಲ್ಲಿ ಉಪಯೋಗಿಸುತ್ತಾರೆ.

ಶುದ್ಧವತ್ಸನಾಭವುತೀಕ್ಷ್ಣ, ವ್ಯವಾಯಿ ಹಾಗೂ ಉಷ್ಣ ಗುಣಗಳನ್ನು ಹೊಂದಿದ್ದುಉತ್ತಮಜ್ವರಹರ, ಸಂತಾಪ ನಾಶಕ, ದೀಪನ, ವೇದನಾಶಾಮಕ ಮತ್ತುರಸಾಯನ ಗುಣಗಳನ್ನು ಹೊಂದಿದೆ. ಶುದ್ಧ ಹಿಂಗುಲವು (Cinnabar) ಕ್ರಿಮಿಘ್ನ, ರಸಾಯನ ಮತ್ತುಓಜಸ್ಕರÀ(Immunomodulatory) ಗುಣಗಳನ್ನು ಹೊಂದಿದೆ.

ಮರೀಚ ಹಾಗೂ ಪಿಪ್ಪಲಿಗಳು ಕಟುರಸಯುಕ್ತ, ಲಘು, ತೀಕ್ಷ್ಣ, ಉಷ್ಣ ಗುಣಯುಕ್ತ, ದೀಪನ, ಪಾಚನ, ಕ್ರಿಮಿಘ್ನ, ಅತಿಸಾರಹರ, ಶೂಲಹರ, ವೇದನಾಹರಮತ್ತುಜ್ವರಘ್ನ ಗುಣಗಳನ್ನು ಹೊಂದಿವೆ. ಶುದ್ಧಗಂಧಕವುಕಷಾಯ ಮಧುರ, ಕಟು, ತಿಕ್ತರಸಯುಕ್ತವಾಗಿದ್ದು ಉಷ್ಣ, ಸರಗುಣಗಳನ್ನು ಹೊಂದಿದೆ. ಅಲ್ಲದೆರಸಾಯನ ವಾತಕಫಹರ, ಬಲ್ಯ, ಮೇಧ್ಯ, ಕ್ರಮಿಘ್ನ, ಕುಷ್ಠಘ್ನ ಮತ್ತು ಪಿತ್ತಕಾರಕ ಕರ್ಮಗಳನ್ನು ಹೊಂದಿದೆ.

ಒಟ್ಟಿನಲ್ಲಿ ಮೃತ್ಯುಂಜಯರಸವುಜ್ವರ ಮತ್ತುಕಫ ರೋಗಳಲ್ಲಿ ಅತ್ಯುತ್ತಮ ಫಲದಾಯಕವಾಗಿದೆ. ವ್ಯವಾಯಿ ವಿಕಾಸಿ ಗುಣಗಳಿಂದ ಕ್ಷಿಪ್ರವಾಗಿಜ್ವರಹರವಾಗಿದೆ. ಕೆಲವೊಮ್ಮೆ ಬಹಳ ಕಾಲ ಪ್ರಯೋಗಿಸುವುದರಿಂದ ಪಾರದಜನ್ಯಜೀರ್ಣಉಪದ್ರವಗಳು ಉಂಟಾಗುವ ಸಂಭವವುಇದೆ. ಆದ್ದರಿಂದ ಈ ಯೌಗಿಕವನ್ನು ಶಾಸ್ತ್ರೀಯವಾಗಿ ಶೋಧನಾದಿ ಸಂಸ್ಕಾರ ಪೂರಕವಾಗಿ ತಯಾರಿಸಿ ಉಪಯೋಗಿಸಬೇಕು. ಆದರೆಅಧಿಕಕಾಲದ ವರೆಗೆ ಹಾಳಾಗದೆ ಇದನ್ನು ಶೇಖರಿಸಿ ಇಡಬಹುದು.

ಉಪಸಂಹಾರ:–

1. ಮೃತ್ಯುಂಜಯರಸವನ್ನುಜ್ವರ ಹಾಗೂ ಕಫ ರೋಗಳಲ್ಲಿ ಪರಿಣಾಮಕಾರಿಯಾಗಿಉಪಯೋಗಿಸಬಹುದು.
2. ವಿಭಿನ್ನಅನುಪಾನದಜೊತೆಗೆ ಪ್ರಯೋಗಿಸಿದ್ದಲ್ಲಿ ಇದು ಬೇರೆ ಬೇರೆರೀತಿಯ ರೋಗಗಳನ್ನು ನಾಶ ಪಡಿಸುವುದು.
3. ಅಧಿಕ ಕಾಲ ಪ್ರಯೋಗಿಸುವುದರಿಂದ ಕೆಲವೊಮ್ಮೆಚಿರಕಾಲೀನ ಉಪದ್ರವಗಳು ಕಂಡು ಬರಬಹುದು.
4. 3 ವರ್ಷಕ್ಕಿಂತ ಸಣ್ಣ ಮಕ್ಕಳಲ್ಲಿ ಇದನ್ನುಜಾಗರೂಕತೆಯಿಂದಉಪಯೋಗಿಸಬೇಕು.

ಆಧಾರಭೂತ ಗ್ರಂಥಗಳು:–

1. ವಾಗ್ಭಟ, ರಸರತ್ನ ಸಮುಚ್ಚಯ, ಚೌಕಾಂಬ, 2009,418

2. ಶ್ರೀಪತಿ ಅಚಾರ್ಯ, ರಿಸರ್ಚೆಸ್‌ಇನ್‌ಆಯುರ್ವೇದ, ಮಣಿಪಾಲ, 2014

3. ಯೋಗರತ್ನಾಕರ, ಯೋಗರತ್ನಾಕರ, ಚೌಕಾಂಬ, 2010, 672

4. ಶ್ರೀ ಗೋಪಾಲ ಕೃಷ್ಣ ಭಟ್, ರಸೇಂದ್ರ ಸಾರ ಸಂಗ್ರಹ, ಚೌಕಾಂಭ,2007,1112

5. ಆಚಾರ್ಯಅನಂತದೇವಸೂರಿ, ರಸಚಿಂತಾಮಣಿ,2008,284

ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಹೇಳಿದ "ಪ್ರವಾಳ ಪಂಚಾಮೃತ ರಸ"ದ ಆಮಯಿಕ ಪ್ರಯೋಗ – ವೈಜ್ಞಾನಿಕ ವಿಶ್ಲೇಷಣೆ

ಡಾ.ದೀಪ್ತಿ, ಡಾ.ಶ್ರೀಪತಿ ಆಚಾರ್ಯ
ಇಂಟರ್ನ್, ಇಮೈಲ್: deepimanipal40@gmail.com ಪ್ರೊಫೆಸರ್, ಮುನಿಯಾಲು ಆಯುರ್ವೇದ ವೈದ್ಯಕೀಯ ಆಸ್ಪತ್ರೆ, ಮಣಿಪಾಲ.

ಪೀಠಿಕೆ: ಪ್ರವಾಳ ಪಂಚಾಮೃತ ರಸವು ಒಂದು ಸುಧಾವರ್ಗೀಯ ಯೌಗಿಕವಾಗಿದ್ದು ಪಿತ್ತಜ ರೋಗಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತವೆ. ಈ ಔಷಧವನ್ನು ಬಾಲಶೋಷ (Emaciation in children), ಕಫ ಮತ್ತು ಅಮಜ ರೋಗಗಳು, ಹೃದ್ರೋಗ (Cardiac disorders), ಪ್ಲೀಹ ವೃದ್ಧಿ (Splenic disorders), ಕ್ಷಯ (Emaciation), ಮಂದಾಗ್ನಿ (Loss of appetite), ಶ್ವಾಸ (breathlessness), ಮತ್ತು ಇತರ ಉದರ ರೋಗಗಳಲ್ಲಿ ಪ್ರಯೋಗಿಸುತ್ತಾರೆ. ಮೂತ್ರರೋಗಗಳಲ್ಲಿ ಮತ್ತು ಅಸ್ಥಿ ರೋಗಗಳಲ್ಲಿ ಇದು ಫಲದಾಯಕವಾಗಿದೆ.

ಇದರ ಘಟಕ ದ್ರವ್ಯಗಳು ಮುಖ್ಯವಾಗಿ ಸುಧಾಂಶ (ಕ್ಯಾಲ್ಸಿಯಂ) ವನ್ನು ಹೊಂದಿದೆ. ಆಧುನಿಕರ ಪ್ರಕಾರ ಕ್ಯಾಲ್ಸಿಯಂ ಅಸ್ಥಿ–ದಂತಗಳ ಮತ್ತು ತರುಣಾಸ್ಥಿಗಳ ಘಟಕ ದ್ರವ್ಯವಾಗಿದ್ದು ರಕ್ತದಲ್ಲಿಯೂ ಕೂಡಾ ಅಯಾನಿಕ್ ರೂಪದಲ್ಲಿ ಕಂಡುಬರುತ್ತದೆ. ಅವರ ಪ್ರಕಾರ ರಕ್ತ ಹೆಪ್ಪುಗಟ್ಟುವಿಕೆ, ಅಸ್ಥಿ–ದಂತಗಳ ಬೆಳವಣಿಗೆ, ಮಾಂಸಪೇಶೀಗಳ ಸಂಕೊಚ–ವಿಕಾಸ ಪ್ರಕ್ರಿಯೆ ಹಾಗೂ ಇತರ ಕೋಶಾಣುಗಳ ಕಾರ್ಯವನ್ನು ಮಾಡುವ ಎಂಜೈಮ್‌ಗಳ ಕಾರ್ಯವನ್ನು ನಿಯಂತ್ರಿಸುತ್ತದೆ. ಶರೀರದಲ್ಲಿ ರಕ್ತಚಾಪವನ್ನು ನಿಯಂತ್ರಿಸುವಲ್ಲಿಯೂ ಇದು ಮುಖ್ಯ ಪಾತ್ರ ವಹಿಸುತ್ತದೆ. ಪ್ಯಾರಥೈರಾಯಿಡ್ ಹಾರ್ಮೋನ್ ಹಾಗೂ ಕ್ಯಾಲ್ಸಿಟೋನಿನ್‌ಗಳು ರಕ್ತದಲ್ಲಿರುವ ಕ್ಯಾಲ್ಸಿಯಂನ ಪ್ರಮಾಣವನ್ನು ನಿಯಂತ್ರಿಸುತ್ತದೆ.

ಪ್ರವಾಳ ಪಂಚಾಮೃತ ರಸವು ಸುಧಾವರ್ಗೀಯ ಔಷಧವಾಗಿರುವುದರಿಂದ ಈ ಮೇಲಿನ ಕ್ಯಾಲ್ಸಿಯಂನ ಕಾರ್ಯಗಳ ಮೇಲೆ ಪ್ರಭಾವ ಭೀರುತ್ತದೆ. ಅಲ್ಲದೆ ಆಯುರ್ವೇದ ವಿಜ್ಞಾನದಲ್ಲಿ ಹೇಳಿದ ಚಿಕಿತ್ಸಿಕೀಯ ಪ್ರಯೋಗಗಳಲ್ಲೂ ಪರಿಣಾಮಕಾರಿಯಾಗಿದೆ.

ಘಟಕ ದ್ರವ್ಯಗಳು:

1) ಪ್ರವಾಳ ಭಸ್ಮ – 50ಗ್ರಾಂ

2) ಮೌಕ್ತಿಕ ಭಸ್ಮ – 25ಗ್ರಾಂ

3) ಶಂಖ ಭಸ್ಮ – 25ಗ್ರಾಂ

4) ಮುಕ್ತಾಶುಕ್ತಿ ಭಸ್ಮ – 25ಗ್ರಾಂ

5) ವರಾಟಿಕಾ ಭಸ್ಮ – 25ಗ್ರಾಂ

6) ಅರ್ಕ ಕ್ಷೀರ – 150 ಮಿ.ಲೀ

ತಯಾರಿಸುವ ವಿಧಾನ: ಮೊದಲಿಗೆ ಮುಕ್ತಾಫಲ ಭಸ್ಮವನ್ನು ಅರ್ಕ ಕ್ಷೀರದೊಂದಿಗೆ 9 ಗಂಟೆಗಳ ಕಾಲ ಅರೆಯಬೇಕು. ನಂತರ ಉಳಿದ ಭಸ್ಮಗಳನ್ನು ಹಾಕಿ ಅರೆದು ಪಿಷ್ಠಿಯನ್ನು ತಯಾರಿಸಿ ಸಣ್ಣ ಸಣ್ಣ ರೊಟ್ಟಿಗಳಂತೆ ತಟ್ಟಿ ಒಣಗಿಸಬೇಕು. ನಂತರ ಒಣಗಿದ ರೊಟ್ಟಿಗಳನ್ನು ಶರಾವ ಸಂಪುಟದಲ್ಲಿ ಹಾಕಿ ಬಟ್ಟೆ ಮತ್ತು ಮಣ್ಣಿನಿಂದ ಬಂಧ ಮಾಡಬೇಕು. ಮಣ್ಣು ಒಣಗಿದ ನಂತರ ಗಜಪುಟವನ್ನು ಕೊಡಬೇಕು. ಸಂಪುಟವನ್ನು ಅದಾಗಿಯೇ ತಣ್ಣಗಾಗಲು ಬಿಡಬೇಕು. ತಣ್ಣಗಾದ ನಂತರ ಭಸ್ಮಗಳನ್ನು ಅರೆಯುವ ಕಲ್ಲಿನಲ್ಲಿ ಸೂಕ್ಷ್ಮ ಚೂರ್ಣವಾಗುವವರೆಗೆ ಅರೆದು ಒಣಗಿಸಿ ಶೇಖರಿಸಿಡಬೇಕು.

ಪ್ರಮಾಣ: 375 ಮಿ.ಗ್ರಾಂ ಬೆಳಗ್ಗೆ ಮತ್ತು ರಾತ್ರಿ.

ಅನುಪಾನ: ಪಿಪ್ಪಲಿ, ಜೇನುತುಪ್ಪ, ನಿಂಬು ರಸ.

ಘಟಕ ದ್ರವ್ಯಗಳ ಗುಣ ಹಾಗೂ ಉಪಯೋಗ:

1) ಪ್ರವಾಳ (calx of corals) ಭಸ್ಮ:

* ರಸ– ಮಧುರ, ಅಮ್ಲ
* ಗುಣ–ಲಘು, ರೂಕ್ಷ
* ವೀರ್ಯ– ಶೀತ
* ವಿಪಾಕ–ಮಧುರ
* ದೋಷಘ್ನತೆ– ತ್ರಿದೋಷಹರ
* ಕರ್ಮ– ದೀಪನ, ಪಾಚನ, ನೇತ್ರ್ಯ, ಬಲ್ಯ, ವೃಷ್ಯ, ವಿಷಘ್ನ, ಭೂತಘ್ನ, ಶುಕ್ರಲ.
* ಉಪಯೋಗ– ಕ್ಷಯ, ನೇತ್ರರೋಗ, ರಕ್ತಪಿತ್ತ, ಕಾಸ (ಕೆಮ್ಮು), ಅಮ್ಲಪಿತ್ತ, ಪರಿಣಾಮಶೂಲ.

2) ಶಂಖ ಭಸ್ಮ (calx of sacred conch):

* ರಸ– ಕಟು, ಕಷಾಯ
* ಗುಣ– ಲಘು, ರೂಕ್ಷ
* ವೀರ್ಯ– ಶೀತ
* ವಿಪಾಕ– ಕಟು
* ದೋಷಘ್ನತೆ– ತ್ರಿದೋಷಹರ ಮುಖ್ಯವಾಗಿ ಕಫವಾತಹರ
* ಕರ್ಮ– ಗ್ರಾಹಿ, ದೀಪನ, ಪಾಚನ, ಶೂಲಹರ, ಬಲ್ಯ, ವರ್ಣ್ಯ.
* ಉಪಯೋಗ– ಪರಿಣಾಮಶೂಲ, ಅಮ್ಲಪಿತ್ತ, ಅಗ್ನಿಮಾಂದ್ಯ, ಯವನ ಪಿಡಕ (ಮೊಡವೆ), ಗ್ರಹಣಿ, ಅತಿಸಾರ.

3) ಮುಕ್ತಾಶುಕ್ತಿ ಭಸ್ಮ (calx of pearl oyster shells):

* ರಸ – ತಿಕ್ತ, ಕಟು, ಕಷಾಯ
* ಗುಣ – ಲಘು, ರೂಕ್ಷ
* ವೀರ್ಯ– ಉಷ್ಣ
* ವಿಪಾಕ – ಕಟು
* ದೋಷಘ್ನತೆ– ತ್ರಿದೋಷಹರ ಮುಖ್ಯವಾಗಿ ಕಫವಾತಹರ
* ಕರ್ಮ – ದೀಪನ, ಪಾಚನ, ಗ್ರಾಹಿ, ವೃಷ್ಯ, ನೇತ್ರ್ಯ.
* ಉಪಯೋಗ– ಜ್ವರ, ಶ್ವಾಸ, ಹೃದ್ರೋಗ, ಅಮ್ಲಪಿತ್ತ, ಪರಿಣಾಮಶೂಲ, ಅನ್ನದ್ರವಶೂಲ, ಮೂತ್ರಶರ್ಕರಾ, ಪ್ಲೀಹ ಮತ್ತು ಉದರರೋಗ, ಅತಿಸಾರ.

4) ಮುಕ್ತಾ ಭಸ್ಮ (calx of pearls):

* ರಸ – ಕಷಾಯ, ಮಧುರ
* ಗುಣ– ಲಘು, ಸ್ನಿಗ್ಧ
* ವೀರ್ಯ– ಶೀತ
* ವಿಪಾಕ– ಮಧುರ
* ದೋಷಘ್ನತೆ – ಪಿತ್ತಹರ, ಕಫಪಿತ್ತಹರ
* ಕರ್ಮ – ಕಾಂತಿ–ದೃಷ್ಟಿ– ಅಗ್ನಿ ವರ್ಧಕ, ವಿಶಘ್ನ, ಹೃದ್ಯ, ವೃಷ್ಯ, ದಾಹಘ್ನ, ಜ್ವರಹರ, ಮೂತ್ರಲ.
* ಉಪಯೊಗ– ಕ್ಷಯರೋಗ, ಕಾಸ, ಶ್ವಾಸ, ಅಗ್ನಿಮಾಂದ್ಯ.

5) ವರಾಟಿಕ ಭಸ್ಮ (calx of cowrie shells):

* ರಸ – ತಿಕ್ತ, ಕಟು, ಕಷಾಯ
* ಗುಣ – ಲಘು, ರೂಕ್ಷ
* ವೀರ್ಯ – ಉಷ್ಣ
* ವಿಪಾಕ – ಕಟು
* ದೋಷಘ್ನತೆ– ತ್ರಿದೋಷಹರ ಮುಖ್ಯವಾಗಿ ಕಫವಾತಹರ
* ಕರ್ಮ– ದೀಪನ, ಪಾಚನ, ಗ್ರಾಹಿ, ವೃಷ್ಯ, ನೇತ್ರ್ಯ.
* ಉಪಯೋಗ – ಅಗ್ನಿಮಾಂದ್ಯ, ಗ್ರಹಣಿ, ಪರಿಣಾಮಶೂಲ, ಅಮ್ಲಪಿತ್ತ, ಕ್ಷಯ ಮತ್ತು ಕರ್ಣಸ್ರಾವ.

ಪರಿಣಾಮಶೂಲ ಮತ್ತು ಅಮ್ಲಪಿತ್ತಗಳಲ್ಲಿ ಇದು ಪರಮೌಷಧಿ ಎಂದು ಹೇಳಲಾಗಿದೆ.

6) ಅರ್ಕಕ್ಷೀರ (calotropis latex) :

* ರಸ– ತಿಕ್ತ
* ಗುಣ – ಸ್ನಿಗ್ಧ
* ವೀರ್ಯ – ಉಷ್ಣ
* ಕರ್ಮ – ರೇಚನ, ವಾಂತಿಕಾರಕ
* ಉಪಯೋಗ – ಕುಷ್ಠ, ಗುಲ್ಮ, ಉದರ, ಅರ್ಶಸ್, ವಿಷ, ವ್ರಣ; ಇದನ್ನು ಕ್ಷಾರಕರ್ಮದಲ್ಲಿಯೂ ಉಪಯೋಗಿಸುತ್ತಾರೆ.

ಚರ್ಚೆ: ಪ್ರವಾಳ ಪಂಚಾಮೃತ ರಸವನ್ನು ಮುಖ್ಯವಾಗಿ ಪಿತ್ತಜ ರೋಗಗಳಲ್ಲಿ ಪ್ರಯೋಗಿಸುತ್ತಾರೆ. ಪರಿಣಾಮ ಶೂಲ, ಅಮ್ಲಪಿತ್ತ, ಅನ್ನದ್ರವ ಶೂಲ, ಹೃದ್ರೋಗ, ಫಕ್ಕರೋಗ (ರಿಕೆಟ್ಸ್), ಬಾಲಶೋಷ (Emaciation in children), ಪ್ಲೀಹಾವೃದ್ಧಿ, ಮಂದಾಗ್ನಿ, ಕಾಮಲ (Jaundice), ಮೂತ್ರರೋಗ ಹಾಗೂ ಅಸ್ಥಿರೋಗಗಳಲ್ಲಿ ಉಪಯೋಗಿಸುತ್ತಾರೆ.

* ಪರಿಣಾಮ ಶೂಲ ಹಾಗೂ ಅಮ್ಲಪಿತ್ತ ರೋಗಗಳಲ್ಲಿ ಈ ಔಷಧಿಯ ಘಟಕ ದ್ರವ್ಯಗಳು ತ್ರಿದೋಷಹರ ಮುಖ್ಯವಾಗಿ ಪಿತ್ತಹರ, ಶೂಲಹರ, ಕ್ಷಾರೀಯ, ಶೀತವೀರ್ಯಯುಕ್ತ, ಲಘು ಗುಣಗಳಿಂದ ಪರಿಣಾಮಕಾರಿಯಾಗಿದೆ.
* ಪ್ಲೀಹರೋಗಗಳಲ್ಲಿ ಈ ಔಷಧಿಯು ರಕ್ತ ಶೋಧಕ ಹಾಗೂ ಪಿತ್ತಹರ ಗುಣಗಳಿಂದ ಕಾರ್ಯವಹಿಸುತ್ತದೆ.
* ಬಾಲಶೋಷ, ಫಕ್ಕರೋಗ ಹಾಗೂ ಅಸ್ಥಿ ನಿರ್ಬಲತೆಗಳಲ್ಲಿ ಕ್ಯಾಲ್ಸಿಯಂ ಅನ್ನು ಪೂರಣ ಮಾಡುವುದರಿಂದ (Supplementation) ಫಲಪ್ರದವಾಗಿದೆ.
* ಮೂತ್ರರೋಗಗಳಲ್ಲಿ ತನ್ನ ಪಿತ್ತಹರ ಹಾಗೂ ಮೂತ್ರಲ ಗುಣಗಳಿಂದ ರೋಗವನ್ನು ಗುಣಪಡಿಸುತ್ತದೆ.

ಪ್ರವಾಳ ಪಂಚಾಮೃತ ರಸದ ಎಲ್ಲಾ ಘಟಕ ದ್ರವ್ಯಗಳು ಕ್ಯಾಲ್ಸಿಯಂ ಅನ್ನು ಹೊಂದಿದ್ದು ಭಸ್ಮ ರೂಪದಲ್ಲಿ ಇರುವುದರಿಂದ ಶೀಘ್ರವಾಗಿ ಕರುಳಿನಲ್ಲಿ ಹೀರಲ್ಪಟ್ಟು ವಿಭಿನ್ನ ಅಂಗಾಂಗಗಳಿಗೆ ಪೂರೈಸಲ್ಪಡುತ್ತದೆ ಮತ್ತು ಭಸ್ಮ ಪ್ರಯೋಗದಿಂದ ಶೀಘ್ರ ಪರಿಣಾಮವನ್ನು ತೋರಿಸುತ್ತದೆ.

ಮೌಕ್ತಿಕಯುಕ್ತ ಪ್ರವಾಳ ಪಂಚಾಮೃತ ರಸವು ಸಾಧಾ ಪಂಚಾಮೃತಕ್ಕಿಂತ ವಿಶೇಷ ಪರಿಣಾಮಕಾರಿ ಆಗಿರುವುದನ್ನು ನಾವು ಕಾಣಬಹುದು.

ಉಪಸಂಹಾರ:

1) ಪ್ರವಾಳ ಪಂಚಾಮೃತ ರಸವು ಸುಧಾವರ್ಗೀಯ ಘಟಕ ದ್ರವ್ಯಗಳನ್ನು ಹೊಂದಿದ್ದು ಅಸ್ಥಿ, ಸಂಧಿ ಹಾಗೂ ದಂತರೋಗಗಳಲ್ಲಿ ಉಪಯುಕ್ತವಾಗಿದೆ.

2) ಮಕ್ಕಳಲ್ಲಿ ಬಾಲಶೋಷ, ಹೃದ್ರೋಗ, ಪ್ಲೀಹವೃದ್ಧಿ ಮತ್ತು ಇತರ ಉದರ ರೋಗಗಳಲ್ಲಿಯೂ ಇದು ಉಪಯುಕ್ತವಾಗಿದೆ.

3) ಕ್ಯಾಲ್ಸಿಯಂನ್ನು ಹೊಂದಿರುವುದರಿಂದ ರಕ್ತಸ್ರಾವ ಸ್ತಂಭಕ ಹಾಗೂ ಹೃದ್ಯ ಗುಣಗಳನ್ನು ಹೊಂದಿದೆ.

4) ಸುಧಾವರ್ಗೀಯ ದ್ರವ್ಯಗಳು ಕ್ಷಾರೀಯ (Alkaline) ಆಗಿರುವುದರಿಂದ ಪರಿಣಾಮಶೂಲ ಮತ್ತು ಅಮ್ಲಪಿತ್ತ ರೋಗಗಳಲ್ಲಿ ಉಪಯುಕ್ತ.

ಆಧಾರಭೂತ ಗ್ರಂಥಗಳು:

1. ರಿಸರ್ಚ್ ಇನ್ ಆಯುರ್ವೇದ, ಡಾ.ಶ್ರೀಪತಿ ಆಚಾರ್ಯ, 2004, ಪು.ಸಂ. 107.

2. ರಸತಂತ್ರ ಸಾರ ವ ಸಿದ್ಧ ಪ್ರಯೋಗ ಸಂಗ್ರಹ, ಕೃಷ್ಣಗೋಪಾಲ ಆಯುರ್ವೇದ ಭವನ, ಪು.ಸಂ. 240–244

3. ಭೈಷಜ್ಯ ರತ್ನಾವಳಿ, ಗೋವಿಂದ ದಾಸ್ಜಿ ಭಿಷಗ್ರತ್ನ. ಚೌಕಾಂಬ ಸಂಸ್ಕೃತ್ ಭವನ್ ಪ್ರಕಾಶಕರು,2006. ಪು.ಸಂ. 420.

4. ದ್ರವ್ಯಗುಣವಿಜ್ಞಾನ, ಜೆ.ಎಲ್.ಎನ್. ಶಾಸ್ತ್ರಿ, ಚೌಕಂಬ ಒರಿಯಂಟಲ್ ಪ್ರಕಾಶಕರು 2011. ಪು.ಸಂ.23–35.

ದವಡೆಯ ಕೀಲಿನ ಸಂಧಿಹಿಡಿತ, ಬೇರ್ಪಡಿಸುವ ವಿಧಾನ– ಒಂದು ಪುನರ್ ಅವಲೋಕನ

ಡಾ|| ಕೃಷ್ಣ ವಿಜಯನ್, ಡಾ|| ರಜನಿಕಾಂತ್ ಬಿ.ಆರ್, ಎಂ.ಡಿ.ಎಸ್, ಡಾ||ಕವಿತಾ ಪ್ರಸಾದ್ ಎಂ.ಡಿ.ಎಸ್

ದವಡೆ ಕೀಲಿನ ಚಲನೆಯು ಮನುಷ್ಯನ ದೈನಂದಿನ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಇದು ಬಾಯಿತೆರೆಯಲು, ಆಹಾರ ಸೇವಿಸಲು ಮಾತನಾಡಲು ಮತ್ತುಹಾವಭಾವಗಳನ್ನು ತೋರಿಸಲು ನೆರವಾಗುತ್ತದೆ ಕೆಲವು ಕಾರಣಗಳಿಂದ ಕೀಲಿನ ಎರಡು ಮೂಳೆಗಳ ಮಧ್ಯೆ ಮೂಳೆಬೆಳೆದು ಕೀಲಿನ ಚಲನೆಗೆ ಅಡ್ಡಿಪಡಿಸುತ್ತದೆ. ಇದು ದಿನದ ಚಟುವಟಿಕೆ ಮಾತ್ರವಲ್ಲದೆ ಅಪೌಷ್ಟಿಕತೆ, ನಿದ್ರಾಹೀನತೆ ತರುತ್ತದೆ. ದವಡೆಯು ಸರಿಯಾದ ಪ್ರಮಾಣದಲ್ಲಿ ಬೆಳೆಯದೇ ಇರುವುದರಿಂದ ಮುಖ ವಿರೂಪವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಬಾಧಿತ ವ್ಯಕ್ತಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗುತ್ತಾರೆ. ಇದರ ಪರಿಣಾಮ ತಂದೆ ತಾಯಿಯರ ಮೇಲೂ ಆಗಬಹುದು. ಹಾಗಾಗಿ ಇದನ್ನು ಆದಷ್ಟು ಬೇಗ ಸರಿಪಡಿಸಿಕೊಳ್ಳುವುದರಿಂದ ಇದರಿಂದ ಬರುವ ತೊಂದರೆಗಳನ್ನು ಕಡಿಮೆಮಾಡಿಕೊಳ್ಳಬಹುದು.

ಇದನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಮಾತ್ರ ಗುಣಪಡಿಸಲು ಸಾಧ್ಯ. ಸಾಂಪ್ರದಾಯಿಕ ಶಸ್ತ್ರ ಚಿಕಿತ್ಸೆಯಲ್ಲಿ ಮೊದಲ ದಂತದಲ್ಲಿ ಕೀಲಿನ ಮಧ್ಯ ಬೆಸೆದಿರುವ ಮೂಳೆಯನ್ನು ತೆಗೆದು, ಬಾಯಿ ತೆಗೆಯಲು ಅನುಕೂಲಮಾಡಿಕೊಡಲಾಗುತ್ತದೆ. ನಂತರದ ಹಂತದಲ್ಲಿ ಮುಖದ ಸುರೂಪಿ ಚಿಕಿತ್ಸೆ ಮತ್ತು ಹಲ್ಲಿನ ಸಂಬಂಧಿ ಚಿಕಿತ್ಸೆ ಮಾಡಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಬೆಸೆದ ಮೂಳೆಗಳನ್ನು ಬೇರ್ಪಡಿಸಿ ಅದನ್ನು ವಿರುದ್ಧ ದಿಕ್ಕಿನಲ್ಲಿ ನಿದಾನವಾಗಿ ಎಳೆಯುವ (ಡಿಸ್ಟ್ರಾಕ್ಷನ್ ಆಸ್ಟಿಯೋಜೆನಿಸಿಸ್) ಚಿಕಿತ್ಸೆಯಿಂದ ಕುಂಠಿತಗೊಂಡ ಅಥವ ಗಿಡ್ಡವಾಗಿರುವ ಮೂಳೆಯನ್ನು ಬೆಳೆಯುವ ಹಾಗೆ ಮಾಡಿ ಮುಖದ ಸೌಂದರ್ಯ ಹೆಚ್ಚಿಸುವುದರ ಜೊತೆಗೆ ಬಾಯಿತೆಗೆಯುವ ಹಾಗೆ ಮಾಡಲಾಗುತ್ತದೆ ಈ ಚಿಕಿತ್ಸೆ ವಿಧಾನ ಹೆಚ್ಚು ಜನಪ್ರಿಯತೆಗಳಿಸುತ್ತಿದೆ

ಈ ಪುನಾರ್ ಅವಲೋಕನ ಪ್ರಭಂದವು ದವಡೆಯ ಕೀಲಿನ ಸಂಧಿ ಹಿಡಿತದ ಬಗ್ಗೆ ಹೆಚ್ಚು ಪ್ರಚಲಿತವಿರುವ ಚಿಕಿತ್ಸಾ ವಿಧಾನಗಳ ಪರಿಚಯ ನೀಡುವುದರ ಜೊತೆಗೆ ಅವುಗಳ ಚಿಕಿತ್ಸೆಯಲ್ಲಿ ಆಗಿರುವ ತಂತ ಬೆಳವಣಿಗೆಯನ್ನು ಪರಿಚಯಿಸುತ್ತದೆ.

ಪ್ರಮುಖ ಪದಗಳು: ದವಡೆ ಕೀಲಿನ ಸಂದಿ (ಟಿ.ಎಂ.ಜೆ), ದವದಡೆ ಕೀಲಿನ ಸಂದಿಹಿಡಿತ (ಟಿ.ಎಂ.ಜೆ ಆಂಕಲೋಸಿಸ್), ಶಸ್ತ್ರ ಚಿಕ್ಕಿತ್ಸೆ, ಡಿಸ್ಟ್ರಾಕ್ಷನ್ ಆಸ್ಟಿಯೋಜೆನಿಸಿಸ್.

ಪರಿಚಯ: ದವಡೆ ಕೀಲಿನ ಸಂದಿಹಿಡಿತ (ಟೆಂಪೊರೋ ಮ್ಯಾಂಡಿಬುಲರ್ ಜಾಯಿಂಟ್ ಆಯಂಕಲೋಸಿಸ್) ಎಂಬುದು ಗ್ರೀಕ್ ಪದ. ಇದರ ಅರ್ಥ ಬಿಗಿ ಅಥವಾ ಗಡುಸಾದ ಕೀಲು ಎಂದು. ಇಲ್ಲಿ ಕೆಳದವಡೆ ಮೇಲ್ದವಡೆಯ ಚಲಿಸುವ ಕೀಲಿನ ಮಧ್ಯೆಮೂಳೆ ಬೆಳೆದು ದವಡೆಯ ಚಲನೆಗೆ ಮತ್ತು ಅದರ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಈ ಸ್ಥಿತಿಯು ಯಾವುದೇ ವಯಸ್ಸಿನಲ್ಲಿ ಕಂಡುಬಂದರು ಹೆಚ್ಚಾಗಿ ಹತ್ತು ವಯಸ್ಸಿನ ಒಳಗಿರುವ ಮಕ್ಕಳಲ್ಲಿ ಕಂಡು ಬರುತ್ತದೆ .ಇದನ್ನು ಹಲವಾರು ರೀತಿಯಲ್ಲಿ ನೋಡಬಹುದು.

1)ನಿಜವಾದ ಬೆಸುಗೆ ಅಥವ ನಿಜವಲ್ಲದ (ಸುಳ್ಳು) ಬೆಸುಗೆ

2)ಕೀಲಿನ ಹೊರಗಡೆಯ ಅಥವಾ ಒಳಗಡೆಯ ಬೆಸುಗೆ

3)ನಾರಿನ ತಂತಿಯ ಮಾದರಿಯ ಬೆಸುಗೆ ಅಥವಾ ಮೂಳೆಯ ಬೆಸುಗೆ

4)ಒಂದು ಕಡೆಯ ಅಥವಾ ಎರಡೂ ಕಡೆಯಲ್ಲಿ ಬೆಸುಗೆ

5)ಭಾಗಶಃ ಅಥವಾ ಪೂರ್ಣ ಪ್ರಮಾಣದ ಬೆಸುಗೆ

ಇದಕ್ಕೆ ಕಾರಣಗಳು ಹಲವಾರು

ದೈಹಿಕ ಗಾಯ ಅಥವಾ ಅಪಘಾತ

* ಮಗುವಿನ ಜನನ ಸಮಯದಲ್ಲಿ ತಲೆ ಹೊರಗೆಳೆಯಲು ಬಳಸುವ ಇಕ್ಕಳವನ್ನು ದವಡೆಯ ಕೀಲಿನ ಜಾಗದಲ್ಲಿ ಹಿಡಿಯುವುದರಿಂದ
* ದವಡೆ ಕೀಲಿನ ಜಾಗದಲ್ಲಿ ರಕ್ತಸ್ರಾವವಾಗಿ ಅದು ಹೆಪ್ಪುಗಟ್ಟುವುದರಿಂದ
* ಕೆಳದವಡೆಗೆ ಬೀಳುವ ಪೆಟ್ಟಿನಿಂದ
* ಜನ್ಮಜಾತ ದೋಷ (ಹುಟ್ಟಿನಿಂದಲೇ ಬರುವ ವಿರೂಪ.
* ಸೋಂಕಿನ ಕಾಯಿಲೆಗಳು, ಉರಿಯೂತ
* ಸಂಧಿವಾತ (ರ್ಯುಮ ಟಾಯ್ಡ್ ಆರ್ಥ್ರೈಟಿಸ್)
* ಕೀವಿನ (ರಕ್ತ ನಂಜಿನ) ಸಂಧಿವಾತ (ಸೆಪ್ಟಿಕ್ ಆರ್ಥ್ರೈಟಿಸ್)
* ಕಿವಿಯ ಉರಿಯೂತ (ಓಟೈಟಿಸ್ ಮೀಟಿಯ)
* ಪೆರೋಟಿಟ್ ಗ್ರಂಥಿಯ ಉರಿಯೂತ, ನಂಜು (ಪೆರೋಟೈಟಿಸ್)
* ಮೂಳೆ ಮಧ್ಯ ಸೋಂಕು/ಉರಿಯೂತ (ಆಸ್ಟಿಯೋಮೈಯಿ ಲೈಟಿಸ್)
* ಅಸ್ಥಿ ಸಂಧಿ ಉರಿಯೂತ (ಆಸ್ಟಯೋ ಆರ್ಥ್ರೈಟಿಸ್)
* ಗಲ ಗ್ರಂಥಿಯ ಉರಿಯೂತ ಟಾನ್ಸಿಲೈಟಿಸ್)

ದೇಹ ವ್ಯವಸ್ಥೆಯಲ್ಲಿ ಉಂಟಾಗುವ ರೋಗ

* ಸಿಡುಬು (ಸ್ಮಾಲ್ ಪಾಕ್ಸ್)
* ಬೆನ್ನೆಲುಬಿನ/ಕಶೇರುಕ ಸಂದಿಹಿಡಿತ (ಆಂಕಿಲೋಸಿಂಗ್ ಸ್ಪಾಂಡಿಲೈಟಿಸ್)
* ಸರ್ಪಸುತ್ತು (ಸಿಫಿಲಿಸ್)
* ವಿಷಮಶೀತ ಜ್ವರ (ಟೈಫಾಯಿಡ್)
* ಕಡುಕೆಂಪು ಜ್ವರ (ಸಸ್ಕಾರ್ಲೆಟ್ ಫೀವರ್)

ಇತರ ಖಾಯಿಲೆಗಳು

ಅರ್ಭುದ ರೋಗ

ವಿಕಿರಣ ಚಿಕಿತ್ಸೆಯ ನಂತರ

ಶಸ್ತ್ರ ಚಿಕಿತ್ಸೆಯ ನಂತರ

ಧೀರ್ಘಕಾಲೀನ ಸೆಳೆತ

ವಿರಳ ಕಾರಣಗಳು:

ಬಹು ಸಂದಿವಾತ (ಪಾಲಿ ಆರ್ಥ್ರೈಟಿಸ್)

ದಡಾರ (ಮೀಸಲ್ಸ್)

ರೋಗಕಾರಕ ಶರೀರ ಶಾಸ್ತ್ರ (ಪೆಥೋಪಿಜಿಯಾಲಜಿ)

ದವಡೆಯ ಸಂದಿಗೆ ಯಾವುದೆ ಪೆಟ್ಟು ಅಥವಾ ಗಾಯ ಉಂಟಾದಾಗ ರಕ್ತವು ಹೊರಬರುತ್ತದೆ (ಹೆಮಥ್ರೋಸಿಸ್). ಹೀಗೆ ಹೊರಬಂದ ರಕ್ತವು ಕೀಲಿನಲ್ಲಿ ಶೇಖರಣೆಗೊಂಡು ಹೆಪ್ಪು ಗಟ್ಟುತ್ತದೆ. ಇದು ನಿಧಾನವಾಗಿ ಸುಣ್ಣದ ಹರಳಾಗಿ (ಕ್ಯಾಲ್ಸಿಯಂ ಫಾಸ್‌ಪೇಟ್) ಮಾರ್ಪಾಡಾಗಿ ಮೂಳೆಯಾಗಿ ಬದಲಾಗುತ್ತದೆ. ಹೀಗೆ ಬೆಳೆದ ಮೂಳೆಯು ಕೀಲಿನ ಮಧ್ಯೆ ಇರುವ ಜಾಗವನ್ನು ಆಕ್ರಮಿಸಿ ಕೀಲನ್ನು ಅಳಿಸಿಬಿಡುತ್ತದೆ. ಮೃದು ಮೂಳೆಯು ಗಟ್ಟಿಯಾಗಿ ಬದಲಾಗಿಸುತ್ತದೆ. ಇದರಿಂದ ಸಂಧಿಹಿಡಿತ ಉಂಟಾಗಿ ನಿದಾನವಾಗಿ ಬಾಯಿ ತೆಗೆಯುವ ಪ್ರಮಾಣ ಕಡಿಮೆಯಾಗಿ ಕೊನೆಗೆ ನಗಣ್ಯವಾಗುತ್ತದೆ.

ರೋಗನಿರ್ಣಯ ಹೇಗೆ?

ರೋಗಿಯು ನೀಡುವ ರೋಗದ ವೃತ್ತಾಂತ ಬಹು ಪ್ರಾಮುಖ್ಯವಾದುದು ಇದರಲ್ಲಿ ರೋಗಿಯ ಹಿಂದೆ ತನಗಾದ ಅಪಘಾತ, ಬಿದ್ದು ದವಡೆಗೆ ಮಾಡಿಕೊಂಡ ಪೆಟ್ಟು, ಗಲ್ಲ ಅಥವ ಕಿವಿಯ ಸೋಂಕಿನ ಬಗ್ಗೆ ಮಾಹಿತಿ ನೀಡಬಹುದು. ಸಾಮಾನ್ಯ ಹೆರಿಗೆಯ ಸಮಯದಲ್ಲಿ ಬಳಸಿದ ಇಕ್ಕಳದ ಬಗ್ಗೆಯೂ ತಂದೆ ತಾಯಿ ಮಾಹಿತಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ನಾವು ಕ್ಷ–ಕಿರಣ ಫಲಕಗಳು (ರೇಡಿಯೋಗ್ರಫಿ) ಪಡೆಯಬಹುದು. ಇದರಲ್ಲಿ ಹೆಚ್ಚಾಗಿ ಬಳಸಲ್ಪಡುವ ವಿಧಗಳು

ಆರ್ಥೋ ಪ್ಯಾಂಟ್‌ಮೋಗ್ರಾಪ್ (ಓ.ಪಿ.ಜಿ) ಮತ್ತು ಕಂಪ್ಯೂಟೆಡ್) ಟೋಮೋಗ್ರಫಿ (ಸಿ.ಟಿ)

ರೋಗ ವಿರೂಪತೆಯ ಮುಖ್ಯಲಕ್ಷಣಗಳು

ದವಡೆ ಒಂದುಕಡೆಯಲ್ಲಿ ಹಿಡಿತವಾದರೆ

ಅ) ಸಂದಿಯ ಹಿಡಿತದ ತೀರ್ವತೆ, ಹಿಡಿತದ ಅವದಿ ಮತ್ತು ಭಾಧಿತ ಸಮಯದ ಆದಾರದ ಮೇಲೆ ವ್ಯಕ್ತಿಯ ಮುಖದ ಮೇಲೆ ವಿರೂಪತೆಯ ಲಕ್ಷಣಗಳು ಗೋಚರಿಸುತ್ತದೆ.

ಆ) ಮಕ್ಕಳ ಬೆಳವಣಿಗೆಯ ಸಂದರ್ಭದಲ್ಲಿ(15 ವಯಸ್ಸಿನ ಒಳಗೆ) ಇದರಿಂದ ಪೀಡಿತರಾದರೆ ತತ್ಸಂಬಂದಿ ವಿರುಪತರಯು ಬಹು ತೀವ್ರತೆಯನ್ನು ಹೊಂದಿರುತ್ತದೆ ಮತ್ತು ಇದು ದವಡೆಯ ಕಾರ್ಯಕ್ಷಮತೆಗೆ ಸಾಕ್ಷಷ್ಟು ಅಡ್ಡಿಪಡಿಸುತ್ತದೆ.

ಇ) ದೇಹದ ಬೆಳವಣಿಗೆಯು ನಿಂತ ನಂತರ ವ್ಯಕ್ತಿಯನ್ನು ಭಾದಿಸಿದರೆ ಮುಖದ ವಿರೂಪತೆಯು ಆಷ್ಟಾಗಿ ಗೋಚರಿಸುವುದಿಲ್ಲ. ಆದರೆ ದವಡೆಯ ಕಾರ್ಯಕ್ಷಮತೆಯನ್ನು ಕುಗ್ಗಿಸುತ್ತದೆ.

ಈ) 15 ವಯಸ್ಸಿನ ನಂತರದಲ್ಲಿ ಸಂಭವಿಸಿದರೆ ತತ್ಸಂಬಂದಿ ವಿರೂಪತೆಯು ಸ್ವಲ್ಪವಿರುತ್ತದೆ, ಆದರೆ ಕಾರ್ಯಕ್ಷಮತೆಯು ಬಹಳವಾಗಿ ಕಡಿಮೆಯಾಗುತ್ತದೆ.

ದವಡೆಯ ಒಂದು ಬದಿಯಲ್ಲಿ ಸಂದಿಹಿಡಿತವಾದರೆ ಈ ಲಕ್ಷಣಗಳು ಗೋಚರಿಸುತ್ತದೆ

1) ಕೆಳದವಡೆಯು ಭಾದಿತ ಕೀಲಿನ ಕಡೆ ಓರೆಯಾಗಿರುತ್ತದೆ.

2) ಭಾದಿತ ಪಾರ್ಶ್ವದಲ್ಲಿ ಮುಖ ದುಂಡಾಗಿ ಪೂರ್ಣವಾಗಿರುವಂತೆ ಭಾಸವಾಗುತ್ತದೆ.

3) ಬಾದಿತ ದವಡೆಯ ಕೆಳದವಡೆಯ ಮೂಲೆಯಲ್ಲಿ ಮುಂದೆ ಕತ್ತರಿಯಾಕಾರದ ನೆಚ್ಚು (ಆಂಟಿಗೋನಿಯಲ್ ನಾಚ್) ಇರುತ್ತದೆ.

4) ಕೆಳದವಡೆಯ ಭಾದಿತ ಬದಿಯು ಚಿಕ್ಕದಾಗಿದ್ದು ದವಡೆಯ ಬೆಳವಣಿಗೆಯು ಕುಂಠಿತವಾಗಿರುತ್ತದೆ.

5) ದವಡೆಯ ಹಲ್ಲುಗಳ ಸೇರುವ ಸಮತಲ ಭಾಗ ಒಂದು ಬದಿಯಲ್ಲಿ ವಾಲಿರುತ್ತದೆ.(ಕ್ಯಾಂಟ್).

ದವಡೆಯ ಎರಡೂ ಬದಿಯಲ್ಲಿ ಸಂಧಿಹಿಡಿತವಾದರೆ

ಅ) ಕೆಳದವಡೆಯ ಬೆಳವಣಿಗೆ ಇಲ್ಲದೆ, ಹಿಂದೆ ಉಳಿಯುವುದರಿಂದ ಪಕ್ಷಿಯ ಮುಖದಂತೆ ಗೋಚರಿಸುತ್ತದೆ.

ಆ) ಗದ್ದ ಹಾಗೂ ಕತ್ತಿನ ನಡುವೆ ಏರ್ಪಡುವ ಕೋನ ಮಾಪನವು ಕಡಿಮೆ ಇರಬಹುದು ಅಥವಾ ಪೂರ್ತಿ ಇಲ್ಲವಾಗಬಹುದು.

ಇ) ಕೆಳದವಡೆಯ ಮೂಲೆಯ ಮುಂದೆ ಕತ್ತರಿಯಾಕಾರದ ನೆಚ್ಚು ಎರಡೂ ಬದಿಯಲ್ಲಿ ಪ್ರದಾನವಾಗಿ ಕಾಣುತ್ತದೆ.

ಈ) ಬಾಯಿ ತೆಗೆಯುವುದು ಬಹಳ ಕಮ್ಮಿಯಿದ್ದು ಕೆಲವೊಂದು ಸಲ ಬಾಯಿ ಸ್ವಲ್ಪವೂ ತೆರೆಯಲಾಗುವುದಿಲ್ಲ.

ಚಿಕಿತ್ಸೆ ಸಕಾಲದಲ್ಲಿ ದೊರಯದಿದ್ದರೆ ಈ ಕೆಳಕಂಡ ಪರಿಣಾಮಗಳನ್ನು ನೋಡಬಹುದು.

* ಮುಖದ ಹಾಗೂ ದವಡೆಯ ಸಾಮಾನ್ಯ ಬೆಳವಣಿಗೆಗೆ ಅಡ್ಡಿಯಾಗಿ ಮುಖ ವಿರೂಪವಾಗುತ್ತದೆ.

* ಮಾತನಾಡುವುದಕ್ಕೆ ತೊಂದರೆ, ಸ್ವರಗಳ ಉಚ್ಚಾರಣೆ ಕಷ್ಟವಾಗುತ್ತದೆ.

* ಅಗತ್ಯ ಆಹಾರ ಸೇವಿಸುವುದಕ್ಕೆ ಅಡ್ಡಿಯಾಗಿ ಅಪೌಷ್ಟಿಕತೆ

* ಸರಾಗವಾಗಿ ಉಸಿರಾಡುವುದಕ್ಕೆ ತೊಂದರೆಯಾಗುತ್ತದೆ.

* ಹಲ್ಲುಗಳು ಸಾಲಿನಲ್ಲಿ ಹೊಂದಿಕೊಳ್ಳುವುದಕ್ಕೆ ಅಡ್ಡಿಯಾಗಿ ವಕ್ರದಂತ ಸಮಸ್ಯೆ ಉಂಟಾಗುತ್ತದೆ.

* ಬಾಯಿತೆಗೆಯುವುದಕ್ಕೆ ಆಗದೇ ಇರುವುದು ಮತ್ತು ವಕ್ರದಂತ ಸಮಸ್ಯೆಯಿಂದ ಬಾಯಿಯನ್ನು ಸ್ವಚ್ಛಗೊಳಿಸಲಾಗುವುದಿಲ್ಲ. ಇದರಿಂದ ಬಾಯಿಯ ದುರ್ವಾಸನೆ ಮತ್ತು ಹುಳುಕು ಹಲ್ಲು ಉಂಟಾಗುತ್ತದೆ.

* ದವಡೆಯ ಬೆಳವಣಿಗೆ ಸರಿಯಾಗಿ ಆಗದೇ ಇರುವುದರಿಂದ ಇದು ಹಲ್ಲು ಹುಟ್ಟುವುದಕ್ಕೆ ಅಡ್ಡಿಯಾಗಿ ಹಲ್ಲುಗಳು ದವಡೆಯ ಒಳಗೆ ಉಳಿಯಬಹುದು (ಇಂಪ್ಯಾಕ್ಟೆಡ್ ಟಿತ್)

ರೋಗ ನಿರ್ವಹಣೆ

ಇದನ್ನು ಶಸ್ತ್ರಚಿಕಿತ್ಸೆಯ ಮೂಲಕ ಮಾತ್ರ ಗುಣಪಡಿಸಲು ಸಾದ್ಯ

ವಾಢಿಕೆಯಲ್ಲಿ ಶಸ್ತ್ರಚಿಕಿತ್ಸೆಯ ಮೂರು ಕ್ರಮಗಳು ಪ್ರಚಲಿತದಲ್ಲಿದೆ

1) ಕೆಳದವಡೆಯ ಕಾಂಡೈಲ್ ಭಾಗವನ್ನು ತೆಗೆದುಹಾಕುವುದು

2) ಬೆಳೆದ ಮೂಳೆಗಳ ಮದ್ಯ ಬಾಗವನ್ನು ತೆಗೆದು ಅಂತರ ಕಾಪಾಡಿಕೊಳುವುದು

3) ಬೆಳೆದ ಮೂಳೆಗಳ ಮದ್ಯ ಬಾಗವನ್ನು ತೆಗೆದು ಅಂತರ ಕಾಪಾಡಿಕೊಂಡು ಮಧ್ಯದಲ್ಲಿ ಮತ್ತೆ ಮೂಳೆ ಬೆಳೆಯದಂತೆ ಯಾವುದೆ ಭೌತಿಕ ವಸ್ತು ಇಡುವುದು.

ಈ ಸಾಂಪ್ರದಾಯಿಕ ಶಸ್ತ್ರ ಚಿಕಿತ್ಸೆಯಲ್ಲಿನ ಕೆಲವು ಶಿಷ್ಟಾಚಾರ/ನಿಯಮಹಳನ್ನು ಪಾಲಿಸುವುದಕ್ಕೆ ಕಬಾನ್ ಮತ್ತು ಸಂಗಡಿಗರು ಕೆಲವು ಅಂಶಗಳನ್ನು ಆಚರಣೆಗೆತಂದರು ಅವು

1) ಆದಷ್ಟು ಬೇಗ ಶಸ್ತ್ರ ಚಿಕಿತ್ಸೆ ಮಾಡುವುದು ,ಬಾದಿತ ಭಾಗದ ಮೂಖೆಯನ್ನು ಕನಿಷ್ಟ 1–1.5 ಛಿಟ ನಸ್ಸು ತೆಗೆಯುವುದು .ಅದರಲ್ಲಿ ಟೆಂಪೋರಾಲಿಸ್ ಮಾಂಸ ಖಂಡವನ್ನು ಎರಡು ಮೂಳೆಗಳ ಮದ್ಯೆ ಸೇರಿಸುವುದು ಬಾಯಿ ತೆಗೆಯಲು ಅನುಕೂಲವಾಗುವಂತೆ ಕೆಳದವಡೆಯ ಕರೋನಾಯ್ಡ್ ಭಾಗವನ್ನು ತೆಗೆಯುವುದು ಬೆಳವಣಿಗೆಗೆ ಅನುಕೂಲವಾಗಿವಂತೆ ಎದೆದೂಡಿನ ಮೂಳೆಯನ್ನು ಜೋಡಿಸುವುದು ಸಾಕಷ್ಟು ಪ್ರಮಾಣದಲ್ಲಿ ತೆಗೆಸುವಂತೆ ಮಾಡಿ ನಿಯಮಿತ ವ್ಯಾಯಾಮ ಮಾಡಿಸುವುದು ಹಾಗೂ ನಿರಂತರ ಪರಿವಿಕ್ಷಣೆ ಮಾಡುವುದು.

ಶಸ್ತ್ರಚಿಕಿತ್ಸೆಯನ್ನು ಸಾದಾರಣವಾಗಿ ಕಿವಿಯ ಮುಂದಿನಭಾಗದಿಂದ ಕೊಯ್ದು ದವಡೆಯ ಕೀಲಿನ ತನಕ ಹೋಗಲು ಸಾದ್ಯವಿದೆ.

ಸಾಂಪ್ರದಾಯಿಕ ಶಸ್ತ್ರ ಚಿಕಿತ್ಸೆಯಲ್ಲಿ ನಾವು ಬೆಸೆದ ದವಡೆಯ ಮೂಳೆಯನ್ನು ಬಿಡಿಸಿ ಬಾಯಿ ತೆಗೆಯುವಂತೆ ಮಾಡಲು ಮಾತ್ರ ಸಾಧ್ಯವಿದೆ. ಆದರೆ ಕುಬ್ಜ ದವಡೆಯನ್ನು ಮತ್ತು ಮುಖದ ವಿರೂಪತೆಯನ್ನು ನಿವಾರಿಸಲು ನಂತರದ ಹಂತದಲ್ಲಿ ಇನ್ನೊಂದು ಶಸ್ತ್ರ ಚಿಕಿತ್ಸೆಯ ಅಗತ್ಯವಿದಿ ಈ ತೊಂದರೆಯನ್ನು ಹೋಗಲಾಡಿಸು.ರೂಪ ಮತ್ತು ಕುಬ್ಜ ದವಡೆಯ ಕಾರ್ಯನಿರ್ವಾಣೆಯನ್ನು ಒಟ್ಟಿಗೆ ಸಾದಿಸಲು ಇತ್ತೀಚಿನ ದಿನಗಳಲ್ಲಿ ಮೂಳೆಯನ್ನು ಬೇರ್ಪಡಿಸಿ ಅವುಗಳನ್ನು ವಿರುದ್ದ ದಿಕ್ಕಿನಲ್ಲಿ ಎಳೆಯುವ ವಿಧಾನ (ಢಿಸ್ಟ್ರಕಷನ್ ಆಸ್ಟಿರೋಜನಿಸಿಸ್) ಸಾಕಷ್ಟು ಜನಪ್ರಿಯವಾಗುತ್ತಿದೆ.

ಡಿಸ್ಟ್ರಾಕ್ಷನ್ ಆಷ್ಟಿಯೋಜೆನೆಸಿಸ್ :– ಈ ವಿಧಾನವನ್ನು ಎಲಿಜೀರೊ ಎಂಬ ರಷ್ಯನ್ ಮೃದು ಗಿಡ್ಡ ಮೂಳೆಗಳನ್ನು ಉದ್ದವಾಗುವಂತೆ ಮಾಡಲು ಬಳಸಿದನು ಈ ವಿಧಾನದಲ್ಲಿ ಮೂಳೆಯನ್ನು ಪೂರ್ತಿ ಕತ್ತರಿಸಲಾಗುತದೆ ನಂತರದಲ್ಲಿ ಈ ಎರಡೂ ತುಂಡುಗಳನ್ನು ವಿರುದ್ದ ದಿಕ್ಕಿನಲ್ಲಿ ನಿದಾನವಾಗಿ ದಿನಕ್ಕೆ 1 ಮೀ.ಮೀ ನಂತೆ ಎಳೆಯಲಾಗುತ್ತದೆ. ಹೀಗೆ ಎಳೆದು ಉಳಿದ ಮೂಳೆಯ ಮದ್ಯದಲ್ಲಿ ಹೊಸ ಮೂಳೆ ಬೆಳೆಯತೊಡಗಿ ಉದ್ದವಾಗುತ್ತಾ ಹೋಗುತ್ತದೆ ಈ ವಿಧಾನದಿಂದ ಗಿಡ್ಡ ಮೂಳೆಯನ್ನು ಉದ್ದವಾಗಿ ಮಾಡಬಹುದಾಗಿದೆ.

ದವಡೆಯ ಭಾಗದಲ್ಲಿ ಇದರ ಉಪಯೋಗ ಮೊದಲ ಬಾರಿಗೆ ಮ್ಯಾಕ್ ಕಾರ್ಥಿ ಎಂಬುವರಿಂದ ಆಯಿತು. ಆ ನಂತರದ ಸಮಯದಲ್ಲಿ ಕಾಲದಲ್ಲಿ ಕಾರ್ಲ್ ಮತ್ತು ಕೋಹೆನ್ ಇದನ್ನು ಚಿಕ್ಕ ದವಡೆಯ ಕಾರಣದಿಂದ ಉಸಿರಾಟದ ತೂಂದರೆ ಇರುವ ವ್ಯಕ್ತಿಗಳಲ್ಲಿ ಉಪಯೋಗಿಸಿ ಕೆಳದವಡೆಯ ಉದ್ದ ಹೆಚ್ಚಿಸಿ ಅವರ ಉಸಿರಾಟದ ತೊಂದರೆಯನ್ನು ನಿವಾರಿಸಿದರು. ಕಾಲಕ್ರಮೇಣದಲ್ಲಿ ಇದರ ಉಪಯೋಗವನ್ನು ಬಾಯಿ, ಮುಖ ,ದವಡೆಯ ಶಸ್ತ್ರ ಚಿಕಿತ್ಸಕರು ದವಡೆಯ ಸಂಧಿ ಹಿಡಿತದ ಚಿಕಿತ್ಸೆಯಲ್ಲಿ ಬಳಸತೊಡಗಿದ್ದಾರೆ.

ಈ ಶಸ್ತ್ರಚಿಕಿತ್ಸೆ ಕ್ರಮದಿಂದ ಆಗುವ ಉಪಯೋಗ

* ಕೆಳದವಡೆಯ (ಮ್ಯಾಂಡಿಬಲ್)ನ, ಸರಿಯಾದ ಆಕಾರವನ್ನು ಅಳತೆಯನ್ನು ಪಡೆಯಬಹುದು

* ಸಮಾಧನಕರ ದವಡೆಯ ಚಲನೆ (ಬಾಯಿ ತೆಗೆಯುವುದನ್ನು) ಪಡೆಯಬಹುದು.

* ಮಕ್ಕಳಲ್ಲಿ ಉತ್ತಮ ಪಲಿತಾಂಶ ಪಡೆಯಬಹುದು

ಉಪಸಂಹಾರ (ಕಾಂಕ್ಲ್ಯೂಷನ್)

ದವಡೆ ಕೀಲಿನ ಬೆಸುಗೆ (ಸಂಧಿಹಿಡಿತ) ಒಂದು ಸಂಕೀರ್ಣ ಸಮಸ್ಯೆ ಇದು ಭಾದಿತ ವ್ಯಕ್ತಿಯ ದೇಹ ಮತ್ತು ಮನಸಿನ ಮೇಲೆ ಸಾಕಷ್ಟು ಪರಿಣಮ ಬೀರುತ್ತದೆ. ಇದು ವ್ಯಕ್ತಿಯ ಮುಖವನ್ನು ವಿರೂಪಗೊಳಿಸುತ್ತದೆ. ಬಾಯಿಯ ಚಲನೆಯನ್ನು ಮಿತಿಗೊಳ್ಳಿಸಿ ನಾನಾ ವಿದದ ತೊಂದರೆಯನ್ನು ನೀಡಿತ್ತದೆ. ಶಸ್ತ್ರ ಚಿಕಿತ್ಸೆಯೊಂದೆ ಇದಕ್ಕೆ ಪರಿಣಾಮಕಾರಿ ಚಿಕಿತ್ಸೆ. ಪೂರ್ವದಲ್ಲಿ ಬೆಸೆದ ಮೂಳೆಯನ್ನು ಭೇರ್ಪಡಿಸಿ ಬಾಯಿಯನ್ನು ಚಲಿಸುವಂತೆ ಮಾಡುವ ಚಿಕಿತ್ಸೆಯ ಪ್ರದಾನವಾಗಿತ್ತು. ಇತ್ತೀಚಿನ ದಿನಗಳಲ್ಲಿ ಶಸ್ತ್ರೀಯ ಚಿಕಿತ್ಸೆಯ ಜೊತೆಗೆ ಡಿಸ್ಟ್ರಾಕ್ಷನ್ ಆಸ್ಟಿಯೋಜನಿಸ್) ಸಹಾಯದಿಂದ ತೋಂದೆಗೊಳಗಾದ ವ್ಯಕ್ತಿಯನ್ನು ಉಪಚರಿಸಿ ಅವರ ಜೀವನವನ್ನು ಉತ್ತಮಪಡಿಸಲು ಸಾದ್ಯವಿದೆ.

ಗ್ರಂಥಸೂಚಿ (Bobliography)

ಯಾದವ್, ಆರ್. ಎಟ್ ಅಲ್., 2013. ಎಸ್‌ಸಿ. ಜರ್ನಲ್ ಆಫ್ ಕ್ರ್‌ಯಾನಿಯೊ-ಮ್ಯಾಕ್ಸಿಲೊಫೇಸಿಯಲ್ ಸರ್ಜರಿ. ಇಲ್ಲಿ ಲಭ್ಯವಿದೆ: http://dx.doi.org/10.1016/j.jcms.2013.07.031.

ಶರ್ಮ, A. et al., 2016. ಏಕಾಲೀಟಿಯಲ್ ಟೆಂಪೊರೊಮ್ಯಾಂಡಿಬ್ಯುಲರ್ ಜಂಟಿ ಆಂಕ್ಲೋಸಿಸ್‌ಗಾಗಿ ಏಕಕಾಲೀನ ಅಂತರ ಆರ್ತ್ರೋಪ್ಲ್ಯಾಸ್ಟಿ ಮತ್ತು ಒಳನಾಡಿನ ವ್ಯಾಕುಲತೆ ಮತ್ತು ಮಾಧ್ಯಮಿಕ contouring ಶಸ್ತ್ರಚಿಕಿತ್ಸೆ. ಮ್ಯಾಕ್ಸಿಲೊಫೇಸಿಯಲ್ ಪ್ಲಾಸ್ಟಿಕ್ ಮತ್ತು ಪುನರ್ನಿರ್ಮಾಣದ ಶಸ್ತ್ರಚಿಕಿತ್ಸೆ, pp.0-5. ಇಲ್ಲಿ ಲಭ್ಯವಿದೆ: http://dx.doi.org/10.1186/s40902-016-0058-0.

ಸದಾಕ, ಎ.ಎ., ಎಲ್ಗಝೂರ್ಜರ್, ಆರ್.ಎಫ್. & Intraoral, A.I.A., ಟೆಂಪೊರೋಮ್ಯಾಂಡಿಬ್ಯುಲರ್ ಜಾಯಿಂಟ್ ಸಂಧಿಹಿಡಿತ ಕೆಳಗಿನ ಮುಖದ ವಿಕಾರಗಳನ್ನು ಸರಿಪಡಿಸಲು 2006 Intraoral ವ್ಯಾಕುಲತೆ ಒಸ್ಟಿಯೊಜೆನೆಸಿಸ್ಇಂಫರ್ಪೆಕ್ಟಾ: ಪರಿವರ್ತಿತ ತಂತ್ರ. , ಪುಟಗಳು 399-406.

ಗಾಯ, C.I., ಬ್ರೇಫ್ ಕ್ಲಿನಿಕಲ್ ನೋಟ್ಸ್. . ಬನ್ಸಾಲ್, ವಿ ಇತರರು ಮಕ್ಕಳಲ್ಲಿ ಆಘಾತದ ಸಂಧಿಹಿಡಿತ ಫಾರ್ ಟೆಂಪೊರೋಮ್ಯಾಂಡಿಬ್ಯುಲರ್ ಜಂಟಿ ಕೆಳಗಿನ ಅಂತರವನ್ನು ಆರ್ಥ್ರೋ ಪುನರ್ನಿರ್ಮಾಣಕ್ಕೆ ಒಂದು ವಿಧಾನವಾಗಿ 2014 ಸಾರಿಗೆ ವ್ಯಾಕುಲತೆ ಒಸ್ಟಿಯೊಜೆನೆಸಿಸ್ಇಂಫರ್ಪೆಕ್ಟಾ: ಫಲಿತಾಂಶದ ಒಂದು ವೈದ್ಯಕೀಯ ಮತ್ತು ವಿಕಿರಣಗಳ ನಿರೀಕ್ಷಿತ ಮೌಲ್ಯಮಾಪನ. ಇಂಟರ್ನ್ಯಾಷನಲ್ ಜರ್ನಲ್ ಆಫ್ ಓರಲ್ & ಮ್ಯಾಕ್ಸಿಲೊಫೇಸಿಯಲ್ ಸರ್ಜರಿ, 43 (2), ಪುಟಗಳು 2727-236. ಇಲ್ಲಿ ಲಭ್ಯವಿದೆ: http://dx.doi.org/10.1016/j.ijom.2013.07.745.

ಆಂಡ್ರೆಡ್, ಎನ್.ಎನ್., ಕಲ್ರಾ, ಆರ್. ಮತ್ತು ನ್ಯೂ, ಎಸ್.ಪಿ.ಎಸ್., 2012. ಟಿಎಂಜೆ ರೆಂಕ್ಯಾಲೋಸಿಸ್ ತಡೆಗಟ್ಟಲು ಹೊಸ ಪ್ರೋಟೋಕಾಲ್ ಮತ್ತು ಟ್ರಯಾಡ್ ರೋಗಿಗಳಲ್ಲಿ ಸಂಭಾವ್ಯ ಜೀವಕ್ಕೆ ಅಪಾಯಕಾರಿ ತೊಡಕುಗಳು. ಇಂಟರ್ನ್ಯಾಷನಲ್ ಜರ್ನಲ್ ಆಫ್ ಒರಲ್ & ಮ್ಯಾಕ್ಸಿಲೊಫೇಸಿಯಲ್ ಸರ್ಜರಿ, 41 (12), ಪುಟಗಳು 1495-1500. ಇಲ್ಲಿ ಲಭ್ಯವಿದೆ: http://dx.doi.org/10.1016/j.ijom.2012.06.012.

ಲೇಖಿನ, ಸಿ.ಪಿ., 2012. ಮ್ಯಾಕ್ಸಿಲೊ-ಮಾಂಡಿಬ್ಲಾರ್ ವಿರೂಪತೆಯ ಸರಿಪಡಿಸುವ ಡಿಸ್ಟ್ರಾಕ್ಷನ್ ಆಸ್ಟಿಯೋಜೆನೆಸಿಸ್. , 22 (8), ಪುಟಗಳು 582-585.

ಮೌನಿರ್, ಆರ್.ಎಂ. & ಎಲ್ ghareeb, T.I.A., 2017 ಟಿಎಂಜೆ- ಡಿಸಾರ್ಡರ್ಸ್ ಒಂದು ವ್ಯವಸ್ಥಿತ ವಿಮರ್ಶೆ ಮತ್ತು ಟೆಂಪೊರೋಮ್ಯಾಂಡಿಬ್ಯುಲರ್ ಜಂಟಿ ಸಂಧಿಹಿಡಿತ ನಿರ್ವಹಣೆಯಲ್ಲಿ ಅನೇಕ ಶಸ್ತ್ರಚಿಕಿತ್ಸಾ ವಿಧಾನಗಳು ಕ್ಲಿನಿಕಲ್ ಔಟ್‌ಕಮ್ಸ್ ಆಫ್ meta- ವಿಶ್ಲೇಷಣೆ. ಇಂಟರ್ನ್ಯಾಷನಲ್ ಜರ್ನಲ್ ಆಫ್ ಒರಲ್ & ಮ್ಯಾಕ್ಸಿಲೊಫೇಸಿಯಲ್ ಸರ್ಜರಿ, 44 (4), ಪುಟ 470-482. ಇಲ್ಲಿ ಲಭ್ಯವಿದೆ: http://dx.doi.org/10.1016/j.ijom.2014.10.017.

ಪರಾಶರೀಯಮ್

(ಅ) ಕೃಷಿ; (ಆ) ತೋಟಗಾರಿಕೆ, ಅರಣ್ಯ (ಕ) ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಜ್ಞಾನಗಳು

PARASHAREEYAM

(A) Agricultural, (B) HOrticultural, Forestry (C) Animal Husbandary & Fisheries Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ನವಜಾತ ಕರುಗಳಲ್ಲಿ ಕಂಡುಬರುವ ಜನ್ಮಜಾತ ವೈಪರಿತ್ಯಗಳು	ಡಾ: ನವೀನ್ ಎಮ್ ಡಾ: ಸಂತೋಶ್ ಕೆ ಎಮ್ ಡಾ: ರವಿ ರಾಯದುರ್ಗ	106 – 110
2.	ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿ ಹುಳುಗಳ ಭಾದೆ– ಸಮುದಾಯ ಆರೋಗ್ಯದ ಹಿತದೃಷ್ಟಿಯಿಂದ ಅತ್ಯಂತ ಗಮನವಹಿಸಬೇಕಾದ ವಿಷಯ	ಮಂಜುನಾಥ್ ಎಸ್.ಪಿ ಧನಲಕ್ಷ್ಮಿ ಹೆಚ್	110 – 111
3.	ಕರ್ನಾಟಕ ರಾಜ್ಯದ ಆಯ್ದ ಭಾಗಗಳ ಜಾನುವಾರುಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ಹಾಗೂ ಅವುಗಳ ನಿಯಂತ್ರಣ	ಮಂಜುನಾಥ್ ಎಸ್.ಪಿ ಧನಲಕ್ಷ್ಮಿ ಹೆಚ್ ರಮೇಶ್ ಬಿ.ಕೆ	111 – 113
4.	ಪ್ಲಾಸ್ಟಿಕ್‌ನಿಂದ ಜಾನುವಾರುಗಳಿಗೆ ಆಗುವ ತೊಂದರೆಗಳು	ಡಾ: ನವೀನ್ ಎಮ್ ಡಾ: ರವಿ ರಾಯ್‌ದುರ್ಗ್ ಡಾ: ಸಂತೋಶ್ ಕೆ ಎಮ್	113 – 115

ನವಜಾತ ಕರುಗಳಲ್ಲಿ ಕಂಡುಬರುವ ಜನ್ಮಜಾತ ವೈಪರಿತ್ಯಗಳು

ಡಾ: ನವೀನ್ ಎಮ್, ಡಾ: ಸಂತೋಶ್ ಕೆ ಎಮ್ ಮತ್ತು ಡಾ: ರವಿ ರಾಯದುರ್ಗ
ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

ಜನ್ಮಜಾತ ವೈಪರಿತ್ಯಗಳೆಂದರೆ ನವಜಾತ ಕರುಗಳಲ್ಲಿ ಹುಟ್ಟಿದಾಗ ಕಂಡುಬರುವ ವಿರೂಪತೆಗಳು. ಈ ವೈಪರಿತ್ಯಗಳಿರುವ ನವಜಾತ ಕರುಗಳು ಹುಟ್ಟಿದಾಗ ಜೀವಂತವಾಗಿರುತ್ತವೆ ಆದರೆ ನಂತರ ಅವುಗಳಿಗೆ ಸೂಕ್ತಸಮಯದಲ್ಲಿ ಚಿಕಿತ್ಸೆ ಸಿಗದಿದ್ದರೆ ಸಾವನ್ನಪ್ಪುತ್ತವೆ. ಜನ್ಮಜಾತ ವೈಪರಿತ್ಯಗಳಿರುವ ಕರುಗಳಲ್ಲಿ ಕ್ರಿಯೆಗಳಲ್ಲಿ ಅಲ್ಲದೆ ಅಂಗರಚನೆಯಲ್ಲಿಯೂ ಕೂಡ ನ್ಯೂನ್ಯತೆ ಕಂಡುಬರುತ್ತದೆ. ಜನ್ಮಜಾತ ವೈಪರಿತ್ಯಗಳು ಅನುವಂಶಿಕವಾಗಿ ಮತ್ತು ಪ್ರಕೃತಿದತ್ತವಾಗಿ ಕಂಡುಬರುತ್ತವೆ. ಅವುಗಳಿಗೆ ಕಾರಣಗಳೇನೆಂದರೆ ಇನ್‌ಬ್ರೀಡಿಂಗ್, ಪೌಷ್ಟಿಕಾಂಶದ ಕೊರತೆಗಳು, ಅಂತಃಸ್ರಾವಕ ತೊಂದರೆಗಳು, ಗರ್ಭಧಾರಣೆಯ ಸಂದರ್ಭದಲ್ಲಿ ವಾತಾವರಣದಲ್ಲಿ ಹೆಚ್ಚಿನ ತಾಪಮಾನ, ವಿಕಿರಣಗಳು, ರಾಸಾಯನಿಕಗಳು, ವಿಷಕಾರಿ ಗಿಡಗಳು ಮತ್ತು ಸಾಂಕ್ರಾಮಿಕ ರೋಗಗಳು. ಈ ವೈಪರಿತ್ಯಗಳು ಎಲ್ಲಾರೀತಿಯ ಹಸು ತಳಿಗಳಲ್ಲಿ ಕಂಡುಬರುತ್ತವೆ. ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗಕ್ಕೆ ನಾನಾ ರೀತಿಯ ಜನ್ಮಜಾತ ವೈಪ-ರಿತ್ಯಗಳಿರುವ ಕರುಗಳನ್ನು ಚಿಕಿತ್ಸೆಗಾಗಿ ಕರೆತರಲಾಗುತ್ತದೆ. ಇವುಗಳಲ್ಲಿ ಗುದದ್ವಾರದ ನಾಳಬಂಧ, ಯೋನಿಯ ನಾಳಬಂಧ, ಗುದನಾಳ-ಯೋನಿಯ ಫಿಸ್ಟುಲ, ಮಣಿಕಟ್ಟಿನ ಸ್ನಾಯುರಜ್ಜು ಕಗ್ಗುವಿಕೆ, ಸ್ಯಾಕ್ರಲ್ ಅರಚಿತ, ಮೂತ್ರಚೀಲ ಮಾರ್ಗದ ಬ್ಲಾಕ್, ಹೊಕ್ಕಳಿನ ಹರ್ನಿಯ ಮತ್ತು ಮೂತ್ರದ ನಾಳಬಂಧವು ಮುಖ್ಯವಾದವು. ಕೆಲವು ವೈಪರಿತ್ಯಗಳನ್ನು ಶಸ್ತ್ರಚಿಕಿತ್ಸೆ ನೀಡಿ ಯಶಸ್ವಿಯಾಗಿ ಗುಣಪಡಿಸಲಾಗಿದೆ. ಕೆಲವೊಂದನ್ನು ಗುಣಪಡಿಸಲಾಗಲಿಲ್ಲ. ಇದಕ್ಕೆ ಕಾರಣಗಳು ಕರುವಿನ ಮಾಲೀಕರು ಕರುಗಳನ್ನು ಚಿಕಿತ್ಸೆಗೆ ತರುವಲ್ಲಿ ವಿಳಂಬಮಾಡುವುದು, ಕರುಗಳಲ್ಲಿ ಅತಿಯಾದ ವಿರೂಪತೆ ಮತ್ತು ದುಬಾರಿ ಶಸ್ತ್ರಚಿಕಿತ್ಸಾ ಕ್ರಮಗಳು. ಇದಲ್ಲದೆ ಈ ವೈಪರಿತ್ಯಗಳನ್ನು ಸರಿಪಡಿಸಲು ಶಸ್ತ್ರಚಿಕಿತ್ಸಾ ಕ್ರಮಗಳ ಮೇಲೆ ಸಂಶೋಧನೆ ಮತ್ತು ಅವುಗಳ ಅಳವಡಿಕೆ ಅವಶ್ಯಕವಾಗಿರುತ್ತದೆ.

ಜನ್ಮಜಾತ ವೈಪರಿತ್ಯಗಳೆಂದರೆ ನವಜಾತ ಕರುಗಳಲ್ಲಿ ಹುಟ್ಟಿದಾಗ ಕಂಡುಬರುವ ವಿರೂಪತೆಗಳು. ಈ ವೈಪರಿತ್ಯಗಳಿರುವ ನವಜಾತ ಕರುಗಳು ಹುಟ್ಟಿದಾಗ ಜೀವಂತವಾಗಿರುತ್ತವೆ ಆದರೆ ನಂತರ ಅವುಗಳಿಗೆ ಸೂಕ್ತಸಮಯದಲ್ಲಿ ಚಿಕಿತ್ಸೆ ಸಿಗದಿದ್ದರೆ ಸಾವನ್ನಪ್ಪುತ್ತವೆ. ಜನ್ಮಜಾತ ವೈಪರಿತ್ಯಗಳಿರುವ ಕರುಗಳಲ್ಲಿ ಕ್ರಿಯೆಗಳಲ್ಲಿ ಅಲ್ಲದೆ ಅಂಗರಚನೆಯಲ್ಲಿಯೂ ಕೂಡ ನ್ಯೂನ್ಯತೆ ಕಂಡುಬರುತ್ತದೆ. ಜನ್ಮಜಾತ ವೈಪರಿತ್ಯಗಳು ಅನುವಂಶಿಕವಾಗಿ ಮತ್ತು ಪ್ರಕೃತಿದತ್ತವಾಗಿ ಕಂಡುಬರುತ್ತವೆ. ಅವುಗಳಿಗೆ ಕಾರಣಗಳೇನೆಂದರೆ ಇನ್‌ಬ್ರೀಡಿಂಗ್, ಪೌಷ್ಟಿಕಾಂಶದ ಕೊರತೆಗಳು, ಅಂತಃಸ್ರಾವಕ ತೊಂದರೆಗಳು, ಗರ್ಭಧಾರಣೆಯ ಸಂದರ್ಭದಲ್ಲಿ ವಾತಾವರಣದಲ್ಲಿ ಹೆಚ್ಚಿನ ತಾಪಮಾನ, ವಿಕಿರಣಗಳು, ರಾಸಾಯನಿಕಗಳು, ವಿಷಕಾರಿ ಗಿಡಗಳು ಮತ್ತು ಸಾಂಕ್ರಾಮಿಕ ರೋಗಗಳು. ಈ ವೈಪರಿತ್ಯಗಳು ಎಲ್ಲಾರೀತಿಯ ಹಸು ತಳಿಗಳಲ್ಲಿ ಕಂಡುಬರುತ್ತವೆ.

ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣ ವಿಭಾಗಕ್ಕೆ ನಾನಾ ರೀತಿಯ ಜನ್ಮಜಾತ ವೈಪರಿತ್ಯಗಳಿರುವ ಕರುಗಳನ್ನು ಚಿಕಿತ್ಸೆಗಾಗಿ ಕರೆತರಲಾಗುತ್ತದೆ. ಇವುಗಳಲ್ಲಿ ಗುದದ್ವಾರದ ನಾಳಬಂಧ, ಯೋನಿಯ ನಾಳಬಂಧ, ಗುದನಾಳ-ಯೋನಿಯ ಫಿಸ್ಟುಲ, ಮಣಿಕಟ್ಟಿನ ಸ್ನಾಯುರಜ್ಜು ಕಗ್ಗುವಿಕೆ, ಸ್ಯಾಕ್ರಲ್ ಅರಚಿತ, ಮೂತ್ರಚೀಲ ಮಾರ್ಗದ ಬ್ಲಾಕ್, ಹೊಕ್ಕಳಿನ ಹರ್ನಿಯ ಮತ್ತು ಮೂತ್ರದ ನಾಳಬಂಧವು ಮುಖ್ಯವಾದವು. 2013 ರಿಂದ 2016 ರವರೆಗೆ ಒಟ್ಟು ಜನ್ಮಜಾತ ವೈಪರಿತ್ಯಗಳಿರುವ 23 ನವಜಾತ ಕರುಗಳನ್ನು ಚಿಕಿತ್ಸೆಗಾಗಿ ತರಲಾಗಿರುತ್ತದೆ. ಅವುಗಳಲ್ಲಿ, 8 ಕರುಗಳಿಗೆ ಗುದನಾಳ ಬಂಧ, ಒಂದರಲ್ಲಿ ಗುದನಾಳ-ಯೋನಿಯ ಫಿಸ್ಟುಲ, ಒಂದರಲ್ಲಿ ಗುದನಾಳ ಬಂಧದ ಜೊತೆಗೆ ಗುದನಾಳ-ಯೋನಿಯ ಫಿಸ್ಟುಲ, 4 ರಲ್ಲಿ ಕರುಳಿನ ನಾಳಬಂಧ, ಒಂದರಲ್ಲಿ ಸ್ಯಾಕ್ರಲ್ ಅರಚಿತ, ಒಂದರಲ್ಲಿ ಮೂತ್ರಚೀಲದ ಮಾರ್ಗಬಂಧ, 3 ರಲ್ಲಿ ಹೊಕ್ಕಳಿನ ಹರ್ನಿಯ, ಒಂದರಲ್ಲಿ ಗುದನಾಳಬಂಧದ ಜೊತೆಗೆ ಹೊಕ್ಕಳಿನ ಹರ್ನಿಯ ಮತ್ತು ಮೂತ್ರ ನಾಳಬಂಧ ಮತ್ತು 4 ಕರುಗಳಲ್ಲಿ ಮಣಿಕಟ್ಟಿನ ಸ್ನಾಯುರಜ್ಜು ಕುಗ್ಗುವಿಕೆ ಇರುತ್ತದೆ.

23 ಕರುಗಳಲ್ಲಿ 15 ಕರುಗಳಿಗೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ. ಈ 15 ಕರುಗಳಲ್ಲಿ 8 ಕರುಗಳಿಗೆ ಗುದನಾಳಬಂಧ, ಒಂದರಲ್ಲಿ ಗುದನಾಳ-ಯೋನಿಯ ಫಿಸ್ಟುಲ, ಒಂದರಲ್ಲಿ ಗುದನಾಳ ಬಂಧದ ಜೊತೆಗೆ ಗುದನಾಳ-ಯೋನಿಯ ಫಿಸ್ಟುಲ, ಒಂದರಲ್ಲಿ ಮೂತ್ರಚೀಲದ ಮಾರ್ಗಬಂಧ, 2 ರಲ್ಲಿ ಹೊಕ್ಕಳಿನ ಹರ್ನಿಯ, 2 ಕರುಗಳಲ್ಲಿ ಮಣಿಕಟ್ಟಿನ ಸ್ನಾಯುರಜ್ಜು ಕುಗ್ಗುವಿಕೆ ಇರುತ್ತದೆ.

ಗುದನಾಳಬಂಧವಿರುವ ಕರುವು ಹುಟ್ಟಿದಾಗಿನಿಂದ ಮಲ (ಮಿಕೋನಿಯಮ್) ವಿಸರ್ಜನೆಮಾಡಿರುವುದಿಲ್ಲ ಮತ್ತು ಅದಕ್ಕೆ ಗುದದ್ವಾರವಿರುವುದಿಲ್ಲ. ಆದರೆ ಈ ಜಾಗದಲ್ಲಿ ಕರುವು ಮಲವಿಸರ್ಜಿಸಲು ತಿಣುಕಿದಾಗ ಉಬ್ಬು ಕಂಡುಬರುತ್ತದೆ. ಕರುವು ಹುಟ್ಟಿದ ನಂತರ ಹಾಲು ಕುಡಿಯುತ್ತದೆ. ಒಂದೆರೆಡು ದಿನ ಆರೋಗ್ಯವಾಗಿರುತ್ತದೆ. ನಂತರ ಮಲವಿಸರ್ಜನೆ ಮಾಡಲಾಗದೆ ಹೊಟ್ಟೆನೋವಿನಿಂದ ಸುಸ್ತಾಗುತ್ತದೆ. ಈ ವೈಪರಿತ್ಯವನ್ನು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಮಾಡಿ ಗುದದ್ವಾರವನ್ನು ರಚಿಸಬಹುದು. ಆದರೆ, ಕರುವಿಗೆ ಆದಷ್ಟು ಬೇಗ ಚಿಕಿತ್ಸೆ ಕೊಡಿಸದಿದ್ದರೆ ಕರುಳು ಹೊಡೆದು ಕರುವು ಸಾವನ್ನಪ್ಪುತ್ತದೆ. ಚಿಕಿತ್ಸೆಗೆ ತರಲಾದ ಗುದನಾಳಬಂಧವಿರುವ 8 ಕರುಗಳನ್ನೂ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು ಮತ್ತು ಯಶಸ್ವಿಯಾಗಿ ಗುಣಪಡಿಸಲಾಯಿತು.

ಕರುವುನಲ್ಲಿ ಗುದನಾಳಬಂಧ

ಗುದನಾಳ-ಯೋನಿಯ ಫಿಸ್ಚುಲವಿರುವ ಕರುವಿನಲ್ಲಿ ಸಗಣಿ ಮತ್ತು ಮೂತ್ರವು ಬೆರೆತು ಯೋನಿಯ ಮೂಲಕ ಹೊರಬರುತ್ತದೆ. ಈ ರೀತಿಯ ವೈಪರಿತ್ಯವಿರುವ ಒಂದು ಮಲೆನಾಡು ಗಿಡ್ಡ ತಳಿಯ ಹೆಣ್ಣುಕರುವನ್ನು ಚಿಕಿತ್ಸೆಗೆ ತರಲಾಗಿತ್ತು. ಶುರುವಿನಲ್ಲಿ ಕರುವಿಗೆ ಇದರಿಂದ ಯಾವುದೇ ತೊಂದರೆಯಾಗದಿದ್ದರೂ, ದೀರ್ಘಕಾಲದ ನಂತರ ಸಗಣಿಯು ಯೋನಿ ಮತ್ತು ಗರ್ಭಕೋಶಕ್ಕೆ ತಾಗಿ ಸೋಂಕು ಉಂಟುಮಾಡುತ್ತದೆ. ನಂತರ ಇದರಿಂದ ಸಂತಾನೋತ್ಪತ್ತಿಯ ಸಾಮರ್ಥ್ಯ ಕುಂಟಿತವಾಗುತ್ತದೆ. ಆದ್ದರಿಂದ, ಈ ಫಿಸ್ಚುಲವನ್ನು ಶಸ್ತ್ರಚಿಕಿತ್ಸೆಮೂಲಕ ಸರಿಪಡಿಸಬೇಕಾಗುತ್ತದೆ. ಈ ಕರುವಿಗೆ ಲಿಗ್ನೊಕೇನ್ ಹೈಡ್ರೋಕ್ಲೊರೈಡ್ ಉಪಯೋಗಿಸಿ ಸ್ಥಳೀಯ ಅರವಳಿಕೆಯನ್ನು ಕೊಡಲಾಯಿತು. ನಂತರ ಗುದನಾಳ ಮತ್ತು ಯೋನಿನಾಳವನ್ನು ಕ್ರಮಬದ್ಧವಾಗಿ ಬೇರ್ಪಡಿಸಿ ಒಂದೊಂದಾಗಿ ಹೊಲಿಗೆ ಹಾಕಲಾಯಿತು. ಶಸ್ತ್ರಚಿಕಿತ್ಸೆ ನಂತರ ಕರುವಿಗೆ ಪ್ರತಿಜೀವಕ ಮತ್ತು ನೋವುನಿರೋದಕ ಔಷಧಿಯನ್ನು 7 ದಿನಗಳ ಕಾಲ ಕೊಡಲಾಯಿತು ಮತ್ತು ಕರುವು ಸಂಪೂರ್ಣವಾಗಿ ಗುಣಮುಖವಾಯಿತು.

ಕರುವಿನಲ್ಲಿ ಗುದನಾಳ-ಯೋನಿಯ ಫಿಸ್ಚುಲ



ಶಸ್ತ್ರಚಿಕಿತ್ಸೆಯ ನಂತರ



ಶಸ್ತ್ರಚಿಕಿತ್ಸೆಯಾದ ಮೂರು ತಿಂಗಳ ನಂತರ

ಇನ್ನೊಂದು ಕರುವಿನಲ್ಲಿ ಗುದನಾಳ-ಯೋನಿಯ ಫಿಸ್ಚುಲ ಜೊತೆಗೆ ಗುದನಾಳಬಂಧ ಕಂಡುಬಂದಿತ್ತು. ಗುದನಾಳಬಂಧವನ್ನು ಕರುವಿನ ದೈಹಿಕ ತಮಾಸಣೆಯಿಂದ ಕಂಡಹಿಡಿಯಲಾಯಿತು ಮತ್ತು ಗುದನಾಳ-ಯೋನಿಯ ಫಿಸ್ಚುಲವನ್ನು ಅಲ್ಟ್ರಾಸೌಂಡ್ ಸ್ಕ್ಯಾನ್ ಮೂಲಕ ಪತ್ತೆಮಾಡಲಾಯಿತು. ಮೇಲೆ ವಿವರಿಸಿದಂತೆ ಇದರಲ್ಲಿಯೂ ಕೂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಲಾಯಿತು ಮತ್ತು ಕರುವು ಸಂಪೂರ್ಣವಾಗಿ ಗುಣಮುಖವಾಯಿತು.



ಗುದನಾಳ-ಯೋನಿಯ ಫಿಸ್ಟುಲ ಜೊತೆಗೆ ಗುದನಾಳಬಂಧ



ಶಸ್ತ್ರಚಿಕಿತ್ಸೆಯ ನಂತರ



1-ಗುದನಾಳ, 2-ಯೋನಿಯ ನಾಳ ಮತ್ತು 3-ಮೂತ್ರ ಮಿಶ್ರಿತ ಸಗಣಿಯು ಗುದನಾಳದಿಂದ ಯೋನಿನಾಳಕ್ಕೆ ಹೋಗುತ್ತಿರುವುದು.

ಒಂದು ಹೆಣ್ಣುಕರುವು ಹುಟ್ಟಿದಾಗಿನಿಂದ ಮೂತ್ರವಿಸರ್ಜನೆ ಮಾಡಿರಲಿಲ್ಲ. ಈ ಕರುವಿನ ಮೂತ್ರನಾಳಕ್ಕೆ ಕ್ಯಾಥೆಟರನ್ನು ಹಾಕಿ, ಕ್ಷ-ಕಿರಣ ತೆಗೆಯಲಾಯಿತು. ಇದರಿಂದ ಮೂತ್ರಚೀಲದ ಮಾರ್ಗಬಂಧವಿರುವುದು ದೃಡಪಟ್ಟಿತು. ನಂತರ ಬಿರುಸಾದ ಕ್ಯಾಥೆಟರನ್ನು ಹಾಕಿ ಮಾರ್ಗವನ್ನು ತೆರೆಯಲಾಯಿತು ಮತ್ತು ಆ ಕ್ಯಾಥೆಟರನ್ನು ಯೋನಿಗೆ ಹೊಲಿಗೆಹಾಕಲಾಯಿತು. 7 ದಿನಗಳ ಕಾಲ ಕರುವಿಗೆ ಪ್ರತಿರೋಧಕ ಮತ್ತು ನೋವುನಿವಾರಕ ಔಷಧಿಗಳನ್ನು ನೀಡಿ ನಂತರ ಕ್ಯಾಥೆಟರನ್ನು ಹೊರತೆಗೆಯಲಾಯಿತು. ಈ ಕರುವು ಸಂಪೂರ್ಣವಾಗಿ ಗುಣಮುಖವಾಯಿತು.



ರೇಡಿಯೋಗ್ರಾಪಲ್ಲಿ ಕ್ಯಾಥೆಟರ್ ಕಾಣುತ್ತಿರುವುದು

ಕರುವಿಗೆ ಕ್ಯಾಥೆಟರ್ ಹಾಕಿ ಮೂತ್ರತೆಗೆಯುತ್ತಿರುವುದು

ಮಣಿಕಟ್ಟಿನ ಸ್ನಾಯುರಜ್ಜು ಕುಗ್ಗಿರುವ 4 ಕರುಗಳನ್ನು ಚಿಕಿತ್ಸೆಗಾಗಿ ತರಲಾಗಿತ್ತು. ಅವುಗಳಲ್ಲಿ ಮೂರಕ್ಕೆ ಯಶಸ್ವಿಯಾಗಿ ಚಿಕಿತ್ಸೆನಿಡಲಾಯಿತು. ಒಂದರಲ್ಲಿ ವಿರೂಪತೆಯ ತೀವ್ರತೆ ಹೆಚ್ಚಾಗಿದ್ದರಿಂದ ಸರಿಪಡಿಸಲಾಗಲಿಲ್ಲ. 3 ಕರುಗಳಿಗೆ ಪಾರ್ಶಿಯಲ್ ಟೀನಾಟಮಿ ಶಸ್ತ್ರಚಿಕಿತ್ಸೆಮಾಡಲಾಯಿತು. ನಂತರ ಫ್ಯಬರ್ ಗ್ಲಾಸ್ ಬ್ಯಾಂಡೇಜನ್ನು ಹಾಕಲಾಯಿತು. 7 ದಿನಗಳ ಕಾಲ ಕರುವಿಗೆ ಪ್ರತಿರೋಧಕ ಮತ್ತು ನೋವುನಿವಾರಕ ಔಷಧಿಗಳನ್ನು ನೀಡಿಲಾಯಿತು ಮತ್ತು 45 ದಿನಗಳ ನಂತರ ಬ್ಯಾಂಡೇಜ್ ತೆಗೆಯಲಾಯಿತು. ಈ ಮೂರೂ ಕರುಗಳು ಸಂಪೂರ್ಣವಾಗಿ ಗುಣಮುಖವಾದವು.

ಕರುವಿನಲ್ಲಿ ಮಣಿಕಟ್ಟಿನ ಸ್ನಾಯುರಜ್ಜು ಕುಗ್ಗುವಿಕೆ



ಪಾರ್ಶಿಯಲ್ ಟೀನಾಟಮಿ ಶಸ್ತ್ರಚಿಕಿತ್ಸೆ ಮಾಡುತ್ತಿರುವುದು

ಮೂರು ಕರುಗಳಲ್ಲಿ ಹೊಕ್ಕಳಿನ ಹರ್ನಿಯವಿತ್ತು. ಇವುಗಳಲ್ಲಿ 2 ಕರುಗಳಿಗೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಮಾಡಲಾಯಿತು. ಒಂದು ಕರುವನ್ನು ಮಾಲೀಕರು ಚಿಕಿತ್ಸೆಗೆ ತರುವಲ್ಲಿ ವಿಳಂಬಮಾಡಿದ್ದರಿಂದ ಚಿಕಿತ್ಸೆ ನೀಡಿ ಬದುಕಿಸಲಾಗಲಿಲ್ಲ. 2 ಕರುಗಳಿಗೆ ಹರ್ನಿಯೋರ್‍ಯಾಪಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಯಿತು. 7 ದಿನಗಳ ಕಾಲ ಕರುವಿಗೆ ಪ್ರತಿರೋಧಕ ಮತ್ತು ನೋವುನಿವಾರಕ ಔಷಧಿಗಳನ್ನು

ನೀಡಿಲಾಯಿತು. ಎರಡೂ ಕರುಗಳು ಸಂಪೂರ್ಣವಾಗಿ ಗುಣಮುಖವಾದವು.

ಕರುವಿನಲ್ಲಿ ಹೊಕ್ಕಳಿನ ಹರ್ನಿಯ

ಹರ್ನಿಯೋರ್‍ಯಾಪಿ ಶಸ್ತ್ರಚಿಕಿತ್ಸೆ ಮಾಡಿರುವುದು

ಒಂದುಕರುವಿನಲ್ಲಿ ಗೂನು ಬೆನ್ನಿನ ಕಾರಣದಿಂದ ಚಿಕಿತ್ಸೆಗೆ ತರಲಾಗಿತ್ತು. ಅದನ್ನು ತಪಾಸಣೆಮಾಡಿದಾಗ ಗೂನುಬೆನ್ನಿನ ಕಾರಣದಿಂದ ಕರುವು ಹಿಂಗಾಲಿನ ಮೇಲೆ ಸರಿಯಾಗಿ ನಿಲ್ಲಲಾಗುತ್ತಿರಲಿಲ್ಲ. ನಂತರ ಕ್ಷ-ಕಿರಣ ಸಹಾಯದಿಂದ ರೇಡಿಯೋಗ್ರಾಫ಼ ತೆಗೆಯಲಾಯಿತು. ಇದರಿಂದ ಸ್ಯಾಕ್ರಲ್ ಬೆನ್ನುಮೂಳೆ ಇಲ್ಲದಿರುವುದು ಖಚಿತವಯಿತು. ಸ್ಯಾಕ್ರಲ್ ಅರಚಿತ ಜನ್ಮಜಾತ ವೈಪರಿತ್ಯವನ್ನು ಯಾವುದೇ ಶಸ್ತ್ರಚಿಕಿತ್ಸೆಯಿಂದ ಸರಿಪಡಿಸಲಾಗುವುದಿಲ್ಲ.

ಕರುವಿನಲ್ಲಿ ಸ್ಯಾಕ್ರಲ್ ಅರಚಿತ



ರೇಡಿಯೋಗ್ರಾಫ಼ಲ್ಲಿ ಸ್ಯಾಕ್ರಲ್ ಮೂಳೆ ಇಲ್ಲದಿರುವುದು

ಒಂದು ಕರುವಿನಲ್ಲಿ ಹೊಕ್ಕಳಿನ ಹರ್ನಿಯ ಜೊತೆ ಗುದನಾಳಬಂಧ ಮತ್ತು ಮೂತ್ರನಾಳಬಂಧವಿತ್ತು. ಇದನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗಿತ್ತು. ಹರ್ನಿಯೋರ್‍ಯಾಪಿ ಮೂಲಕ ಹೊಕ್ಕಳಿನ ಹರ್ನಿಯವನ್ನು ಸರಿಪಡಿಸಲಾಯಿತು ಮತ್ತು ಶಸ್ತ್ರಚಿಕಿತ್ಸೆ ಮೂಲಕ ಗುದದ್ವಾರವನ್ನು ರಚಿಸಲಾಯಿತು. ಆದರೆ ಮೂತ್ರಚೀಲವನ್ನು ಶಸ್ತ್ರಚಿಕಿತ್ಸೆವೇಳೆ ಪತ್ತೆಹಚ್ಚಲಾಗಲಿಲ್ಲ ಮತ್ತು ಕ್ಯಾಥೆಟರ್ ಅಳವಡಿಸಲಾಗಲಿಲ್ಲ. ಕರುವು ಶಸ್ತ್ರಚಿಕಿತ್ಸೆಯಾದ 15 ದಿನಗಳ ನಂತರ ಮರಣಹೊಂದಿತು.

ಕರುವಿನಲ್ಲಿ ಹೊಕ್ಕಳಿನ ಹರ್ನಿಯ ಜೊತೆ ಗುದನಾಳಬಂಧ ಮತ್ತು ಮೂತ್ರನಾಳಬಂಧ

4 ಕರುಗಳಲ್ಲಿ ಕರುಳಿನ ನಾಳಬಂಧವಿರುವುದರಿಂದ ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಲಾಗಲಿಲ್ಲ. ಈ ನಾಲ್ಕರಲ್ಲಿ 2 ಕರುಗಳಲ್ಲಿ ಕರುಳು ಹೊಟ್ಟೆಯೊಳಗೆ ಹೊಡೆದಿರುವುದು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮೂಲಕ ಖಚಿತಪಡಿಸಿಕೊಳ್ಳಲಾಯಿತು. ಇನ್ನೆರೆಡು ಕರುಗಳಿಗೆ ಶಸ್ತ್ರಚಿಕಿತ್ಸೆ ಮಾಡಿದರೂ ಸರಿಪಡಿಸಲಾಗಲಿಲ್ಲ.

ಇದರಿಂದ ತಿಳಿದು ಬರುವುದೇನೆಂದರೆ, ನವಜಾತ ಕರುಗಳಲ್ಲಿ ಜನ್ಮಜಾತ ವೈಪರಿತ್ಯಗಳು ಸಾಮಾನ್ಯವಾಗಿಬಿಟ್ಟಿವೆ. ಇವುಗಳು ಬರದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದು ಕೊಳ್ಳಬೇಕು ಮತ್ತು ಇನ್‌ಬ್ರೀಡಿಂಗ್ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಈ ಜನ್ಮಜಾತ ವೈಪರಿತ್ಯಗಳನ್ನು ಸರಿಪಡಿಸಲು ಸೂಕ್ತ ಶಸ್ತ್ರಚಿಕಿತ್ಸಾ ಕ್ರಮಗಳ ಮೇಲೆ ಸಂಶೋಧನೆ ಮಾಡಬೇಕು ಮತ್ತು ಇವುಗಳನ್ನು ಚಿಕಿತ್ಸೆಯಲ್ಲಿ ಅಳವಡಿಸಿಕೊಳ್ಳಬೇಕು. ಇದರಿಂದ ಬಹಳಷ್ಟು ಕರುಗಳ ಜೀವವನ್ನು ಉಳಿಸಬಹುದು ಮತ್ತು ರೈತರಿಗೆ ಆಗುವ ಆರ್ಥಿಕ ನಷ್ಟವನ್ನು ತಡೆಯಬಹುದು.

ಗ್ರಂಥಸೂಚಿ

ಡೇವಿಡ್, ಡಬ್ಲ್ಯು. ಎ., ಗಾಯ್, ಎಸ್. ಜೆ. ಮತ್ತು ಎಡ್ರಿಯನ್, ಎಸ್., 2005. ಬೊವೈನ್ ಸರ್ಜರಿ ಅನ್ಡ್ ಲೇಮ್ನೆಸ್. 2ನೇ ಎಡಿಶನ್., ಗ್ರಾಫಿಕ್ರಾಫ್ಟ್ ಲಿಮಿಟೆಡ್, ಹಾಂಗ್ ಕಾಂಗ್. ಪುಟ.

ಧಿಲ್ಲಾನ್, ಕೆ. ಎಸ್., ಜಸ್ಮೇರ್ ಸಿಂಗ್, ಬಿ. ಬಿ. ಎಸ್., ಧಾಲಿವಾಲ್., ರಾಜನಿಶ್ ಶರ್ಮಾ ಮತ್ತು ಪನ್ನು, ಎಮ್. ಎಸ್. 2009. ಬಫೇಲೊ ಬಲೆಟಿನ್. 28(4): 168–169.

ಫ್ಯೂಬಿನಿ, ಎಸ್ ಮತ್ತು ಡುಚಾರ್ಮ್, ಎನ್. 2004. ಫಾರ್ಮ್ ಅನಿಮಲ್ ಸರ್ಜರಿ, ಮೊದಲನೇ ಎಡಿಶನ್., ಸಾಂಡರ್ಸ್, ಸೇಂಟ್ ಲೂಯಿಸ್, ಮಿಸ್ಸೌರಿ. ಪುಟ.

ನಸ್ಸ್, ಕೆ., ಸ್ಪೀಸ್ಸ್, ಎ., ಫೀಸ್ಟ್, ಎಮ್. ಮತ್ತು ಕೋಸ್ಟ್ಲಿನ್, ಆರ್. 2011. ಟೀರಾರ್ಜ್ಟ್ ಪ್ರಾಕ್ಸ್. 39: 15–26.

ತ್ಯಾಗಿ, ಆರ್.ಪಿ.ಎಸ್ ಮತ್ತು ಜಿತ್ ಸಿಂಗ್. 2008. ರ್ಯೂಮಿನೆಂಟ್ ಸರ್ಜರಿ, ಸಿಬಿಎಸ್, ದೆಲ್ಲಿ.

ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿ ಹುಳುಗಳ ಭಾದೆ– ಸಮುದಾಯ ಆರೋಗ್ಯದ ಹಿತದೃಷ್ಟಿಯಿಂದ ಅತ್ಯಂತ ಗಮನವಹಿಸಬೇಕಾದ ವಿಷಯ

[1]ಮಂಜುನಾಥ್ ಎಸ್.ಪಿ., [2]ಧನಲಕ್ಷ್ಮಿ ಹೆಚ್
[1]ಪಶುವೈದ್ಯಾಧಿಕಾರಿಗಳು, ಪಶುಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, [2]ಸಹಾಯಕ ಪ್ರಾಧ್ಯಾಪಕರು, ಪರೋಪಜೀವ ಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, Mail ID: drmanjvet@gmail.com

ಮಾಂಸ ಉತ್ಪಾದನೆಗಾಗಿ ಕುರಿ ಮತ್ತು ಮೇಕೆಗಳ ಸಾಕಾಣಿಕೆಯು ದಿನದಿಂದ ದಿನಕ್ಕೆ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಸಸ್ಯಾಹಾರಿಗಳಲ್ಲಿ ಮಾಂಸಾಹಾರದಿಂದ ಅನೇಕ ರೋಗಗಳು ಪ್ರಾಣಿಗಳಿಂದ ಬರುತ್ತವೆಯೆಂದೂ ಹಾಗೂ ಸಸ್ಯಾಹಾರ ಸೇವನೆಯಿಂದ ತಾವು ಪ್ರಾಣಿಜನ್ಯರೋಗಗಳಿಂದ ಮುಕ್ತರಾಗಿದ್ದೇವೆಂಬ ಭಾವನೆಯೂ ಇದೆ. ಆದರೆ ಸಸ್ಯಾಹಾರ ಸೇವನೆಯಿಂದಲೂ ಪ್ರಾಣಿಜನ್ಯ ರೋಗಗಳು ಬರುತ್ತವೆಯೆಂಬ ಅಂಶವು ಅನೇಕ–ರಿಗೆ ತಿಳಿದಿರುವುದಿಲ್ಲ. ಪ್ರಾಣಿಜನ್ಯ ರೋಗಗಳಲ್ಲಿ ಟೀನಿಯಾ ಲಾಡಿ ಹುಳುವಿನ ಭಾದೆಯು ಅತ್ಯಂತ ಪ್ರಮುಖವಾದುದ್ದಾಗಿದೆ. ಈ ಹುಳುಗಳ ಭಾದೆಯು ಮಾಂಸಾಹಾರ ಹಾಗೂ ಸಸ್ಯಾಹಾರಗಳೆರೆಡರಿಂದಲೂ ಬರುವ ಸಾಧ್ಯತೆಗಳಿದ್ದು ಸಾರ್ವಜನಿಕರಿಗೆ ಈ ಹುಳುವಿನ ಜೀವನ ಚಕ್ರ ಹಾಗೂ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವುದು ತುಂಬಾ ಅವಶ್ಯದ್ದಾಗಿದೆ. ಆದ್ದರಿಂದ ಕರ್ನಾಟಕದ ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿ ಹುಳುಗಳ ಇರುವಿಕೆ, ಅವುಗಳಿಂದ ಪ್ರಾಣಿಗಳು ಹಾಗೂ ಮನುಷ್ಯರಲ್ಲಿ ಆಗಿರುವ ಪರಿಣಾಮಗಳು ಹಾಗೂ ಅವುಗಳ ನಿಯಂತ್ರಣದ ಬಗ್ಗೆ ನಡೆಸಿದ ಸಂಶೋಧನೆಯನ್ನು ಈ ಪ್ರಬಂಧದಲ್ಲಿ ಪ್ರಸ್ತುತ ಪಡಿಸಲಾಗಿದೆ. ಹಾಸನ ಜಿಲ್ಲೆಯಲ್ಲಿ 2016 ರಿಂದ 2017 ರವರೆಗೆ ದನ, ಕುರಿ, ಮೇಕೆ ಹಾಗೂ ಹಂದಿಗಳ ಕಸಾಯಿಖಾನೆಗಳಲ್ಲಿ, ಜಾನುವಾರುಗಳ ಚಿಕಿತ್ಸೆಯ ಸಂಧರ್ಭದಲ್ಲಿ, ಮೃತಜಾನುವಾರುಗಳ ಮರಣೋತ್ತರ ಪರೀಕ್ಷೆಯ ಸಂಧರ್ಭದಲ್ಲಿ ಸಿಸ್ಟಗಳ ಇರುವಿಕೆಯನ್ನು ಹುಡುಕಲಾಯಿತು. ಮನುಷ್ಯರ ಪ್ರಮುಖ ಡಯಾಗ್ನೋಸ್ಟಿಕ್ ಲ್ಯಾಬ್ ಗಳು, ಆಸ್ಪತ್ರೆಗಳು ಹಾಗೂ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಮನುಷ್ಯರಲ್ಲಿ ಸಿಸ್ಟಗಳಾಗಿ ಬಳಲಿದವರ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ಎಲ್ಲಾ ಮಾಹಿತಿಗಳನ್ನು ಕ್ರೋಢೀಕ–ರಿಸಿದಾಗ ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿ ಹುಳುಗಳ ಭಾದೆಯು ಹೆಚ್ಚಾಗಿದ್ದು ಈ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆಯನ್ನು ಮೂಡಿಸುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆಯೆಂದು ಈ ಸಂಶೋಧನೆಯು ತಿಳಿಸುತ್ತದೆ.

ಮಾಂಸ ಉತ್ಪಾದನೆಗಾಗಿ ಕುರಿ ಮತ್ತು ಮೇಕೆಗಳ ಸಾಕಾಣಿಕೆಯು ದಿನದಿಂದ ದಿನಕ್ಕೆ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಸಸ್ಯಾಹಾರಿಗಳಲ್ಲಿ ಮಾಂಸಾಹಾರದಿಂದ ಅನೇಕ ರೋಗಗಳು ಪ್ರಾಣಿಗಳಿಂದ ಬರುತ್ತವೆಯೆಂದೂ ಹಾಗೂ ಸಸ್ಯಾಹಾರ ಸೇವನೆಯಿಂದ ತಾವು ಪ್ರಾಣಿಜನ್ಯರೋಗಗಳಿಂದ ಮುಕ್ತರಾಗಿದ್ದೇವೆಂಬ ಭಾವನೆಯೂ ಇದೆ. ಆದರೆ ಸಸ್ಯಾಹಾರ ಸೇವನೆಯಿಂದಲೂ ಪ್ರಾಣಿಜನ್ಯ ರೋಗಗಳು ಬರುತ್ತವೆಯೆಂಬ ಅಂಶವು ಅನೇಕರಿಗೆ ತಿಳಿದಿರುವುದಿಲ್ಲ. ಪ್ರಾಣಿಜನ್ಯ ರೋಗಗಳಲ್ಲಿ ಟೀನಿಯಾ ಲಾಡಿ ಹುಳುವಿನ ಭಾದೆಯು ಅತ್ಯಂತ ಪ್ರಮುಖವಾದುದ್ದಾಗಿದೆ. ಈ ಹುಳುಗಳ ಭಾದೆಯು ಮಾಂಸಾಹಾರ ಹಾಗೂ ಸಸ್ಯಾಹಾರಗಳೆರೆಡರಿಂದಲೂ ಬರುವ ಸಾಧ್ಯತೆಗಳಿದ್ದು ಸಾರ್ವಜನಿಕರಿಗೆ ಈ ಹುಳುವಿನ ಜೀವನ ಚಕ್ರ ಹಾಗೂ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವುದು ತುಂಬಾ ಅವಶ್ಯದ್ದಾಗಿದೆ. ಆದ್ದರಿಂದ ಕರ್ನಾಟಕದ ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿ ಹುಳುಗಳ ಇರುವಿಕೆ, ಅವುಗಳಿಂದ ಪ್ರಾಣಿಗಳು ಹಾಗೂ ಮನುಷ್ಯರಲ್ಲಿ ಆಗಿರುವ ಪರಿಣಾಮಗಳು ಹಾಗೂ ಅವುಗಳ ನಿಯಂತ್ರಣದ ಬಗ್ಗೆ ನಡೆಸಿದ ಸಂಶೋಧನೆಯನ್ನು ಈ ಪ್ರಬಂಧದಲ್ಲಿ ಪ್ರಸ್ತುತ ಪಡಿಸಲಾಗಿದೆ.

ನಾಯಿಗಳು ಟೀನಿಯಾ ಲಾಡಿಹುಳುಗಳ ಪ್ರಮುಖ ಹೋಸ್ಟ್‌ಗಳಾಗಿದ್ದು, ಇವುಗಳ ಹೊಟ್ಟೆಯಲ್ಲಿ ಟೀನಿಯಾ ಲಾಡಿಹುಳುಗಳು ಬೆಳೆಯುತ್ತವೆ. ನಾಯಿಗಳ ಮಲದಲ್ಲಿ ಈ ಲಾಡಿಹುಳುಗಳ ಮೊಟ್ಟೆಗಳು ವಿಸರ್ಜಿತಗೊಂಡು ಬಯಲ್ಲಿ ಬೆಳೆದಿರುವ ಗಿಡಗೆಂಟೆಗಳ ಮೇಲೆ ಅಂಟಿಕೊಳ್ಳುತ್ತವೆ. ಇವುಗಳನ್ನು ಸೇವಿಸುವ ಕುರಿ–ಮೇಕೆಗಳು ಮಧ್ಯವರ್ತಿ ಹೋಸ್ಟಗಳಾಗುತ್ತವೆ. ಇವುಗಳಲ್ಲಿ ಟೀನಿಯಾ ಮೊಟ್ಟೆಗಳಿಂದ ದೇಹದ ಅನೇಖ ಭಾಗಗಳಲ್ಲಿ ಸಿಸ್ಟ ಗಳು ಬೆಳೆಯುತ್ತವೆ. ಇದರಿಂದ ಮಧ್ಯವರ್ತಿ ಹೋಸ್ಟಗಳ ದೇಹದಲ್ಲಿ ಅನೇಖ ತೊಂದರೆಗಳಾಗುತ್ತವೆ. ಈ ಮಧ್ಯವರ್ತಿ ಹೋಸ್ಟಗಳನ್ನು ಸೇವಿಸಿದಾಗ ಸೇವಿಸಿದವರಲ್ಲಿ ಟೀನಿಯಾ ಹುಳುಗಳು ವೃದ್ದಿಯಾಗಿ ಅನೇಖ ತೊಂದರೆಗಳನ್ನು ಮಾಡುತ್ತವೆ. ಸಾಮಾನ್ಯವಾಗಿ ಕುರಿ, ಮೇಕೆ, ಹಂದಿಗಳು ಮಧ್ಯವರ್ತಿ ಹೋಸ್ಟಗಳಾದರೂ ಮನುಷ್ಯರು ಸೊಪ್ಪು, ತರಕಾರಿಗಳನ್ನು ಸರಿಯಾಗಿ ತೊಳೆಯದೇ ಉಪಯೋಗಿಸುವುದರಿಂದ ಆಕಸ್ಮಿಕ ಹೋಸ್ಟ ಗಳಾಗಿ ಅನೇಕ ತೊಂದರೆಗಳಿಗೆ ಒಳಗಾಗುತ್ತಾರೆ. ಅಲ್ಲದೇ ದೇಹದ ಅನೇಕ ಭಾಗಗಳಲ್ಲಿ ಸಿಸ್ಟ್ ಗಳಾಗಿ ಕೆಲವೊಮ್ಮೆ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಮನುಷ್ಯರು ಮಧ್ಯವರ್ತಿ ಹೋಸ್ಟಗಳಾದ ಕುರಿ, ಮೇಕೆ ಹಾಗೂ

ಹಂದಿಗಳಲ್ಲಿ ಸಿಸ್ಟ್‌ಗಳಿದ್ದಾಗ ಮಾಂಸವನ್ನು ಸರಿಯಾಗಿ ಬೇಯಿಸದೇ ತಿಂದಾಗ ಮನುಷ್ಯರಲ್ಲಿ ಟೀನಿಯಾ ಹುಳುಗಳು ವೃದ್ಧಿಯಾಗುತ್ತವೆ. ಈ ಸಂಧರ್ಭದಲ್ಲಿ ಮನುಷ್ಯರು ಪ್ರಮುಖ ಹೋಸ್ಟ್‌ಗಳಾಗಿ ಮಾರ್ಪಾಟಾಗುತ್ತಾರೆ. ಎರಡೂ ವಿಧದ ಹೋಸ್ಟ್‌ಗಳಾಗಿಯೂ ಅನೇಕ ತೊಂದರೆಗಳಿಗೆ ಮನುಷ್ಯರು ಒಳಪಡುತ್ತಾರೆ.

ಸಂಶೋಧನೆಯ ವಿಧಾನ: ಹಾಸನ ಜಿಲ್ಲೆಯಲ್ಲಿ 2016 ರಿಂದ 2017 ರವರೆಗೆ ದನ, ಕುರಿ, ಮೇಕೆ ಹಾಗೂ ಹಂದಿಗಳ ಆಯ್ದ ಕಸಾಯಿಖಾನೆಗಳಲ್ಲಿ, ಜಾನುವಾರುಗಳ ಚಿಕಿತ್ಸೆಯ ಸಂಧರ್ಭದಲ್ಲಿ, ಮೃತಜಾನುವಾರುಗಳ ಮರಣೋತ್ತರ ಪರೀಕ್ಷೆಯ ಸಂಧರ್ಭದಲ್ಲಿ ಸಿಸ್ಟ್‌ಗಳ ಇರುವಿಕೆಯನ್ನು ಹುಡುಕಲಾಯಿತು. ಮನುಷ್ಯರ ಪ್ರಮುಖ ಡಯಾಗ್ನೋಸ್ಟಿಕ್ ಲ್ಯಾಬ್‌ಗಳು, ಆಸ್ಪತ್ರೆಗಳು ಹಾಗೂ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಮನುಷ್ಯರಲ್ಲಿ ಸಿಸ್ಟ್‌ಗಳಾಗಿ ಬಳಲಿದವರ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ಪಡೆದ ಮಾಹಿತಿಯನ್ನು ಕ್ರೋಢೀಕರಿಸಿ ಟೀನಿಯಾ ಲಾಡಿ ಹುಳುಗಳಿಂದ ಜಾನುವಾರುಗಳಿಗೆ ಹಾಗೂ ಮನುಷ್ಯರಿಗೆ ಆಗಿರುವ ತೊಂದರೆಗಳನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿ ಟೀನಿಯಾ ಲಾಡಿ ಹುಳುಗಳ ಬಗ್ಗೆ ಅರಿವು ಮೂಡಿಸಲಾಯಿತು.

ಫಲಿತಾಂಶ ಮತ್ತು ಚರ್ಚೆ: ದನಗಳಲ್ಲಿ ಸಿಸ್ಟಿಸರ್ಕಸ್ ಬೋವಿಸ್, ಕುರಿ ಮೇಕೆಗಳಲ್ಲಿ ಸಿಯೋನುರಸ್ ಗೈಗೆರಿ ಹಾಗೂ ಸಿಯೋನುರಸ್ ಸೆರೆಬ್ರಾಲಿಸ್, ಹಂದಿಗಳಲ್ಲಿ ಸಿಸ್ಟಿಸರ್ಕಸ್ ಸೆಲುಲೋಸೆ ಹಾಗೂ ಸಿಸ್ಟಿಸರ್ಕಸ್ ಟೆನ್ಯುಕಾಲಿಸ್ ಸಿಸ್ಟ್ ಗಳು ಕಂಡುಬಂದವು. ಮನುಷ್ಯರಲ್ಲಿ ಅನೇಕ ಜನರು ಸಿಸ್ಟ್‌ಗಳಿಂದ ಬಳಲಿದ್ದು ಚಿಕಿತ್ಸೆಗಾಗಿ ಬೇರೆ ಬೇರೆ ನಗರದ ಆಸ್ಪತ್ರೆಗಳಿಗೆ ಕಳುಹಿಸಿರುವ ಮಾಹಿತಿ ದೊರಕಿತು. ಈ ಮಾಹಿತಿಯಿಂದ ಟೀನಿಯಾ ಲಾಡಿ ಹುಳುಗಳ ಭಾದೆಯು ಅತ್ಯಂತ ಗಮನವಿಡಬೇಕಾದ ವಿಷಯವಾಗಿದೆ ಹಾಗೂ ಸಾರ್ವಜನಿಕರಲ್ಲಿ ಇದರ ಬಗ್ಗೆ ಅರಿವು ಮೂಡಿಸುವ ಅಗತ್ಯತೆಯಿದೆಯೆಂದು ತಿಳಿಯುತ್ತದೆ.

ಸಾರ್ವಜನಿಕರಿಗೆ ಮಾಂಸವನ್ನು ಸರಿಯಾಗಿ ಬೇಯಿಸಿ ಸೇವಿಸಲು, ತರಕಾರಿ ಹಾಗೂ ಸೊಪ್ಪುಗಳನ್ನು ಸರಿಯಾಗಿ ನೀರಿನಲ್ಲಿ ತೊಳೆದು ಸೇವಿಸಲು, ಖಸಾಯಿಖಾನೆಯಲ್ಲಿ ಕೆಲಸ ನಿರ್ವಹಿಸುವವರಿಗೆ ರಕ್ಷಣೆ ಪಡೆಯಲು ಸೂಚಿಸಲಾಯಿತು. ಕುರಿಗಾರರ ನಾಯಿಗಳಿಗೆ ಟೀನಿಯಾ ಲಾಡಿಹುಳುಗಳ ವಿರುದ್ಧ ಜಂತುನಾಶಕಗಳನ್ನು ನೀಡಲಾಯಿತು.

ನಿರ್ಣಯ: ಟೀನಿಯಾ ಲಾಡಿಹುಳುಗಳ ಭಾದೆಯು ಅತ್ಯಂತ ಪ್ರಮುಖ ಸಮುದಾಯ ಆರೋಗ್ಯದ ಹಿತದೃಷ್ಟಿಯಿಂದ ಪ್ರಮುಖವಾದ ವಿಷಯವಾಗಿದ್ದು ಹಾಸನ ಜಿಲ್ಲೆಯಲ್ಲಿ ಟೀನಿಯಾ ಲಾಡಿಹುಳುಗಳ ಭಾದೆಯು ಹೆಚ್ಚಾಗಿದ್ದು ಈ ಸಂಶೋಧನೆಯಿಂದ ಕಂಡುಬಂದಿದ್ದು, ಅವುಗಳ ನಿಯಂತ್ರಣಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಸಾರ್ವಜನಿಕರಿಗೆ ಈ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯದ ಆಯ್ದ ಭಾಗಗಳ ಜಾನುವಾರುಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ಹಾಗೂ ಅವುಗಳ ನಿಯಂತ್ರಣ

[1]ಮಂಜುನಾಥ್ ಎಸ್.ಪಿ., [2]ಧನಲಕ್ಷ್ಮಿ ಹೆಚ್ ಮತ್ತು [3]ರಮೇಶ್ ಬಿ.ಕೆ.
[1]ಪಶುವೈದ್ಯಾಧಿಕಾರಿಗಳು, ಪಶುಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, [2]ಸಹಾಯಕ ಪ್ರಾಧ್ಯಾಪಕರು, ಪರೋಪಜೀವ ಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, [3]ವಿಜ್ಞಾನಿ, ಪಶುವಿಜ್ಞಾನ, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, Mail ID: drmanjvet@gmail.com

ಜಾನುವಾರುಗಳಲ್ಲಿ ನೊಣ ಹಾಗೂ ಸೊಳ್ಳೆಗಳ ಹಾವಳಿಯು ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿರುವ ವಿಷಯವಾಗಿದೆ. ಅನೇಕ ಮಾರಕ ರೋಗಗಳ ಬಗ್ಗೆ ಯೋಚಿಸುವ ರೈತರು, ನೊಣ ಮತ್ತು ಸೊಳ್ಳೆಗಳ ಬಗ್ಗೆ ಹೆಚ್ಚಾಗಿ ಯೋಚಿಸುವುದಿಲ್ಲ. ನೊಣ ಮತ್ತು ಸೊಳ್ಳೆಗಳು ತಮ್ಮ ತೀವ್ರತರವಾದ ಉಪಟಳದಿಂದ ದನ ಮತ್ತು ಎಮ್ಮೆಗಳಲ್ಲಿ ಕಡಿಮೆ ಹಾಲಿನ ಇಳುವರಿ, ಕುರಿ ಮತ್ತು ಮೇಕೆಗಳಲ್ಲಿ ಕಡಿಮೆ ದೇಹದ ತೂಕವನ್ನುಂಟು ಮಾಡಿ ತೀವ್ರ ನಷ್ಟವನ್ನುಂಟು ಮಾಡುವುದಲ್ಲದೇ, ಅನೇಕ ಮಾರಕ ರೋಗಗಳಿಗೆ ಮಧ್ಯವರ್ತಿಗಳಾಗಿ (ವೆಕ್ಟರ್‌ಗಳಾಗಿ) ಕೆಲಸ ಮಾಡಿ ಜಾನುವಾರುಗಳ ಸಾವಿಗೂ ಕಾರಣವಾಗುತ್ತವೆ. ಅಲ್ಲದೇ ಅನೇಕ ಜಾನುವಾರುಗಳು ಕಣ್ಣನ್ನೇ ಕಳೆದುಕೊಳ್ಳುವ ಪರಿಸ್ಥಿತಿಗೂ ಕಾರಣವಾಗುತ್ತವೆಯೆಂದು ಅನೇಕ ರೈತರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜಾನುವಾರುಗಳಿಗೆ ನೊಣ ಮತ್ತು ಸೊಳ್ಳೆಗಳ ಹಾವಳಿಯಿಂದ ಆಗುತ್ತಿರುವ ಪರಿಣಾಮಗಳನ್ನು ತಿಳಿಯುವ ಸಲುವಾಗಿ ಮತ್ತು ಅಲ್ಲಿನ ರೈತರಿಗೆ ಈ ಬಗ್ಗೆ ತಿಳುವಳಿಕೆಯನ್ನು ನೀಡುವ ಸಲುವಾಗಿ 2015 ರಿಂದ 2017 ರವರೆಗೆ ಕರ್ನಾಟಕ ರಾಜ್ಯದ 7 ಜಿಲ್ಲೆಗಳಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಯಿತು. ದನ ಮತ್ತು ಎಮ್ಮೆಗಳಲ್ಲಿ ತೆಲೇಜಿಯಾ ಜಂತು ಹಾಗೂ ಟ್ರಿಪನೋಸೋಮಿಯಾಸಿಸ್, ಕುರಿ ಮತ್ತು ಮೇಕೆಗಳಲ್ಲಿ ನೀಲಿನಾಲಗೆ ರೋಗಗಳ ಹರಡುವಿಕೆ, ಗಾಯಗಳಲ್ಲಿ ಮ್ಯಾಗಟ್‌ಗಳ ಹಾವಳಿ, ಕುಂಠಿತ ಹಾಲಿನ ಇಳುವರಿ ಹಾಗೂ ಕಡಿಮೆ ದೇಹದ ತೂಕಗಳನ್ನು ನೊಣ ಮತ್ತು ಸೊಳ್ಳೆಗಳ ಹಾವಳಿಗಳಾಗಿ ಗುರುತಿಸಲಾಯಿತು. ಅಲ್ಲದೇ ನೊಣ ಮತ್ತು ಸೊಳ್ಳೆಗಳ ನಿಯಂತ್ರಣದ ಬಗ್ಗೆ ಅನೇಕ ಕ್ರಮಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಲಾಯಿತು. ಅದರ ಸಂಪೂರ್ಣ ವಿವರಗಳನ್ನು ಈ ಪ್ರಬಂಧದಲ್ಲಿ ಪ್ರಸ್ತುತಪಡಿಸಲಾಗಿದೆ.

ಜಾನುವಾರುಗಳಲ್ಲಿ ನೊಣ ಹಾಗೂ ಸೊಳ್ಳೆಗಳ ಹಾವಳಿಯು ಅತ್ಯಂತ ನಿರ್ಲಕ್ಷಕ್ಕೊಳಗಾಗಿರುವ ವಿಷಯವಾಗಿದೆ. ಅನೇಕ ಮಾರಕ ರೋಗಗಳ ಬಗ್ಗೆ ಯೋಚಿಸುವ ರೈತರು, ನೊಣ ಮತ್ತು ಸೊಳ್ಳೆಗಳ ಬಗ್ಗೆ ಹೆಚ್ಚಾಗಿ ಯೋಚಿಸುವುದಿಲ್ಲ. ನೊಣ ಮತ್ತು ಸೊಳ್ಳೆಗಳು ತಮ್ಮ ತೀವ್ರತರವಾದ ಉಪಟಳದಿಂದ ದನ ಮತ್ತು ಎಮ್ಮೆಗಳಲ್ಲಿ ಕಡಿಮೆ ಹಾಲಿನ ಇಳುವರಿ, ಕುರಿ ಮತ್ತು ಮೇಕೆಗಳಲ್ಲಿ ಕಡಿಮೆ ದೇಹದ ತೂಕವನ್ನುಂಟು ಮಾಡಿ ತೀವ್ರ ನಷ್ಟವನ್ನುಂಟು ಮಾಡುವುದಲ್ಲದೇ, ಅನೇಕ ಮಾರಕ ರೋಗಗಳಿಗೆ ಮಧ್ಯವರ್ತಿಗಳಾಗಿ (ವೆಕ್ಟರ್ ಗಳಾಗಿ) ಕೆಲಸ ಮಾಡಿ ಜಾನುವಾರುಗಳ ಸಾವಿಗೂ ಕಾರಣವಾಗುತ್ತವೆ. ಅಲ್ಲದೇ ಅನೇಕ ಜಾನುವಾರುಗಳು ಕಣ್ಣನ್ನೇ ಕಳೆದುಕೊಳ್ಳುವ ಪರಿಸ್ಥಿತಿಗೂ ಕಾರಣವಾಗುತ್ತವೆಯೆಂದು ಅನೇಕ ರೈತರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜಾನುವಾರುಗಳಿಗೆ ನೊಣ ಮತ್ತು ಸೊಳ್ಳೆಗಳ ಹಾವಳಿಯಿಂದ ಆಗುತ್ತಿರುವ ಪರಿಣಾಮಗಳನ್ನು ತಿಳಿಯುವ ಹಾಗೂ ಅವುಗಳಿಂದ ಹರಡಿರುವ ರೋಗಗಳ ಬಗ್ಗೆ ರೈತರಿಗೆ ಮನವರಿಕೆ ಮಾಡುವ ಅವಶ್ಯಕತೆಯಿದೆ. ಆದ್ದರಿಂದ ಕರ್ನಾಟಕದ ಆಯ್ದ ಜಿಲ್ಲೆಗಳಲ್ಲಿ ನೊಣ ಮತ್ತು ಸೊಳ್ಳೆಗಳಿಂದ ಆಗುತ್ತಿರುವ ಅಡ್ಡಪರಿಣಾಮಗಳ ಬಗ್ಗೆ ನಡೆಸಿದ ಸಂಶೋಧನೆಯನ್ನು ಈ ಪ್ರಬಂಧದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಶೋಧನೆಯ ವಿಧಾನ: 2015ರಿಂದ 2017ರವರೆಗೆ ಕರ್ನಾಟಕ ರಾಜ್ಯದ ಹಾಸನ, ತುಮಕೂರು, ಮಂಡ್ಯ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಈ ಜಿಲ್ಲೆಗಳಲ್ಲಿನ ಪಶುವೈದ್ಯಾಧಿಕಾರಿಗಳಿಂದ ಅಲ್ಲಿನ ಜಾನುವಾರುಗಳಿಗೆ ಆಗುತ್ತಿರುವ ಉಪಟಳ ಹಾಗೂ ಹರಡುತ್ತಿರುವ ರೋಗಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಅನೇಕ ಕಡೆ ನೊಣ ಮತ್ತು ಸೊಳ್ಳೆಗಳನ್ನು ಸಂಗ್ರಹಿಸಿ ಅವುಗಳ ಪ್ರಭೇಧಗಳನ್ನು ಪತ್ತೆಹಚ್ಚಲಾಯಿತು. ಅಲ್ಲಿನ ರೈತರಿಗೆ ನೊಣ ಮತ್ತು ಸೊಳ್ಳೆಗಳ ಮಹತ್ವ, ಅವುಗಳಿಂದ ಜಾನುವಾರುಗಳಿಗೆ ಹರಡುತ್ತಿರುವ ರೋಗಗಳ ಬಗ್ಗೆ ಮಾಹಿತಿ ಹಾಗೂ ನೊಣ ಮತ್ತು ಸೊಳ್ಳೆಗಳನ್ನು ನಿಯಂತ್ರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಪೂರ್ಣವಾಗಿ ತಿಳಿಸಲಾಯಿತು.

ಫಲಿತಾಂಶ ಮತ್ತು ಚರ್ಚೆ: ಹಾಸನ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ನೊಣಗಳಿಂದ ಹರಡುವ ತೆಲೇಜಿಯಾ ಕಣ್ಣಿನ ಜಂತುವಿನ ಉಪಟಳ ಹೆಚ್ಚಾಗಿದ್ದು, ತೆಲೇಜಿಯಾ ಜಂತು ಕಾರ್ನಿಯಲ್ ಒಪೇಸಿಟಿ, ಕಾರ್ನಿಯಲ್ ಪರ್ಫೊರೇಶನ್, ಕಾರ್ನಿಯಲ್ ಅಲ್ಸರ್, ಕಂಜೆಂಕ್ಟೈವಲ್ ಎಡಿಮಾಗಳು ಉಂಟಾಗಲು ಕಾರಣವಾಗಿದೆ. ಈ ಈ ಜಂತುವಿನ ನಿರಂತರ ಉಪಟಳದಿಂದ ಜಾನುವಾರಗಳು ತಮ್ಮ ಕಣ್ಣುಗಳನ್ನು ಅಕ್ಕ ಪಕ್ಕದ ಗೋಡೆ, ತಂತಿಬೇಲಿಗಳಿಗೆ ಉಜ್ಜುವದರಿಂದ ಹಾಗೂ ಹಿಂದಿನ ಕಾಲುಗಳಿಂದ ತಮ್ಮ ಕಣ್ಣುಗಳನ್ನು ಒಡೆದುಕೊಳ್ಳುವುದರಿಂದ ಅನೇಕ ಕಣ್ಣಿನ ತೊಂದರೆಗಳಾಗುತ್ತಿವೆ. ಕಣ್ಣಿನ ರೆಪ್ಪೆಗಳ ಹರಿತ, ಕಣ್ಣಿನ ಸುತ್ತ ಕೀವಿನ ಗಡ್ಡೆಗಳಾಗುವುದಕ್ಕೂ ಈ ಜಂತು ಕಾರಣವಾಗಿದೆ. ಈ ಜಂತುವು ಲಾರ್ವಗಳನ್ನು ತನ್ನ ದೇಹದಿಂದ ಹಸುಗಳ ಕಣ್ಣಿನಲ್ಲಿನ ಕಣ್ಣೀರಿಗೆ ಬಿಡುತ್ತದೆ. ಈ ಲಾರ್ವಗಳು, ನೊಣಗಳಿಂದ ಒಂದು ಹಸುವಿನ ಕಣ್ಣಿನಿಂದ ಇನ್ನೊಂದು ಹಸುವಿನ ಕಣ್ಣಿಗೆ ಹರಡಲ್ಪಡುತ್ತವೆ. ಹೀಗೆ ಒಂದು ಊರಿನಲ್ಲಿ ಒಂದು ಹಸುವಿಗೆ ಈ ಜಂತು ಬಂದರೂ ಇಡೀ ಊರಿನ ಎಲ್ಲಾ ಜಾನುವಾರುಗಳಿಗೂ ಹರಡುತ್ತದೆ. ನಿರಂತರ ಉಪಟಳದಿಂದ ಜಾನುವಾರುಗಳ ಕಣ್ಣಿನ ಕ್ಯಾನ್ಸರ್‌ಗಳಾಗಲೂ ಈ ಜಂತು ಕಾರಣವಾಗಿದೆ. ಹೀಗೆ ಅನೇಕ ಜಾನುವಾರುಗಳು ಈ ಜಂತುವಿನಿಂದ ತಮ್ಮ ಕಣ್ಣನ್ನೇ ಕಳೆದುಕೊಳ್ಳುತ್ತವೆ. ಹೀಗೆ ನೊಣಗಳು, ಈ ಜಂತು ಹರಡಿ ನಷ್ಟವುಂಟು ಮಾಡಲು ಕಾರಣವಾಗಿದೆ. ಈ ಪ್ರದೇಶದಲ್ಲಿ ತೆಲೇಜಿಯಾ ಜಂತುವಿನ 2 ಪ್ರಭೇಧಗಳಿದ್ದು ತೆಲೇಜಿಯಾ ರೋಡೆಸಿ ಹಾಗೂ ತೆಲೇಜಿಯಾ ಗುಲೋಸ ಎಂದು ಅವುಗಳನ್ನು ಪತ್ತೆ ಮಾಡಲಾಯಿತು. ಈ ಜಂತನ್ನು ಹರಡುತ್ತಿರುವ ನೊಣವನ್ನು ಮಸ್ಕಾ ನೊಣ ಎಂದು ಪತೆಹಚ್ಚಲಾಯಿತು. ಈ ಜಂತುವಿನ ಉಪಟಳವು ದಾವಣಗೆರೆ, ಶಿವಮೊಗ್ಗ, ರಾಯಚೂರು ಹಾಗೂ ಚಿತ್ರದುರ್ಗಗಳಲ್ಲಿ ಕಡಿಮೆಯಿದೆ.

ದಾವಣಗೆರೆ, ಶಿವಮೊಗ್ಗ ಹಾಗೂ ಚಿತ್ರದುರ್ಗ ಗಳಲ್ಲಿ ಟೆಬಾನಸ್ ಎಂಬ ನೊಣದಿಂದ ಹರಡುವ ಟ್ರಿಪನೋಸೋಮಿಯಾಸಿಸ್ ಎಂಬ ರೋಗವು ಹಸುಗಳಲ್ಲಿ ಹೆಚ್ಚಾಗಿ ಕಂಡುಬಂದಿದೆ. ಇದೊಂದು ಮಾರಕ ರೋಗವಾಗಿದ್ದು ಟ್ರಿಪನೋಸೋಮ ಎಂಬ ರಕ್ತದ ಪರೋಪಜೀವಿಯಿಂದ ಬರುತ್ತದೆ ಹಾಗೂ ಟೆಬಾನಸ್ ಎಂಬ ನೊಣಗಳು ಈ ರೋಗಾಣುವನ್ನು ಒಂದು ಹಸುವಿನಿಂದ ಇನ್ನೊಂದು ಹಸುವಿಗೆ ಹರಡುತ್ತವೆ.

ಹಾಸನದ ಚನ್ನರಾಯಪಟ್ಟಣ ತಾಲ್ಲೂಕಿನ ನವಿಲೆ ಗ್ರಾಮದಲ್ಲಿ 2015 ನೇ ಇಸವಿಯಲ್ಲಿ ಮೇಕೆಗಳಲ್ಲಿ ನೀಲಿನಾಲಗೆ ರೋಗವು ಹರಡಿ ಇದ್ದಕ್ಕಿದ್ದಂತೆ 60 ಮೇಕೆಗಳು ಅಸುನೀಗಿದ್ದು. ಈ ನೀಲಿ ನಾಲಗೆ ರೋಗವು ಕ್ಯುಲಿಕಾಯ್ಡಸ್ ಎಂಬ ಸೊಳ್ಳೆಯಿಂದ ಹರಡುತ್ತದೆ. ಆ ಮೇಕೆ ಘಟಕದಲ್ಲಿ ಕ್ಯುಲಿಕಾಯ್ಡಸ್ ಸೊಳ್ಳೆಗಳಿರುವುದು ಪತ್ತೆಯಾಯಿತು.

ರಾಯಚೂರಿನಲ್ಲಿ ಉಳಿದ 6 ಜಿಲ್ಲೆಗಳಂತೆಯೇ ನೊಣ ಹಾಗೂ ಸೊಳ್ಳೆಗಳ ಭಾಧೆಯಿಂದ ಕಡಿಮೆ ಹಾಲಿನ ಇಳುವರಿ, ಕುರಿ ಮೇಕೆಗಳಲ್ಲಿ ಕಡಿಮೆ ದೇಹದ ತೂಕವು ರೈತರಿಗೆ ತಲೆನೋವಾಗಿ ಪರಿಣಮಿಸಿದೆ. ನೊಣ ಮತ್ತು ಸೊಳ್ಳೆಗಳ ಭಾದೆಯಿಂದ ಜಾನುವಾರುಗಳು ಕಡಿಮೆ ಸಮಯವನ್ನು ಮೆಲುಕು ಹಾಕಲು ವ್ಯಯಿಸುತ್ತವೆ. ಇದರಿಂದ ಕಡಿಮೆ ಹಾಲಿನ ಇಳುವರಿ ಹಾಗೂ ಕಡಿಮೆ ದೇಹದ ತೂಕಗಳುಂಟಾಗಿ ರೈತರು ಅಪಾರ ನಷ್ಟವನ್ನು ಅನುಭವಿಸುತ್ತಾರೆ.

ಎಲ್ಲಾ ಜಿಲ್ಲೆಗಳಲ್ಲೂ ಮಳೆಗಾಲದಲ್ಲಿ ಹೆಚ್ಚಾಗಿ ಗಾಯಗಳು, ನೊಣಗಳ ಜೀವನ ಚಕ್ರದ ಒಂದು ಹಂತವಾದ ಮ್ಯಾಗಟ್ಟಳ ಧಾಳಿಗೆ ಒಳಗಾಗಿ ದೇಹದ ಅನೇಕ ಮಾಂಸಖಂಡಗಳು ಕೊಳೆಯಲು ಕಾರಣವಾಗಿರುವುದು ಕಂಡುಬಂದಿದೆ. ಚಿಕ್ಕ ಗಾಯಗಳು ದೊಡ್ಡ ಗಾಯಗಳಾಗಿ ಬದಲಾಗುವಂತೆ ಮ್ಯಾಗಟ್‌ಗಳು ಮಾಡುತ್ತವೆ.

ಈ ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಅನೇಕ ಕ್ರಮಗಳನ್ನು ರೈತರಿಗೆ ಮನವರಿಕೆ ಮಾಡಲಾಯಿತು. ನೊಣಗಳನ್ನು ನಿಯಂತ್ರಿಸಲು ಕೊಟ್ಟಿಗೆಗಳಲ್ಲಿ ಒಣಗಿಸಿರುವ ಬೇವಿನ ಎಲೆಗಳನ್ನು ಸುಟ್ಟು ಹೊಗೆಯನ್ನು ಪಸರಿಸಲು ತಿಳಿಸಲಾಯಿತು. ತೆಲೇಜಿಯಾ ಜಂತುವನ್ನು, ನೊಣಗಳಿಂದ ಒಂದು ಕಣ್ಣಿನಿಂದ ಇನ್ನೊಂದಕ್ಕೆ ಹರಡುವುದನ್ನು ನಿಯಂತ್ರಿಸಲು ಹಸುಗಳ ಕಣ್ಣಿನ ಸುತ್ತ ಬೇವಿನ ಎಣ್ಣೆಯನ್ನು ಹಚ್ಚಲು ಸೂಚಿಸಲಾಯಿತು. ಬೇವಿನ ಎಣ್ಣೆಯು ನೊಣಗಳಿಗೆ ಪ್ರತಿಬಂಧಕವಾಗಿ ಕಾರ್ಯನಿರ್ವಹಿಸುತ್ತದೆ. ಜಾನುವಾರುಗಳ ಕೊಟ್ಟಿಗೆಗಳಿಗೆ ಸಂಪೂರ್ಣವಾಗಿ ಸೊಳ್ಳೆಪರದೆಗಳನ್ನು ಉಪಯೋಗಿಸಲು ಸೂಚಿಸಲಾಯಿತು. ಇದು ಸೊಳ್ಳೆ ಹಾಗೂ ನೊಣಗಳನ್ನು ತಡೆಯಲು ಸಹಾಯಕಾರಿಯಾಗಿದೆ. ಸಗಣಿಯನ್ನು ಶೇಕರಿಸಿಡುವ ಮುನ್ನ ಒಣಗಿಸಿ ಶೇಖರಿಸಲು ಸೂಚಿಸಲಾಯಿತು. ಇದರಿಂದ ನೊಣಗಳು ವೃದ್ಧಿಯಾಗುವುದು ಕಡಿಮೆಯಾಗುತ್ತದೆ.

ನಿರ್ಣಯಗಳು: ಜಾನುವಾರುಗಳಲ್ಲಿ ನೊಣ ಮತ್ತು ಸೊಳ್ಳೆಗಳು ತೀವ್ರತರವಾದ ಉಪಟಳವನ್ನು ಮಾಡುವುದಲ್ಲದೇ ಅನೇಕ ಮಾರಕ ರೋಗಗಳು ಹರಡಲೂ ಕಾರಣವಾಗಿವೆ. ಇವುಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವುದು ಅತ್ಯಂತ ಪ್ರಮುಖವಾದ ವಿಷಯವಾಗಿದೆ.

ಪ್ಲಾಸ್ಟಿಕ್‌ನಿಂದ ಜಾನುವಾರುಗಳಿಗೆ ಆಗುವ ತೊಂದರೆಗಳು

ಡಾ: ನವೀನ್ ಎಮ್, ಡಾ: ರವಿ ರಾಯ್‌ದುರ್ಗ್ ಮತ್ತು ಡಾ: ಸಂತೋಶ್ ಕೆ ಎಮ್
ಶಸ್ತ್ರಚಿಕಿತ್ಸಾ ಮತ್ತು ಕ್ಷ–ಕಿರಣ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ವಿನೋಬನಗರ, ಶಿವಮೊಗ್ಗ.

ಪ್ಲಾಸ್ಟಿಕನ್ನು ಸರ್ವೇಸಾಮಾನ್ಯವಾಗಿ ಬಳಸಲಾಗುತ್ತಿದೆ. ಇದರ ಅತಿಯಾದ ಬಳಕೆಯಿಂದ ದನಗಳಲ್ಲಿ ಸಾಕಷ್ಟು ಹಾನಿಕಾರಕ ಪರಿಣಾಮಗಳು ಉಂಟಾಗುತ್ತದೆ. ಸಾಮಾನ್ಯವಾಗಿ ನಾವು ಪ್ಲಾಸ್ಟಿಕನ್ನು ಕೃಷಿ ಹಾಗು ಮನೆ ಬಳಕೆಗಾಗಿ ಉಪಯೋಗಿಸುತ್ತೇವೆ. ಉಪಯೋಗಿಸಿದ ನಂತರ ಇದನ್ನು ಹೊರಗೆ ಎಸೆಯುವುದರಿಂದ ಜಾನುವಾರುಗಳು ಅದನ್ನು ತಿನ್ನುವ ಸಾಧ್ಯತೆಗಳಿರುತ್ತದೆ. ಸಾಮಾನ್ಯವಾಗಿ, ಹೊರಗಡೆ ಮೇಯಲು ಬಿಡುವ ಎಮ್ಮೆ ಮತ್ತು ಹಸುಗಳಲ್ಲಿ ಪ್ಲಾಸ್ಟಿಕ್‌ನ ತೊಂದರೆಯಾಗುತ್ತದೆ.

ಧೀರ್ಘಕಾಲದ ಪ್ಲಾಸ್ಟಿಕ್ ಚೀಲಗಳ ಸೇವನೆಯಿಂದ, ಅವುಗಳು ಜಾನುವಾರುವಿನ ರ್‍ಯೂಮನ್ ಜಠರದಲ್ಲಿ ಲಾಲಾರಸ ಮತ್ತು ಜಠರದ ರಸಗಳೊಡನೆ ಬೆರೆತು ಗಟ್ಟಿಯಾಗಿ ಸುರುಳಿ ಸುತ್ತಿಕೊಳ್ಳುತ್ತವೆ. ನಂತರ ಅವುಗಳು ಜೀರ್ಣವಾಗದೆ ಮತ್ತು ಮುಂದೆ ಸಾಗಲಾಗದೆ ರ್‍ಯೂಮನ್ ಜಠರದಲ್ಲಿ ಶೇಕರಣೆಯಾಗುತ್ತಾ ಹೋಗುತ್ತವೆ ಮತ್ತು ತುಂಬಾ ದಿನಗಳ ನಂತರ ಜಾನುವಾರುಗಳಲ್ಲಿ ತೊಂದರೆಯ ಲಕ್ಷಣಗಳು ಕಂಡುಬರುತ್ತವೆ. ಪ್ಲಾಸ್ಟಿಕನಿಂದ ತೊಂದರೆಗೀಡಾದ ಜಾನುವಾರುಗಳಿಗೆ, ಔಷಧೋಪಚಾರ ಮಾಡುವುದರಿಂದ ತಾತ್ಕಾಲಿಕವಾಗಿ ಗುಣಪಡಿಸಬಹುದು. ಆದ–ರೆ, ಸ್ವಲ್ಪದಿನಗಳ ನಂತರ ಜಾನುವಾರು ಮತ್ತೆ ರೋಗದ ಲಕ್ಷಣಗಳನ್ನು ತೋರಿಸುತ್ತವೆ. ಇದಕ್ಕೆ ಶಸ್ತ್ರಚಿಕಿತ್ಸೆಯೊಂದೇ ಅಂತಿಮ ಪರಿಹಾರ. ಈ ಶಸ್ತ್ರಚಿಕಿತ್ಸೆಯನ್ನು ರ್‍ಯೂಮಿನಾಟಮಿ ಎಂದು ಕರೆಯುತ್ತಾರೆ ಮತ್ತು ಇದನ್ನು ನುರಿತ ಪಶುವೈದ್ಯರಿಂದ ಮಾಡಿಸಬೇಕು. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಅವುಗಳ ಪರ್ಯಾಯವಾಗಿ ಇತರೆ ವಸ್ತುಗಳನ್ನು ಬಳಸಬೇಕು. ಜಾನುವಾರುಗಳಲ್ಲಿ ಪ್ಲಾಸ್ಟಿಕ್ ತೊಂದರೆಯನ್ನು ತಡೆಗಟ್ಟಲು ಈ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಇದಕ್ಕೆ ಪರಿಹಾರ.

ಪ್ಲಾಸ್ಟಿಕನ್ನು ಸರ್ವೇಸಾಮಾನ್ಯವಾಗಿ ಬಳಸಲಾಗುತ್ತಿದೆ. ಇದರ ಅತಿಯಾದ ಬಳಕೆಯಿಂದ ದನಗಳಲ್ಲಿ ಸಾಕಷ್ಟು ಹಾನಿಕಾರಕ ಪರಿಣಾಮಗಳು ಉಂಟಾಗುತ್ತದೆ. ಸಾಮಾನ್ಯವಾಗಿ ನಾವು ಪ್ಲಾಸ್ಟಿಕನ್ನು ಕೃಷಿ ಹಾಗು ಮನೆ ಬಳಕೆಗಾಗಿ ಉಪಯೋಗಿಸುತ್ತೇವೆ. ಉಪಯೋಗಿಸಿದ ನಂತರ ಅದನ್ನು ಹೊರಗೆ ಎಸೆಯುವುದರಿಂದ ಜಾನುವಾರುಗಳು ಅದನ್ನು ತಿನ್ನುವ ಸಾಧ್ಯತೆಗಳಿರುತ್ತದೆ. ಪಾಸ್ಟಿಕನಲ್ಲಿ ಉಳಿಯುವ ತಿಂಡಿ ಮತ್ತು ತರಕಾರಿಗಳು ಜಾನುವಾರುಗಳನ್ನು ಆಕರ್ಷಿಸುತ್ತವೆ. ಬರಗಾಲದ ಮತ್ತು ಮೇವಿನ ಅಭಾವದ ಕಾರಣಗಳಿಂದ ಜಾನುವಾರುಗಳು ಸಿಕ್ಕ–ಸಿಕ್ಕ ವಸ್ತು ಮತ್ತು ಪದಾರ್ಥಗಳನ್ನು ತಿನ್ನುತ್ತವೆ. ಸಾಮಾನ್ಯವಾಗಿ, ಹೊರಗಡೆ ಮೇಯಲು ಬಿಡುವ ಎಮ್ಮೆ ಮತ್ತು ಹಸುಗಳಲ್ಲಿ ಪ್ಲಾಸ್ಟಿಕ್‌ನ ತೊಂದರೆಯಾಗುತ್ತದೆ. ಪ್ಲಾಸ್ಟಿಕ್ ಚೀಲಗಳ ಉತ್ಪಾದನೆಗೆ ಪೆಟ್ರೋಲಿಯಂನ ಉತ್ಪನ್ನಗಳ ಅವಶ್ಯಕತೆಯಿರುತ್ತದೆ. ಪರಿಸರದಲ್ಲಿ ಪ್ಲಾಸ್ಟಿಕ್ ಚೀಲಗಳು ಜೈವಿಕ ಶೈಥಿಲ್ಯಕ್ಕೊಳಗಾಗುವುದಿಲ್ಲ. ಇವುಗಳು ವಿಘಟನಗೊಳ್ಳಲು ಸಾವಿರಾರು ವರ್ಷಗಳೇ ಹಿಡಿಯುತ್ತದೆ.

ಪ್ಲಾಸ್ಟಿಕ್ ಚೀಲಗಳು ಪ್ರಾಣಿಗಳ ಸಾವಿಗೆ ಕಾರಣವಾಗುತ್ತಿವೆ. ಡಾಲ್ಫಿನ್‌ಗಳು, ಆಮೆಗಳು, ತಿಮಿಂಗಲಗಳು ಮತ್ತು ಪೆಂಗ್ವಿನ್‌ಗಳನ್ನೊಳಗೊಂಡಂತೆ ಪ್ರತಿವರ್ಷವೂ ಸರಿಸುಮಾರು 100,000 ಪ್ರಾಣಿಗಳು ಈ ಪ್ಲಾಸ್ಟಿಕ್ ಚೀಲಗಳ ಕಾರಣದಿಂದ ಸಾವನ್ನಪ್ಪುತ್ತಿವೆ. ಅನೇಕ ಪ್ರಾಣಿಗಳು ಪ್ಲಾಸ್ಟಿಕ್ ಚೀಲಗಳನ್ನೇ ತಮ್ಮ ಆಹಾರವೆಂದು ತಪ್ಪಾಗಿ ಭಾವಿಸಿ ಅವುಗಳನ್ನು ಸೇವಿಸುತ್ತವೆ ಹಾಗು ಈ ಕಾರಣದಿಂದಾಗಿಯೇ ಸಾವನ್ನಪ್ಪುತ್ತವೆ.

ಪಟ್ಟಣಗಳಲ್ಲಿ ಕಸದ ರಾಶಿಯಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿರುವ ತಿಂಡಿಯನ್ನು ಮೇಯುತ್ತಿರುವ ಜಾನುವಾರುಗಳು

ಲಕ್ಷಣಗಳು:– ದನ ಮತ್ತು ಎಮ್ಮೆಗಳಲ್ಲಿ ನಾಲ್ಕು ಜಠರಗಳಿರುತ್ತವೆ. ಅವುಗಳು ರ್‍ಯೂಮನ್, ರೆಟಿಕುಲಮ್, ಒಮೇಸಮ್ ಮತ್ತು ಅಬೋಮೇಸಮ್. ಧೀರ್ಘಕಾಲದ ಪ್ಲಾಸ್ಟಿಕ್ ಚೀಲಗಳ ಸೇವನೆಯಿಂದ, ಅವುಗಳು ಜಾನುವಾರುವಿನ ರ್‍ಯೂಮನ್‌ಜಠರದಲ್ಲಿ ಲಾಲಾರಸ ಮತ್ತು ಜಠರದ ರಸಗಳೊಡನೆ ಬೆರೆತು ಗಟ್ಟಿಯಾಗಿ ಸುರುಳಿ ಸುತ್ತಿಕೊಳ್ಳುತ್ತವೆ. ನಂತರ ಅವುಗಳು ಜೀರ್ಣವಾಗದೆ ಮತ್ತು ಮುಂದೆ ಸಾಗಲಾಗದೆ ರ್‍ಯೂಮನ್ ಜಠರದಲ್ಲಿ ಶೇಕರಣೆಯಾಗುತ್ತಾ ಹೋಗುತ್ತವೆ ಮತ್ತು ತುಂಬಾ ದಿನಗಳ ನಂತರ ಜಾನುವಾರುಗಳಲ್ಲಿ ತೊಂದರೆಯ ಲಕ್ಷಣಗಳು ಕಂಡುಬರುತ್ತವೆ. ಅಜೀರ್ಣತೆ, ಹೊಟ್ಟೆ ಉಬ್ಬರ, ಬಡಕಲಾಗುವುದು, ಮೇವುತಿನ್ನುವುದನ್ನು ಕಡಿಮೆಮಾಡುತ್ತವೆ, ಹೈನುರಾಸುಗಳು ಹಾಲು ಕೊಡುವುದನ್ನು ಕಡಿಮೆಮಾಡುತ್ತವೆ. ಈ ಜಾನುವಾರುಗಳನ್ನು ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆ ಕೊಡಿಸದಿದ್ದರೆ, ಒಂದೆರೆಡು ತಿಂಗಳಲ್ಲಿ ಅವು ಸಾಯಲೂಬಹುದು.

ಪ್ಲಾಸ್ಟಿಕ್ ಸೇವನೆಯಿಂದ ಎಡಭಾಗದ ಹೊಟ್ಟೆ ಉಬ್ಬರ

ರೋಗ ಪತ್ತೆಹಚ್ಚುವುದು:– ಸರಿಯಾದ ಸಮಯದಲ್ಲಿ ಪ್ಲಾಸ್ಟಿಕನಿಂದಾಗುವ ತೊಂದರೆಗಳನ್ನು ಜಾನುವಾರುಗಳಲ್ಲಿ ಪತ್ತೆಹಚ್ಚುವುದರಿಂದ, ಅವುಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸಬಹುದು. ಪ್ಲಾಸ್ಟಿಕನಿಂದಾಗುವ ತೊಂದರೆಗಳನ್ನು ಈ ಕೆಳಗಿನಂತೆ ಪತ್ತೆಹಚ್ಚಲಾಗುತ್ತದೆ

1. ಲಕ್ಷಣಗಳ ಆಧಾರದ ಮೇಲೆ
2. ಜಾನುವಾರಿನ ಮಾಲೀಕನ ಮಾಹಿತಿಯ ಆಧಾರದ ಮೇಲೆ
3. ಕ್ಷ–ಕಿರಣದ ಸಹಾಯದಿಂದ

ಹಳ್ಳಿಗಳಲ್ಲಿ, ಕ್ಷ–ಕಿರಣದ ಅನುಕೂಲಗಳಿರುವುದಿಲ್ಲ. ಆದ್ದರಿಂದ, ಜಾನುವಾರುಗಳು ತೋರಿಸುವ ಲಕ್ಷಣಗಳು ಮತ್ತು ಜಾನುವಾರಿನ ಮಾಲೀಕನ ಮಾಹಿತಿಯ ಆಧಾರದ ಮೇಲೆ ಪತ್ತೆಹಚ್ಚಲಾಗುವುದು.

ಚಿಕಿತ್ಸೆ :– ಪ್ಲಾಸ್ಟಿಕನಿಂದ ತೊಂದರೆಗೀಡಾದ ಜಾನುವಾರುಗಳಿಗೆ, ಔಷದೋಪಚಾರ ಮಾಡುವುದರಿಂದ ತಾತ್ಕಾಲಿಕವಾಗಿ ಗುಣಪಡಿಸಬಹುದು. ಆದರೆ, ಸ್ವಲ್ಪದಿನಗಳ ನಂತರ ಜಾನುವಾರು ಮತ್ತೆ ರೋಗದ ಲಕ್ಷಣಗಳನ್ನು ತೋರಿಸುತ್ತದೆ. ಇದಕ್ಕೆ ಶಸ್ತ್ರಚಿಕಿತ್ಸೆಯೊಂದೇ ಅಂತಿಮ ಪರಿಹಾರ. ಶಸ್ತ್ರಚಿಕಿತ್ಸೆ ಯಶಸ್ವಿಯಾಗಲು, ಜಾನುವಾರುಗಳಲ್ಲಿ ಉಂಟಾದ ಪ್ಲಾಸ್ಟಿಕ್ ಸಮಸ್ಯೆಯನ್ನು ಆದಷ್ಟು ಬೇಗ ಪತ್ತೆಹಚ್ಚಬೇಕು ಮತ್ತು ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕು. ಈ ಶಸ್ತ್ರಚಿಕಿತ್ಸೆಯನ್ನು ರ್‍ಯೂಮಿನಾಟಮಿ ಎಂದು ಕರೆಯುತ್ತಾರೆ ಮತ್ತು ಇದನ್ನು ನುರಿತ ಪಶುವೈದ್ಯರಿಂದ ಮಾಡಿಸಬೇಕು. ಈ ಶಸ್ತ್ರಚಿಕಿತ್ಸೆಯಲ್ಲಿ ಜಾನುವಾರಿಗೆ ಅರವಳಿಕೆ ಕೊಟ್ಟು ಎಡಭಾಗದ ಹೊಟ್ಟೆಯನ್ನು ಕೊಯ್ಯಲಾಗುವುದು. ನಂತರ ಹೊಟ್ಟೆಗೆ ವೀನ್‌ಗಾರ್ತ್ ರ್‍ಯೂಮಿನಾಟಮಿ ಸಾಧನವನ್ನು ಅಳವಡಿಸಿ ಪ್ಲಾಸ್ಟಿಕನ್ನು ಹೊರತೆಗೆಯಲಾಗುವುದು. ಶಸ್ತ್ರಚಿಕಿತ್ಸೆ ಮೂಲಕ ಕೆಲ ದನಗಳಲ್ಲಿ ಸುಮಾರು 10 ರಿಂದ 20 ಕಿಲೋ ಪ್ಲಾಸ್ಟಿಕ್‌ನ್ನು ಹೊರತೆಗೆಯಲಾಗಿದೆ.





ಹೊಟ್ಟೆಗೆ ವೀನ್‌ಗಾರ್ತ್ ರ್‍ಯೂಮಿನಾಟಮಿ ಸಾಧನವನ್ನು ಅಳವಡಿಸಿ ರ್‍ಯೂಮಿನಾಟಮಿ ಮೂಲಕ ಪ್ಲಾಸ್ಟಿಕ್ ಹೊರತೆಗೆಯುತ್ತಿರುವುದು.

ಜಾನುವಾರುಗಳಲ್ಲಿ ಪ್ಲಾಸ್ಟಿಕ್ ತೊಂದರೆಯನ್ನು ತಡೆಗಟ್ಟಲು ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು

1. ಜಾನುವಾರುಗಳನ್ನು ಹೊರಗಡೆ ಸ್ವತಂತ್ರವಾಗಿ ಮೇಯಲು ಬಿಡದೆ ಒಬ್ಬ ವ್ಯಕ್ತಿಯ ಮೇಲುಸ್ತುವಾರಿಯಲ್ಲಿ ಬಿಡುವುದು ಉತ್ತಮ. ಪಟ್ಟಣಗಳಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿರುತ್ತದೆ. ಆದ್ದರಿಂದ ಈ ಪ್ರದೇಶಗಳಲ್ಲಿ ಜಾನುವಾರುಗಳನ್ನು ಮನೆಯಲ್ಲಿಯೇ ಕಟ್ಟಿ ಮೇಯಿಸುವುದು ಉತ್ತಮ.

2.ತರಕಾರಿ, ಹಣ್ಣು ಮತ್ತು ಇತರೆ ಅಡುಗೆ ಮನೆಯ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಬಿಸಾಡಬಾರದು. ಇದರಿಂದ ಜಾನುವಾರುಗಳು ಪ್ಲಾಸ್ಟಿಕ್ ತಿನ್ನುವುದನ್ನು ತಡೆಯಬಹುದು.

3. ಪಟ್ಟಣ ಮತ್ತು ಅರೆ ಪಟ್ಟಣಗಳಲ್ಲಿ ಸಂತೆಯ ಆಸುಪಾಸಿನಲ್ಲಿ ಜಾನುವಾರು ಸಾಕಾಣಿಕೆಯನ್ನು ನಿಷೇಧಿಸಬೇಕು.

4. ಸೂಕ್ತ ಸಮಯದಲ್ಲಿ ಜಾನುವಾರಿಗೆ ವೈದ್ಯಕೀಯ ತಪಾಸಣೆ ಮಾಡಿಸಿ ಚಿಕಿತ್ಸೆ ಕೊಡಿಸಬೇಕು. ಇದರಿಂದ ಜಾನುವಾರು ಸಾಯುವುದನ್ನು ತಪ್ಪಿಸಬಹುದು.

5. ಜಾನುವಾರು ಮಾಲೀಕರಿಗೆ, ಜಾನುವಾರುಗಳಿಗೆ ಪ್ಲಾಸ್ಟಿಕ್‌ನಿಂದಾಗುವ ತೊಂದರೆಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ ಅರಿವು ಮೂಡಿಸಬೇಕು.

6. ಒಂದು ವೇಳೆ ಪ್ಲಾಸ್ಟಿಕ್ ಪದಾರ್ಥಗಳನ್ನು ಬಳಸಿದ್ದೇ ಆದರೆ. ಅವುಗಳನ್ನು ಬಯಲಿನಲ್ಲಿ ಬಿಸಾಡದೆ ಸಂಗ್ರಹಿಸಿ ಸುಸರ್ಜಿತವಾದ ಕಸದ ತೊಟ್ಟಿಯಲ್ಲಿ ಬಿಸಾಡಬೇಕು.

7. "ಕೈಯಲ್ಲೇ ತರಬಹುದಾದ ವಸ್ತುಗಳಿಗೆ ಪ್ಲಾಸ್ಟಿಕ್ ಚೀಲವೇಕೆ" ಎಂಬ ಘೋಷಣೆಯನ್ನು ಜನಪ್ರಿಯಗೊಳಿಸಬೇಕು.

8. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಅವುಗಳ ಪರ್ಯಾಯವಾಗಿ ಇತರೆ ವಸ್ತುಗಳನ್ನು ಬಳಸಬೇಕು. ಇದಕ್ಕೆ ಸರ್ಕಾರವು ಕಟ್ಟು ನಿಟ್ಟಿನ ಕಾನೂನಬದ್ಧವಾದ ನೀತಿ ನಿಯಮಗಳನ್ನು ಜಾರಿಗೊಳಿಸಿ, ಅವುಗಳನ್ನು ಕಾರ್ಯಗತಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಪರಿಸರದಿಂದ ಪ್ಲಾಸ್ಟಿಕ್ ನಿರ್ಮೂಲನೆ ಮಾಡುವುದರಿಂದ ಮಾತ್ರ ಇದಕ್ಕೆ ಸಂಪೂರ್ಣ ಪರಿಹಾರ ಒದಗಿಸಬಹುದು.

ಗ್ರಂಥಸೂಚಿ

ಡೇವಿಡ್, ಡಬ್ಲ್ಯು. ಎ., ಗಾಯ್, ಎಸ್. ಜೆ. ಮತ್ತು ಎಡ್ರಿಯನ್, ಎಸ್., 2005. ಬೊವೈನ್ ಸರ್ಜರಿ ಅನ್ಡ್ ಲೇಮ್ನೆಸ್. 2ನೇ ಎಡಿಶನ್., ಗ್ರಾಫಿಕ್ರಾಫ್ಟ್ ಲಿಮಿಟೆಡ್, ಹಾಂಗ್ ಕಾಂಗ್. ಪುಟ.

ಧಿಲ್ಲಾನ್, ಕೆ. ಎಸ್., ಜಸ್ಮೇರ್ ಸಿಂಗ್, ಬಿ. ಬಿ. ಎಸ್., ಧಾಲಿವಾಲ್., ರಾಜನಿಶ್ ಶರ್ಮಾ ಮತ್ತು ಪನ್ನು, ಎಮ್. ಎಸ್. 2009. ಬಫೇಲೊ ಬಲೆಟಿನ್. 28(4): 168–169.

ಪ್ಯೂಬಿನಿ, ಎಸ್ ಮತ್ತು ಡುಚಾರ್ಮ್, ಎನ್. 2004. ಫಾರ್ಮ್ ಅನಿಮಲ್ ಸರ್ಜರಿ, ಮೊದಲನೇ ಎಡಿಶನ್., ಸಾಂಡರ್ಸ್, ಸೇಂಟ್ ಲೂಯಿಸ್, ಮಿಸ್ಸೌರಿ. ಪುಟ.

ತ್ಯಾಗಿ, ಆರ್. ಪಿ. ಎಸ್., ಕೃಷ್ಣಮೂರ್ತಿ, ಡಿ ಮತ್ತು ಡಿ.ಸಿ. ಧಬ್ಲಾನಿಯ. 1972. ಇಂಡಿಯನ್ ವೆಟ್. ಆ. 49: 934–941.

ತ್ಯಾಗಿ, ಆರ್. ಪಿ. ಎಸ್. ಮತ್ತು ಕೃಷ್ಣಮೂರ್ತಿ, ಡಿ. 1976. ಪಬ್ಲೀಕೇಶನ್ ಡಿವಿಜನ್, ಹರ್‍ಯಾಣ ಆಗ್ರಿಕಲ್ಚರ್ ಉನಿವರ್ಸಿಟಿ, ಹಿಸ್ಸಾರ್. ಪುಟ.

ವಸುಂಧರೀಯಮ್

ಭೂಶಾಸ್ತ್ರ, ಪರಿಸರವಿಜ್ಞಾನ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ

VASUNDAREEYAM

Earth Sciences, Environmental Sciences, Ecology & Cosmology

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ನಾಗತಿಬೆಳಗೊಲ ಕೆರೆಯ ಒಂದು ಅಧ್ಯಯನ	ಡಾ. ಆಶಾಶ್ರೀ ಹೆಚ್.ಎಂ	118 – 119

ನಾಗತಿಬೆಳಗೊಲ ಕೆರೆಯ ಒಂದು ಅಧ್ಯಯನ

ಡಾ. ಆಶಾಶ್ರೀ ಹೆಚ್.ಎಂ.
ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು , ಶಿವಮೊಗ್ಗ

ಭದ್ರಾವತಿಯ ತಾಲ್ಲೂಕಿನ ನಾಗತಿಬೆಳಗೊಲ ಗ್ರಾಮದಲ್ಲಿ ಒಂದು ಕೆರೆ ಇದೆ. ಆ ಕೆರೆಗೆ ನಾಗತಿಬೆಳಗೊಲ ಕೆರೆ ಎಂದೇ ಕರೆಯುತ್ತಾರೆ. ಈ ಕೆರೆ ಸುಪ್ರಸಿದಧ ನಂಜುಡೇಶ್ವರ ದೇವಾಲಯದ ಹತ್ತಿರವೇ ಇದೆ. ಈ ಕೆರೆಯ ನೀರನ್ನು ಜನರು ವಿವಿಧ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಾರೆ. ಈ ಕೆರೆಯ ಪ್ರಾಚೀನ ಕಾಲದಾಗಿರುತ್ತದೆ. ಈ ಕೆರೆಯ ಬದಿಗಳಲ್ಲಿ ಮನೆಗಳು, ರಸ್ತೆ ಮತ್ತು ಕೃಷಿ ಭೂಮಿಗಳಿವೆ. ಈ ಕೆರೆಯ ಅಂದಾಜು 25 ಎಕರೆಯಿದ್ದು, ಆಳ 10–15 ಅಡಿ ಇದೆ. ಈ ಕೆರೆಯ ಪಕ್ಕದಲ್ಲಿ ಭತ್ತ, ಅಡಿಕೆ, ತೆಂಗು ಮತ್ತು ಕಬ್ಬು ಬೆಳೆಗಳನ್ನು ಬೆಳೆಯುತ್ತಾರೆ. ಈ ಕೆರೆಯಲ್ಲಿ ವಿವಿಧ ಜಲಚರಗಳು ಮತ್ತು ಜಲಸಸ್ಯಗಳು ಇವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕೆರೆ ಒಂದು ಜೀವ ವೈವಿಧ್ಯತೆಯ ಆಗರ ನೆಲೆ.

ಈ ಕೆರೆಯ ಅಧ್ಯಯನದಲ್ಲಿ ಗುರುತಿಸಲಾದ ಜೀವರಾಶಿಗಳು ಈ ಕೆಳಕನಂತಿವೆ.

ಜಲಸಸ್ಯಗಳು :

Vallesnorpa

AzollaTypha grass

Hydrilla

ಪ್ರಾಣಿಪ್ಲಾಂಕ್ಟಾನ್‌ಗಳು :

Cladocerains, copepods, rotifers, amoeba, paramecium, vorticella

ಜಲಪಕ್ಷಿಗಳು :

Pond heron, cattel egret, coot, king fisher, kora duck.

ವೈವಿಧ್ಯಮತ್ಸ್ಯ / ಮೀನುಗಳು

ಮತ್ಸ್ಯ ಸಂಪನ್ಮೂಲಗಳ ಅತಿಯಾದ ಬಳಕೆಯಿಂದಾಗಿ ಮತ್ಸ್ಯಕ್ಷಾಮದ ಕೂಗು ವಿಶ್ವದ ಎಲ್ಲಡೆ ಕೇಳಿ ಬರುತ್ತಿವೆ. ಕರ್ನಾಟಕದಲ್ಲಿ ಅದರ ಬಿಸಿ ತಟ್ಟಿ, ಸಾಕಷ್ಟು ಮೀನು ದೊರಕದೆ ಮೀನುಗಾರರು ಕಂಗಾಲಾಗಿದ್ದಾರೆ. ಈ ದೃಷ್ಟಿಯಲ್ಲಿ ಈ ಸಂಪನ್ಮೂಲಗಳ ಸಂರಕ್ಷಣೆ ಅವುಗಳ ಸೂಕ್ತ ಬಳಕೆ ಮತ್ತು ನಿರ್ವಹಣೆಯಡೆ ಹೆಚ್ಚಿನ ಗಮನ ಹರಿಸಬೇಕಾಗಿರುವುದು ಈಗ ಅನಿವಾರ್ಯವಾಗಿದೆ.

ನಮ್ಮ ಅಧ್ಯಯನದಲ್ಲಿ ಈ ನಾಗತಿಬೆಳಗೊಲದ ಕೆರೆಯಲ್ಲಿ ಕಂಡು ಬಂದ ಮೀನುಗಳು ಈ ಕೆಳಕಂಡಂತೆ ಇವೆ.

SL.No.	Scientific name	Common name	IUCN status
1	Cyprinus carpio	Gowri	LC
2	Cirrhinus flungee	Arju/arja	LC
3	Cirrhinus reba	Arju/arja	NE
4	Catla catla	Dodda gende	LC
5	Mystus cavasius	Girlu	T
6	Notopterus notopterus	Chamari menu	NE
7	Clarius batrachus	Murugodu	LC
8	Labeo rohita	Rohu/roha	LC
9	Salstoma untrachi	Belichi/ chalake	T/LC
10	Danio fraseri	Saslu	LC
11	Channa striatus	Kucchu	LC
12	Channa punctatus	Korava	LC

13	Punitus sarana	Gende, kijan	LC
14	Mastaclmbelus armatus	Havumeenu	LC
15	Puntius kolus	Gende	NE
16	Wallago attu	Bale menu	NE
17	Ambassis kopsii	Bachanige meenu	NE

NE-Not Evaluated, LC-Least Concern, NE-Near Threatened, Vu-Vulnerable,

ನಮ್ಮ ದೇಶದಲ್ಲಿ ಜಲ ಸಂಪತ್ತಿದು, ಅವುಗಳ ಸಮರ್ಪಕ ಬಳಕೆ ಇನ್ನೂ ಆಗಬೇಕಿದೆ. ಈ ಸಂಪನ್ಮೂಲಗಳಲ್ಲಿ ವ್ಯಾಪಕ ಜಲಕೃಷಿಯನ್ನು ಕೈಗೊಳ್ಳುವುದರಿಂದ ಅಧಿಕ ಪ್ರಮಾಣದ ಮೀನು ಮತ್ತು ಇತರೆ ಜಲಚರಗಳನ್ನು ಉತ್ಪಾದಿಸಬಹುದಾಗಿದ್ದು, ಇದರಿಂದ ಪೌಷ್ಠಿಕಾಂಶಯುಕ್ತ ಆಹಾರ ಉತ್ಪಾದನೆ ಮಾಡುವುದರ ಜೊತೆಗೆ ಅವುಗಳ ವಿನಿಮಯ ರಫ್ತು ಕೂಡ ಮಾಡಬೇಕಾಗಿದೆ.

ಈ ನಾಗತಿಬೆಳಗೊಲ ಕೆರೆ ಇತ್ತೀಚಿಗೆ ಕಲುಷಿತಗೊಳ್ಳುತ್ತಿದ್ದು ಇದಕ್ಕೆ ಸುತ್ತಲಿನ ಕೃಷಿ ನೀರು, ಅದಕ್ಕೆ ಬಳಸುವ ರಾಸಾಯನಿಕ ವಸ್ತುಗಳು ಬಂದು ಸೇರುತ್ತಿವೆ. ಅದರ ಜೊತೆಗೆ ಬಳಕೆಯ ನೀರು ಬಂದು ಸೇರುತ್ತಿದೆ. ಮತ್ತು ಇತರೆ ಚಟುವಟಿಕೆಗಳಿಂದ ಗುಣಮಟ್ಟ ಹಾಳಾಗುತ್ತಿದ್ದು, ಅಲ್ಲಿ ಇರುವ ಎಲ್ಲಾ ಜಲಚರಗಳ ಮೇಲೆ ಪರಿಣಾಮ ಬೀರುತ್ತಿದೆ.

ಹೀಗೆ ಈ ಪರಿಸ್ಥಿತಿ ಮುಂದುವರೆದರೆ ಅಲ್ಲಿಯ ಮೀನುಗಳು ನಿಂದಾಗಿ ಸಾಯುವ, ಅವುಗಳ ಸಂತತಿ ನಶಿಸುವ ಸಂಭವ ಖಂಡಿತ ಇದೆ. ಇಂತಹ ನೀರಿನಲ್ಲಿ ಬೆಳೆದ ಮೀನುಗಳನ್ನು ತಿನ್ನುವುದರಿಂದ ಮಾನವನ ಆರೋಗ್ಯದ ಮೇಲೂ ಪರಿಣಾಮ ಬೀಳುತ್ತಿದೆ.ಆದ್ದರಿಂದ ಆ ಗ್ರಾಮದ ಜನ ಮತ್ತು ಸಕಾರ ಇದರ ಬಗ್ಗೆ ಗಮನ ಹರಿಸುವುದು ಅನಿವಾರ್ಯ ಇಲ್ಲದಿದ್ದಲ್ಲಿ ಆ ಪರಿಸರ ಹಾಳಾಗುವುದು ಖಂಡಿತ.

ಈ ಅಧ್ಯಯನ ಕೇವಲ ನಾಗತಿಬೆಳಗೊಲ ಕೆರೆಯ ಅಧ್ಯಯನ ಮಾತ್ರವಲ್ಲ, ಇದು ಯಾವುದೇ ಊರಿನ ಕೆರೆಗೂ ಅನ್ವಯಿಸುವುದರಲ್ಲಿ ಎರಡು ಮಾತಿಲ್ಲ. ಸಾಮಾನ್ಯವಾಗಿ ಕೆರೆಗಳಲ್ಲಿ ಕಲುಷಿತಗೊಳ್ಳುವ ಕಾರಣಗಳೆಲ್ಲ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ಕೆರೆಗಳು ಸಂಕೀರ್ಣ ಪರಿಸರದ ಒಂದು ಕೊಂಡಿ. ಪರಿಸರವನ್ನು ನಾವು ಮುಂದಿನ ಪೀಳಿಗೆಗಾಗಿ ಕಾಪಾಡುವುದು ಅನಿವಾರ್ಯ ಹಾಗೂ ನಮ್ಮ ಕರ್ತವ್ಯ ಕೂಡ.

REFERENCES:

1. Anonumous (1990), Wetlands of India-A directory, Government of India, forests and environment department, New Delhi.

2. Anita Bhatnagar and Pooja Devi (2013), International Journal of Environmental Sciences Vol(3), No 6, 2013, ISSN 0976 – 4402.

3. APHA (1998) Standard methods for the examination of water and waste water, 20the edition. APHA Washington USA.

4. Ashashree H.M, M.Venkateshwarlu and H.M. Renuka Swamy (2008), Diversity of fish fauna in Nagatibelagulu pond, Shimoga, Karnataka. Advances in aquatic ecology, Vol (2), 95-97.

5. Bhatnagar, A. and Garg, S.K., (2000), Causative factors of fish mortality in still water fish ponds under sub-tropical conditions, Aquaculture, 1(2), pp 91-96.

6. Dagaonkar and D.N. Saksena (1992), Physicochemical and biological characterization of a temple tank, Kaila Sagar, Gwalior, Madhya Pradesh. J. Hydrobiol. 8 (1), 11-19.

7. A.K.Das and N.P. Shrivastva (2003), Ecology of Sarni Reservoir (M. P.) in the context of Fisheries. Poll Res. 22(4), 2003, 533–539.

8. Jayaram, K.C (1981), The fresh water fishes of India. Handbook, Zoological survey India, Kolkata.

9. P.C. Joshi and A. Singh (2001), Analysis of certain physicochemical parameters and plankton of freshwater hill stream at Nanda devi biosphere reserve. Uttarpradesh J. Zool., 21, 177-179.

10. H.A. Sayeswara, K.L.Naik and Mahesh Anand Goudar (2011). Physico-chemical parameters and ichthyofauna of Barehalla tank, Shivamogga, Karnataka, India, Geiobios-187-191, Vol.38 (2-3).

11. H.A. Sayeswara, K.L.Naik, Nafeesa Behum and H.M. Ashashree (2011a). Potability of water in relation to some physico-chemical parameters of Mudugodu pond, Chikkamagalur, Karnataka, India, Environment and ecology -140-142 Vol.29 (1).

12. H.A. Solanki (2001), Study on pollution of soils and water reservoirs near industrial areas of Baroda, doctoral diss., submitted to Bhavnagar University, Bhavnagar.

ನಾಗಾರ್ಜುನೀಯಮ್

ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪದಾರ್ಥಶಾಸ್ತ್ರಗಳು

NAGARJUNEEYAM

Chemical, Biological & Materials Sciences

ಕ್ರ. ಸಂ	ಪ್ರಬಂಧ ಶೀರ್ಷಿಕೆ	ಲೇಖಕರುಗಳು	ಪುಟ ಸಂ
1.	ಹರಿಯುವ ಸ್ಪಟಿಕ ಸ್ಥಿತಿ: 21ನೇ ಶತಮಾನದ ಕ್ರಾಂತಿಕಾರಿ ದ್ರವಸ್ಪಟಿಕಗಳು	ಸಚ್ಚಿನ್ ಭಟ್ ವರ್ಷಿಣಿ. ಈ. ವಿ ಎಸ್. ಕೃಷ್ಣ ಪ್ರಸಾದ್	121 – 124

ಹರಿಯುವ ಸ್ಫಟಿಕ ಸ್ಥಿತಿ: 21ನೇ ಶತಮಾನದ ಕ್ರಾಂತಿಕಾರಿ ದ್ರವಸ್ಫಟಿಕಗಳು

ಸಚ್ಚಿನ್ ಭಟ್, ವರ್ಷಿಣಿ. ಈ. ವಿ, ಮತ್ತು ಎಸ್. ಕೃಷ್ಣ ಪ್ರಸಾದ್
ನ್ಯಾನೋ ಮತ್ತು ಮೃದು ಪದಾರ್ಥಗಳ ಸಂಶೋಧನಾ ಕೇಂದ್ರ, ಬೆಂಗಳೂರು–13

ದೂರದರ್ಶನ, ಗಣಕಯಂತ್ರ, ದೂರವಾಣಿ ಹೀಗೆ ಪ್ರತಿಯೊಂದೂ ವಿದ್ಯುನ್ಮಾನ ಸಾಧನಗಳಲ್ಲಿ ದರ್ಶಕಗಳ ಪಾತ್ರ ಮಹತ್ವಪೂರ್ಣವಾದುದು. ಈ ದಶಕಗಳ ಅಭಿವೃದ್ಧಿಗೆ ಬೇಕಾದ ಅತ್ಯಂತ ಅವಶ್ಯಕ ವಸ್ತುವೆಂದರೆ ದ್ರವ ಸ್ಫಟಿಕ, ಘನ ಮತ್ತು ದ್ರವಗಳೆರಡರ ಕೆಲವು ಉಪಯುಕ್ತ ಗುಣ ಲಕ್ಷಣಗಳನ್ನು ಹೊಂದಿರುವ ವಿಶೇಷತೆಯಿಂದಲೇ ಇವುಗಳು ಮಾಹಿತಿ ಯುಗದ ಅತ್ಯುತ್ತಮ ಕ್ರಾಂತಿಕಾರಿ ತಂತ್ರಜ್ಞಾನೋಪಯೋಗಿ ವಸ್ತುಗಳು ಎನಿಸಿವೆ. ಈ ಪ್ರಬಂಧವು ದ್ರವಸ್ಫಟಿಕಗಳ ವಿಶೇಷತೆ ಮತ್ತು ಗುಣಲಕ್ಷಣಗಳ ಜೊತೆಗೆ ಅವುಗಳ ಬಹುಮೂಲ್ಯ ಉಪಯುಕ್ತತೆಯ ಕುರಿತ ಒಂದು ಪಕ್ಷಿನೋಟವಾಗಿದೆ.

ನಮ್ಮ ದೈನಂದಿನ ಜೀವನದಲ್ಲಿ ಕಾಣಸಿಗುವ ಹಲವು ವಸ್ತುಗಳನ್ನು ಮೃಧು ಪಧಾರ್ಥಗಳೆಂದು ವರ್ಗೀಕರಿಸಲಾಗಿದೆ. ಖಿಡಣುಜ Crystals (LC) ಅಥವಾ ದ್ರವ ಸ್ಫಟಿಕಗಳು, ಈ ವರ್ಗದಲ್ಲಿ ಪ್ರಮುಖ ಸ್ಥಾನ ಹೊಂದಿರುವವು. ಹೆಸರೇ ಸೂಚಿಸುವಂತೆ, ಈ ವಸ್ತುಗಳು ದ್ರವಸ್ಪಟಿಕ ಸ್ಥಿತಿಯಲ್ಲಿ ದ್ರವಗಳಂತೆ ಚಲನಶೀಲತೆಯನ್ನೂ ಮತ್ತು ಸ್ಪಟಿಕಗಳಂತೆ "anisotropic" (ಅಸಮಾವರ್ತಕ) ಗುಣಗಳನ್ನು ಒಗ್ಗೂಡಿಸಿಕೊಂಡಿರುತ್ತವೆ. ಹಾಗಾಗಿ ಈ ಸ್ಥಿತಿಯನ್ನು ಮಧ್ಯಾವಸ್ಥೆ (Mesophase) ಎಂದು ಕರೆಯಬಹುದು

21ನೇ ಶತಮಾನದಲ್ಲಿ ಮಾಹಿತಿ ಯುಗ (information age) ಎಂದು ಕರೆಯಲಾಗುತ್ತದೆ. ಆದರೆ ಮಾಹಿತಿ ಯುಗ ಯಶಸ್ವಿಯಾಗಲು ದ್ರವ ಸ್ಪಟಿಕಗಳ ಕೊಡುಗೆ ಅಪಾರ ಎಂದರೆ ತಪ್ಪಾಗಲಾರದು. ಈ ಕ್ರಾಂತಿಕಾರಿ ತಂತ್ರಜ್ಞಾನದ ಕೊಡುಗೆ ಸಾಧ್ಯವಾದದ್ದು ದ್ರವ ಸ್ಪಟಿಕಗಳನ್ನು ಬಳಸಿ ತಯಾರಿಸಲಾಗುವ ತೆಳು ಹಾಗೂ ಸಪಾಟಾದ ದರ್ಶಕಗಳು (flat panel display). ದರ್ಶಕ ತಂತ್ರಜ್ಞಾನದ ಹೊರತಾಗಿ ಇನ್ನೂ ಹಲವು ಅನನ್ಯವಾದ ಮತ್ತು ಉಪಯುಕ್ತವಾದ ಗುಣಲಕ್ಷಣಗಳನ್ನು ಇವುಗಳು ಪ್ರದರ್ಶಿಸುತ್ತವೆ. ಹೀಗಾಗಿ ವಿನೂತನ ವೈಜ್ಞಾನಿಕ ವಿದ್ಯಮಾನಗಳನ್ನು ಅನ್ವೇಷಿಸಲು ದ್ರವಸ್ಪಟಿಕಗಳು ಬಹು ಸಂಭಾವ್ಯ ವಸ್ತುಗಳು.

ಚಿತ್ರ ೧



ದ್ರವ ಸ್ಪಟಿಕ ಸ್ಥಿತಿಯನ್ನು ತಲುಪಲು ಅಣುವಿನ ಆಕಾರವು ಅಸಮರ್ತಕವಾಗಿರಲೇಬೇಕು. ಈ ಅತ್ಯಗತ್ಯ ಪ್ರಮಿತಿಯ ಅಧಾರದ ಮೇಲೆ ದ್ರವಸ್ಪಟಿಕಗಳನ್ನು ಎರಡು ವಿಶಾಲ ವರ್ಗಗಳಲ್ಲಿ ವಿಂಗಡಿಸಲಾಗಿದೆ: ಸರಳುರೂಪಿ (Calamatic), ಬಿಲ್ಲೆರೂಪಿ (discotic). ಇವುಗಳ ರಾಸಾಯನಿಕ ರಚನೆಯ ಮಾದರಿಯನ್ನು ಚಿತ್ರ 1 ರಲ್ಲಿ ಕಾಣಬಹುದು. ಈ ಸ್ಥಿತಿ ತಲುಪಲು ಅವಲಂಬಿತವಾಗಿರುವ ಪ್ರಕ್ರಿಯೆಯ ಆಧಾರದ ಮೇಲೆ ಉಷ್ಣಾವಲಂಬಿ (Thermotropic ಅಥವಾ TLC) ಮತ್ತು ದ್ರಾವಕಾವಲಂಬಿ (Lyotropic ಅಥವಾ LyLC) ದ್ರವ ಸ್ಪಟಿಕಗಳೆಂದು ವಿಂಗಡಿಸಲಾಗಿದೆ.

ದ್ರವಸ್ಪಟಿಕಗಳ ಉಪಯೋಗಗಳ ಕುರಿತಾದ ಈ ಸಂಕ್ಷಿಪ್ತ ಲೇಖನದಲ್ಲಿ ನಾವು ಮೊದಲು ಉಷ್ಣಾವಲಂಬಿ (TLC) ಸಾಧನಗಳನ್ನು ವಿವರಿಸಿ, ನಂತರ ದ್ರಾವಕಾವಲಂಬಿ (LyLC) ಗಳತ್ತ ನೋಡೋಣ.

ಚಿತ್ರ ೨



ಉಷ್ಣಾವಲಂಬಿ ವಸ್ತುಗಳಲ್ಲಿ ದ್ರವಸ್ಪಟಿಗಳ ಸ್ಥಿತಿಯು ಸ್ಪಟಿಕೀರಣ ಮತ್ತು ದ್ರವೀಕರಣಗಳ ಅಂತರದಲ್ಲಿ ಕಂಡುಬರುತ್ತದೆ. ಬಹುಸೂಕ್ಷ್ಮ ತಾಪಮಾನದ ಪರಿಳಿತ ಹಾಗೂ ನಿರ್ದಿಷ್ಟಿ ರಾಸಾಯನಿಕ ರಚನೆಯಿಂದ 40 ವಿವಿಧ ಅವಸ್ಥೆಗಳನ್ನು ಕಾಣಬಹುದಾದರೂ ಅನ್ವಯಿಕ ವಿಜ್ಞಾನ ಹಾಗೂ ಅನೇಕ ತಾಂತ್ರಿಕ ಉಪಯೋಗಗಳೀಗೆ ವ್ಯಾಪಕವಾಗಿ ಬಳಸುವ ನಿಮ್ಯಾಟಿಕ್ ಅವಸ್ಥೆ (Nematic phase), ದ್ರವಸ್ಪಟಿಕ ರಚನೆಗಳಲ್ಲೇ ಅತಿ ಸರಳಿನ ಅಣುವ್ಯವಸ್ಥೆಯನ್ನು 3 ಭಿನ್ನ ಸ್ಥಿತಿಗಳಲ್ಲಿ ಕಾಣಬಹುದು. (ಸ್ಪಟಿಕ, ದ್ರವ ಸ್ಪಟಿಕ ಮತ್ತು ದ್ರವ ಸ್ಥಿತಿ ಸ್ಪಟಿಕಗಳಲ್ಲಿ ಅನುವಿನ ಸ್ಥಾನ ಹಾಗೂ ಅದರ ದಿಕ್ಕು ವ್ಯವಸ್ಥಿತವಾಗಿರುವುದು. ಆದರೆ ದ್ರವ ಸ್ಥಿತಿಯಲ್ಲಿ ಅಣುವಿನ ಸ್ಥಾನ ಹಾಗೂ ದಿಶೆ, ಎರಡಕ್ಕೂ ಯಾವುದೇ ರೀತಿಯ ನಿರ್ಬಂಧವಿಲ್ಲ. ಇವೆರಡರ ನಡುವೆ ಕಾಣುವ ನಿಮ್ಯಾಟಿಕ್ ಅವಸ್ಥೆಯಲ್ಲಿ ಅಣುಗಳ ಸ್ಥಾನದ ಕ್ರಮಬದ್ಧತೆ ಮಾತ್ರ ಉಳಿದಿರುತ್ತದೆ.

ಈಗ ಉಷ್ಣಾವಲಂಬಿ ದ್ರವಸ್ಪಟಿಕಗಳ ಕೆಲವು ಉಪಯೋಗಗಳ ಬಗ್ಗೆ ತಿಳಿದುಕೊಳ್ಳೋಣ. ಬಹುಪ್ರಾಖ್ಯಾತವಾಗಿರುವ ಉಪಯೋಗವೆಂದರೆ

ಚಿತ್ರ ೩



ದ್ರವಸ್ಫಟಿಕ ದರ್ಶಕ (LCD). ದರ್ಶಕಗಳ ರಚನೆಗೆ ಅನೇಕ ತತ್ವಗಳಿದ್ದರೂ, ಪ್ರಚಲಿತದಲ್ಲಿ ಬಹುಬಳಕೆಯಲ್ಲಿರುವ ವಿನ್ಯಾಸ (TNLCD) ಹಾಗೂ ಕಾರ್ಯನಿರ್ವಹ್ಣೆಯನ್ನು ಚಿತ್ರ 3 ರಲ್ಲಿ ತೋರಿಸಲಾಗಿದೆ. ಈ ಸಾಧನವು ಎರಡು ಗಾಜಿನ ಪಾರದರ್ಶಕ ವಿದ್ಯುತ್ ವಾಹಕಗಳ ನಡುವೆ ನಿಮ್ಯಾಟಿಕ್ LC ಯನ್ನು ಒಳಗೊಂಡಿರುತ್ತದೆ. ತೆಳುವಾದ ಪಾಲಿಮರ್ ಪದರದಿಂದ ಅಣುಗಳ ದೃಷ್ಟಿಕೋನವನ್ನು, ಗಾಜಿನ ಮೇಲ್ಮೈಗೆ ಸಮಾನಂತರವಾಗಿರುವಂತೆ ಮಾಡಲಾಗುತ್ತದೆ. ಈ ವ್ಯವಸ್ಥೆಯನ್ನು ಎರಡು ಪರಸ್ಪರ ಲಂಬವಾಗಿರುವ ಧೃವೀಕರಣ ಹಾಳೆಗಳ ನಡುವೆ ಇಡಲಾಗುತ್ತದೆ. ಧೃವೀಕೃತ ಬೆಳಕು ಈ ದ್ರವ ಸ್ಫಟಿಕವನ್ನು ಹಾದು ಹೋದಾಗ 900 ತಿರುವು ಪಡೆದುಕೊಳುತ್ತದೆ (ಮೂಲ ಧೃವೀಕರಣಕ್ಕನುಗುಣವಾಗಿ), ಇದರಿಂದ, ದರ್ಶಕವು ಬೆಳಕನ್ನು ಹೊರಸೂಸುತ್ತದೆ (bright state). ಮುಂದೆ 3–5 ವಿದ್ಯುತ್ ವಿಭಜವನ್ನು (voltage) ಎರಡು ಗಾಜಿನ ವಾಹಕಗಳ ನಡುವೆ ಹಾಯಿಸಿದಾಗ, ಅಣುಗಳು, ಪ್ರೇರಿತವಾಗಿ ವಿದ್ಯುತ್ ಕ್ಷೇತ್ರದ ದಿಕ್ಕನ್ನು ಅನುಸರಿಸುತ್ತವೆ (parallel to field direction). ಇದರಿಂದ ಅಂತಿಮವಾಗಿ ದರ್ಶಕವು ಯಾವುದೇ ಬೆಳಕನ್ನು ಹೊರಸೂಸುವುದಿಲ್ಲ (dark state). ಈಗ್ ಈ ದರ್ಶಕವು ವಿದ್ಯುತ್ ಚಾಲಿತ ಬೆಳಕಿನ ಕವಾಟ (shutter) ದಂತೆ ಕೆಲಸ ನಿರ್ವಹಿಸುತ್ತದೆ. ಸಾಂಪ್ರದಾಯಿಕ CRT ಗಳೀಗೆ ಹೋಲಿಸಿದರೆ, LCD ಗಳನ್ನು ದರ್ಶಕಗಳನ್ನಾಗಿ ಉಪಯೋಗಿಸುವುದರಿಂದ ಇರುವ ಬಹುಮುಖ್ಯ ಪ್ರಯೋಜನವೆಂದರೆ, ಅತಿ ಕಡಿಮೆ ವಿದ್ಯುತ್ ಶಕ್ತಿಯ ಬಳಕೆ ಹಾಗೂ ತೂಕದಲ್ಲಿ ಭಾರಿ ಕಡಿತ, ಈ ಗುಣವೈಶಿಷ್ಟ್ಯಗಳಿಂದ್ಲೇ, ಇಂದು ನಾವು ದೂರದರ್ಶನ, ಗಣಕಯಂತ್ರ, ದೂರವಾಣಿಗಳನ್ನು ಸುಲಭ ಹಾಗೂ ನಿರಾತಂಕವಾಗಿ ಉಪಯೋಗಿಸಬಹುದಾಗಿದೆ. ಇಲ್ಲಿ ನಾವು ಒಂದು ವಿಷಯವನ್ನು ಪ್ರಸ್ತಾಪಿಸಲೇಬೇಕು. ಇಂದು ದ್ರವಸ್ಫಟಿಕ ದರ್ಶಕಗಳ ಉತ್ಪಾದನೆಯು ಬಹುಕೋಟಿ ಡಾಲರ್ ಉದ್ಯಮವಾಗಿದೆ. ನಿಮ್ಯಾಟಿಕ್ ಅವಸ್ಥೆಯನ್ನು ಬಳಸಿ ತಯಾರಿಸಿದ, ಮತ್ತು ರೀಡಿಂಗ್ ಸಾಧನಗಳು ಇತ್ತೀಚಿಗೆ ಮಾರುಕಟ್ಟೆಯಲ್ಲಿ ಲಭ್ಯವಾಗಿವೆ.

ಚಿತ್ರ ೪

ನಿಮ್ಯಾಟಿಕ್‌ನ chiral ರೂಪಾಂತರವಾದ À chiral NLC ಗಳು ಮತ್ತೊಂದು ಅಕರ್ಷಕವಾದ thermochromism (ಅಂದರೆ ಉಷ್ಣಾಂಶ ಆಧಾರಿತ ವರ್ಣ ಬದಲಾವಣೆ) ಎಂಬ ಗುಣವನ್ನು ಪ್ರದರ್ಶಿಸುತ್ತವೆ. ಆಂತರಿಕ ಅಣುರಚನೆಯ ಕಾರಣದಿಂದ, ಈ ವಿಧದ ದ್ರವಸ್ಫಟಿಕಗಳಿಂದ ಸಂಪೂರ್ಣ ದೃಶ್ಯ ರೋಹಿತದ (visible spectrum) ಪ್ರತಿಫಲನವನ್ನು ನಿರೀಕ್ಷಿಸಬಹುದು. ಈ ಬಗೆಯ ದ್ರವಸ್ಫಟಿಕಗಳಿಂದ ನಮಗೆ ಬೇಕಾಗಿರುವ ಪರಿಮಿತಿಯಲ್ಲಿ ತಾಪಮಾನ ಬದಲಾವಣೆಯ ಮೇಲೆ ಹಿಡಿತ ಸಾಧಿಸಬಹುದಾದುದರಿಂದ ಇವುಗಳನ್ನು ಅನೇಕ ವಿಧವಾದ thermochromic ಸಾಧನಗಳಲ್ಲಿ ಬಳಸುತ್ತಾರೆ. ಕೆಲವು ಉದಾಹರಣೆಗಳೆಂದರೆ strip thermometers (ಬಹುಸುರಕ್ಷಿತ ಉಷ್ಣಮಾಪಕ ಹಾಳೆಗಳು), tumour profiles (ಶಸ್ತ್ರಕ್ರಿಯೆರಹಿತ ಟ್ಯೂಮರ್‌ಗಳ ಚಿತ್ರಣ), printed circuit boards, mood rings (ಮನೋಭಾವ ಆಧಾರಿತ ಉಂಗುರಗಳು) ಇತ್ಯಾದಿ. ಚಿತ್ರ 4 ರಲ್ಲಿ ಈ ತತ್ವಾಧಾರಿತ ಉಷ್ಣಾಂಶ ಮಾಪಕವನ್ನು ಕಾಣಬಹುದಾಗಿದೆ. ಈ chiral LC ಗಳ ಇತರ ಆಕರ್ಷಕ ಉಪಯೋಗಗಳೆಂದರೆ ದರ್ಪಣ ರಹಿತ ಲೇಸರ್ಗಳು, ಹೆಚ್ಚಿನ ಕಾರ್ಯಕ್ಷಮತೆಯ ಸೌರಕೋಶಗಳು ಮುಂತಾದವು.

ಎರಡು ಆಯಾಮಗಳಲ್ಲಿ ವ್ಯವಸ್ಥಿತವಾಗಿರುವ – ಸ್ತಂಭ (columnar) ರೀತಿ ರಚನೆಯುಳ್ಳ LC ಗಳು ಬೆಲ್ಲೆಯಾಕಾರದ ಅಣುಗಳಿಂದ ಮಾಡಲ್ಪಟ್ಟಿರುತ್ತದೆ. ಇದ್ರ ಗುಣವೈಶಿಷ್ಟ್ಯದಿಂದ, ಅಣ್ವಿಕ ವಿದ್ಯುನ್ಮಾನ ಸಾಧನಗಳಲ್ಲಿ ಸಾವಯವ ಸ್ಫಟಿಕಗಳ (organic single crystals) ಬದಲಾಗಿಯೂ ಉಪಯೋಗಿಸಬಹುದ್. ಕೆಲ ಉದಾಹರಣೆಗಳೆಂದರೆ, ಒಂದು ಆಯಾಮದ ವಾಹಕಗಳು, molecular fibres, transistors

ಚಿತ್ರ ೫



(FET's), OLED's ಇತ್ಯಾದಿ ಔಐಇಳ ಬಗ್ಗೆ ಮುಖ್ಯವಾಗಿ ಇನ್ನೊಂದು ವಿಚಾರ ಹೇಳಬೇಕೆಂದರೆ, ಇವುಗಳು ವಿದ್ಯುನ್ಮಾನ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಸಾಮಾನ್ಯ ಬೆಳಕಿನ ದೀಪಗಳ ಬದಲಾಗಿ ಬಳಸಲ್ಪಡುವ ಸಾಧ್ಯತೆಯಿಂದ ವಿದ್ಯುತ್ ಉಳಿತಾಯದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದು ಎಂಬ ನಿರೀಕ್ಷೆ ಇದೆ.

LyLC (ದ್ರಾವಕಾವಲಂಬಿ) ದ್ರವಸ್ಫಟಿಕಗಳು ಸರ್ವೆ ಸಾಮಾನ್ಯವಾಗಿ ನಮ್ಮ ದೇಹದಲ್ಲಿ ಕಾಣಿಸುತ್ತದೆ. ಉದಾ: protein ಮತ್ತು ಜೀವಕೋಶದ ಪೊರೆಯು LyLC ಗಳಿಂದ ಮಾಡಲ್ಪಟ್ಟಿರುತ್ತದೆ. ವಿಸ್ಮಯವೆಂದರೆ, ಕೊಳೆನಿವಾರಕ ಸಾಮರ್ಥ್ಯಕ್ಕೆ ಅವು ಹೊಂದುವ ದ್ರವಸ್ಫಟಿಕ ಸ್ಥಿತಿಯೇ ಕಾರಣ. ಈ ವ್ಯವಸ್ಥೆಯನ್ನು ತಲುಪಲು, ಅಣುಗಳು ಉಭಯವರ್ತಿ (amphiphilic) ಪ್ರಕೃತಿಯನ್ನು ಹೊಂದಬೇಕಿರುತ್ತದೆ. ಅಂದರೆ ಅಣುವಿನ ಒಂದು ತುದಿ polar (ಧೃವೀಯ) ಮತ್ತು hydrophilic (ನೀರಿನೆಡೆಗೆ ಆಕರ್ಷಿತವಾಗುವುದು – ಜಲಪ್ರೇಮಿ), ಇನ್ನೊಂದು ತುದಿ non polar (ಅಧೃವೀಯ) ಮತ್ತು hydrophobic (ಜಲದ್ವೇಷಿ). ಇಂತಹ ಉಭಯವರ್ತಿ ಗುಣವುಳ್ಳ ಅಣುಗಳನ್ನು ನೀರಿನಲ್ಲಿ ಸೇರಿಸಿದಾಗ, ಇವುಗಳು ಸ್ವತಃ ಜಲದ್ವೇಷಿ ಮತ್ತು ಜಲಪ್ರಿಯ ಗುಣಗಳಿಗನುಸಾರ ವ್ಯವಸ್ಥಿತವಾಗುತ್ತವೆ. ಉಭಯವರ್ತಿ ಅಣುವಿನ ಸಾರತೆಯನ್ನು ಬದಲಾಯಿಸಿದಂತೆ, ವಿಧ ವಿಧವದ ರಚನೆಗಳು ಮತ್ತು thermodynamic ಸ್ಥಿತಿಗಳನ್ನು ಪಡೆಯಬಹುದು. ಇದಕ್ಕೆ ಸಂಬಂಧಪಟ್ಟ ಎರಡು ಉದಾಹರಣೆಗಳು - micelles ಮತ್ತು bilayer ಗಳನ್ನು ಚಿತ್ರ 5 ರಲ್ಲಿ ಕಾಣಬಹುದು Bilayer ರೀತಿಯ ರಚನೆಯನ್ನು ನಾವು ಪ್ರಾಣಿಗಳ ಜೀವಕೋಶದ ಪೊರೆಗಳಲ್ಲಿ ಗಮನಿಸಬಹುದು Micelle ಗಳು ಕೊಳೆಯನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಎಣ್ಣೆ ಮತ್ತು ನೀರು ವಿರುದ್ಧ ದಿಕ್ಕಿನಲ್ಲಿ ಧೃವೀಕೃತವಾಗಿರುವುದರಿಂದ ಈ ಮೇಲ್ಮೈ ಸೆಳತದಿಂದ (surface tension) ಶುಚಿಗೊಳಿಸುವ ಪ್ರಕ್ರಿಯೆಯು ಮಂದಗತಿಯಲ್ಲಿ ಸಾಗುವುದು. ಆದ್ದರಿಂದ ಕೇವಲ ನೀರಿನಿಂದ ನಾವು ಜಿಡ್ಡಿನಂತಹ (ಎಣ್ಣೆಯಂತಹ) ಕೊಳೆಯನ್ನು ತೆಗೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಪರಿಣಾಮಕಾರಿ ಸ್ವಚ್ಛತೆಗಾಗಿ ಈ ಮೇಲ್ಮೈ ಸೆಳೆತವನ್ನು ತಗ್ಗಿಸಬೇಕು. ಇದಕ್ಕಾಗಿ ನಾವು ರಾಸಾಯನಿಕಗಳು ಅಂದರೆ, ಸಾಬೂನು ಮತ್ತು ಡಿಟರ್ಜೆಂಟ್‌ಗಳನ್ನು ಉಪಯೋಗಿಸುತ್ತೇವೆ. ಕೊಳೆಯು ಜಲದ್ವೇಷಿಯಾಗಿರುವುದರಿಂದ, ಹೆಚ್ಚು ನೀರು ಉಪಯೊಗಿಸಿದಾಗ ತೊಳೆದುಹೋಗುತ್ತದೆ. ಈ ತತ್ವ ವೇರೆ ಕ್ಷೇತ್ರದಲ್ಲಿಯೂ ಉಪಯೋಗಿಸಲ್ಪಡುತ್ತದೆ. ಉದಾ: ಸೌಂದರ್ಯ ವರ್ಧಕಗಳು, ಕಚ್ಚಾತೈಲ ಉತ್ಪಾದನೆ ಇತ್ಯಾದಿ.

ಇನ್ನೋಂದು ಬಹುಮುಖ್ಯ ಉಪಯೋಗವೆಂದರೆ, ಔಷಧಗಳನ್ನು ದೇಹಕ್ಕೆ ಯಾವುದೇ ಅಡ್ಡ ಪರಿಣಾಮವಿಲ್ಲದಂತೆ ವಿವಿಧೆಡೆಗೆ ತಲುಪಿಸಲು ಐಥಿಐಅ ಗಳು ಮುಖ್ಯಪಾತ್ರ ವಹಿಸುತ್ತವೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ದ್ರವ ಸ್ಫಟಿಕ ಕ್ಷೇತ್ರವು ಭೌತಶಾಸ್ತ್ರ, ರಾಸಾಯನಶಾಸ್ತ್ರ, ಜೀವಶಾಸ್ತ್ರ, ತಾಂತ್ರಿಕ ಕ್ಷೇತ್ರ ಮತ್ತು ದ್ಯುತಿವಿಜ್ಞಾನ ಎಂಬ ವೈವಿಧ್ಯಮಯ ಕ್ಷೇತ್ರಗಳನ್ನು ಒಗ್ಗೂಡಿಸಿಕೊಂಡು ಸಂಶೋಧನ್ ನಡೆಸಲು ಉಪಕಾರಿಯಾಗಿದೆ. ಮತ್ತು ಮಾಹಿತಿ– ತಂತ್ರಜ್ಞಾನ ಕ್ಷೇತ್ರದಲ್ಲಿ ಊಹೆಗೂ ನಿಲುಕದ ಪ್ರಗತಿಯನ್ನು ಕಾಣಲು ಕಾರಣವಾಗಿದೆ.

ಅಂತಿಮವಾಗಿ ನಾವು ಪ್ರೊ. ಕೊರೆನಿಕ್ (ವಿಸ್ಕೋನ್ಸಿನ್ ವಿಶ್ವವಿದ್ಯಾಲಯ) ಅವರ ಮಾತುಗಳನ್ನು ಸ್ಮರಿಸಲೇಬೇಕು – "From the invention of soap to one of the most powerful display tools on earth, liquid crystals have made a clean sweep!"

ಲೇಖಕರ ಪಟ್ಟಿ

ಸಚ್ಚಿನ್ ಭಟ್ 121
ಪುಷ್ಪ ಪಿ 63, 66
ಶಶಾಂಕ ಹತ್ವಾರ್. ಟಿ. ವಿ 14
ವಿನುತ.ಆರ್ 20
ಶಿವನಾಗಯ್ಯ. ಎಂ. ಹಿರೇಮಠ 54
ವರ್ಷಿಣಿ. ಈ. ವಿ 121
ಮಂಜುನಾಥ್ ಎಸ್.ಪಿ 110 , 111
ಅಕ್ಷತ ಜಿ. ಕುಲಕರ್ಣಿ 52
ಇಂದಿರಮ್ಮ. ಬಿ.ಎಸ್ 20
ಇಮ್ರಾನ್ ಬೇಗ್ 17
ರಮೇಶ್ ಬಿ.ಕೆ 111
ಎಸ್. ಕೃಷ್ಣ ಪ್ರಸಾದ್ 121
ಕನ್ಯಾಕುಮಾರಿ 71
ಡಾ. ದೀಕ್ಷಾ ಸಿ ಅಮಿನ್ 87
ಡಾ. ನೂತನ್ ರಾವ್ 17
ಡಾ. ಶೋಭಾ.ಅ.ಹೂಲಿಕಟ್ಟಿ 30
ಡಾ. ಆಶಾಶ್ರೀ ಹೆಚ್.ಎಂ 118
ಡಾ. ಆರ್. ಎಂ. ಲಲಿತ 85
ಡಾ. ಎಚ್. ಎಸ್. ಆಶೋಕ್ 52
ಡಾ. ಡೈಸಿ ಜಾಸ್ಮಿನ್ ಜಾರ್ಜ್ 50
ಡಾ. ದತ್ತಾತ್ರೇಯ ವಿ. ನಾ 10
ಡಾ.ದೀಪ್ತಿ 96
ಡಾ.ಪದ್ಮಿನಿ ಎಸ್.ವಿ 79
ಡಾ.ಶ್ರೀಪತಿ ಆಚಾರ್ಯ 87, 93, 96
ಡಾ.ಕೆ.ವಿ.ಜುಕ್ತಿಮಠ 46
ಡಾ: ಸಂತೋಶ್ ಕೆ ಎಮ್ 106, 113
ಡಾ: ನವೀನ್ ಎಮ್ 106, 113
ಡಾ: ರವಿ ರಾಯದುರ್ಗ 106, 113
ಡಾ॥ ಸುಹೈಲಾ ಎಸ್ ಎ 93
ಡಾ॥ ಶೋಭಾ ಎಲ್ 76
ಡಾ॥ ರಜನಿಕಾಂತ್ ಬಿ.ಆರ್ 99
ಡಾ॥ ಕೃಷ್ಣ ವಿಜಯನ್ 99
ಡಾ॥ಕವಿತಾ ಪ್ರಸಾದ್ 99
ಚಂದ್ರಮೌಳಿ ಎಂ.ಎಸ್ 37, 41
ಧನಲಕ್ಷ್ಮಿ ಹೆಚ್ 110, 111